No. M5. 185-634/44 Dated 30th June 1945

Notice is hereby given to the inhabitants of [the] Mysore City Municipality that the Municipal Council ha[s] resolved to amend the Public Conveyance Rules fram[ed] under Section 4 of the Regulation No. VII of 19[..] contained in Chapter XIII of the Mysore City Munici[pal] Rules and Bye-laws, to provide among other things, for [the] levy of licensing fees on Rickshaws, Trollies, etc., a[nd] also to revise the table of fares appended to Rule No. 7

Any person having any objection in respect of [the] proposed amendments may prefer the same in writing [to] the undersigned within a month from the date of [this] Notification, after which date no objections will [be] received.

Copies of the detailed notification with [the] amendments may be seen in the City Municipal Offi[ce] during office hours on working days

(Sd.) R. Ramachandra Rao Bhombo[re]
President.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ನೋಟೀಸು

ವಾಂತಿ ಭೇದಿ (Choiera)

ರಾಜಧಾನಿಯ ಮಹಾಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಗಂಜಾಂ ಮತ್ತು ಶ್ರೀರಂಗಪಟ್ಟಣದ ಸುತ್ತಮುತ್ತಲೂ ಕೆಲವು ಕಾಲರಾ ಕೇಸುಗಳು ಕಳೆದ ವಾರದಿಂದ ಕಾಣಿಸಿಕೊಂಡಿರುವುದಾಗಿ ತಿಳಿದು ಬಂದಿದೆ. ಈ ಪ್ರದೇಶಗಳು ರಾಜಧಾನಿಗೆ ಸಮೀಪವಾಗಿದ್ದು ಜನರು ಹೋಗಿ ಬರುವುದರಿಂದಲೂ ಮತ್ತು ಅಲ್ಲಿಂದ ಬರುವ ಆಹಾರ ಪದಾರ್ಥಗಳಿಂದಲೂ ಈ ರೋಗವು ಇಲ್ಲಿಯೂ ತಲೆದೋರುವ ಸಂಭವವಿರುವುದನ್ನು ತಡೆಗಟ್ಟಲು ಪ್ರತಿಯೊಬ್ಬರೂ ಪೌರಸಭೆಯ ಆರೋಗ್ಯ ಶಾಖೆಯೊಂದಿಗೆ ಸಹಕರಿಸಿ ಎಚ್ಚರಿಕೆಯಿಂದಿರಬೇಕಾಗಿ ಕೋರಿದೆ.

1) ಪ್ರಜೆಗಳು ಶ್ರೀರಂಗಪಟ್ಟಣದ ಕಡೆಗೆ ಹೋಗಿ ಬರುವುದನ್ನು ಕೆಲವು ಕಾಲ ನಿಲ್ಲಿಸುವುದು ಉತ್ತಮ.

2) ಅಲ್ಲಿಂದ ಬರುವ ಹಾಲು, ಮೊಸರು, ಬೆಣ್ಣೆಗಳನ್ನು ಕೆಲವು ಕಾಲ ಉಪಯೋಗಿಸದಿರುವುದು ಕ್ಷೇಮ.

3) ನೊಣಗಳು ಆಹಾರ ಪದಾರ್ಥಗಳ ಮೇಲೆ ಬಂದು ಕೂರದಂತೆ ಆ ಪದಾರ್ಥಗಳು, ಹಾಲು, ನೀರು ಇವುಗಳನ್ನು ಸರಿಯಾದ ರೀತಿಯಲ್ಲಿ ಯಾವಾಗಲೂ ಮುಚ್ಚಿಟ್ಟಿರಬೇಕು.

4) ಬೀದಿಯಲ್ಲಿ ಮಾರುವ ತಿಂಡಿ ಪದಾರ್ಥಗಳನ್ನು, ಕೊಯ್ದು ಮಾರುವ ಹಣ್ಣುಗಳನ್ನೂ ಸೇವಿಸಬಾರದು.

5) ಅವಶ್ಯ ಬಿದ್ದಲ್ಲಿ ಪ್ರತಿಯೊಬ್ಬರೂ ಕಾಲರಾ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದು ಒಳ್ಳೆಯದು.

6) ವಾಂತಿ ಭೇದಿ ಉಪದ್ರವವು ಎಲ್ಲಿಯಾದರೂ ಕಾಣಿಸಿಕೊಂಡಲ್ಲಿ ಕೂಡಲೆ ಮುನಿಸಿಪಾಲಿಟಿಗೆ ತಿಳಿಸಿದಲ್ಲಿ ತಕ್ಕ ಕಾರ್ಯಕ್ರಮ ಕೈಗೊಳ್ಳಲು ಸಹಾಯವಾಗುವುದು.

ಮೈಸೂರು (ರುಜು) ಆರ್. ರಾಮಚಂದ್ರರಾವ್ ಬಾಂಬೋರ್
30-6-1945 ಪ್ರೆಸಿಡೆಂಟ್

ಫೋ॥ ನಂ. 392 ವಂದೇ ಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೩] ಭಾನುವಾರ ೮--೭--೩೧ [ಸಂಚಿಕೆ ೨೭೭

ಮೈಸೂರು ರಾಯರಿಗೆ ಮಹಾ॥ ಅಜಾದರ ಪತ್ರ

ತಂಬೂಚೆಟ್ಟಿ ರಸ್ತೆ

ಮೈಸೂರು ೮

ರಾಜಧಾನಿಯ ಚರ್ಚ್ ರಸ್ತೆಗೆ ತಂಬೂ ಚೆಟ್ಟಿ ರಸ್ತೆಯೆಂದು ಹೆಸರಿಡುವಂತೆ ಸರ್ಕಾರದವರ ಆಜ್ಞೆಯಾಗಿದೆ. ಈ ರಸ್ತೆಯು ಸಂಸ್ಥಾನದ ರಸ್ತೆಗಳ ಪಟ್ಟಿಗೆ ಸೇರಿದ್ದು, ಪೌರಸಭೆಯ ಆಡಳಿತಕ್ಕೆ ಸೇರಿಲ್ಲ.

ಕಾಲರಾ ಉಪದ್ರವ

ಪಾಲಹಳ್ಳಿ, ಶ್ರೀರಂಗಪಟ್ಟಣ ಪ್ರಾಂತಗಳಲ್ಲಿ ಕಾಲರ (ವಾಂತಿಭೇದಿ) ಉಪದ್ರವವು ತಲೆ ದೋರಿರುವ ಪ್ರಯುಕ್ತ ಮೈಸೂರಿನ ಹೆಲ್ತ್ ಆಫೀಸರವರು ಮುತುವರ್ಜಿ ವಹಿಸಿ ನಗರಕ್ಕೆ ಈ ರೋಗವು ತಲೆ ದೋರದಂತೆ ಆ ಕಡೆಗಳಿಂದ ಬರುವ ಹಾಲು ಮೊಸರ ಬೆಣ್ಣೆ ಮುಂತಾದುವನ್ನು ತಡೆದು ಪರೀಕ್ಷಿಸುತ್ತಿದ್ದಾರೆ. ಮಹಾಜನರು ಕೂಡ ನೀರು ಆಹಾರಾದಿಗಳ ವಿಷಯದಲ್ಲಿ ಎಚ್ಚರಿಕೆ ವಹಿಸಬೇಕಾಗಿ ಕೋರಲಾಗಿದೆ.

ಕಾಡು ಜನರ ಸಭೆ

ಕಳೆದ ತಾ॥ ೧ ರಲ್ಲಿ ಹೆಗ್ಗಡದೇವನ ಕೋಟೆ ತಾ॥ ಬೀಚಂಬಳ್ಳಿಯಲ್ಲಿ ಕಾಡು ಕುರುಬರ ಪ್ರಥಮ ಸಭೆಯು ನಡೆಯಿತು. ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಎಂ. ಬಿ. ಶಿವಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಹಿಂದುಳಿದ ಕೋಮುಗಳ ನಾಮಕರಣ ಸದಸ್ಯರಾದ ಶ್ರೀ ಬೆಜ್ ಸಿ. ಕೋದಂಡರಾಮಯ್ಯನವರ ಸ್ವಾಗತ ಭಾಷಣಾನಂತರ ಅಧ್ಯಕ್ಷರ ಆರಂಭ ಭಾಷಣವಾಯಿತು. ಶ್ರೀಗಳಾದ ಎಂ. ಎಸ್. ಸುಬ್ಬಣ್ಣನವರೂ, ವಿ. ದೊಡ್ಡ ತಮ್ಮಯ್ಯನವರೂ ಭಾಷಣಗಳನ್ನು ಮಾಡಿದರು. ಜನಾಂಗದ ದ್ವಿತೀಯ ಮಹಾಸಭೆಯನ್ನು ಬೇಗೂರಲ್ಲಿ ನಡೆಸಲು ಸ್ವಾಗತ ಸಮಿತಿಯು ಸ್ಥಾಪಿತವಾಯಿತು. ಅಧ್ಯಕ್ಷತೆ ವಹಿಸಲು ರಾ॥ ರಾ॥ ಶ್ರೀ ಎಂ. [illegible]ಯವರನ್ನು ಪ್ರಾರ್ಥಿಸಬೇಕೆಂದು ತೀರ್ಮಾನವಾಯಿತು.

ಆಕಸ್ಮಿಕ ಮರಣ

ಪುಷ್ಕರಣಿಯ ಕೆರೆಯ ದಕ್ಷಿಣ ಏರಿ[illegible] ಗದ್ದೆಯಲ್ಲಿ ಬಟ್ಟೆ ಒಗೆಯಲು ಹೋದ ಸುಂಡಿ ಸೊಪ್ಪಲ್ಲ ಸಿನಾಸಿ ೨೦ ವಯಸ್ಸಿನ [illegible]ಯ್ಯ ಎಂಬಾತನು ಸ್ನಾನಕ್ಕಾಗಿ ನೀರಿಗಿಳಿದಾಗ ಕಾಲು ತಪ್ಪಿ ಮುಳುಗಿ ಮರಣ ಹೊಂದಿದನೆಂದು ವರದಿಯಾಗಿದೆ. ಲಕ್ಷ್ಮೀಪುರಂ ಪೋಲೀಸಿನವರು ಮಹಜರ್ ಕ್ರಮ ಜರುಗಿಸಿ ಆಕಸ್ಮಿಕ ಮರಣವೆಂದು ನಿರ್ಧರಿಸಿದರು. ಪೈರ್ ಬ್ರಿಗೇಡಿನ ಸ್ಟೇಷನ್ ಆಫೀಸರ್ [illegible] ಹನುಮಂತರಾವ್ ಎಂಬುವರು ಶವವನ್ನು ಹುಡುಕಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲವೆಂದು ತಿಳಿದುಬಂದಿದೆ.

ಮಹಾತ್ಮರಿಗೆ ಸ್ವಾತಂತ್ರ್ಯ

[illegible]ರು ಮಹಾತ್ಮರಿಗೆ ಸ್ವಾತಂತ್ರ್ಯವನ್ನು ಕೊಡುವುದಾಗಿ ನಿರ್ಧರಿಸಿರುವರು. ಮಿತ್ರ ಮಂಡಲಿ ಯಾತ್ರೆಯು [illegible] ಆದುದರಿಂದ ಅವನ್ನು ಎದುರಿಸಲು ವರು ಈ ಆಲೋಚನೆಯನ್ನು ತೋರಿಸುತ್ತಿರುವರು.

ಮಿತ್ರ ಸೈನ್ಯ ವಿಸರ್ಜನೆ

ಪ್ರಿಟನ್, ಅಮೆರಿಕ, ಕೆನಡಾ, ಆಸ್ಟ್ರೇಲಿಯಾ, ಇಂಡಿಯಾ [illegible] ಮತ್ತು ಶ್ರೀ [illegible] ಸೈನಿಕರು ತಮ್ಮ [illegible] ದೇಶಗಳನ್ನು ವಿಸರ್ಜಿಸುವರು [illegible].

ಬ್ರಿಟನ್ನಿನ ಚುನಾವಣೆ

ಬ್ರಿಟನ್ನಿನಲ್ಲಿ ಮಹಾ ಚುನಾವಣೆ ನಡೆಯಿತು. ನಾಗರಿಕರ ಸೈನ್ಯ ಶೇಕಡ ೮೦ ರಷ್ಟು ಜನರು ಓಟು ಕೊಟ್ಟು ಕಾರ್ಮಿಕರ ಸಂಘಕ್ಕೆ ವಿಜಯವಾಗುವ ಸೂಚನೆ ಕಾಣ ಬರುತ್ತಿದೆ. ಚರ್ಚಿಲ ಮತ್ತು ಅಟ್ಲಿಯವರು ಚುನಾಯಿತರಾಗಿದ್ದಾರೆಂದು ವರದಿಯಾಗಿದೆ. ಆದರೆ ಅನೇಕ ಮಂತ್ರಿಗಳು, ಬಿದ್ದು ಹೋಗಬಹುದೆಂಬ ಶಂಕೆಯುಂಟು. [illegible]ಯವರ ಸ್ಥಿತಿ ಮಾತ್ರ[illegible] ಕ್ಕೆ [illegible] ಬರುತ್ತಿದೆ.

ಮಂತ್ರಿ ಮಂಡಲಕ್ಕೆ ಶರತ್ ಬೋಸ್

ಶರತ್ ಚಂದ್ರ ಬೋಸರನ್ನು ಕೇಂದ್ರದ ಹೊಸ ಮಂತ್ರಿ ಮಂಡಲಕ್ಕೆ [illegible] ಕಾಂಗ್ರೆಸ್ಸಿನವರು [illegible].

ಆಹಾರದ ಸ್ಥಿತಿ ಉತ್ತಮಗೊಂಡಿದೆ

ಮಂತ್ರಿಗಳ ಹೇಳಿಕೆ

ಬೆಂಗಳೂರು, ೭

ರಾಜ್ಯದ ಸಭೆಯು [illegible] ರಂತೆ ಮುಂದೆ ಆಹಾರಕ್ಕೆ ಸಂಬಂಧಪಟ್ಟ ಪ್ರಶ್ನೆಯಗಳ ಬಗ್ಗೆ ಸಭೆ ನಡೆಯಿತು. ಮಂತ್ರಿಗಳಾದ ಶ್ರೀ ಎಂ. ಶ್ರೀನಿವಾಸರವರ ಹೇಳಿಕೆಯೊಂದನ್ನು ಕೇಳಿದ್ದು, ಈ ವರ್ಷ ಆಹಾರ ಪರಿಸ್ಥಿತಿ ಸಮಾಧಾನಕರವಾಗಿದೆ ಎಂದು ತಿಳಿಸಿದರು. ಪ್ರಸ್ತುತದಲ್ಲಿ ಈ ವರ್ಷ ಆಕ್ಕಿಯು ದಾಸ್ತಾನು ಕಡಿಮೆಯಾದರೂ ಮೈಸೂರಿನಲ್ಲಿ ಸಾಕಷ್ಟು ಇದೆ. ಮೊದಲು ೧,೪೦,೦೦೦ ಪಲ್ಲ ಬಂದಿದ್ದ ಈಗ ದಾಸ್ತಾನು ೨೦,೦೦೦ ಪಲ್ಲ ಇತ್ತೆ ಅಲ್ಲದೆ ರಾಗಿಯು ಸಹಾ ಅಧಿಕವಾಗಿದೆ ಆದುದರಿಂದ ಭಯಪಡಬೇಕಾದ ಕಾರಣವೇನೂ ಇಲ್ಲ ಎಂದು ಶ್ರೀ ಶ್ರೀನಿವಾಸರವರು [illegible] ಸುಮಾರು ೨೦ ಕೋಟಿ ರೂ. ನಷ್ಟು ವರದಿ ಕೊಳ್ಳಬೇಕೆಂದು ಹೇಳಿದರು. ಮತ್ತು ಲಂಚವನ್ನು [illegible] ನಿವಾರಣೆಗಾಗಿ ಶಿಕ್ಷೆ, [illegible] ಮಂತ್ರಿಗಳು [illegible] ಉತ್ತಮ ನೌಕರರ ನೇಮಕ ಯುಕ್ತವೆಂದೂ [illegible] ಕಾರ್ಯಗತವಾಗಿಲ್ಲವೆಂದು [illegible] ಕಾನೆ ವಿಷಯವೆಂದರೆ ಈ ಇಲಾಖೆಯ [illegible] ಬಗ್ಗೆ ಸಾರ್ವಜನಿಕರನ್ನು ಚಿಟ್ಟಿ ಕೊಂಡು ಇವರ ಅಭಿಪ್ರಾಯಗಳ ಆದರ್ಶಕ್ಕಾಗಿ [illegible] ಸಲಹೆಗಳು ಮತ್ತು [illegible] ರಚಿಸಿದೆ ಎಂದು [illegible] ದರು.

ನಾರಾಯಣ ಮಹಾರಾಜರು

ಶ್ರೀ ಸದ್ಗುರು ಸಮರ್ಥ ಬೇಡ್‌-ನಾರಾಯಣ ಮಹಾರಾಜರು ಕನ್ಯಾಕುಮಾರಿಯಿಂದ ಶ್ರೀ [illegible] ಸ್ವಾಗತದೊಂದಿಗೆ ಬಂದು ಶ್ರೀ ಚಟ್ಟಿ [illegible] ಗಳಲ್ಲಿ [illegible] ಮಾಡಿದ್ದರು. ಶ್ರೀ ಚಟ್ಟಿಯವರು [illegible] ನಡೆಸಿದರು. [illegible] ಶ್ರೀ ಚಟ್ಟಿಯರು [illegible].

ಭೋಜನ ಕೂಟ

ಅಡ್ವೊಕೇಟ್ ಶ್ರೀ ಸಿ. ಸುಬ್ಬರಾಯರವರ ಕುಮಾರರ ಉಪನಯನ ಮತ್ತು ಕುಮಾರಿಯ ವಿವಾಹವನ್ನು ಜರುಗಿಸಿದ ಸಂಬಂಧ [illegible] ತಮ್ಮ ಅನೇಕ ಬಂಧುಮಿತ್ರರನ್ನು ಆಹ್ವಾನಿಸಿ ಔತಣವನ್ನು ನೀಡಿದರು.

ಮೋಟಾರಿಗೂ ರೈಲಿಗೂ ಪೆಟ್ರೋಲ್

ಅಮೆರಿಕಾದ ಪೆಟ್ರೋಲ್ ಮತ್ತು [illegible] ಗ್ರಾಫ್ [illegible] ಮೋಟಾರು ಗಾಡಿಗಳು ರೈಲುಗಳಿಗೆ [illegible] ಪ್ರಯತ್ನ [illegible] ಭಾರೀ ಪ್ರಮಾಣದಲ್ಲಿ [illegible] ಪೆಟ್ರೋಲ್ ಸರಬರಾಜನ್ನು ಹೆಚ್ಚಿಸಲು ಅಧಿಕಾರಿಗಳ ಆಜ್ಞೆ ಕೇಳಿದೆ.

ಪುಸ್ತಕ ಭಂಡಾರ

ಪ್ರೆ. ಸು.] ಕೃಷ್ಣರಾಜನಗರ ೮

ಕೇಂದ್ರ ಸರ್ಕಾರದ ಗ್ರಾಮಕ್ಕೆ ಅಕ್ಷರ ಪ್ರಚಾರ ಸಮಿತಿಯವರಿಂದ ಕೊಡಲ್ಪಟ್ಟಿರುವ ಪುಸ್ತಕ ಭಂಡಾರದ ಆರಂಭೋತ್ಸವನ್ನು ಕರ್ನಾಟಕ [illegible] ಶ್ರೀ ಸೈರಿ ಗುಂಡೂರಾಯರು ಅಧ್ಯಕ್ಷತೆ ವಹಿಸಿದ್ದರು. ಭಾರತ ಮಾತೆ ಮತ್ತು ಇತರ [illegible] ನಡೆದು ಅಧ್ಯಕ್ಷರು ಭಾಷಣ ಮಾಡಿ [illegible] ಗಳನ್ನು ಸಭಾ [illegible] ವಂದನೆಯೊಂದಿಗೆ ಸಭೆಯು ಮುಕ್ತಾಯವಾಯಿತು.

[illegible]

ಶ್ರೀ [illegible]

ಮೈಸೂರಾಯರಿಗೆ ಕಾಂಗ್ರೆಸ್ಸಿನವರ ಪಟ್ಟಿ

ಮೈಸೂರಾಯರ ಮಂತ್ರಿಗಳ [illegible] ಕಾಂಗ್ರೆಸ್ಸಿನ ಪರವಾಗಿ [illegible] ಹೆಸರನ್ನು [illegible] ದ ಪಟ್ಟಿಯನ್ನು ಅಧ್ಯಕ್ಷ ಮಹಾ॥ ಆಜಾದರು [illegible] ಸಹಾಯ್ಯನ್ನು ಮೈಸೂರಾಯರಿಗೆ ಕಳುಹಿಸಿದರು. ಅದರಲ್ಲಿ ಕಾಂಗ್ರೆಸ್ಸಿನವರಲ್ಲದವರ ಹೆಸರುಗಳೂ ಇವೆ. [illegible] ತಮ್ಮ ಒಪ್ಪಿಗೆ ಇತ್ತಿದ್ದಾರೆ.

ಗಾಂಧಿಜೀಗೆ ವ್ಯಾಮಪ್ರಸಾದ ಮುಖರ್ಜಿಯವರ ನಿರಾಕರಣೆ

ಕಾಂಗ್ರೆಸ್ಸಿನವರು [illegible] ಮೈಸೂರಾಯರಿಗೆ ಕಳುಹಿಸಿದ ಪಟ್ಟಿಯಲ್ಲಿ ಹಿಂದೂ ಮಹಾಸಭಾಧ್ಯಕ್ಷರಾದ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರ ಹೆಸರನ್ನು ಸೂಚಿಸಲು, ಗಾಂಧೀಜಿಯವರೇ ಸ್ವತಃ [illegible] ವರನ್ನು ಕೇಳಿದ್ದರು. ಆದರೆ ಮುಖರ್ಜಿಯವರು [illegible] ಒಪ್ಪಲಿಲ್ಲವೆಂದು ಗೊತ್ತಾಗಿದೆ. ಹಿಂದೂ [illegible] ಸಂಖ್ಯೆ [illegible] ಅವರ ಭಿನ್ನಾಭಿಪ್ರಾಯವೆ ಇದಕ್ಕೆ ಕಾರಣ.

ಪ್ರತಾಪರಿಂದ ಬಿಡುಗಡೆ

ಸೂರತ್ ಪಾಸಿನಿಂದ ಬಂಗಾಳದಲ್ಲಿ ಮರಣಹೊಂದಿದ ಮಹಾ. [illegible] ಪ್ರಕಾಶ್ ಮತ್ತು ಇತರ [illegible] ಬಿಡುಗಡೆ ಹೊಂದಿದ್ದಾರೆ.

ಜಪಾನಿನಲ್ಲಿ ಮಿತ್ರ ದಂಡ ಯಾತ್ರೆಯ ನಿರೀಕ್ಷೆ

ಜನರಲ್ ಜರ್ನಾ [illegible] ರಾಜ್ಯಕೋಶಾಧ್ಯಕ್ಷನ [illegible] ಬಿರುದಾಂಗ [illegible] ಸೈನಿಕರು ಜಪಾನಿನ ಮೇಲೆ [illegible] ನಡೆಯುವಂತೆ [illegible] ಬಹು ಬೇಗನೆ [illegible] ಪ್ರದೇಶದ ಮೇಲೆ ಕ್ರಮವಾಗಿ ದಾಳಿಯನ್ನು ನಡೆಸುವುದಾಗಿ ತಿಳಿಸಿದರು. [illegible] ಜಪಾನಿನ [illegible] ಗೆ [illegible] ಗಳನ್ನು [illegible] ಪ್ರಾರಂಭಿಸಿದ್ದಾರೆ. ಇಂಡಿಯಾ ಸರ್ಕಾರದವರೂ [illegible] ಸಂದೇಶವನ್ನು [illegible].

ಬೆಂಗಳೂರಿನಿಂದ

ರೆಡ್ಡಿಯವರು ವ್ಯಾರಿಸ್ಟರಿಗೆ

ಪ್ರೆ. ಸು.] ಬೆಂಗಳೂರು ೮

ಅಂತರ [illegible] ಶ್ರೀ ಕೆ. ಚಂಗಲರಾಯ ರೆಡ್ಡಿಯವರು [illegible] ಹಿಂದಿನ [illegible] ಆಗಿದ್ದಾರೆ. [illegible] ಶ್ರೀ ಕೆ. [illegible] ರವರು [illegible].

ಆ ಸೆಕ್ರೆಟರಿ

[illegible]

ನೇ ತಾ [illegible].

ರಾಜಧಾನಿಯ ಡೈರಿ

[illegible]

ತ್ರಿಮೂರ್ತಿಗಳ ಸಭೆಗೆ ಚಿಯಾಂಗರು

ಸ್ಯಾನ್ಫ್ರಾನ್ಸಿಸ್ಕೋದಿಂದ ಚೀನೀ ಮುಖ್ಯ ಮಂತ್ರಿ ಡಾ॥ ಟಿ. ವಿ. ಸೂಂಗ್ ರವರು ಕೊಟ್ಟಿರುವ ಭೇಟಿಯ ಪರಿಣಾಮವಾಗಿ ಬರ್ಲಿನ್ನಿನಲ್ಲಿ ನಡೆಯುವ ತ್ರಿ ರಾಷ್ಟ್ರ ನಾಯಕರ ಸಮ್ಮೇಳನದಲ್ಲಿ ಮಾ॥ ಚಿಯಾಂಗ್ ಕೈಷೇಕರೂ ಒಬ್ಬ ನಾಯಕರಾಗಿ ಸೇರಿಸಲ್ಪಡುವ ಸಂಭವವಿದೆ ಎಂದು ಗೊತ್ತಾಗಿದೆ.

ಜರ್ಮನಿಯಲ್ಲಿ ಸಣ್ಣ ರಾಜ್ಯಗಳು ಹುಟ್ಟಿದವು

ಜರ್ಮನಿಯಲ್ಲಿ ರಷ್ಯನರು ನೆಲೆಸಿರುವ ಭಾಗದಲ್ಲಿ ೩ ಸಣ್ಣ ರಾಜ್ಯಗಳನ್ನು ಸ್ಥಾಪಿಸಿದ್ದಾರೆ. ಬರ್ಲಿನ್ ಪಟ್ಟಣ ಒಳಗೊಂಡ ಬ್ರಾಂಡನ್ ಬರ್ಗ್, ಮ್ಯಾಕ್ಲೆನ್ ಬರ್ಗ್ ಮತ್ತು ಸಾಕ್ಸೊನಿ ರಾಜ್ಯಗಳು ಸ್ಥಾಪನೆ ಮಾಡಲ್ಪಟ್ಟಿವೆ. ಇವಕ್ಕೆ ನಾಜಿ ವಿರೋಧಿಗಳೇ ಅಧಿನಾಯಕರಾಗಿದ್ದಾರೆ.

ಉಚಿತ ಕಾಲರಾ ಔಷಧಿ

ರಾಜಧಾನಿಯ ಚಿಕ್ಕವೀರಣ್ಣ ರೈಸ್-ಮಿಲ್ ಮಾಲೀಕರಾದ ಶ್ರೀ ಕೃಷ್ಣವೀರಪ್ಪನವರು ಕಲ್ಪತ್ತಾದಿಂದ ಕಾಲರಾ (ಹಾಂಕಿ ಭೇದಿ) ಔಷಧವನ್ನು ತರಿಸಿರುವರೆಂದೂ ಕಾಯಿಲೆಯವರಿಗೆ ಅದನ್ನು ಉಚಿತವಾಗಿ ಕೊಡುವರೆಂದೂ ಅಪೇಕ್ಷಿತರು ಅವರಿಂದ ಪಡೆಯಬಹುದೆಂದೂ ನಾ॥ ಸಿ. ದೊಡ್ಡ ಜವರಪ್ಪನವರು ತಿಳಿಸುತ್ತಾರೆ.

ಶಾಲೆಗಳಲ್ಲಿ ಸೀಟು ಕೊಡಲು ಶೇಕಡ ಪದ್ಧತಿ ತರಬೇಕೆಂದು ಶ್ರೀ ಗುರುವಾರೆಡ್ಡಿಯವರು ಹೇಳಲಿಲ್ಲವೆ? ಈ ವಿಚಾರಕ್ಕಾಗಿ ಒಂದು ಸುಧಾರಣಾ ಸಮಿತಿ ನೇಮಿಸುವುದು ಒಳ್ಳೆಯದಲ್ಲವೇ?

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಕೆ. ವಿ. ವೆಂಕಟರಾಮಯ್ಯ

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲಾ, ಅರಕಲವಾಡಿ.

ಏಜೆಂಟರು. ನರಸಿಂಹಾ ಸ್ಟೋರ್ಸ್ ಚಾಮರಾಜನಗರ

ದಳವಾಯಿ ಹೈಸ್ಕೂಲು

ಹೊಸ ವರ್ಷದ ಜುಲೈ ಮಾಸ ಬಂದು ೭, ೮, ದಿನಗಳಾಗುತ್ತ ಬಂದರೂ ಹೈಸ್ಕೂಲ್, ಕಾಲೇಜು ಪ್ರವೇಶಕ್ಕಾಗಿ ವಿದ್ಯಾರ್ಥಿಗಳು ಇನ್ನೂ ಹಾತೊರೆಯುತ್ತಿರುವ ದೃಶ್ಯವು ಅಲ್ಲಲ್ಲಿ ಕಾಣುತ್ತಲೇ ಇದೆ.

ಇಲ್ಲಿನ ದಳವಾಯಿ ಸ್ಕೂಲೂ ಭಗೀರಥ ಪ್ರಯತ್ನದಿಂದ ಈ ಸಾರಿ ಹೈಸ್ಕೂಲು ಆಗಿದೆ ಬಿಟ್ಟಿತು. ದೇವರಾಜ ಮಾರ್ಕೆಟ್ಟಿನ ಅಗ್ರಹಾರದ ಹಿಂಭಾಗದ ಆಯದಲ್ಲಿ ಸ್ಥಾಪನೆಯಾಗಿ ಆಯಿದ ಸ್ಕೂಲೆಂದೇ ಹೆಸರುವಾಸಿ ಪಡೆದು, ಈಗಿನ ಅರಮನೆ ಕಟ್ಟಡಕ್ಕೆ ಬಂದು ಅರ್ಧಂಬರ್ಧವಾಗಿ ಅಭಿವೃದ್ಧಿತವಾದ ದಕ್ಕೇ ಎಲ್ಲರನ್ನೂ ಒಳ್ಳೇ ದಿಟ್ಟತನದಿಂದ ನೋಡುತ್ತಿದೆ.

೧೮೩೯ ರಲ್ಲಿ ಹುಟ್ಟಿದ ಈ ಶಾಲೆಗೆ ವಯಸ್ಸು ಕಮ್ಮಿಯೇನೂ ಇಲ್ಲ. ಪುರುಷಾಯುಷ್ಯದ ಅರ್ಧವನ್ನು ಮೀರಿ ಸಮೃದ್ಧಿ ಹಾಗೂ ಕೀರ್ತಿ ಶಾಂತಿ ಸಿದ್ಧತೆಗೆ ಚಾತುರ್ವರ್ಷಗಳು ಮಾತ್ರ ಬಾಕಿ ಇವೆ. ಇದೇ ಸಂಸ್ಥೆ ಈವಾಗಳ ಆಪಾತದಲ್ಲಾಗಲಿ ಅಥವಾ ಮಹ್ಯಾವ ಅಭಿಮಾನರಾಶಿಗಳ ಹಿಡಿತದಲ್ಲಾಗಲಿ ಸಿಕ್ಕಿರಬೇಕಾಗಿತ್ತು. ಇಷ್ಟರೊಳಗಾಗಿ ಇದಕ್ಕೆ ರಜತೋತ್ಸವ, ಸ್ವರ್ಣೋತ್ಸವಗಳು ನಡೆಯುತ್ತಿದ್ದುದು ಮಾತ್ರವಲ್ಲದೆ ದಳವಾಯಿ ಸ್ಕೂಲು ಸಂಸ್ಥೆಯು ನಗರದ ವಿದ್ಯಾಶಾಲೆಗಳಲ್ಲೆಲ್ಲಕ್ಕೂ ಮಿಗಿಲಾದ ರೀತಿಯಲ್ಲಿ ಪಡೆದ ಕೀರ್ತಿಯಿಂದಲೇ ಇರುತ್ತಾ ಹೆಸರನ್ನು ಅನ್ವರ್ಥಮಾಡಿಕೊಳ್ಳುತ್ತಿತ್ತು.

ಈಗಲಾದರೋ ಒಂದು ಸ್ಕೂಲ್ ಬೋರ್ಡೂ ಇಲ್ಲ. ಇದೇ ನೋಕ್ಕರುಗಳು ಹೊಂದಿರುವ ವಾತ್ಸಲ್ಯಕ್ಕಾಗಿ ಈ ಶೀರ್ಷಿಕೆ

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಚಾರ್ಜಿನಿಂದ ಮಾಡಲ್ಪಡುವುದು.

ಝಂಡೂರವರ ಆಯುರ್ವೇದಿಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ.

Edited, printed and published by A. R. Nagarajan at the Sadhvi Press, D. Subbiah Road, Mysore.

ಕಾಲದಲ್ಲೂ ಉದ್ದರಣವನ್ನು ಕೈಗೊಂಡಿರಿ ಅಭಿಮಾನವನ್ನು ಮುಂದುವರಿಸಿಕೊಂಡು ಕೆಲಸಮಾಡುತ್ತಲಿದ್ದಾರೆ. ದಿವ್ಯನಾಮವನ್ನ ಈ ಶಾಲೆಗೆ ಇಟ್ಟಿರುವರೋ ಆ ಸನ್ನಿಧಿಯ ಗಮನಕ್ಕೆ ಈ ಕೊರತೆಯು ಎತ್ತಲಾಗಿದ್ದರೆ ಈಗ ಎದುರಾಗುತ್ತಿರಲಿಲ್ಲ. ಎಂದೋ ಮಾಯವಾಗಬೇಕಿದ್ದವು.

ಈಗಲಾದರೂ ಕಾಲಾನುಸ್ಥಿತಿಗೆ ಸ್ಪಂದಿಸಲಾಗುತ್ತಿರುವುದಕ್ಕೆ ಸಂತೋಷಪಡಬೇಕು. ಹೈಸ್ಕೂಲಿಗೆ, ಸ್ಥಳವಸತಿ, ಸೈನ್ಸ್ ಸಾಮಗ್ರಿಗಳು, ಆವಶ್ಯಕವಾದ ಬೆಂಚು, ಟೇಬಲ್‌ಗಳು ಮೊದಲಾದ ಸೌಕರ್ಯಗಳು ಕಲ್ಪಿಸಬೇಕಾಗಿದೆ. ಮಹಾಜನರ ಸಹಕಾರ ಎಲ್ಲಕ್ಕೂ ಬೇಕಾಗಿದೆ. ಅದರಂತೆ ಈ ಶಾಲೆಯಲ್ಲಿಯೇ ವಿದ್ಯಾರ್ಜನೆ ಮಾಡಿ ನಾನಾ ಉದ್ಯಮಗಳಲ್ಲಿ ಪ್ರಗತಿಹೊಂದಿರುವ ಮಹನೀಯರ ಸಹಕಾರವು ವಿಶೇಷ ರೀತಿಯಲ್ಲಿ ಆಗಲೇಬೇಕಾಗಿದೆ.

ಈ ರಾಜಧಾನಿನಗರದ ... ಸ್ನೇಹಿತರ ನಾಟಕ ಸಂಘವು ... ಈ ವಾರದ ಸಂಜೆ ಒಂದು ... ಉದಾರತೆಯಿಂದ ಒಪ್ಪಿಗೆ ... ತಕ್ಕ ಸ್ಥಳದಲ್ಲಿ ... ಕಾಲೇಜುಗಳು ... ವಿದ್ಯಾರ್ಥಿಗಳಿಗೆ ... ಕಟ್ಟಡದಲ್ಲಿ ... ಒಂದು ದುರ್ಗವಾದೀತೇ?

ಈ ಪ್ರಥಮ ಉದ್ಯಮವು ... ಪ್ರೋತ್ಸಾಹಗಳು ... ಮೇಲೆ ಹಾರಿಯುವವಾಂಗಲಿ ...

ಓರ್ವ ಹಳೇ ವಿದ್ಯಾರ್ಥಿ

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿ

ಹಿಂಗಳಿಗೆ ಚಂದಾ ಎಂಟಾಣೆ ಮಾತ್ರ

ಜಾಹಿರಾತಿನ ದರಗಳಿಗೆ ವಿಚಾರಿಸಿರಿ

ರಣಜಿತ್ ಟಾಕೀಸ್

7-7-45 ನೇ ಶನಿವಾರದಿಂದ

ಖುರ್ಷಿದ್, ಷೇಕ್‌ಮುಖ್ತಾರ್ ನಟಿಸುವ

ಮುರಖ್ ಹಾ

ಬಾಬರ್

ಪ್ರತಿದಿನ ಮೂರು ಆಟಗಳು

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. O. P.

ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ಸ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಪ್ರಶಸ್ತವಾದದ್ದು

ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0 10-6

ಡಿ. ಪುಟ್ಟೆಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್ :— ದೇವರಾಜ ಮಾರ್ಕೆಟ್ : : ಚಿಕ್ಕಗಡಿಯಾರದ ಪೇಟೆ

ಫೋನ್ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೯] ಸೋಮವಾರ ೯-೭-೪೫ [ಸಂಚಿಕೆ ೩2

ಕಾಂಗ್ರೆಸ್ಸು ಸೂಚಿಸಿರುವ ಮುಖಂಡರ ಪಟ್ಟಿ

...ಗ್ರೆಸ್ ಸೂಚನೆ ...ಮಾಡಿರುವ ಮುಖಂಡರು

...ಸರಾಯರ ಮಂತ್ರಿಮಂಡಲಕ್ಕೆ ಆ ... ಕಾಂಗ್ರೆಸ್ ಪರವಾಗಿ ಸೂಚನೆ ...ರುವ ಹೆಸರುಗಳು ಈ ರೀತಿಯಲ್ಲಿರು... ತಿಳಿದುಬಂದಿದೆ:—ಮೌಲಾನಾ ...ಜ್, ಸರದಾರ್ ಪಟೇಲ್, ಪಂಡಿತ ...ರು, ಡಾ॥ ರಾಜೇಂದ್ರಪ್ರಸಾದ್, ಮಿ॥ ...ಅಲಿ (ಕಾಂ), ಮಿ॥ ಜಿನ್ನಾ, ನವಾ... ...ಅಲಿಯಾಖತ್‌ಅಲಿಖಾನ್, ಸೆನಾಲ್ ...ಮುದ್ ಇಸ್ಮೈಲ್ ಖಾನ್ (ಲೀಗು), ...ಶ್ಯಾಮಪ್ರಸಾದ್ ಮುಖರ್ಜಿ, ರಾಧಾ... ...ದಾಸ್ (ಬಂಗಾಳಾ), ವಿ. ಐ. ಮು... ...ನಿಸ್ವಾಮಿ, ಬಿ ಮಾಂಡಲ್ (ಪಂಜಾ...) ...ರ್ ತಾರಾಸಿಂಗ್, ಸರ್ ಅರ್ದೇ... ...ಲ್ ಮತ್ತು ರಾಜಕುಮಾರಿ ಅ... ...ಕುಮಾರಿಯವರು (ಕ್ರಿಶ್ಚಿಯನ್). ಈ ...ಪಟ್ಟಿಯಲ್ಲಿ ಸವರ್ಣ ಹಿಂದೂಗಳ ಮತ್ತು ...ಮುಸ್ಲಿಮರ ಸಮಾನಸಂಖ್ಯೆ ಒಪ್ಪಿಲಾ... ...ಒಬ್ಬ ಸಿಕ್, ಒಬ್ಬ ಪಾರ್ಸಿ ಮತ್ತು ...ಕ್ರಿಶ್ಚಿಯನ್ ಮಹಿಳೆಯವರಿಗೆ ಅವ... ...ಕಾಶ ಕೊಡಲಾಗಿದೆ. ಈ ಸೂಚ... ...ಮೇಲೆ ಅಜಾದರು ವೈಸರಾಯರಿಗೆ ... ವಿಷಯದಿಂದೂದಗೂಡಿದ ಭಾಷ... ...ಕಾಗದ ಬರೆದಿದ್ದಾರೆ. ಯಾವ ಪರ... ...ವಾಕಲ್ಲವೆಂದು ಹೇಳಲಾಗಿದೆ.

॥ ಮುಖಂಡರುಗಳುವರು ತಮ್ಮ ಹೆಸ... ...ಸೂಚಿಸಿರುವುದನ್ನು ತಾವು ನಿರಂತ... ...ರವಾಗಿ ಪತ್ರಿಕೆಗಳಲ್ಲಿ ಹೇಳಿರುವುದು ...ದು ತಿಳಿಸಿದ್ದಾರೆ.

...ಯ್ಸರವರು ನೆನ್ನೆ ಸಂಜೆ ವೈಸರಾಯ... ...ರನ್ನು ಮಾತನಾಡಲು ವೈಸರಾಯ ...ಮನೆಗೆ ತೆರಳಿದರು. ಅವರೊಂದಿಗೆ ...ಖಾಸಗಿಯಾಗಿ ಮಾತನಾಡಲು ವೈಸ... ...ರು ಆಹ್ವಾನ ಕಳುಹಿಸಿದ್ದರು.

...ರತ ಸರಕಾರದ ಸಾಲ

...ರತ ಸರಕಾರದವರು ... ರಲ್ಲಿ ...ಯಾಗುವ ೫೦ ಕೋಟಿಯನ್ನು ಸಾ... ...ಎತ್ತುವವರಾಗಿದ್ದಾರೆ. ಬಡ್ಡಿ ದರ ...ಯ ಮೇಲೆ ಕೊಡಲಾಗುವುದು.

...ಲ್ಲತಿಂದು ಜೀವಿಸುವಳು

...ಣಾ ಮೂರ್ ಪಾಟಲೀದ ಎಂಬಾ... ...ಕೆನ್ನಿಂಗ್ಟನ್ ತೋಟದ ಮಣ್ಣನ್ನು ...ವರ್ಷದಿಂದಲೂ ತಿನ್ನುತ್ತ ಅದರಿಂದ ...ಜೀವಿಸುತ್ತಿರುವಳು. ಮಧ್ಯಾಹ್ನ ... ...ಅವನು ಒಂದು ಹುಲ್ಲಿನ ಊಟದ ...ರಾಮುಸಳು. ಇದರಿಂದ ... ...ಯದುಕುವುದಾಗಿ ಆಕೆ ನಿರೀಕ್ಷಿಸಿದ್ದ... ...ಳಿಗೆ ಈಗ ನಲವತ್ತು ವರ್ಷ.

...ಗದದಿಂದ ಉಡುಪು

...ಲ್ಯಾಂಡಿನಲ್ಲಿ ನೀರು ಇಳಿಯುವ ಕಾಗದ... ...ದ ಕೋಟು, ಟೋಪಿ, ಮೋಜಾ... ...ಗಳನ್ನು ಮತ್ತು ಡ್ರೆಸ್‌ಗಳನ್ನು ತಯಾ... ...ರುತ್ತಾರೆ. ಜೇಬ್ ಪ್ರಬೋಧನೆ... ...ಕೇನು ಹಿಡಿಯುವನು.

...ರಿ ಮಗನ ಮೇಲೆ ದೇಶ ...ದ್ರೋಹದ ಅಪಾದನೆ

...ರಿಯವರ ಹಿರಿಯ ಮಗನಾದ ಜಾ... ...ರಿಯವರನ್ನು ಇಂಗ್ಲೆಂಡಿಗೆ ಕರೆತಂ... ...ಲ್ಲಿ ಅವನ ವಶ್ಯಗಿರಿ ಮಾಡಲಾಗಿದೆ. ...ಮೇಲೆ ದೇಶದ್ರೋಹದ ಅಪಾದನೆ ...ಲಾಗುವುದು.

ಸಿಂಗಪುರಕ್ಕೆ ಮಿತ್ರರಿಂದ ಭೀತಿಯೋ ?

ಮಲಯ ಮತ್ತು ಸಿಂಗಪುರದ ನಂದ ಯಾತ್ರೆಯ ಸಮುದ್ರ ಮಾರ್ಗಗಳಲ್ಲಿ ಚಿಲ್ಲುತ್ತಿರುವ ವೈರಿಗಳನ್ನು ದೂರನಾಡಿ ಮಾರ್ಗ ಸುಗಮ ಮಾಡುವ ಕಾರ್ಯದಲ್ಲಿ ಬಹು ಭಾರಿ ಬ್ರಿಟಿಷ್ ನೌಕಾ ತಂಡವೊಂದು ನಿರತವಾಗಿದೆಯೆಂದು ಟೋಕಿಯೋ ಸುದ್ದಿ ತಿಳಿಸುತ್ತದೆ. ನಿಕೋಬಾರ್ ದ್ವೀಪಗಳಲ್ಲಿ ಮುಖ್ಯವಾದ ಬಾಂಬ್ದಾಳಿಯಿಂದ ಈ ರೀತಿ ಕಾರ್ಯಕ್ರಮ ಪ್ರಾರಂಭವಾಗುವುದಾಗಿ ಹೇಳಲಾಗಿದೆ. ... ಯುದ್ಧದ ದಿವಸಗಳು ಈ ತಂಡದಲ್ಲಿವೆ.

ಕುಡಿತಕ್ಕಾಗಿ ಆಸ್ಪತ್ರೆಯ ಶಿಕ್ಷೆ

ಹೆಂಡತಿಯು ಮದ್ಯಪಾನ ಮಾಡಿದ ಅಪರಾಧಕ್ಕಾಗಿ ಗಂಡನು ಆಕೆಯ ಕಪಾಲಕ್ಕೆ ಏಟು ಕೊಡಬೇಕೆಂದು ಕೆನಡಾದ ಒಂದು ಕೋರ್ಟಿನಲ್ಲಿ ಕೊಡಲಾದ ಶಿಕ್ಷೆಯು ಅತ್ಯಂತ ಕೌತುಕವನ್ನುಂಟುಮಾಡಿದೆ. ಗಂಡನು ಪದೇಪದೇ ಕುಡಿದಿದ್ದಾನೆ ಜೇಮ್ಸ್ ಬರ್ಗ್ ಎಂದು ಹೆಸರು, ಹೆಂಡತಿಯ ಎಂದು ಹೆಸರು. ಕುಡಿದ ಅಪಾದನೆ ಮೇಲೆ ಹೆಂಡತಿಯನ್ನು ಮ್ಯಾಜಿಸ್ಟ್ರೇಟರ ಮುಂದೆ ಆಕೆಯು ಎರಡನೆಯಾಗಿ ಕಪಾಲದೇಟಿನ ಶಿಕ್ಷೆ ವಿಧಿಸಲ್ಪಟ್ಟಿತು. ಗಂಡನು ನೇರ ಮೇಲೆ ಸರಿಯಾದ ಪ್ರಮಾಣದಂತೆ ನಟಿಸಿ ಏನುಮಾಡುವುದು ಪ್ರಕಟಿಸಿಯಾ, ಕೋರ್ಟಿನ ಅಜ್ಞೆ; ಬೇರೆ ಮಾರ್ಗವಿಲ್ಲ ಎಂದು ಹೇಳುತ್ತಾ, ಆಕೆಯ ಕೆನ್ನೆಗೆ ಏಟುಕೊಟ್ಟನು. ಕುಣಿದುಯಂತೆ ಆಕೆಯು ಅದನ್ನು ಸ್ವೀಕರಿಸಿ ಅವನ ಹಿಂದೆ ಮನೆಗೆ ನಡೆದಳು. ಈ ಪ್ರಕರಣದ ಮೇಲೆ ಆ ದೇಶದಲ್ಲೆಲ್ಲಾ ಅತ್ಯಂತ ಭಾರಿ ಚರ್ಚೆ ನಡೆಯುತ್ತಿದೆ.

ಶ್ರೀ ಸತ್ಯನಾರಾಯಣ ಪೂಜೆ

ಶ್ರೀ ಸಮರ್ಥ ನಾರಾಯಣರವರು, ಮಹಾರಾಜರವರನ್ನು ನೆಲೆಗೊಳಿಸಿರುವ ತಮ್ಮ ಶಾಂತಿನಿವಾಸ ಭವನಕ್ಕೆ ಬರಮಾಡಿಕೊಂಡು ನಿನ್ನೆ ರಾತ್ರಿ ಶ್ರೀ ಸಿ ಕೇಶವಾನಂದ ಚಿಟ್ಟೆದವರು ಸತ್ಯನಾರಾಯಣ ಪೂಜೆಯನ್ನು ಬಹಳ ವೈಭವದಿಂದ ನಡೆಸಿದರು. ಅನೇಕ ಲೌಕಿಕ ಲೌಕಿಕ ಮುಖಂಡರುಗಳು ಬಂದಿದ್ದರು. ಶ್ರೀ ಚಿಟ್ಟೆಯ ಗುರುಪೂಜೆಯನ್ನು ನೆರವೇರಿಸಿ ಅವರ ಸಲ್ಲಬೇಕಾದ ವಸ್ತ್ರವನ್ನು ಸಮರ್ಪಿಸಿದರು.

ಸಂತಪಣೆಯ ... ಅಭಿನಂದನೆ ... ಸ್ವಾಗತ ... ನಾಗರಿಕರುಗಳಿಗೂ ಉದಾರವಾಗಿ ಸಂಭಾವನೆಯನ್ನು ಮಾಡಿದರು.

LATEST NEWS

ಮಂತ್ರಿಗಳಿಗೆ ಹೊಸ ಪೋರ್ಟ್ ಫೋಲಿಯೋಗಳು

ಸ್ವಂ. ವ. ಫೋ.] ಬೆಂಗಳೂರು ೯

ಈ ಕೆಳಗೆ ಕಂಡಂತೆ ಪೋರ್ಟ್‌ಫೋಲಿಯೋಗಳ ಹಂಚಿಕೆಯಾಗಿರುವುದಾಗಿ ಅಧಿಕಾರಿಯು ಪ್ರಕಟಣೆ ತಿಳಿಸುತ್ತದೆ:—

ದಿವಾನರು–ಅರಮನೆ, ರಾಜಕೀಯ, ಹಣಕಾಸು, ಅರ್ಥಿಕ ಸನ್ನಿವೇಶ, ಕೋರ್ಟ್ ಗಳು, ಸಿವಿಲ್ ಸರ್ವೀಸ್, ಪಬ್ಲಿಸಿಟಿ ಮತ್ತು ಸಮಾಚಾರ.

ಶ್ರೀ ಪುಟ್ಟಣ್ಣ–(ಇವರಿಗೆ ಹಿಂದಿನ ಮಂತ್ರಿಯೆಂದು ಇನ್ನು ಮುಂದೆ ಪೂರ್ತಿ ಹೆಸರು) ಆಹಾರ, ಭೂಕಂದಾಯ, ಅರಣ್ಯ, ಪೋಲೀಸ್, ರೈಲ್ವೆ, ರಸ್ತೆ, ಪಬ್ಲಿಕ್ ಸರ್ವೀಸ್ ವಿಷಯಗಳು ಮತ್ತು ಯುದ್ಧ.

ಶ್ರೀ ಎಂ. ಎ. ಶ್ರೀನಿವಾಸನ್–(ಇವರಿಗೆ ವ್ಯವಸಾಯದ ಮಂತ್ರಿ ಎಂದು ಹೆಸರು) ವ್ಯವಸಾಯ, ಹಿಂದುಳಿದ ಮುಜರಾಯಿ, ವ್ಯವಸಾಯೋತ್ಪನ್ನದ ಮಾರಾಟ, ಸಹಕಾರ, ಸರಕಾರದ ತೋಟಗಳು, ಪ್ರಿಂಟಿಂಗ್, ಮತ್ತು ಸ್ಟೇಷನರಿ, ಹಾಡ್ಸನ್ನು ಇನ್ಶೂರೆನ್ಸ್ ಜನರಲ್ ಮತ್ತು ಎಸ್ಟೇಟ್ಸ್, ಜಿಲ್ಲಾ ಬೋರ್ಡುಗಳು ... ಮತ್ತು ವೈದ್ಯ ... ಮುನಿಸಿಪಾಲಿಟಿಗಳು

ಡಾ॥ ...–(ವಿದ್ಯಾ ಮತ್ತು ಸಾರ್ವಜನಿಕ ಆರೋಗ್ಯದ ಮಂತ್ರಿ) ವಿದ್ಯೆ, ವೈದ್ಯಕೀಯ, ಶಿಲ್ಪ ಹಿಂದುಳಿದವರ ಉದ್ಧಾರ.

ಶ್ರೀ ಎಚ್. ಎಸ್. ಎಂ. ಮಹದೇವ್–(ನ್ಯಾಯಾಂಗ ಸಚಿವರು) ನ್ಯಾಯಾಂಗ, ಶಾಸನ ಖಾತೆ, ಎಕ್ಸೈಸ್ ಮತ್ತು ಸಿವಿಲ್ ಸಪ್ಲೈಸ್ ಸ್ಟಾಂಪು, ಕಾರ್ಮಿಕರು

ಶ್ರೀ ಎಚ್. ಸಿದ್ದಪ್ಪನವರು (ವಾಣಿಜ್ಯ ಮಂತ್ರಿ) ಮರಾಮತ್ತು, ವ್ಯಾಪಾರ ಮತ್ತು ವಾಣಿಜ್ಯ, ರೇಷ್ಮೆ, ಗ್ರಾಮಪಂಚಾಯಿತಿ, ಮತ್ತು ಗ್ರಾಮಾಭಿವೃದ್ಧಿ.

ಬೆಂಗಳೂರಿಗೆ ಪ್ರಯಾಣ

ಮೊದ ಜನ ಪೈಸ್ಕೂಲಿನಲ್ಲಿ ಒಬ್ಬ ನ್ಯಾಯವಾಗಿದ್ದ ಶ್ರೀ ನಾಡಿಗೃಷ್ಣಮೂರ್ತಿಯವರು ನ್ಯಾಯ ಶಾಸ್ತ್ರವನ್ನಭ್ಯಾಸಿಸಲು ಬೆಂಗಳೂರಿನಲ್ಲಿ ಲಾ ಕಾಲೇಜಿಗೆ ಸೇರಿರುವರೆಂದು ಗೊತ್ತಾಗಿದೆ.

ಜನತಾ ನಾಟಕೋತ್ಸವಕ್ಕೆ ಸಹಾಯ

ಶಿವಮೊಗ್ಗೆಯ ... ನಡೆಯುವ ಶ್ರೀ. ಜನತಾ ನಾಟಕೋತ್ಸವಕ್ಕೆ ಸಹಾಯ ಗೂಡಿನ ಸಾಮಗ್ರಿ ಶ್ರೀ ಪುಟ್ಟಣ್ಣಶೆಟ್ಟಿ ನವರು ... ರೂ. ಸಹಾಯ ಮಾಡಿದ್ದಾರೆ

೧೯೪೯ ರ ವರೆಗೆ ಜಪಾನ್ ಯುದ್ಧ

ಜಪಾನ್ ಯುದ್ಧವು ಮುಂದಿನ ... ಈ ದಿವಸದೊಳಗೆ ಮುಗಿಯಲಾರದೆಂದು ಅಭಿಪ್ರಾಯಪಡುವವರಿದ್ದಾರೆಯೆಂದು, ೧೯೪೯ರ ವರೆಗೂ ಯುದ್ಧವು ನಡೆಯಬಹುದೆಂದೂ ಅಮೆರಿಕಾ ಪಾರ್ಲಿಮೆಂಟಿನ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಈ ಯುದ್ಧವು ಬಹು ಅಪಾಯಕರವಾದ ಕಷ್ಟವನ್ನು ಹೊತ್ತಂತಹ ಪ್ರಸಂಗವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ

ಬಂಡುಗಳ ಹರತಾಳ

ಪೂನಾದಲ್ಲಿ ಬಂಡುಗಳು ಮೊನ್ನೆ ಅರ್ಧದಿನದ ಹರತಾಳವನ್ನಾಚರಿಸಿದರು. ಬಂಡಿಗಳು ಕೆಲವು ಘಂಟೆಗಳ ಕಾಲ ಮುಚ್ಚಲ್ಪಟ್ಟಿದ್ದವು ನೀವಲ್ ಯೋಜನೆಯನ್ನು ಪ್ರತಿಭಟಿಸುವುದಕ್ಕಾಗಿ ಈ ರೀತಿ ಆಚರಣೆಯಾಯಿತು.

ಎ. ಐ. ಸಿ. ಸಿ. ಸಭೆ

ಎ. ಐ. ಸಿ. ಸಿ. ಸಭೆಯನ್ನು ಸೇರಿಸಲು ಕಾಂಗ್ರೆಸ್ ಅಧ್ಯಕ್ಷರು ತೀರ್ಮಾನಿಸಿದ್ದಾರೆ. ಕಾಲ ಮತ್ತು ಸ್ಥಳ ಮುಂದೆ ನಿರ್ಧರಿಸಲಾಗುವುದು.

ಸಿರಿಯಾ–ಫ್ರೆಂಚರ ಸ್ಥಿತಿ ಉತ್ತಮವಾಗುವ ಸೂಚನೆ

ಸಿರಿಯಾ ಮತ್ತು ಲೆಬನಾನ್‌ಗಳಲ್ಲಿ ಫ್ರೆಂಚರು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡಿದ್ದ ಸುಮಾರು ೨೦ ಸಾವಿರ ಜನ ಸ್ಥಳೀಯ ಸೈನಿಕರನ್ನು ಲೆಬನಾನಿನ ಸರಕಾರ ಅಧಿಕಾರಕ್ಕೆ ಒಪ್ಪಿಸಲು ಫ್ರಾನ್ಸ್ ನಿರ್ಧರಿಸಿದೆ. ಇದರಿಂದ ಸಿರಿಯಾ ಮತ್ತು ಫ್ರೆಂಚರಿಗೆ ಉಂಟಾಗಿದ್ದ ಬಿಕ್ಕಟ್ಟಿನ ಪರಿಸ್ಥಿತಿಯು ಉತ್ತಮಗೊಳ್ಳುವ ಸೂಚನೆಯಿದೆಯೆಂದು ಹೇಳಲಾಗಿದೆ

ಇಂಡೊ–ಚೀನಾ ಕಣಿವೆಗಾಗಿ ಕಾಳಗ

ಲಿಯಾಚೌನ್-ಇಂಡೋ ಚೀನಾ ರೈಲ್ವೆಯಲ್ಲಿ, ನಡುವೆ ೧೧ ಮೈಲಿ ದೂರದ ಒಂದು ಕಣಿವೆಯಲ್ಲಿ ಈಗ ಜಪಾನರಿಗೂ, ಚೀನರಿಗೂ ಕಾಳಗ ನಡೆಯುತ್ತಿದೆ. ಸಿಂಗ್ ಯು ... ಚೀನೀಯರು ಹಿಡಿದಿದ್ದಾರೆ.

ಬ್ರಿಟಿಷ್ ಚುನಾವಣೆ ಒಂದು ತಮಾಷೆ ಚೆಂಡಾಟ

ಬ್ರಿಟನ್ನಿನ ಮಹಾ ಚುನಾವಣೆಯು ಒಂದು ಫುಟ್ಬಾಲ್ (ತಮಾಷೆ ಚೆಂಡಾಟ) ವೆಂದು ಬರ್ನಾರ್ಡ್‌ಷಾರವರು ಬರೆದಿದ್ದಾರೆ. ಜನರು ಈ ಚೆಂಡನ್ನು ಒದೆದಾಡಿದರೂ, ಮತದಾರರ ಹಿಂದೆ ನಿಂತು ಸೂತ್ರ ಹಿಡಿದಿರುವವರ ಅರ್ಥ ... ಎಂದು ಅವರು ... ದ್ದಾರೆ.

ಬಿಸ್ಮಾರ್ಕ್‌ಗೆ ... ಹಿಡಿಯುವುದಕ್ಕಾಗಿ ಜರ್ಮನರ ... ಕಡಿಮೆಯಾಯಿತು

ಪ್ರಶೀಯನ ... ಜರ್ಮನಿಯ ... ನವರನ್ನು ... ಮುಖ್ಯ ಮುಖಂಡರುಗಳನ್ನು ಪ್ರೊ ... ಯುದ್ಧ ... ಕೊಳ್ಳುವ ... ರನ್ನು ... ಹಾಗಾಗಿ ...

ವಾರ ಭವಿಷ್ಯ

ತಾ॥ ೯-೭-೪೫ ರಿಂದ ೧೫-೭-೪೫ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ನಿಮ್ಮ [illegible] ಕಡೆಗೆ [illegible] ಅರೋಗ್ಯ ಸಾಧಾರಣ [illegible] ಧನಾದಾಯ [illegible] ಉದ್ಯೋಗಾದಿಗಳಲ್ಲಿ [illegible]

ವೃಷಭ—ನಿಮ್ಮ [illegible] ಆರೋಗ್ಯ [illegible] ಉದ್ಯೋಗಾದಿಗಳಲ್ಲಿ [illegible]

ಮಿಥುನ [illegible] ಉದ್ಯೋಗಾದಿಗಳಲ್ಲಿ [illegible]

ಕಟಕ—[illegible] ಆರೋಗ್ಯ [illegible] ವಿದ್ಯಾರ್ಥಿ [illegible] ಉತ್ಸಾಹ [illegible]

ಸಿಂಹ—ಧನ ಬಲದಿಂದ [illegible] ಉದ್ಯೋಗಾದಿಗಳಲ್ಲಿ [illegible] ತಾ॥ ೧೨ ಪ್ರವಾಸ, ಧನ [illegible]

ಕನ್ಯಾ—[illegible] ತಾ॥ ೧೪ [illegible]

ತುಲಾ—[illegible] ಆರೋಗ್ಯ, ಆರ್ಥಿಕ, ಮಾನಸಿಕ ಸೌಖ್ಯಗಳು ಸಾಧಾರಣ. ತಾ॥ ೧೩ ಧನಲಾಭ

ವೃಶ್ಚಿಕ—[illegible]

ಧನುಸ್ಸು—[illegible] ಆರೋಗ್ಯ [illegible]

ಕರವಸ್ತ್ರಗಳಿಂದ ಧೋತ್ರ

ಪಾಟ್ನಾನಗರದಲ್ಲಿ ಧೋತ್ರಗಳ ಅಭಾವ ಬಹಳವಾಗಿದೆ. ಕಂಟ್ರೋಲಿನಲ್ಲೂ ಬಟ್ಟೆಗಳು ಸಿಗುವುದು ದುಸ್ತರವಾಗಿದೆ. ಅಲ್ಲಿ ಕರವಸ್ತ್ರಗಳಿಗೆ ಮಾತ್ರ ರೇಷನ್ ಇಲ್ಲ. ಆದ್ದರಿಂದ ಅಲ್ಲಿನ ಒಬ್ಬ ಬಂಗಾಳಿ ಗೃಹಸ್ಥನು ನಲವತ್ತು ಕರವಸ್ತ್ರಗಳನ್ನು ತೆಗೆದುಕೊಂಡು ತನ್ನ ಹೆಂಡತಿಯ ಕೈಲಿ ಅದನ್ನು ನಾಜೂಕಾಗಿ ಹೊಲಿಸಿ ಒಂದು ಪಂಚೆಯಾಗುವಂತೆ ಮಾಡಿಸಿದನು. ಬ್ಲಾಕ್ ಮಾರ್ಕೆಟ್ಟಿನಲ್ಲಿ ಅದೇ ಪಂಚೆಯನ್ನು ತೆಗೆಯಲು ಇನ್ನೂ ಎರಡು ರೂ. ಹೆಚ್ಚು ಕೊಡಬೇಕೆಂದು ಆತನು ಹೇಳಿರುವನು

ಮಕರ—ಆರೋಗ್ಯ ಸಾಧಾರಣ, ಗೃಹ [illegible] ಸೂಚನೆಗಳು ತೋರಿಬರುವುವು. ಉದ್ಯೋಗಾದಿಗಳಲ್ಲಿ ಮೇಲ್ಪದ ಮನ್ನಣೆಗೆ ಪಾತ್ರರಾಗುವಿರಿ. ಪ್ರವಾಸದಲ್ಲಿ ಅಪಜಯ. ತಾ॥ ೧೦ ವಾದ ವಿವಾದ, ಧನ ವ್ಯಯ.

ಕುಂಭ—ಆರ್ಥಿಕ, ಆರೋಗ್ಯ ಲಾಭಗಳು ಊಹೆಗಿಂತ ಹೆಚ್ಚಾಗುವುವು. ದಾಂಪತ್ಯಾದಿಗಳಲ್ಲಿ ಉತ್ಸಾಹದಿಂದ ನಡೆಯುವಿರಿ. ಶತ್ರುಗಳು ಮಿತ್ರರಾಗುವರು. ವಿದ್ಯಾಭ್ಯಾಸದಲ್ಲಿ ಜಯ. ತಾ॥ ೧೫ ಸನ್ಮಾನ.

ಮೀನ—ಆರೋಗ್ಯ ಆರ್ಥಿಕ ಸ್ಥಿತಿಯಲ್ಲಿ ಪ್ರಗತಿ. ಉದ್ಯೋಗಾದಿಗಳಲ್ಲಿ ಗೋಜು ವ್ಯಾಜ್ಯಗಳನ್ನು ಎದುರಿಸುವಿರಿ. ದಾನಧರ್ಮಗಳಲ್ಲಿ ಜಯಶೀಲರಾಗುವಿರಿ. ತಾ॥ ೧೦ ಧನ ವ್ಯಯ, ನಿದ್ರಾಭಂಗ

ನಾಯಕರುಗಳಿಗೆ ವೈಸರಾಯರ ವಿನಂತಿ

ಸಮ್ಮೇಳನವು ಮುಗಿಯುವ ವರೆಗೂ ಸಿಮ್ಲಾದಲ್ಲಿಯೇ ಇರುವಂತೆ ವೈಸರಾಯರು ಎಲ್ಲಾ ನಾಯಕರನ್ನೂ ಕೋರಿದ್ದಾರೆ. ಯಾರಾದರೂ ತುರ್ತಾಗಿ ಹೋಗಬೇಕಾದರೆ ಅವರ ವಿಳಾಸವನ್ನು ತಿಳಿಸುವಂತೆ ಹೇಳಿದ್ದಾರೆ. ಪಂಗಡಗಳ ಪ್ರತಿನಿಧಿಗಳ ಪಟ್ಟಿಗಳೆಲ್ಲವೂ ಬಂದ ಮೇಲೆ ವೈಸರಾಯರು ಅದರ ಬಗ್ಗೆ ಮುಖಂಡರೊಡನೆ ಮೊದಲು ಆಲೋಚನೆ ನಡೆಸಿ ಅನಂತರ ಅಂತ್ಯ ನಿರ್ಧಾರವನ್ನು ಮಾಡುವರೆಂದು ಹೇಳಲಾಗಿದೆ

ಫ್ರಿಸ್ಕೋ ವಿಮಾನ ಪತ್ತೆಯಿಲ್ಲ

ಮಂಗಳವಾರ ಸ್ಯಾನ್‌ಫ್ರಾನ್ಸಿಸ್ಕೋವಿನಿಂದ ಹೊರಟ ಮಿತ್ರವಿಮಾನವೊಂದು ಮಾಯವಾಗಿದೆ. ಅದರಲ್ಲಿ ಇಂಡಿಯಾ ಕಚೇರಿಯ ವಿದೇಶಾಂಗ ಕಾರ್ಯದರ್ಶಿ [illegible] ಸಲಹೆಗಾರರಾದ ಸರ್ [illegible] ರಕ್ಷಕ ದಳದ ಜನರಲ್ ಕೇಸಲ್‌ಡನ್ನರೂ ಇದ್ದರು. ಈ ವಿಮಾನವು ಮಾಂಟ್ರಿಯಲ್‌ನಿಂದ ಲಂಡನ್ನಿಗೆ ಹೋಗುತ್ತಿತ್ತು

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲಾ ಇವರಲ್ಲಿ ಕೊಂಡುಕೊಳ್ಳಿ

ರಘುಲಾಲ್ ಅಂಡ್ ಕೊ.,

1718, ಸಯ್ಯಾಜಿರಾವ್ ರೋಡ್

(ಮೈಸೂರು ಹಾಲ್ ಮುಂದೆ) ಮೈಸೂರು

ರಾಜಧಾನಿಯ ಡೈರಿ

ಶಾಂತಿಭೇದಿ ಅವಾಂತರ ಈಗಾಗಲೇ ರಾಜಧಾನಿಯಲ್ಲಿ ತಲೆಹಾಕಿದೆ. ಮುನ್ಸಿಪಾಲಿಟಿಯವರಿಗೆ ಈಗ ಪೂರಾ ಕೆಲಸ. ಶಾಂತಿ ಭೇದಿಗೆ ಈಗಾಗಲೇ ಕೆಲವು ಆಹುತಿಯಾಗಿವೆ. ಇದರ ಪರಿಣಾಮವಾಗಿ [illegible] ಹಳ್ಳಿ ಹಾಲು ಮೊಸರು ಬೆಣ್ಣೆಗಳಿಗೆ ಬಂದು [illegible] ಗ್ರಹಚಾರ.

ಕಾಲರಾ ರಾಕ್ಷಸನ ಹಾವಳಿಯನ್ನು ಗಟ್ಟಿಲು ರಾಜಧಾನಿ ಮುನಿಸಿಪಾಲಿಟಿಯವರು ದೊಡ್ಡ ದೊಡ್ಡ ಪಾಲಿಸಿಗಳು [illegible] ಬರುತ್ತಿವೆ. ರಾಜಧಾನಿಯ ಅನೇಕ ಅಂಗಡಿಗಳಲ್ಲಿ ಬುಚ್ಚುವ ಹೊಡಗೆ ಪುರಸತ್ತೇ [illegible] ಹಳ್ಳಿಯಿಂದ ಬರುವ ಹಾಲು ಮೊಸರು ಬೆಣ್ಣೆಗಳಿಗೆ ಇದು ಒಳ್ಳೆಯ ಸತ್ವಪರೀಕ್ಷಾ ಕಾಲವಾಗಿದೆ

ಪ್ರಿವೆನ್ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್ ಅನ್ನುವ ತತ್ವವನ್ನು ನಮ್ಮ ಮುನಿಸಿಪಾಲಿಟಿಯವರು ಆಚರಣೆಯಲ್ಲಿ ತಂದಿದ್ದಾರೆ. ಕೈಲ್ಕೈಟೇಷನ್‌ನಲ್ಲಿ ಹಾಲು ಮೊಸರುಗಳಿಗೆ ಕಣ್ಣಿಗೆ ಬೀಳುವುದೇ ಸಾಕು, ಅವುಗಳೇ ಬಂತು ವಕ್ರ! ಬಚ್ಚಲಿನ [illegible] ಅದಕ್ಕಾಗಿ ಕೈನಲ್ಲೇ ಅವರಪಾಲಿಗೆ [illegible] ಅಮೃತ. ಕಾಲರಾ ಮನುಷ್ಯನನ್ನು ಕೊಲ್ಲುವುದು ಒಂದೇ ಅಲ್ಲ, ಹಾಲು ಮೊಸರುಗಳ ಮೇಲೂ ತನ್ನ ಪ್ರಭಾವವನ್ನು [illegible] ತ್ತದೆ.

ಹಳ್ಳಿಗಳಿಂದ ಬರುವ ಹಾಲು [illegible] ನ್ನು ತಡೆಯುವುದು ಒಳ್ಳೆಯಕೆಲಸ, ಆದರೆ ಯಾವ ಹಳ್ಳಿಯಿಂದ ಬರುತ್ತದೆ, ಯಾವ ಹಳ್ಳಿಯಲ್ಲಿ ಕಾಲರಾ ಕಂಡುಬಂದಿದೆ, ಅನ್ನುವುದನ್ನು ಯೋಚಿಸಬಾರದೇಕೆ? ಈ ಪ್ರಶ್ನೆಗೆ ಉತ್ತರ ಬೇಕಾದರೆ ಸ್ಟೇಷನ್ನಿನಲ್ಲಿ ಹಾಜರಾದರೆ ಸಾಕು, ಪ್ರಶ್ನೆಗೆ ಉತ್ತರ, ಹಾಲು ಮೊಸರಿನ [illegible] ಳೇ ಕೊಡುತ್ತವೆ

ಹಳ್ಳಿಯಿಂದ ಹಾಲು ಮೊಸರು [illegible] ಪಟ್ಟಣಗಳಲ್ಲಿ ಮಾರಿಕೊಂಡು, ಅದರಿಂದ ಜೀವನ ಹೊರೆಯುವವನ ಪಾಡು ಮಾತ್ರ ನಿಗೂ ಬೇಡವಾಗಿದೆ.

ಸ್ವಾಮಿ, ನಾನು ಕ್ಯಾತನಹಳ್ಳಿಯವನು, ಅಲ್ಲಿ ಯಾವ ಕಾಯಿಲೆಯೂ ಇಲ್ಲ ಸ್ವಾಮಿ ಬಿಡಿ ಅಂತ ಅವನು ಕೂಗುತ್ತಿದ್ದರೆ ಅದು ಕೇಳಿಸುವುದೇ ಕಷ್ಟ.

ತಲೆಗೊಂದು ಒಂದೇ ಮಂತ್ರವೇ [illegible] ತಡೆಯುವ ಯೋಜನೆಯೇನೋ ವಾಗಿದೆ ಆದರೆ, ಹಳ್ಳಿಯವರು [illegible] ಗೆ ಬರುವವರೆಗೂ ಸುಮ್ಮನಿದ್ದು [illegible] ಲ್ಲಿ ಅವರನ್ನು ಅಡ್ಡಿಪಡಿಸುವ ಬದಲು ಹಳ್ಳಿಯಲ್ಲಿಯೇ ಅವರನ್ನು ತಡೆದರೆ [illegible] ಇಲ್ಲಿಗೆ ಬರುವ ಪ್ರಮಾದವೂ ತಪ್ಪುತ್ತದೆ. ಮತ್ತೊಂದು ಸಲಹೆ [illegible] ರಿಗೆ ಒಂದು ಹಾಲು ಮೊಸರನ್ನು [illegible] ಜೀವನ ನಡೆಸುವವರ ಹೊಟ್ಟೆಯ [illegible] ಹೊಡೆಯುವುದಕ್ಕಿಂತ ಹೆಚ್ಚು [illegible] ಉಳಿಯುವ ವ್ಯಾಪಾರಕ್ಕಾಗಿ ಬಂದವರ [illegible] ಗವರ್ನಮೆಂಟಿನವರು ಸೂಕ್ತವಾದ [illegible] ವನ್ನು ಕೊಡುವುದೂ ಅಗತ್ಯವಾಗಿದೆ

MYSORE S.S.L.C EXAMINATION 1946

TEXT EXAMINER

For English Prose & Poetry

CONTAINS IMPORTANT, YET EXHAUSTIVE QUESTIONS AND ANSWERS

Pass for the WEAK and class for the BRIGHT

Price : Re 1—4—0 : Now on sale

PUBLISHERS:—THE MINERVA LITERARY AND SPORTS ASSOCIATION, Chamarajapet, BANGALORE CITY.

ಲಿಲ್ಲೀ ಬ್ರ್ಯಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. O. P.

ಚಾಮುಂಡಿ ಬ್ರ್ಯಾಂಡ್ ವೆಜಿಟೆಬಲ್ ಪ್ರಾಡಕ್ಟ್ಸ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು

ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ ಪೌಂಡು ೧ ಕ್ಕೆ ರೂ. 0-10-6

ಡಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರ್ಯಾಂಚ್ :—ದೇವರಾಜ ಮಾರ್ಕೆಟ್ : ಸಕ್ಕರೆ ಮಂಡಿ, ಸಂತೇಪೇಟೆ

Edited printed and published by A. R. Nagaraja Rao at the Sadhvi Press D. Subbiah Road Mysore

ಸಾಧ್ವಿ

ಸಂಪುಟ ೯] ಮಂಗಳವಾರ ೧೦--೭--೪೫ [ಸಂಚಿಕೆ ೨೭೯

ಲೀಗು ವೈಸರಾಯರಿಗೆ ಪಟ್ಟಿ ಕೊಡಲಿಲ್ಲ

ಕನ್ನಂಬಾಡಿ ಕಟ್ಟೆಗೆ ನೀರು ಬಂತು

ಮೈಸೂರು ೧೦

ಕಳೆದ ಎರಡು ದಿನಗಳಿಂದಲೂ ಸಂಸ್ಥಾನದ ಸೊನಾ ಕಡೆ ಮಳೆ ಪ್ರಾರಂಭವಾಗಿದೆ ... ತಿಂಗಳಾದರೂ ಮಳೆ ಪ್ರಾರಂಭವಾಗದಿರುವುದಕ್ಕೆ ಜನರು ಚಿಂತಿಸುತ್ತಿದ್ದರು. ಕನ್ನಂಬಾಡಿಕಟ್ಟೆಗೆ ೧೪ ಅಡಿ ನೀರು ಬಂದಿದೆ. ನೀರು ಬರಳ ಇದುಹೋ... ನಾಲೆಗಳಿಗೆ ನೀರು ಸಮೃದ್ಧಿಯಾಗಿ ... ಗಿಸಬಹುದೆಂದು ಊಹಿಸಲಾಗಿದೆ. ಕ... ನದಿಯೂ ಅರ್ಧ ತುಂಬಿದೆ.

ಹೋಟೇಲು ಕೆಲಸಗಾರರ ಸಭೆ

ನಾಳೆ ೦ ಪ್ರಿ ೧೦॥ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಹೋಟೇಲ್ ಕೆಲಸಗಾರರ ಸಭೆ ನಡೆಯುವುದು ಎಲ್ಲಾ ಕೆಲಸಗಾರರೂ ತಪ್ಪದೆ ಬರಬೇಕಾಗಿ ಪ್ರಾರ್ಥಿಸಲಾಗಿದೆ

ದಸ್ತಗಿರಿ

ಈಗ ಸುಮಾರು ೧೪ ತಿಂಗಳ ಕೆಳಗೆ ಪಿ.. ಕಾಲದಲ್ಲಿ ಪಹರೆಯಿಂದ ತಪ್ಪಿಸಿಕೊಂಡು ತಲೆ ತಪ್ಪಿಸಿಕೊಂಡವನಾಗಿದ್ದ ಲಿಂಗ ಯೂಸುಫ್ ಎಂಬುವನನ್ನು ಲಕ್ಷ್ಮೀಪುರಂ ಪೋಲೀಸ್ ಸ್ಟೇಷನ್ ... ಗುರುರಾಜ ಎಂಬುವರ ಸೂಚನೆ ಮೇರೆ ಲಕ್ಷ್ಮೀಪುರಂ ಪೋಲೀಸರು ಮಂಡ್ಯ ದಸ್ತಗಿರಿಮಾಡಿ ಮೈಸೂರಿಗೆ ತಂದಿದ್ದಾರೆ. ಈ ದಿನ ಅವನನ್ನು ನ್ಯಾಯಾಧೀಶರ ಮುಂದೆ ಹಾಜರ್ಪಡಿಸಲಾಗುವುದು.

ಸಂತಾಪ ಸೂಚಕ ಸಭೆ

ಸಂಸ್ಥಾನ ವಿದ್ವಾಂಸರಾಗಿದ್ದ ಡಾ. ಗಾ... ಕ ಶಿವಾನಂದ್ ಎಲ್. ಮುತ್ತಯ್ಯ ಭಾಗವತರ್ ನಿಧನದಿಂದುಂಟಾಗಿರುವ ಸಂತಾಪವನ್ನು ವ್ಯಕ್ತಪಡಿಸಲು ನಾಳೆ ಸಾಯಂಕಾಲ ... ಗಂಟೆಗೆ ಚಾಮರಾಜ ರಸ್ತೆಯಲ್ಲಿರುವ ... ಶಾರದಾಭವನದಲ್ಲಿ ಪೌರಸಭಾಧ್ಯಕ್ಷರಾದ ರಾಮಚಂದ್ರರಾವ್ ಜಾಂಭೋರಯ ಅಧ್ಯಕ್ಷತೆಯಲ್ಲಿ ಸಭೆ ಸೇರುವುದು. ಸಾರ್ವಜನರು ದಯಮಾಡಿ ಭಾಗವಹಿಸಬೇಕಾಗಿ ಪ್ರಾರ್ಥಿಸಲಾಗಿದೆ

ವೈಸರಾಯರಿಗೆ ಆಜಾದರ ಪತ್ರ

ಮೌಲಾನ ಆಜಾದರು ವೈಸರಾಯರಿಗೆ ಬಹಾಕಿದ ಕಾಗದವೊಂದನ್ನು ಬರೆದು ... ನಿಸಿದ್ದಾರೆ. ಜಿನ್ನಾರವರಿಗೂ ವೈಸರಾಯರಿಗೂ ಆದ ಭೇಟಿ ಸಂಬಂಧವಾಗಿ ವೈಸರಾಯರು ಸಮಸ್ಯೆ ಆಸ್ಪದ ... ಯಿಂದಲೇ ಆಗಬೇಕೆಂದು ತಿಳಿಸಿದುದಾಗಿಯೂ, ಅದ್ದರಿಂದ ಯಾವ ಸಂಗಡದವರ ... ಪೂರ್ಣವಾಗಿ ಇನ್ನು ಮಾಗೆಯೇ ... ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಿದು ... ಹೇಳಲಾಗಿದೆ

ಲಂಡನ್ನಿಗೆ ವಿಂಡ್ಸರ್ ಡ್ಯೂಕರು

ಲಂಡನ್ನಿಗೆ ಡ್ಯೂಕ್ ಆಫ್ ವಿಂಡ್ಸರ್ ... ಆವರ ಪತ್ನಿಯವರು ಆಗಸ್ಟ್ ತಿಂಗಳ ... ಬರುವರೆಂಬು ಅವರುಗಳ ವೃಂದಗಳಲ್ಲಿ ... ಲಾಗಿದೆ. ಅವರು ಬಂದು ಬೆಸ್ಟ್ ... ಹೋಟೇಲಿನಲ್ಲಿ ಇಳಿದುಕೊಳ್ಳುವರು. ... ತಾಯಿ ಕ್ವೀನ್ ಮೇರಿ ಮತ್ತು ಬ್ರಿಟನ ... ರಿ ಪತ್ನಿ ಎಲಿಜಬೆತ್ ರವರಿಗೂ ... ಆತಂಕವಾಗದಿರುವ ಸಲುವಾಗಿಯೇ ... ಮುಂದಿನ ತಿಂಗಳು ಬರುವುದು. ... ಸಮಯದಲ್ಲಿ ಅವರಿಬ್ಬರೂ ಲಂಡನ್ನಿ... ಇರುವುದಿಲ್ಲ

ಹೆಸರು ಸೂಚಿಸಲು ಲೀಗಿನ ನಿರಾಕರಣೆ

ವೈಸರಾಯರಿಗೆ ಜಿನ್ನಾರವರು, ಪತ್ರ ಬರೆದು ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯು ಮಾಡಿದ ಬಗ್ಗೆ ನಿರ್ಧಾರವನ್ನು ಅವರಿಗೆ ತಿಳಿಸಿ, ಮಂತ್ರಿಮಂಡಲಕ್ಕೆ ಲೀಗು ಹೆಸರುಗಳ ಪಟ್ಟಿಯನ್ನು ಕೊಡುವುದಿಲ್ಲವೆಂದು ಸೂಚಿಸಿದ್ದಾರೆ ನೆನ್ನೆ ಸಂಜೆ ೪ ಗಂಟೆಯಲ್ಲಿ ಉರಿ ತಿಳಿಸಲಾಯಿತು. ಪೂರ್ವಭಾವಿಯಾಗಿ ಸಿಂಧ್ ಮತ್ತು ಅಸ್ಸಾಂ ಮುಖ್ಯ ಮಂತ್ರಿಗಳೊಡನೆ ಜಿನ್ನಾರವರು ಸಮಾಲೋಚನೆಯಾಡಿದರು

ನೆನ್ನೆ ಬೆಳಗ್ಗೆ ೧೦॥ ಹೊತ್ತಿಗೆ ವೈಸರಾಯರು ಜಿನ್ನಾರವರಿಗೆ ಪತ್ರಬರೆದಿದ್ದರು ಕಾರ್ಯಕಾರಿ ಸಮಿತಿ ನಡೆಯುತ್ತಿದ್ದಾಗ ಪತ್ರ ಬಂತು.

ತುರ್ಕಿ ಗಡಿಯತ್ತ ರಷ್ಯ ಸೈನ್ಯ ಜಮಾವಣೆ

ಬಲ್ಗೇರಿಯಾ ಮತ್ತು ತುರ್ಕಿಗಳ ನಡುವೆ ಇರುವ ಎಡ್ರಿಯಾನೋಪಲ್ ಬಳಿ ರಷ್ಯದ ಕೆಂಪು ಸೈನ್ಯಗಳನ್ನು ಜಮಾಯಿಸಲಾಗಿದೆಯೆಂದು ತುರ್ಕಿಯ ಪತ್ರಿಕೆಗಳು ಗಾಬರಿಗೊಂಡು ಬರೆದಿವೆ ಈ ಸುದ್ದಿಯನ್ನು ಮೊದಲು ಪ್ಯಾರಿಸ್ ರೇಡಿಯೋವು ತಿಳಿಸಿತು ಬೇರೆ ಯಾವ ಕಡೆಯಿಂದಲೂ ಈ ಸುದ್ದಿಗೆ ಸಮರ್ಥನೆ ಸಿಕ್ಕಿಲ್ಲ.

ಬರ್ಲಿನ್ ಆಡಳಿತ ವ್ಯವಸ್ಥೆ

ಬರ್ಲಿನ್ ನಗರದ ಆಡಳಿತದ ವ್ಯವಸ್ಥೆ ಒಕ್ಕೂಟ ಮಿತ್ರರಿಗೂ ರಷ್ಯಕ್ಕೂ ಒಪ್ಪಂದವಾಗಿ ಹಯೇನು ಬಿಂದರ್ ಟೈಮ್ಸ್ ಪತ್ರಿಕೆ ಬರೆದಿದೆ ಇದಕ್ಕೆ ಹಿಂದೆ ಬಂದ ಸುದ್ದಿ ಪ್ರಕಾರ ಬ್ರಿಟನಿಗೂ ರಷ್ಯಕ್ಕೂ ಈ ಸಂಬಂಧವಾಗಿ ಬಿಕ್ಕಟ್ಟು ಉಂಟಾಗಿತ್ತು ಎಂಬುದಾಗಿ ತಿಳಿಸಲಾಗಿತ್ತು

ಕಮ್ಯೂನಿಸ್ಟರು ಮತ್ತು ಕಾಂಗ್ರೆಸ್ ಬಾಂಧವ್ಯ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಂಸ್ಥೆಯ ಒಳ ವಿಚಾರದ ವಿಷಯವಾಗಿ ಪರ್ಯಾಲೋಚನೆ ನಡೆಸುವುದೆಂದು ಹೇಳಲಾಗಿದೆ. ಕಮ್ಯೂನಿಸ್ಟರು ಕಾಂಗ್ರೆಸ್ಸಿನೊಳಗೆ ಇರುವ ವಿಷಯವೂ ಪರ್ಯಾಲೋಚಿಸಲಾಗುವುದು. ೧೯೪೨ ಆಗಸ್ಟಿನಿಂದ ಈಚೆಗೆ ಈ ಸಂಗಡದವರು ನಡೆಸಿದ ಕೆಲಸ ಕಾರ್ಯಗಳ ವಿಷಯವಾಗಿ ಅನೇಕ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಿಗೆ ಅಸಮಾಧಾನವಾಗಿದೆ. ಮಹಾತ್ಮ ಗಾಂಧಿಯವರು ತಮ್ಮ ಅಭಿಪ್ರಾಯವನ್ನು ಇನ್ನೂ ಹೊರಗೆಡವಿಲ್ಲ.

ರಷ್ಯ-ಜಪಾನ್ ತಾಟಸ್ಥ್ಯ ವ್ಯತ್ಯಾಸ ಖಂಡಿತ

ಜಪಾನ್ ಕುರಿತು ರಷ್ಯವು ಅನುಸರಿಸುವ ತಾಟಸ್ಥ್ಯ ನೀತಿಯು ವ್ಯತ್ಯಾಸವಾಗುವುದು ಖಂಡಿತ ಎಂದು ಲಂಡನ್ನಿನ ಸಂಡೇ ಕ್ರಾನಿಕಲ್ ಪತ್ರಿಕೆ ಬರೆದಿದೆ ಆಮೇರಿಕ ಬ್ರಿಟನ್ನರು ಸ್ಟಾಲಿನ್ನರಿಂದ ರಷ್ಯವು ಪೂರ್ವ ಯುದ್ಧದಲ್ಲಿ ಸೇರುವುದೇ ಇಲ್ಲವೇ ಮತ್ತು ಯಾವಾಗ ಎಂಬುದನ್ನು ಖಚಿತವಾಗಿ ತಿಳಿಯುವರೆಂದು ಹೇಳಲಾಗಿದೆ

ಗ್ರೀಕ್- ಯುಗೊಸ್ಲೇವಿಯಾ ಘರ್ಷಣೆ

ಯುಗೊಸ್ಲೇವಿಯಾ ದೇಶಕ್ಕೆ ಸೇರಿದ ಭಾಗಗಳ ಮೇಲೆ ಗ್ರೀಕ್ ಸೈನ್ಯಗಳು ಗುಂಡು ಹಾರಿಸಿದುದಾಗಿ ಮಾ॥ ಟಿಟೋರವರು ತಿಳಿಸಿದ್ದಾರೆ. ಗ್ರೀಕ್ ಜನರೂ, ಮ್ಯಾಸಿಡೋನಿಯಾ ಜನರೂ ಆ ದೇಶಕ್ಕೆ ಹಿಡಿ ಹಿಂದು ಆಪ್ರಹ. ಹೊಂದಿರುತ್ತಾರೆಂದು ಅವರು ತಿಳಿಸಿದರು

ಆಸ್ಟ್ರೇಲಿಯಾ ತೀರದಲ್ಲಿ ಜಪಾನರ ಚಟುವಟಿಕೆ

ಆಸ್ಟ್ರೇಲಿಯಾ ತೀರ ಪ್ರದೇಶದಲ್ಲಿ ಜಪಾನರು ಚಟುವಟಿಕೆಯಿಂದ ಕಾರ್ಯಾಚರಣೆಯಲ್ಲಿದ್ದಾರೆಂದು ಸೌತ್ ಪೆಸಿಫಿಕ್ ರೇಡಿಯೋ ತಿಳಿಸಿದೆ ಎಂತಹ ರೀತಿ ಕಾರ್ಯಾಚರಣೆ ಎಂಬುದನ್ನು ಮಾತ್ರ ತಿಳಿಸಿಲ್ಲ

ದ್ರೋಹದ ಆಪಾದನೆ

ಅಮೇರಿಕನರ ಮಗ ಜಾನ್ ಅಮೆರಿ ಮೇಲೆ ಲಂಡನ್ನಿನ ನ್ಯಾಯಾಸ್ಥಾನವೊಂದರಲ್ಲಿ ದ್ರೋಹದ ಆಪಾದನೆ ಹೊರಿಸಲಾಯಿತು.

ಹಿಂದೂ ಮಹಾ ಸಭೆ ಪ್ರತಿಭಟನೆ

ಬೆಂಗಳೂರು ೯

ಮೊನ್ನೆ ಸಂಜೆ ಚಿಕ್ಕ ಲಾಲ್‌ಬಾಗಿನಲ್ಲಿ ವೇವೆಲ್ ಯೋಜನೆಗೆ ವಿರೋಧ ಸೂಚಿಸುವ ಸಭೆ ಸೇರಿತ್ತು ಪ್ರೊ. ಎಂ. ಸಿ. ಮಲ್ಲಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಭಾರತದ ಸಂಪೂರ್ಣ ಸ್ವಾತಂತ್ರ್ಯವನ್ನು ಮುಂದೆ ಹಾಕಲು, ಮಾಡಿರುವ ಕುತಂತ್ರವಿದೆಂದು ಹೇಳಲಾಯಿತು

ಬೊಂಬಾಯಿಯಲ್ಲಿ ಎಂಟು ಜನರನ್ನು ಈ ಸಂಬಂಧವಾಗಿ ದಸ್ತಗಿರಿ ಮಾಡಲಾಯಿತು. ಶ್ರೀ. ಸಿದ್ದಲಿಂಗಯ್ಯ ... ಸಭೆ ಸೇರಿ ಹಿಂದೂ ಮಹಾ ಸಭೆಯವರನ್ನು ಸರ್ಕಾರ ... ದಸ್ತಗಿರಿ ಮಾಡಿದ್ದಕ್ಕಾಗಿ ಆಕ್ಷೇಪ ವ್ಯಕ್ತಪಡಿಸಲಾಯಿತು.

ನಯಾಗರಾ ಜಲಪಾತದ ಹತ್ತಿರ "ಅಂಬಿಗನ" ಸಾಹಸ

೨೩ ವರ್ಷ ವಯಸ್ಸಿನ ಸ್ಟೀವರ್ಟ್ ಹಿಲ್ ಎಂಬುವನು ನಯಾಗರಾ ಜಲಪಾತದ ಬಳಿ ಭೋರ್ಗರೆಯುತ್ತ ಹರಿಯುವ ನದಿಯನ್ನು ದಾಟುವ ಸಾಹಸದಲ್ಲಿ ತೊಡಗಿದ್ದನಾಗಿ ಹೇಳಲಾಗಿದೆ ಇದಕ್ಕಾಗಿ ಇವನು ರಬ್ಬರಿನ ಪೀಪಾಯಿಯನ್ನು ಉಪಯೋಗಿಸುವನು. ಕೇವಲ ನೀರು ನ ... ದಿಂದ ಕೂಡಿದಲ್ಲಿ ಇತನ ಸಾಹಸ ಇತನ ತಂದೆ ಸಾಯುವ ಕಾಲದಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ ಈ ಸಾಹಸ ಕೃತ್ಯಕ್ಕೆ ಕೈಹಾಕಿರುವುದು. ಇವನ ತಂದೆ ಹಿಂದೆ ಈರೀತಿ ದಾಟಲು ಪ್ರಯತ್ನಪಟ್ಟಿದ್ದನು. ಈ ಉಕ್ಕಿನ ೬೫೦ ಪೌಂಡಿನ ಪೀಪಾಯಿಯನ್ನು ದೋಣಿಯೊಂದು ತಳ್ಳಿಕೊಂಡು ನದಿ ಮಧ್ಯದಲ್ಲಿ ಬಿಡುವುದು. ಅನಂತರ ಅದರೊಳಗೆ ಇತನನ್ನು ಕಟ್ಟಲಾಗುವುದು. ಜಲಪಾತದ ಸ್ಥಳದಲ್ಲಿ ಹೋಗಿ ಉರುಳಿಹೋಗುವುದು. ಅಲ್ಲಿಂದ ಮುಂದೆ ಇತನು ನದಿಯನ್ನು ದಾಟುವ ಪ್ರಯತ್ನ ಮಾಡುವನು.

ಲಕ್ಷ್ಮೀಕಾಂತಂ ಕೊಲೆ ಅಪೀಲು

ಮದ್ರಾಸು ಹೈಕೋರ್ಟಿನಲ್ಲಿ ಲಕ್ಷ್ಮೀಕಾಂತಂ ಕೊಲೆ ಸಂಬಂಧವಾಗಿ ಶಿಕ್ಷೆಗೊಳಗಾಗಿರುವ ಎಂ. ಕೆ. ತ್ಯಾಗರಾಜ ಭಾಗವತರ್ ಮತ್ತು ... ಎನ್. ಎಸ್. ಕೃಷ್ಣನ್ ಇವರ ಪರವಾಗಿ ಅಪೀಲು ದಾಖಲಾದವು.

ಈ ದಿನ ಕೃಷ್ಣನ್ ಮತ್ತು ತ್ಯಾಗರಾಜ ಭಾಗವತರ್ ಇವರು ಹಾಕಿರುವ ಅಪೀಲನ್ನು ದಾಖಲುಮಾಡಿಕೊಳ್ಳುವ ಬಗ್ಗೆ ಸಂಭಾವಣೆ ಮಾಡಲಾಗುವುದು. ಇನ್ನೊಬ್ಬರ ಪರವಾಗಿಯೂ ಅಪೀಲು ಉಂಟು.

ಪಿಟೇನರ ವಿಚಾರಣೆ ಇಲ್ಲವೇ ?

ಮಾರ್ಷಲ್ ಪಿಟೇನರ ವಿಚಾರಣೆ ಆಗುವುದೇ ಇಲ್ಲವೆಂದು ಲಂಡನ್ನಿನ ಡೈಲಿ ಹೆರಾಲ್ಡ್ ಪತ್ರಿಕೆಯ ರೋನಾಲ್ಡ್ ಮ್ಯಾಥ್ಯೂಸ್ ರವರು ತಿಳಿಸಿದ್ದಾರೆ. ಡಿಗಾಲ್ ರವರಿಗೆ ಇವರ ವಿಚಾರಣೆ ಬೇಕಿಲ್ಲವೆಂದು ಹೇಳಲಾಗಿದೆ.

ಸಾಬೂನಿನ ಯುದ್ಧಪಾತ್ರ

ಮೈಸೂರು ಸಾಬೂನಿಗೆ ಈಗ ಯುದ್ಧದ ರಜ ದೊರೆತಿದೆ. ಅದು ಜರ್ಮನ್ ಸೈನ್ಯ ... ಕರಗಳನ್ನು ಮುಳುಗಿಸುವುದರಲ್ಲಿ ಇತರ ಭಾಗವಹಿಸಿದುದರಿಂದ ಡಿ. ಎಸ್. ಸಿ ... ಇದುವರೆಗೆ ೪೨ ಸಲ ... ಯಾತ್ರೆಮಾಡಿ, ... ಯುದ್ಧ ಗಟ್ಟಿಗಳಲ್ಲಿ ಭಾಗವಹಿಸಿದ್ದಾನೆ.

ವೇದಪಲ್ಲಿರು ಸಂಸ್ಥಾನ ಸನ್ಮೋಳನ ಸೇರಿಸಲಿ

ಸಂಸ್ಥಾನ ಪ್ರಜೆಗಳ ಪ್ರತಿನಿಧಿಗಳು ... ಪ್ರತಿನಿಧಿಗಳ ಸಭೆಯೊಂದನ್ನು ... ಸೂಚನೆ ... ವಿಚಾರ ... ಹೇಳಲಾಗಿದೆ. ... ಇತರ ಸಂಸ್ಥಾನಗಳಲ್ಲಿರುವ ... ಸ್ವತಂತ್ರ ... ಸಂಸ್ಥಾನಗಳಲ್ಲಿ ... ಪ್ರತಿನಿಧಿ ... ರಗಳನ್ನು ... ಕಾರ್ಯ ... ಮಾಡಬೇಕಾಗಿದೆ

ರಾಜಧಾನಿಯ ಡೈರಿ

[illegible]

ಅಮೆರಿಕಾದ ಭಾರಿ ವಿಮಾನ

ವಿಮಾನ ವಾಹಕ ನೌಕೆಯ ಮೇಲೆ ಕೂಡ ಇಳಿಯಬಲ್ಲ ಮತ್ತು ಪ್ರಪಂಚದ ಅತ್ಯಂತ ಭಾರಿ ಕೃತ್ಯವನ್ನು ಆಕಾಶ ಮಾರ್ಗದಲ್ಲಿ ನಡೆಸಬಲ್ಲ ಹೊಸ ವಿಮಾನವನ್ನು ಅಮೆರಿಕಾದಲ್ಲಿ ಕಟ್ಟಲಾಗುತ್ತಿದೆ. ಇದರ ಅಡ್ಡಳತೆ ೨೩೦ ಅಡಿ. ಉದ್ದ ೧೮೨ ಅಡಿ. ೬ ಇಂಜನ್ನುಗಳು ಇರುವುವು. ೪೦೦ ಜನರನ್ನು ಏಕಕಾಲದಲ್ಲಿ ಈ ವಿಮಾನ ಸಾಗಿಸಬಲ್ಲುದು.

ಗಾಂಧಿಜಿ ದರ್ಶನಾರ್ಥಿಗಳು

ಗಾಂಧೀಜಿಯವರನ್ನು ದರ್ಶನ ಮಾಡಲು ಅನೇಕ ತರದ ಜನರು ಬರುವರೆಂದು ನಂಬಿಕೆ ನೆಹರೂರವರು ಪತ್ರಿಕೆಯವರಿಗೆ ತಿಳಿಸಿದ್ದಾರೆ. ಇವರ ಪೈಕಿ, ತಿಳಿಗೇಡಿಗಳು, ಹುಚ್ಚರು, ಮುದ್ದಾಳರೂ ಸಹ ಇರುವರು. ಎಲ್ಲರನ್ನೂ ಗಾಂಧಿಜಿಯವರೇ ವಿಚಾರಿಸುತ್ತಾರೆ.

ಅಂತರ್ಯುದ್ಧ ತಪ್ಪಿದ್ದಲ್ಲ

ಚೀನಾದಲ್ಲಿ ಸರಕಾರಕ್ಕೂ ಕಮ್ಯೂನಿಸ್ಟರಿಗೂ ಅಂತರ್ಯುದ್ಧ ತಪ್ಪಿದ್ದಲ್ಲವೆಂದು ಹಿಂದೆ ಚಾಂಗ್ ಕೈಷೇಕರಿಗೆ ಸಲಹೆಗಾರರಾಗಿದ್ದ ಓವೆನ್ ಲ್ಯಾಟಿಮೋರರು ಹೇಳಿದ್ದಾರೆ. ಚೀನಾದಲ್ಲಿ ಕಮ್ಯೂನಿಸ್ಟರ ಪ್ರಾಬಲ್ಯಕ್ಕೆ ರಷ್ಯಾ ಬೆಂಬಲವೇ ಕಾರಣವೆಂದು ಅವರು ತಿಳಿಸಿದ್ದಾರೆ.

ಹೊಸ ಮಾದರಿ ಚರಖಾ

ಪ್ರಖ್ಯಾತ ಮದ್ರಾಸಿನ ಶಿಲ್ಪಿಯೊಬ್ಬರು ನೂಲುವ ಯಂತ್ರದಂತಹ ಚರಖವನ್ನು ತಯಾರಿಸುತ್ತಿರುವರು. ಇದನ್ನು ಕೈಯಿಂದಾಗಲಿ ಕಾಲಿನಿಂದಾಗಲಿ ತಿರುಗಿಸಿ ನೂಲು ತೆಗೆಯಬಹುದು. ಭಾರತದಲ್ಲಿ ಉತ್ಪತ್ತಿಯಾಗುವ ಬಟ್ಟೆಯ ಪ್ರಮಾಣದ ಶೇಕಡ ೨೦೦ ರಷ್ಟು ಇದರಿಂದ ಹೆಚ್ಚಿನ ಬಟ್ಟೆ ಉತ್ಪತ್ತಿ ಆಗಬಹುದೆಂದು ಹೇಳಲಾಗಿದೆ.

ಈಡನ್ನರ ಮಗ ಪತ್ತೆಯಿಲ್ಲ

ಬ್ರಿಟಿಷ್ ವಿದೇಶಾಂಗ ಮಂತ್ರಿ ಆಂಥೊನಿ ಈಡನ್ನರ ಹಿರಿಯ ಮಗ ಸಾರ್ಜೆಂಟ್ ಸೈಮನ್ ಈಡನ್‌ರವರು ಬರ್ಮಾದಲ್ಲಿ ಹಾರಾಟ ನಡೆಸುತ್ತಿದ್ದಾಗ ಪತ್ತೆಯಿಲ್ಲವಾಗಿದ್ದಾರೆ. ಕಾರ್ಯಾಚರಣೆ ನಡೆಯುತ್ತಿದ್ದಾಗ ಅವರಿದ್ದ ವಿಮಾನವು ನಷ್ಟವಾಯಿತು. ವಿಮಾನದ ಸಂಶೋಧನೆ ಮಾಡಲಾಗುತ್ತಿದೆ.

ಮದ್ರಾಸಿನಲ್ಲಿ ವನಸ್ಪತಿ ಬೆಣ್ಣೆಯ ಕಾರ್ಖಾನೆಗಳು

ಮದ್ರಾಸ್ ಪ್ರಾಂತದಲ್ಲಿ ಸಿಲವು ಕಡೆ ವನಸ್ಪತಿ ತುಪ್ಪ ತಯಾರಿಸುವ ಕಾರ್ಖಾನೆಗಳನ್ನು ತೆರೆಯುವ ವಿಚಾರವಾಗಿ ಸರ್ಕಾರದವರು ಏರ್ಪಾಡುಗಳನ್ನು ಮಾಡುತ್ತಿದ್ದಾರೆ.

ಬರ್ಮಾದಲ್ಲಿ ಪಶುಗಳಿಗೆ ವಿಷ

ಸಿತ್ತಾಂಗ್ ನದಿ ದಾಟಿ ಹೋಗುವ ಬರ್ಮಾದ ಜಪಾನಿನ ಮೇಲೆ ಭಾರತೀಯ ಸೈನ್ಯವು ಬಿದ್ದು ಹತ್ತಾರನ್ನು ಹೊಡೆದಿತ್ತು. ಆದರೆ ಇದೇನೂ ಜಪಾನರಿಗೆ ಅಂತಹ ಭಾರಿ ಸೋಲಲ್ಲವೆಂದು ಎಣಿಸಲಾಗಿದೆ.

ವೈಸರಾಯರಿಗೆ ವಿಶ್ವಕರ್ಮ ಸಂಘದ ತಂತಿ

ಮದ್ರಾಸಿನ ವಿಶ್ವಕರ್ಮ ಸಂಘದವರು ವೈಸರಾಯರಿಗೆ ತಂತಿ ಕಳುಹಿಸಿ ಹೊಸ ಮಂತ್ರಿ ಮಂಡಲದಲ್ಲಿ ಸರ್ ಎ. ರಾಮಸ್ವಾಮಿ ಮುದಲಿಯಾರರವರನ್ನು ನೇಮಿಸಬೇಕೆಂದು ಪ್ರಾರ್ಥಿಸಿದ್ದಾರೆ.

Edited, printed and published by A. R. Nagarajan at the Sadhvi Press, D. Subbiah Road, Mysore.

ಗಾಂಧೀಜಿ ವರ್ಧಂತಿ

ಗಾಂಧೀಜಿಯವರ ಜಯಂತಿ ಆಚರಣೆಗೆ ಸಂಬಂಧವಾಗಿ ಅವರ ಕಾರ್ಯದರ್ಶಿ ಗಾಂಧಿಯವರು ಹೇಳಿಕೆ ಕೊಟ್ಟು, ಈ ವರ್ಷ ಹೊಸ ಪದ್ಧತಿಯ ಪ್ರಕಾರ ಜಯಂತಿ ಆಚರಣೆಯಾಗಬೇಕೆಂದಿದ್ದಾರೆ. ಒಬ್ಬರಿಂದಲೂ ೭೬ ಮೂರು ಕಾಸಿನಷ್ಟೆಯನ್ನು (೧-೩-೦)ತೆಗೆದು ಕೊಳ್ಳಲಾಗುವುದು, ಎಷ್ಟು ಜನ ಈ ರೀತಿ ಕೊಡುವರೋ ಆ ಸಂಖ್ಯೆಯನ್ನು ತಿಳಿಯಲಾಗುವುದು ಗಾಂಧಿಜಿಯವರಿಗೆ ಬರುವ ಅಕ್ಟೋಬರ್ ೨ನೆಯ ೭೭ ವರ್ಷವಾಗುವುದು ಎಂದು ಹೇಳಿದ್ದಾರೆ.

ಗಂಗೆಯಿಂದ ಕಾವೇರಿಗೆ ಕಾಲುವೆ

ಮುಖಂಡರು ಮತ್ತು ಸರಕಾರದವರು ಒಪ್ಪಿದರೆ ಈ ಕೆಲಸವು ಬಹು ಪ್ರಾಯೋಗಿಕವಾದುದೆಂದು ಡಾ॥ ಪಟ್ಟಾಭಿಸೀತಾರಾಮಯ್ಯನವರು ಒಂದು ಭಾಷಣದಲ್ಲಿ ಹೇಳಿದ್ದಾರೆ. ಈ ದೇಶದ ಜನರ ಕ್ಷಾಮ ನಿವಾರಣೆಗೆ ಇದು ಅವಶ್ಯಕವಾಗಿದೆ. ಗಂಗಾನದಿಯನ್ನು ಪ್ರಾದೇಶಿಕವಾಗಿ ಸಂಚಾರಕ್ಕೆ ಮತ್ತು ಗಂಗಾನದಿಯನ್ನು ಸೇರಿಸುವ ಕಾಲುವೆಗಳನ್ನು ತೋಡುವುದರಿಂದ ಅನೇಕ ಪ್ರಯೋಜನಗಳಿವೆಯೆಂದು ಅವರು ತಿಳಿಸಿದರು.

ಜ್ವಾಲಾಮುಖಿ ಮಾರಿ

ಮೆಕ್ಸಿಕೋದಿನ ಬಳಿ ೧೫೦೦ ಅಡಿ ಎತ್ತರದ ಒಂದು ಜ್ವಾಲಾಮುಖಿಯು ಇದ್ದಕ್ಕಿದ್ದಂತೆ ಭೂಮಿಯನ್ನು ಕಾಸಿ ಹೊರಟ ಚೂರುಗಳನ್ನೂ ಬೂದಿಯನ್ನೂ ಉಗುಳಿ ತನ್ನ ಸುತ್ತಮುತ್ತಿನ ಫಸಲನ್ನೆಲ್ಲಾ ನಾಶಮಾಡಿತೆಂದು ಅಲ್ಲಿನ ರೈತ ಪ್ರಲಿದ್ದಾರೆ. ಆ ಜ್ವಾಲಾಮುಖಿ ಮತ್ತು ಅದರ ಗಳನ್ನು ಮಾರಾಟ ಮಾಡುವುದಾಗಿ ಜಾಹೀರಾತು ಮಾಡಿದನು. ಜ್ವಾಲಾಮುಖಿಯ ಖ್ಯಾತಿ ಕೀರ್ತಿ ಸುಪ್ರಸಿದ್ಧ ಲೇಖಕರು ಎಷ್ಟು ಹಣ ಕೊಟ್ಟು ಅದನ್ನು ಕೊಂಡರು.

ಯುದ್ಧ ತಪ್ಪಿಸಲು ವಿಜ್ಞಾನಿಗಳ ಐಕ್ಯತೆ

ರಾಯಲ್ ಸೊಸೈಟಿ ಕಾರ್ಯದರ್ಶಿಯಾದ ಪ್ರೊ॥ ಹಿಲ್‌ರವರು ತಮ್ಮ ದೇಶದ ವಿಜ್ಞಾನಿಗಳ ಸಹಕಾರದಿಂದ ಯುದ್ಧವನ್ನು ತಪ್ಪಿಸುವುದಕ್ಕಾಗಿಯೂ ಮದ್ದುಗುಂಡುಗಳ ತಯಾರಿಯನ್ನು ಬಯಲು ಮಾಡುವುದಕ್ಕಾಗಿಯೂ ತಾವೆಲ್ಲರೂ ಒಂದಾಗಬೇಕೆಂದು ಕೋರಿದ್ದಾರೆ.

ವಿವಾಹ ಮಹೋತ್ಸವ

ಐಟೆಕ್ ಶ್ರೀ ಬಿ. ಎ. ಕೃಷ್ಣಯ್ಯನವರ ಕುಮಾರರಾದ ಡಾ॥ ಸಿಂಹರವರು [illegible] ಪ್ರಾಪ್ರೈಟರ್ ಶ್ರೀ ನಾಗಪ್ಪನವರ ಜ್ಯೇಷ್ಠ ಪುತ್ರಿ [illegible] ನಾಗರಾಜರವರಿಗೆ ಕೊಟ್ಟು ವಿವಾಹ ಮಹೋತ್ಸವವು ನೆರವೇರಿತು [illegible]

ಸ್ತ್ರೀಯರ ಮೆಚ್ಚಿಗೆಗೆ ಪಾತ್ರವಾದ

ಈಗತಾನೆ ಬಂದಿರುವ ಹೊಸ ನಮೂನೆ

ವಿಜಯಲಕ್ಷ್ಮೀ ಕಮಲ್ ಪೂಲ್ **ಬಳೆಗಳು** ಚೆಕ್ ಪ್ಯಾಟರ್ನ್ ಆರ್. ವಾಸೆಸ್

ಇದೂ ಅಲ್ಲದೆ ಇನ್ನೂ ಅನೇಕ ತರಹ

ಇಯರ್ ರಿಂಗ್ಸ್ ——— ಸಿಲ್ಕ್ ರಿಬ್ಬನ್‌ಗಳು ಬಂದಿರುತ್ತೆ

ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್,

ದೇವರಾಜ ಮಾರ್ಕೆಟ್, ಮೈಸೂರು

ಲಿಲ್ಲೀ ಬ್ರ್ಯಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. O. P.

ಚಾಮುಂಡಿ ಬ್ರಾಂಡ್ ವೆಜಿಟೆಬಲ್ ಪ್ರಾಡಕ್ಟ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು

ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ಕ್ಕೆ ರೂ. ೧-೧೦-೦

ಡಿ. ಪುಟ್ಟಣ್ಣ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ಪ್ರೊಪ್ರೈಟರ್), ಮೈಸೂರು.

ಬ್ರಾಂಚ್ — ದೇವರಾಜ ಮಾರ್ಕೆಟ್ [illegible]

ಫೋ॥ ನಂ. ೩೯೩ ವಂದೇಮಾತರಂ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಬುಧವಾರ ೧೧-೨-೪೨ [ಸಂಚಿಕೆ ೨೮೦

ಸಿತ್ತಾಂಗ್ ತಿರುವಿನಲ್ಲಿ ಜಪಾನರ ಕೈಮೇಲು

...ದಿನ ಕರ್ತವ್ಯ
...ಸರಾಯರಿಗೆ ಸೇರಿದ್ದು

...ನ ನಿರಾಕರಣೆಯಿಂದ ಸಿಮ್ಲಾ ಸ...ವು ಸಳ್ಳಕ್ಕೆ ಬೀಳುವ ಸ್ಥಿತಿಯು ...ಷ್ಟವೆಯೆಂದು ಅಸೋಸಿಯೇಟೆಡ್ ... ಸಂಸ್ಥೆಯ ರಾಜಕೀಯ ವಾರ್ತಾ... ತಿಳಿಸಿದ್ದಾರೆ. ಈ ಕಾರಣದಿಂದ ... ಕರ್ತವ್ಯವು ವೈಸರಾಯರಿಗೆ ಸೇ...ರಿಯೆಂದು ಹೇಳಲಾಗಿದೆ. ಅವರು ...ಯೋಜನೆಯನ್ನು ಮುಂದುವರಿಸ... ಇಲ್ಲವೇ ಸಮ್ಮೇಳನವನ್ನು ಇಲ್ಲಿ...ತ್ತಿಯ ಮಾಡಬಹುದು. ಅದರ ...ರ ಇಂಗಿತ ಮಾತ್ರ ಗುಟ್ಟಾಗಿದೆ. ...ಯವನ್ನು ಕುರಿತು, ಲೀಗು ಮೂ...ಗಳನ್ನು ನಾಕಿತ್ತೆಂದೂ, ಮುಸ್ಲಿಂ ...ಲ್ಲಿ ಮುಸಲ್ಮಾನರ ಪ್ರತಿನಿಧಿ ಸಂಸ್ಥೆ ...ತಾನೇ ಮಂತ್ರಿಮಂಡಲಕ್ಕೆ ಮು...ಸೂಚನೆ ಮಾಡುವ ಹಕ್ಕನ್ನು ಅ...ಪ್ಪಿತು. ವೈಸರಾಯರ ಮಂತ್ರಿ...ದ ಒಟ್ಟು ಸಂಖ್ಯೆ ಲೀಗಿಗೆ ಮನವ...ಗಬೇಕು. ಅಲ್ಲದೆ ಮಂತ್ರಿಮಂಡ...ನ ಮುಸ್ಲಿಂ ಪ್ರಾತಿನಿಧಿಗಳು ಯಾವ ...ನ್ನಾದರೂ ಬೇಡವೆಂದು ತಿಳಿಸಿ... ಅವರ ನೆರವಿಗೆ ವೈಸರಾಯರು ...ಮಂತ್ರಿಮಂಡಲದ ಬಹು ಸಂಖ್ಯಾ...ತರ ಅಭಿಮತವನ್ನು ತಿರಸ್ಕರಿ...ವೀಟೋ ಅಧಿಕಾರವನ್ನು ಚಲಾ...ಯಿಸುವ ಭರವಸೆಯನ್ನು ಅವರು ಲೀಗಿಗೆ ...ಕು. ಈ ವಿಷಯಗಳ ಬಗ್ಗೆ ವೈ...ರ ಅಭ್ಯಾಸನೆ ಕೇಳಲಾಗಿತ್ತು. ವೈ...ರ ಉತ್ತರ ಗೊತ್ತಾಗದಿದ್ದರೂ ಸಹ, ...ಭರವಸೆ ಕೊಡಲು ಸಾಧ್ಯವಿಲ್ಲವೆಂ...ದರು ತಿಳಿಸಿದುದಾಗಿಯೂ ಹಾಗೆ ...ದಾದರೆ ತಮ್ಮ ಭಾಷಣವನ್ನು ...ತಿ ಮಾಡಿದಂತಾಗುವುದೆಂದೂ ಅವ...ರುದಾಗಿ ಊಹಿಸಲಾಗಿದೆ.

...ಪಾನರ ನೌಕೆಯೆಷ್ಟಿದೆ

...ನರು ಯುದ್ಧಕ್ಕೆ ಪೂರ್ವಭಾವಿ...ಯೊಂದಿದ್ದುದಕ್ಕೆ ೧೮ ರಲ್ಲಿ ೧ ರ...ಗೆ ಅಂದರೆ ೮ ಲಕ್ಷ ಟನ್ ತೂಕದ ...ಪ್ಪಳ್ಳ ಹಡಗುಗಳಿಗಿಂತಲೂ ಹೆ...ನೌಕಾಶಕ್ತಿ ಪಡೆದಿಲ್ಲವೆಂದು ಬೀಗಾ...ತ್ರರೊಬ್ಬರು ತಿಳಿಸಿದ್ದಾರೆ.

...ರಿಯಾದಲ್ಲಿ ಅನೇಕ ಜರ್ಮನರ ಕೈಸೆರೆ

...ರಿಯಾದ ಜರ್ಮನ್ ವ್ಯಾಪಾರಿಗ...ವಾದೇಶಿಗಾರರು, ಕೈಗಾರಿಕೆ ಪ್ರ...ಮುಂತಾದವರನ್ನು ಸಮೂಹ...ಸರೆ ಹಿಡಿಯಲಾಗುತ್ತಿದೆ. ಈಗಾ...೦೦ ಜನರನ್ನು ಹಿಡಿಯಲಾಗಿದೆ. ...ಯರಂಗರಿಗೆ ಸಂಬಂಧಿಸಿದ ಕೈ...ಲ್ಲಿ ಪಾತ್ರ ವಹಿಸಿದ್ದರಂತೆ.

...ಧಾಯಾರ್ಥ ನಾಟಕ

...ನಾಟಕ ಸಂಘದವರು ಈ ಮಾ...ನೇ ತಾ॥ ಶನಿವಾರ ರಾತ್ರಿ ೧೦॥ ...ಗೋಮುಖಾಸುರವಧೆ ಎಂಬ ...ನ್ನಭಿನಯಿಸಿ ಬಂದ ಉತ್ಪತ್ತಿಯ...ನ್ನರಾಜನೊಬ್ಬ ಕಟ್ಟಿಸಿದ್ದರದ ...ರಲ್ಲಿ ಕಟ್ಟುತ್ತಿರುವ ವಾರುತಿ ...ಯಕ್ಕೆ ಸಹಾಯಾರ್ಥವಾಗಿ ಕೊ...ಡಗಿ ಸುಹೃಜ್ಜನರ ಬಹುಮಾತ್ರ ...ತೋರಿಸಲಾಗಿದೆ

ಸಿತ್ತಾಂಗ್ ತಿರುವಿನ ಹತ್ತಿರ ಮಿತ್ರರು ವಾಪಸು

ಪೆಗುವಿಗೆ (ಬರ್ಮಾ) ಈಶಾನ್ಯದಲ್ಲಿ ೩೫ ಮೈಲಿ ದೂರದಲ್ಲಿರುವ ನ್ಯಾಂಗ್‌ಕಾಸಿಯಿಂದ ತಮ್ಮ ಸೈನ್ಯಗಳು, ಪಟ್ಟಿಂದವರೂ ಸೇರಿ, ಒಳ್ಳೆಯ ವ್ಯವಸ್ಥೆಯಿಂದಲೇ ವಾಪಸು ಬಂದುದಾಗಿ ಮಿತ್ರ ಕೇಂದ್ರ ಕಚೇರಿ ಪ್ರಕಟಣೆ ತಿಳಿಸುತ್ತದೆ. ಥಾಟನದಿಂದ ೧೯ ಮೈಲಿಯಿರುವ ಪೇಪೊ ಎಂಬುದನ್ನು ಮಿತ್ರ ಸೈನಿಕರು ಹಿಡಿದರು.

ಸಿತ್ತಾಂಗ್ ನದಿಯ ಪಶ್ಚಿಮ ದಿಕ್ಕಿನಲ್ಲಿ ಜಪಾನರ ಚಟುವಟಿಕೆ ಹೆಚ್ಚಿದ ಅವರು ಕ್ಯೈಟ್‌ಕಿಯೋ ದಾಟಿದ್ದಾರೆ. ಅಲ್ಲದೆ ಸ್ಯಗಿಟಿಕ್ ಹಳ್ಳಿ ಮೇಲೆ ಧಾಳಿ ಮಾಡಿದರು.

ಜಪಾನ್ ಯುದ್ಧ ಮುಗಿಯುವುದೆಂದು ?

ಮುಂದಿನ ವರ್ಷದ ಅಂತ್ಯದೊಳಗೆ ಜಪಾನ್ ಯುದ್ಧ ಕೊನೆಗಾಣುವುದೆಂದು ಸೈರುತ್ಯ ಪೆಸಿಫಿಕ್ ಪ್ರಧಾನ ಸೇನಾನಿ ಮೆಕ್ ಆರ್ಥರ್‌ರವರು ಅಭಿಪ್ರಾಯಪಡುತ್ತಾರೆ

ಮಾಣಿಗಳ ಶಾಲೆ ಅವಶ್ಯಕ

ಹೋಟೆಲುಗಳಲ್ಲಿರುವ ಮಾಣಿಗಳು ಸರಿಯಾಗಿ ಶಿಕ್ಷಣಪಡೆದಿಲ್ಲ. ಭಾರತದಲ್ಲಿ ಅವರಿಗಾಗಿ ಶಾಲೆಯೊಂದನ್ನು ತೆರೆಯುವುದು ಅವಶ್ಯಕ. ಒಬ್ಬ ಯೋಗ್ಯನಾದ ಮಾಣಿಯಿದ್ದರೆ, ಮಾಲೀಕನಿಗೆ ಅವನ ತೂಕದಷ್ಟು ಚಿನ್ನದ ಬೆಲೆಯೆಂಬುದಾಗಿ ಬೊಂಬಾಯಿಯಲ್ಲಿ ಹೋಟೆಲ್ ಇಟ್ಟಿರುವ ಲಂಡನ್ ವಾಲೀಕನಾದ ಪೋರೆಲಿ ಎಂಬಾತನು ಹೇಳಿದ್ದಾನೆ.

ಜಪಾನ್ ಗೂಢಚಾರರು ಶೂಲಕ್ಕೆ.

ಮೆಕ್ ಆರ್ಥರ್‌ರವರನ್ನು ಕೊಲ್ಲಲು ಪ್ರಯತ್ನ ತೊಟ್ಟಿದ್ದ ಜಪಾನ್ ಗುಂಪಿನ ಪೈಕಿ ಏಳು ಜನರನ್ನು ಶೂಲಕ್ಕೆ ಏರಿಸಲಾಯಿತು. ಇವರು ಮನಿಲಾಕ್ಕೆ ಯಾರಿಗೂ ಕಾಣಿಸದಂತೆ ಬಂದಿದ್ದರು. ಅಲ್ಲಿ ಸಿಕ್ಕಿಬಿದ್ದರು.

ಜನತಾ ನಾಟಕಕ್ಕೆ ಸಹಾಯ

ಮೈಸೂರಲ್ಲಿ ಜರುಗುತ್ತಿರುವ ಜನತಾ ನಾಟಕೋತ್ಸವದ ಸಹಾಯಾರ್ಥವಾಗಿ ಸ...ರ್ಯಾಬಿಂಕಾವ್ ರಸ್ತೆಯಲ್ಲಿರುವ ನ್ಯಾಷನಲ್ ಎಂಪೋರಿಯಂ ಮಾಲೀಕರಾದ ಶ್ರೀ ಕಿಶನ್ ಚಂದರು ೫೦ ರೂ. ಗಳನ್ನು ಉದಾರವಾಗಿ ಕೊಡುಗೆ ನೀಡಿದ್ದಾರೆ.

ಹಿಂದೂ ಶಾಸನ ಪದ್ಧತಿ ಸುಧಾರಣೆ

ಸ್ವಂ. ಸು. ಪ್ರೆ॥] ಬೆಂಗಳೂರು ೧೧

ಹಿಂದೂಶಾಸನ ಪದ್ಧತಿಯನ್ನು ಸುಧಾರಣೆಮಾಡಲು ಸರ್ಕಾರದವರು ಈ ಸಂಬಂಧವಾಗಿ ಪರಿಶೀಲನಾ ಸಮಿತಿಯೊಂದನ್ನು ನಿರ್ಮಿಸಲು ಆಜ್ಞೆ ಮಾಡಿದ್ದಾರೆ. ಈ ಸಮಿತಿಯಲ್ಲಿ ದಿವಾನ್‌ಬಹದ್ದೂರ್ ಮಹದೇವಯ್ಯ, ನಿವೃತ್ತ ಹೈಕೋರ್ಟು ಜಡ್ಜಿ ಸಿ. ಸುಬ್ರಹ್ಮಣ್ಯಅಯ್ಯರ್, ಲಾ ಸೆಕ್ರೆಟರಿಗಳಾದ ಶ್ರೀ ಟಿ. ವೆಂಕಟರಾಮಯ್ಯ, ಶ್ರೀ ಗೌಡ ಎಸ್. ಬಾಲಕೃಷ್ಣಯ್ಯ, ಎಂ. ಸಿ. ಸೋಮಶೇಖರರಾವ್, ಹೆಚ್. ಲಿಂಗಪ್ಪ ಮತ್ತು ಶ್ರೀಮತಿ ಯಶೋಧರಾ ದಾಸಪ್ಪ ಇವರುಗಳು ಸದಸ್ಯರಾಗಿದ್ದಾರೆ. ಹೈಕೋರ್ಟಿನ ಚೀಫ್ ಜಸ್ಟೀಸರು ಸಮಿತಿಯ ಅಧ್ಯಕ್ಷರು ಮತ್ತು ಸರ್ಕಾರದ ನ್ಯಾಯಾಂಗ ಖಾತೆಯ ಉಪಕಾರ್ಯದರ್ಶಿಯಾದ ಶ್ರೀ ಜಿ. ಎಸ್. ವೆಂಕಟನಾರಣಯ್ಯನವರು ಕಾರ್ಯದರ್ಶಿಗಳು.

ಪ್ರೊಫೆಸರರಾಗಿ ಬಡ್ತಿ

ಇಂಡಿಯಾ ಸರ್ಕಾರಕ್ಕೆ ಕಳುಹಿಸಲಾಗಿರುವ ಶ್ರೀ ಕೆ. ಬಿ. ಮಾಧವ, ಮೆಡಿಕಲ್ ಕಾಲೇಜಿನ ಶ್ರೀ ಸಿ. ಶ್ರೀಕಂಠಯ್ಯ ಮತ್ತು ವಿ. ಎಲ್. ದಿನಾಚರರವರುಗಳನ್ನು ವಿಶ್ವವಿದ್ಯಾಲಯದ ಪ್ರೊಫೆಸರರುಗಳಾಗಿ ಬಡ್ತಿಮಾಡಲಾಗಿದೆ.

ಮುಂಗಮುತ್ತು ಸಚಿವರು

ಮುಂಗಮುತ್ತು ಸಚಿವರಾದ ಶ್ರೀ ಎಲ್. ಸಿದ್ದಪ್ಪನವರು ನಿನ್ನೆ ರಾತ್ರಿ ಶಿವಮೊಗ್ಗಕ್ಕೆ ಹೊರಟರು ನಾಳೆ ಹಿಂತಿರುಗುವರು.

ದಂಡಿನಲ್ಲಿ ರೇಸ್ಮೆ ಮೇಲೆ ಹತೋಟಿ

ಬ್ರಿ॥ ರೆಸಿಡೆಂಟರು, ಒಂದು ಆಜ್ಞೆಯನ್ನು ದಂಡಿನ ಪ್ರದೇಶದಲ್ಲಿ ಹೊರಡಿಸಿ ಪರ್ಮಿಟ್ ಇಲ್ಲದೆ ರೇಷ್ಮೆಯ ಮಾರಾಟವಾಗುವುದು ನಡೆಯಕೂಡದೆಂದು ತಿಳಿಸಿದ್ದಾರೆ

ನಗರ ಪೌರಸಭೆಯ ನಿಬಂಧನೆ

ಸರ್ಕಾರದವರು ನಗರದ ಪೌರಸಭೆಗಳ ಶಾಸನದ ಪ್ರಕಾರ ಕಟ್ಟು ನಿಬಂಧನೆಯೊಂದನ್ನು ಸಾರ್ವಜನಿಕರು ತಿಳುವಳಿಕೆಗಾಗಿ ಪ್ರಕಟಿಸಿದ್ದಾರೆ. ಇದರ ಪ್ರಕಾರ ಬೆಂಗಳೂರು ನಗರದಲ್ಲಿ ಕ್ಲಾಕಿಂಗ್ ಅಂಗಡಿ, ಸೆಲೂನ್ ಮತ್ತು ಫಿಲಂಗಳನ್ನು ... ಅಂಗಡಿಗಳನ್ನು ಲೈಸೆನ್ಸ್ ಪಡೆದ ಹೊರತು ತೆರೆಯಕೂಡದೆಂದು ಹೇಳಲಾಗಿದೆ. ಈ ನಿಬಂಧನೆಗಳಿಗೆ ಅಪ್ಪಣೆ ಪಡೆಯುತ್ತ ಒಂದು ತಿಂಗಳೊಳಗೆ ... ಆಗಸ್ಟ್ ...

ಗಾಂಧಿ, ಅಜಾದ್‌ರೊಡನೆ ಪುನಃ ಭೇಟಿಯೇ ?

ಮಹಾತ್ಮ ಗಾಂಧಿ ಮತ್ತು ಮೌಲಾನ ಆಜಾದರನ್ನು ವೈಸರಾಯರು ಪುನಃ ... ಕಳುಹಿಸಿ ಮಾತನಾಡುವರೆಂದು ಹೇಳಲಾಗಿದೆ.

ಅಖಿಲ ಭಾರತ ಒಲಿಂಪಿಕ್ ಪಂದ್ಯಗಳು

ಅಖಿಲ ಭಾರತ ಒಲಿಂಪಿಕ್ ಪಂದ್ಯಗಳು ಬರುವ ಫೆಬ್ರವರಿ ೫ ರಿಂದ ೧೦ ನೇ ತಾರೀಖಿನ ವರಿಗೆ ಬೆಂಗಳೂರ. ಸಂಪಂಗಿಕೆರೆಯೊಳಗೆ ನಿರ್ಮಾಣವಾಗಲಿರುವ ಶ್ರೀ ಜಯಚಾಮರಾಜನಗರದಲ್ಲಿ ನಡೆಯುತ್ತದೆ. ಈ ಪಂದ್ಯಗಳ ಜೊತೆಗೆ ಅಖಿಲ ಭಾರತ ಮಹಿಳೆಯರ ಸ್ಪೋರ್ಟ್ಸ್ ಫೆಡರೇಷನ್ನಿನವರು ತಮ್ಮ ಆಟಗಳ ಪ್ರದರ್ಶನ ಒಂದನ್ನು ಏರ್ಪಡಿಸಿರುವರು.

ಭಾರತದ ಮುಖ್ಯ ವಿಮಾನ ಮಾರ್ಗಗಳು

ಕರಾಚಿಯಿಂದ ಕೊಲಂಬೊ, ಬೊಂಬಾಯಿಯಿಂದ ಕಲ್ಕತ್ತಾ, ಬೊಂಬಾಯಿಯಿಂದ ದೆಹಲಿ, ಕಲ್ಕತ್ತಾದಿಂದ ದೆಹಲಿ, ಬಾಗ್ದಾದಿನಿಂದ ರಂಗೂನ್‌ಗಳಿಗೆ ಭಾರತದ ವಿಮಾನ ಮಾರ್ಗಗಳು ... ಸಿದ್ಧವಾಗಿವೆ.

LATEST NEWS

ಸಿಮ್ಲಾದಲ್ಲಿ ಮೈಸೂರು ಮುಖಂಡರು

ಸ್ವಂ. ಸು. ಪ್ರೆ॥] ಬೆಂಗಳೂರು ೧೧

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು, ಶ್ರೀ ಗೌಡರ ಟಿ. ಟಿ. ಭಾಷ್ಯಂರವರು ಮತ್ತು ಎಸ್. ಚನ್ನಯ್ಯನವರು ಸಿಮ್ಲಾದ ಜವಾಹರಲಾಲರವರನ್ನು ಕಂಡು ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆ ಮತ್ತು ಸಂಸ್ಥಾನಗಳ ಪ್ರಜೆಗಳ ಹಕ್ಕು ಬಾಧ್ಯತೆ ಇವುಗಳ ಕುರಿತು ಅವರಿಗೆ ತಿಳಿಸಿದರೆಂದು ವರ್ತಮಾನ ಬಂದಿದೆ. ... ಭೇಟಿಯನ್ನು ಕಂಡಿದ್ದರು.

ಮೈಸೂರು ಜಿಲ್ಲಾ ಜಡ್ಜಿ

ಅಡಿಷನಲ್ ಸಬ್ ಜಡ್ಜಿಗಳಾಗಿದ್ದ ಶ್ರೀ ಎಲ್. ವೆಂಕಟರಮಣಯ್ಯನವರನ್ನು ಮೈಸೂರು ಜಿಲ್ಲಾ ಮತ್ತು ಸೆಷನ್ಸ್ ಜಡ್ಜಿಗಳಾಗಿ ನೇಮಿಸಲಾಗಿದೆ.

ಚನ್ನಪಟ್ಟದಲ್ಲಿ ರೇಷನಿಂಗ್

ಈ ತಿಂಗಳಿನಿಂದ ಚನ್ನಪಟ್ಟದಲ್ಲಿ ರೇಷನಿಂಗ್ ಪದ್ಧತಿ ಜಾರಿಗೆ ಬರುವುದು. ನಿವಾಸಿಗಳು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ... ತಿಳಿಸಲಾಗಿದೆ.

... ನಿಬಂಧನೆ ... ದೆ..

ಮೆಡಿಕಲ್ ಸ್ಕೂಲಿಗೆ ಸೇರ್ಪಡೆ ವಿದ್ಯಾರ್ಥಿಗಳು

ಮೆಡಿಕಲ್ ಸ್ಕೂಲಿನ ... ವಿದ್ಯಾರ್ಥಿಗಳ ಸಂಖ್ಯೆ ... ೧೦ ರಿಂದ ೫೦ ಕ್ಕೆ ಏರಿಸಲಾಗಿದೆ. ... ಶಿಕ್ಷಣವನ್ನು ... ಮತ್ತು ... ತಿಳಿಸಲಾಗಿದೆ.

ರಾಜಧಾನಿಯ ಡೈರಿ

ಮೈಸೂರಿನ ಹೊಸ ರಾಜಧಾನಿಯ [illegible] ಲ್ಲಿ [illegible]. 'ಮಯ್ಯೆ ಮಯ್ಯೆ ಮಳೆರಾಯ' ಎಂದು ಕರೆಯುವುದೂ ಸಾ ಕು ಅವನ ಹಾವಳಿಯನ್ನು ತಡೆಯುವು ದೂ ಸಾಕು ಅಂತ ಅನ್ನಿಸಿದೆ

o o o o

[illegible] ಮನೆಯಲ್ಲಿ ದ್ದ ಮರುಕು [illegible] ಕಡೆದನ್ನು. [illegible] ದ ಪ್ರಸಂಗ ಒದಗಿದೆ [illegible] ದ [illegible] ನನ್ನ [illegible] ನೋ ಡಿತ್ತಿದೆ. [illegible] ಹಿಡಿದ ಆ [illegible] ನವರಿಗೆ [illegible]

[illegible]

[illegible] ರತ್ತದೆ

o o o o

[illegible] ಬೀಳುತ್ತದೆ [illegible] ಆದರೆ [illegible] ಹೋಗುವವರಿಗೆ ಏನೆ ಅವರ ಅನುಭವ!

o o o o

ರಾಜಧಾನಿಯಲ್ಲಿ ರಸ್ತೆ [illegible] ದ್ದು ನಾಯಿಗಳು. ಅವಕ್ಕಾಗಿ [illegible] ಯವರೂ [illegible] ಮಾಡುವದನ್ನೂ ಕಡಿಮೆ ಮಾಡಿಲ್ಲ. [illegible] ರ್ [illegible] ರಸ್ತೆಗಳ [illegible]? [illegible] ರಸ್ತೆಗಳ [illegible] ಮತ್ತೆ [illegible]. ಇನ್ನು ಈ [illegible] ಮಧ್ಯದಲ್ಲಿ [illegible] ಬಲಿ ಸಿದ್ಧ!

o o o o

[illegible]

ಆಗ್ನೇಯ ಏಷ್ಯಾ

ಮತ್ತೊಂದು ಓಕಿನಾವಾ

ಜಪಾನರು ಆಗ್ನೇಯ ಏಷ್ಯಾವನ್ನು ಮತ್ತೊಂದು ಓಕಿನಾವಾ ದ್ವೀಪವನ್ನಾಗಿ ಮಾಡಬಹುದೆಂದು ಮಿತ್ರ ಕೇಂದ್ರ ಕಛೇರಿಯಲ್ಲಿ ಹೇಳಲಾಗುತ್ತಿದೆ. ಈ ಭಾಗದಲ್ಲಿ ಮಿತ್ರರ ದಂಡಯಾತ್ರೆಯು ಮುಂದೆ ನಡೆಯುವುದೋ ಅಥವಾ ಜಪಾನ್ ದ್ವೀಪಗಳ ಮೇಲೆ ಅಮೆರಿಕ ದಂಡಯಾತ್ರೆ ಮುಂದೆಯಾಗುವುದೋ ನೋಡಬೇಕಾಗಿದೆ. ಆಗ್ನೇಯ ಏಷ್ಯಾದಲ್ಲಿ ಸುಭಾಷ್ ಬೋಸರ ರಾಷ್ಟ್ರೀಯ ಸೈನ್ಯ ಮತ್ತು ಸ್ಥಳೀಯ ಜನರಿಂದ ಒಮ್ಮೆ ಸಹಾಯದ ಹೊರತು ಉಳಿದ ಕಡೆಗಳಿಂದ ಜಪಾನರಿಗೆ ಹೊರಗಿನ ಸಹಾಯ ಬರುವಂತಿಲ್ಲ.

ಆಹಾರ ವಸ್ತು

ಹಾಳಾಗುತ್ತಿವೆ

ಜೋಳ [illegible] ಯಲ್ಲಿ ಸರಿಯಾಗಿ ನೋಡಿಕೊಳ್ಳದೆ ಇರುವುದರಿಂದಲೂ, ಮೂಟೆಗಳು ಸರಿಯಾಗಿ ತುಂಬದೆ ಇರುವುದರಿಂದ [illegible] ಮತ್ತು ಸಾಗಿಸಲು ವಾಹನ ಸೌಕರ್ಯದ ಅಭಾವವಿರುವುದರಿಂದಲೂ ಆಹಾರ ವಸ್ತುಗಳು ಬಹಳವಾಗಿ ಹಾಳಾಗುತ್ತಿದೆಯೆಂದು ಬಲ್ಲ ಮರ್ಯಾದಸ್ಥರು ತಿಳಿಸಿದ್ದಾರೆ.

ಚರ್ಚಿಲ್-ಫ್ರಾಂಕೊ

ಭೇಟಿ

ಚರ್ಚಿಲ್ಲರು ಫ್ರಾನ್ಸ್ ಸ್ಪೇನುಗಳ ಗಡಿ ಭಾಗದಲ್ಲಿರುವ ತೀರ ನಗರವಾದ ಹೆಂಡಾಯೆಯಲ್ಲಿ ವಿಹಾರಕ್ಕಾಗಿ ಹೋಗಿರುವರೆಂದು ಹೇಳಲಾಗಿರುವುದು. ಪ್ರಾಯಶಃ ಅಲ್ಲಿ ಇಲ್ಲದೇ ಅವರು ಸಂದರ್ಭತ್ಯೇನ ಜನರಲ್ ಫ್ರಾಂಕೊರವರನ್ನು ಸಂಧಿಸಬಹುದೆಂದು ಊಹಿಸಲಾಗಿದೆ.

ಬೇಕಾಗಿದೆ

ಮೈಸೂರು ಸಿಟಿ ನೂರಡಿ ರಸ್ತೆಯಲ್ಲಿ [illegible] M. ನಂಬರಿನ ಮಹಡಿ ಮನೆ. ನಲ್ಲಿ, ಲೈಟ್, ಫ್ಲಷ್ ಸಹ ಇವೆ. ವಿವರಗಳಿಗೆ ಬಿ. ಬಿ. ಗಾರ್ಡನ್ [illegible] ನೇ ನಂ. ಮನೆಯಲ್ಲಿರುವ ಜಿ. ಪರಶುರಾಮಯ್ಯನವರಲ್ಲಿ ವಿಚಾರಿಸಿ.

Edited, printed and published by A. R. Nagarajan at the Sadhvi Press, D. Subbiah Road, Mysore.

ಐರ್ಲೆಂಡಿನ ಗೌರವ

ಭಾರತೀಯರಿಗೆ

ದಿಲೀಪಸಿಂಗ್ ಎಂಬುವರಿಗೆ ಐರ್ಲೆಂಡಿನ ಎಸ್. ಸಿ. ಪದವಿ ದೊರೆತಿದೆ. ಭಾರತೀಯರಲ್ಲಿ ಐರ್ಲೆಂಡಿನ ಪ್ರಶಸ್ತಿ ಪಡೆಯುವವರಲ್ಲಿ ಇವರೇ ಮೊದಲನೆಯವರು.

ಬೋರ್ನಿಯೊ ಮುಂದೋಟ

ಬೋರ್ನಿಯೊ ದ್ವೀಪದ ಎಣ್ಣೆ ಗಣಿ ಕೇಂದ್ರವಾದ ಬಲಿಕ್ ಪಪಾನಿಂದ ಆಸ್ಟ್ರೇಲಿಯ ಸೈನಿಕರು ಮುಂದೆ ಆರು ಮೈಲಿ ಸಾಗಿ ಹೋಗಿದ್ದಾರೆ. ಇತರ ಸೈನ್ಯಗಳು ತೀರ ಪ್ರದೇಶದಿಂದ ಒಳಕ್ಕೆ ನುಗ್ಗುತ್ತಿವೆ.

ಜಪಾನ್ ಹಾನ್ಷು ದ್ವೀಪದ

ದಂಡಯಾತ್ರೆ

ಜಪಾನಿನ ಮಧ್ಯ ಭಾಗದ ದ್ವೀಪವಾದ ಹಾನ್ಷುವಿನ ಮೇಲೆ ಮಿತ್ರರು ದಂಡಯಾತ್ರೆ ನಡೆಸಬಹುದೆಂದೂ ಜಪಾನಿನ ಕಾಳಗವು ಅಲ್ಲಿಯೇ ಬಗೆಹರಿಯುವುದೂ ಜಪಾನ್ ವಾರ್ತಾ ಸಂಸ್ಥೆ ತಿಳಿಸಿದೆ. ಟೋಕಿಯೊ ರಾಜಧಾನಿ ಇರುವುದು ಈ ದ್ವೀಪದಲ್ಲಿ

ಹಣ ದುರುಪಯೋಗವೇ ?

ಸಂಡ್ಯೂರ ಎಲ್ಲಪ್ಪಶೆಟ್ಟಿ ಎಂಬಾತನು ಜೂಜು ಹೋರಾಟದ ಬಗ್ಗೆ ಸರ್ಕಾರದವರಿಂದ ನೇಮಿಸಲ್ಪಟ್ಟು ಪೋಲಿಸ ಬಾಬ್ತು ಸುಮಾರು ಎರಡು ಸಾವಿರ ರೂ. ಹಣ್ಣ ದುರುಪಯೋಗಪಡಿಸಿಕೊಂಡು ಪರಾರಿಯಾಗಿರುವನೆಂದು ಗೊತ್ತಾಗಿದೆ. ಇಲ್ಲದೆ ತಾನು ಹೀಗೆ ಮಾಡಿರುವನಾಗಿಯೂ ತನ್ನನ್ನು ಕ್ಷಮಿಸಬೇಕೆಂದೂ ಶ್ರೀಮನ್ಮಹಾರಾಜರವರಿಗೂ ಪೈನಾನ್ಸ್ ಸೆಕ್ರೆಟರಿಯವರಿಗೂ ಪತ್ರ ಬರೆದಿರುವುದಾಗಿ ಹೇಳಲಾಗಿದೆ

ಆಪೆರಾ ಟಾಕೀಸ್

12—7-45 ರಿಂದ

2ನೇ ವಾರ

* ಮೆಹಬೂಬ್
* ನಸ್ರಿನ್
* ನಿರ್ಮಲ

ಮುಂತಾದವರು ಪಾತ್ರವಹಿಸಿರುವ

ಜೀವರ್

(ಹಿಂದೀ ಭಾಷೆ)

ಜಿನ್ನಾರವರ ವಿದೇಶ ಯಾತ್ರೆ

ಜಿನ್ನಾರವರು ಇಂಗ್ಲೆಂಡು ಮತ್ತು [illegible] ದೇಶಗಳಿಗೆ ಹೋಗಿ ಅಲ್ಲಿ ಮುಸ್ಲಿಂ ಲೀಗಿನ ವಾದವನ್ನು ಪ್ರಚಾರಮಾಡುವ ಅಭಿಪ್ರಾಯವುಳ್ಳವರಾಗಿರುವುದಾಗಿ ಹೇಳಲಾಗಿದೆ. ಸಿಮ್ಲಾ ಸಮ್ಮೇಳನವು ಯಾವ ರೀತಿ ಕೊನೆಗಾಣಲಿ, ಅದು ಜಿನ್ನಾರವರಿಗೆ ಅಷ್ಟು ಪ್ರಸಕ್ತಿಗೆ ಬರುವುದಿಲ್ಲ. ಹೊರಗಡೆ ದೇಶಗಳು ಅಷ್ಟೊಂದು ಹಿಂದಿನಿಂದಲೂ [illegible] ಲೀಗು ಕೇಳುತ್ತಿದೆ. ಆದರೆ ಸರಕಾರ ಮಾತ್ರ ಇನ್ನೂ ಉತ್ತರ ಕೊಟ್ಟಿಲ್ಲ. ಜಿನ್ನಾರವರಿಗೆ ಸರಕಾರದ ಹಣ ಸಹಾಯ ಬೇಕಿದೆ ಎಂತೆ.

ಟ್ರುಮನ್ನರ ಪ್ರಯಾಣ

ತ್ರಿರಾಷ್ಟ್ರ ನಾಯಕರ ಸಮ್ಮೇಳನಕ್ಕಾಗಿ ಅಮೆರಿಕೆಯ ಅಧ್ಯಕ್ಷ ಟ್ರುಮನ್ನರವರು ವಾಷಿಂಗ್ಟನ್ ಬಿಟ್ಟು ಹೊರಟರೆಂದು ಹೇಳಲಾಗಿದೆ

ಕ್ಯಾಂಟೀನ್ ಫಂಡು

ಸ್ವಂ. ವ.] ಚಾಮರಾಜನಗರ :

ಇಲ್ಲಿನ ಕಳೆದ ಮಾರ್ಕೆಟ್ಟಿನಲ್ಲಿ ಬೊಂಬೆ [illegible] ಪ್ರಂಚಕಯಾಗುತ್ತಿದೆ. ಪೈರಲಿಗೆ ಕೊಂಡುತ್ತಿರುವ ಚಕ್ಕುಗಳು ಅನೇಕ [illegible] ಸ್ಥಳದಲ್ಲಿ ಕಂಟ್ರೋಲ್ ಮೇಲೆ ಬದಲಾಗುತ್ತವೆ. ಇಂತಹ ಚಕ್ಕುಗಳನ್ನು ಕಡಿಮೆ ದರದ ವಲ್ಲಾಳ ಮೇಲೆ ಬದಲು ಮಾಡಿಕೊಳ್ಳುವವನಾಗಿಯೂ [illegible] ಬಂದ ನೋಟುಗಳನ್ನು ಇಲ್ಲಿಯ ಮೈಸೂರು ಕ್ಯಾಂಟೀನಿಗೆ ಕೊಡುವುದಾಗಿಯೂ [illegible] ಸರಕ್ಕಾಗಿ ಬುಕ್ ಡಿಪೋದಿನಲ್ಲಿ [illegible] ಹಾಕಿರುವುದಾಗಿಯೂ ಕ್ಯಾಂಟೀನ್ ಕಾರ್ಯದರ್ಶಿ ಶ್ರೀ ಬಿ. ನಾರಾಯಣರವರು ತಿಳಿಸುತ್ತಾರೆ.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ

ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

ತಿಂಗಳಿಗೆ ಚಂದಾ ಎಂಟಾಣೆ ಮಾತ್ರ

ಜಾಹಿರಾತಿನ ದರಗಳಿಗೆ

ವಿಚಾರಿಸಿರಿ

ಅಮೃತ

ವಿಷಮ ಜ್ವರ, ಮಲೇರಿಯ ಜ್ವರ, ಜ್ವರದ ಗಡ್ಡೆ ಇವುಗಳನ್ನು [illegible] ಬೇಗ ಗುಣಮಾಡುತ್ತದೆ.

ಟಿ. ವಿ. ವೆಂಕಟರಾಮಯ್ಯ

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲಾ

[illegible]

ಏಜೆಂಟ್, [illegible] ಸ್ಟೋರ್

ಚಾಮರಾಜನಗರ

ಲಿಲ್ಲೀ ಬ್ರ್ಯಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V O P

ಚಾಮುಂಡಿ ಬ್ರ್ಯಾಂಡ್ ವೆಜಿಟೆಬಲ್ ಪ್ರಾಡಕ್ಟ್ಸ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-0

ಡಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್ —ದೇವರಾಜ ಮಾರ್ಕೆಟ್ : [illegible]

ಫೋನ್ ನಂ 392 ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೩] ಗುರುವಾರ ೧೨--೭--೪೫ [ಸಂಚಿಕೆ ೨೮೧

ಗಾಂಧಿ, ಜಿನ್ನಾರೊಡನೆ ವೈಸರಾಯರ ಭೇಟಿ

ಸಂತಾಪ ಸೂಚನೆ

ಮೈಸೂರು ೧೧

ದಿವಂಗತ ಗಾಯಕ ಶಿಖಾಮಣಿ ಎಲ್. ಮುತ್ತಯ್ಯಭಾಗವತರ ಮರಣದ ಬಗ್ಗೆ ಸಂತಾಪಸೂಚನೆ ಮಾಡಲು ನಿನ್ನೆ ಸಾಯಂಕಾಲ ಸಹಕಾರ ಭವನದಲ್ಲಿ ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬಾಂಢೊರೆಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ವಿದ್ವಾಂಸರುಗಳಾದ ವೀಣೆ ಶಿವರಾಮಯ್ಯನವರು, ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರು ಸಂಗೀತ ಶಾಸ್ತ್ರವಿಶಾರದ ಕೆ. ವಾಸುದೇವಾಚಾರ್ಯರು, ಆಸ್ಥಾನ ಮಹಾವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳೇ ಮೊದಲಾದವರು ಭಾಷಣಮಾಡಿ ದಿವಂಗತರ ಗುಣಗಾನಮಾಡಿದರು. ಅಧ್ಯಕ್ಷರ ಭಾಷಣವಾದಮೇಲೆ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಿ ಸಭೆ ಮುಕ್ತಾಯವಾಯಿತು.

ನೀರು ಸರಬರಾಜು ವ್ಯವಸ್ಥೆ

ರಾಜಧಾನಿಯಲ್ಲಿ ನೀರಿನ ಸರಬರಾಜು ಬಗ್ಗೆ ಬರುವ ಪುಕಾರುಗಳನ್ನು ಸ್ವೀಕರಿಸಿ ಕೂಡಲೇ ತಕ್ಕ ಪರಿಹಾರವನ್ನು ಮಾಡಲು ವಿದ್ಯುಚ್ಛಕ್ತಿ ಇಲಾಖೆಯ ವರಂತೆಯೇ ನೀರಿನ ಇಲಾಖೆಯವರೂ ಏರ್ಪಡಿಸಿರುತ್ತಾರೆ. ಪುರನಿವಾಸಿಗಳು ತಮ್ಮ ತಮ್ಮ ಮನೆ ನಲ್ಲಿಗಳಲ್ಲಿಯಾಗಲೀ ಅಥವ ಬೀದಿ ನಲ್ಲಿಗಳಲ್ಲಿಯಾಗಲೀ ನೀರು ಬರದೆ ಅಥವಾ ಒಡೆದು ನೀರು ಸೋರುವುದೇ ಮುಂತಾದ ಯಾವ ಅನಿವಾರ್ಯಗಳಿದ್ದರೂ ವಾಣೀವಿಲಾಸ ವಾಟರ್ ವರ್ಕ್ಸಿನ ಟೆಲಿಫೋನ್ ನಂ. ೨೩೦ಕ್ಕೆ ಫೋನ್ ಮಾಡಿದರೆ ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೆಂದು ಗೊತ್ತಾಗಿದೆ.

ಹೋಟೇಲು ಕೆಲಸಗಾರರ ಸಂಘ

ರಾಜಧಾನಿಯ ಹೋಟೇಲ್ ಕೆಲಸಗಾರರ ಸಭೆಯು ಕಾಂಗ್ರೆಸ್ ಕಚೇರಿಯಲ್ಲಿ ನೆನ್ನೆ ರಾತ್ರಿ ಸೇರಿತ್ತು. ಶ್ರೀ ವೆಂಕಟರಮಣರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಆರ್. ಡಿ. ಎಸ್. ಬಾಬಾ, ಬಾಲಕೃಷ್ಣರಾವ್, ಟಿ. ಎಸ್. ಸುಬ್ಬಣ್ಣನವರುಗಳು ಭಾಷಣ ಮಾಡಿದ ನಂತರ ಈ ಕೆಳಗೆ ಕಂಡ ನಿರ್ಣಯಗಳನ್ನು ಮಾಡಲಾಯಿತು:—ಸಂಘವನ್ನು ಶೀಘ್ರದಲ್ಲಿ ರಿಜಿಸ್ಟರ್ ಮಾಡಿಸಿಕೊಡಬೇಕಾಗಿ ಲೇಬರ್ ಕಮೀಷನರನ್ನು ಪ್ರಾರ್ಥಿಸುವುದು ಕೆಲಸಗಾರರ ಹಿತ ರಕ್ಷಣೆಯ ದೃಷ್ಟಿಯಿಂದ ಹೋಟೇಲುಗಳನ್ನು ನಿಯಮಿತ ಕಾಲದಲ್ಲಿ ಎಂದರೆ ಬೆಳಗ್ಗೆ ೬ ರಿಂದ ೧೨ ಮತ್ತು ಮಧ್ಯಾಹ್ನ ೪ ರಿಂದ ೯ ಗಂಟೆ ವರೆಗೆ ನಡೆಸಬೇಕೆಂಬ ಆಜ್ಞೆಯನ್ನು ಜಾರಿಗೆ ತರಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವುದು.

ಉಚಿತ ವಾಚನಾಲಯ

ಸರಕಾರಿಲಮರದ ಬೀದಿಯಲ್ಲಿ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗಾಗಿ ತೆರೆಯಲಾಗಿರುವ ಶ್ರೀ ಸರಸ್ವತಿ ವಿದ್ಯಾಲಯದ ಆಶ್ರಯದಲ್ಲಿ ಸಾರ್ವಜನಿಕರಿಗಾಗಿ ತೆರೆಯಲಾಗಿರುವ ಉಚಿತ ವಾಚನಾಲಯದ ಉಪಯೋಗವನ್ನು ಪ್ರಾತಃಕಾಲ ೯ ರಿಂದ ೧೧ ರ ವರೆಗೆ ಬೇಕಾದವರು ಪಡೆಯಬಹುದೆಂದು ಕಾರ್ಯದರ್ಶಿಗಳಾದ ಶ್ರೀ ವಿ. ಕೆ. ರಾಮನಾಥರವರು ತಿಳಿಸಿದ್ದಾರೆ.

ಗಾಂಧಿ, ಜಿನ್ನಾರೊಡನೆ ವೈಸರಾಯರ ಭೇಟಿ

ನೆನ್ನೆ ಸಂಜೆ ಜಿನ್ನಾರವರು ವೈಸರಾಯರೊಡನೆ ಕೇವಲ ೧೫ ನಿಮಿಷಗಳ ಕಾಲ ಮಾತುಕತೆಯಾಡಿದರು. ನಂತರ ಗಾಂಧಿಜಿಯವರು ೪-೩೦ ಗಂಟೆಗೆ ವೈಸರಾಯರನ್ನು ಕಂಡು ೫೦ ನಿಮಿಷ ಕಾಲ ಸಂಭಾಷಿಸಿದರು ಗಾಂಧಿಜಿಯವರನ್ನು ಕರೆತರಲು ವೈಸರಾಯರ ತಮ್ಮ ಮೋಟಾರು ವಾಹನವನ್ನು ಕಳುಹಿಸಿದ್ದರು. ಮಾತನಾಡಿಕೊಂಡು ಬಂದ ಮೇಲೆ ನೆಹರೂ, ಪಟೇಲ್, ರಾಜೇಂದ್ರಪ್ರಸಾದ್‌ರವರು ಗಾಂಧಿಜಿಯವರೊಡನೆ ಸಂಜೆ ೬-೩೦ ಗಂಟೆ ವರೆಗೂ ಇದ್ದರು.

ಈ ಮಾತುಕತೆಗಳಿಂದ ಹೊಸ ಪಂತ ಹತ್ತಿದಂತಾಗಿದೆ. ನೆನ್ನೆ ಬೆಳಗ್ಗೆ ಲೀಗ್ ಸಮಿತಿ ನಡೆದಾಗ ಚರ್ಚಿಸಲ್ಪಟ್ಟ ಮುಖ್ಯಾಂಶಗಳು ಇವು: ಹಂಗಾಮಿ ಸರಕಾರ ಮತ್ತು ಭವಿಷ್ಯದ ರಾಜ್ಯಾಂಗಗಳ ಬಗ್ಗೆ ವೈಸರಾಯರಿಂದ ಕೇವಲ ಬಾಯಿ ಮಾತಿನ ಭರವಸೆ ಬಂದರೆ ಲೀಗು ಮಾಡಬೇಕಾದುದೇನು? ಹಂಗಾಮಿ ಸರಕಾರ ರಚನೆಯಾಗದೇ, ಪ್ರಾಂತಗಳಲ್ಲಿ ಮಾತ್ರ ಕಾಂಗ್ರೆಸ್ ಮಂತ್ರಿಮಂಡಲಗಳು ಬಂದರೆ, ಆಗ ಲೀಗು ಭಾಗ ವಹಿಸಕೂಡದೆಂಬುದು, ಮೂರನೆಯದಾಗಿ ಲೀಗನ್ನು ಕೇಳದೆ ವೈಸರಾಯರು ಮುಂದುವರಿದು, ಲೀಗಿನ ಹಲವು ಜನರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡರೆ, ಅಂತಹವರ ಮೇಲೆ ಶಿಸ್ತಿನ ಕಾರ್ಯಕ್ರಮ ತೆಗೆದುಕೊಳ್ಳುವ ವಿಚಾರಗಳು ಸಮಿತಿಯಲ್ಲಿ ಪರಿಶೀಲಿಸಲ್ಪಟ್ಟವು.

ನಾಳೆ ಮತ್ತೆ ಸಿಮ್ಲಾ ಸಮ್ಮೇಳನದಲ್ಲಿ ಲೀಗ್ ಸದಸ್ಯರು ಹಾಜರಾಗುವರು.

ವಿಶ್ವ ವಿದ್ಯಾಲಯದ ಮೇಲೆ ೩೪ ಲಕ್ಷ ರೂ. ದಾವಾ

ನಾಗಪುರ ಹೈಕೋರ್ಟಿನಲ್ಲಿ ಅಲ್ಲಿನ ವಿಶ್ವವಿದ್ಯಾಲಯದ ಮೇಲೆ ೩೪ ಲಕ್ಷ ರೂ. ಗಳಿಗಾಗಿ ರಾವ್‌ಬಹದ್ದೂರ್ ಲಕ್ಷ್ಮೀನಾರಾಯಣರಾಯರ ಪತ್ನಿ ದಾವ ಹೂಡಿದ್ದಾರೆ ರಾವ್‌ಬಹದ್ದೂರ್‌ರವರು ತಾವು ಸಾಯುವುದಕ್ಕಿಂತ ಮುಂಚೆ, ವಿಶ್ವವಿದ್ಯಾಲಯದವರು ಪ್ರಥಮ ದರ್ಜೆಯ ಔದ್ಯೋಗಿಕ ಶಿಕ್ಷಣಾಲಯವನ್ನು ತೆರೆಯಬೇಕೆಂದು ತಮ್ಮ ೫೦ ಲಕ್ಷರೂ.ಗಳ ಆಸ್ತಿಯನ್ನು ದಾನವಾಗಿ ಕೊಟ್ಟಿದ್ದರು. ಈಗ ಅವರ ಪತ್ನಿಯು ಹೀಗೆ ಆಸ್ತಿಯನ್ನು ಪೂರ್ತಿಯಾಗಿ ಬರೆದು ಕೊಡಲು ತಮ್ಮ ಯಜಮಾನರಿಗೆ ಹಕ್ಕಿಲ್ಲವೆಂದು, ತಿಳಿಸಿ ಈಗ ದಾವಾ ಹೂಡಿದ್ದಾರೆ.

ಸುಬ್ಬಣ್ಣನವರ ಖುಲಾಸೆ

ಮೈಸೂರು ೧೧

"ಈ ರೀತಿಯ ಮೊಕದ್ದಮೆಯಲ್ಲಿ, ಒಬ್ಬ ಆಪಾದಿತನನ್ನು ಪೂರ್ತಿ ಅಪರಾಧಿಯೆಂದು ಹೇಳುವುದಕ್ಕೆ ಸಾಕಷ್ಟು ಸಾಕ್ಷ್ಯಗಳಿದ್ದ ಹೊರತು ಅಪರಾಧಿ ಎಂದು ಹೇಳಲಾಗುವುದಿಲ್ಲ; ಮತ್ತು ಸಾಕ್ಷಿಗಳ ಹೇಳಿಕೆಗಳು ಒಂದಕ್ಕೊಂದು ತಾಳೆಯಾಗದೆ ಇರುವಾಗ ಕಾನ್‌ಸ್ಟೇಬಲ್ ಹೇಳಿಕೆಯನ್ನು ಅನುಸರಿಸಿ ನಡೆಯುವುದು ಕ್ಷೇಮಕಾರಿಯಲ್ಲ. ಆದುದರಿಂದ ಕೆಳಕೋರ್ಟಿನ ತೀರ್ಮಾನವನ್ನು ನಾನು ತಳ್ಳಿಹಾಕಿದ್ದೇನೆ" ಎಂಬ ಮಾತುಗಳನ್ನು ಒಳಗೊಂಡ ತೀರ್ಪನ್ನು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಹೆಚ್. ವೆಂಕಟರಾಮಯ್ಯನವರು ಕಾಂಗ್ರೆಸ್ ಕೆಲಸಗಾರರಾದ ಶ್ರೀ ಟಿ. ಎಸ್. ಸುಬ್ಬಣ್ಣನವರು, ಹಾಕಿದ್ದ ಅಪೀಲು ಮೊಕದ್ದಮೆಯಲ್ಲಿ ಕೊಟ್ಟಿರುತ್ತಾರೆ.

ಆಪಾದಿತರು ಹಾರುಹಸ್ತಿಯಲ್ಲಿ ಆಕ್ಷೇಪಣೀಯವಾದ ಮಾತುಗಳನ್ನು ಸೀಮೆಸುಣ್ಣದಿಂದ ಬರೆದರೆಂದೂ ಆಕ್ಷೇಪಣೀಯವಾದ ಹಸ್ತಪತ್ರಿಕೆಗಳನ್ನಿಟ್ಟುಕೊಂಡಿದ್ದರೆಂದೂ ಶ್ರೀ ಸುಬ್ಬಣ್ಣನವರಿಗೆ ೭೫ ರೂ ದಂಡವನ್ನು ಭಾರತ ರಕ್ಷಣಾ ಶಾಸನಾನುಸಾರವಾಗಿ ವಿಧಿಸಲ್ಪಟ್ಟಿತ್ತು. ಆಪಾದಿತರ ಕಡೆ ಶ್ರೀ ಶೇಷಾದ್ರಿಯವರು ವಕಾಲತ್ತು ವಹಿಸಿದ್ದರು

ಶೃಂಗೇರಿ ಗುರುಗಳಿಗೆ ಅಲಸ್ಯ

ಸ್ವಂ.ವ] ಶೃಂಗೇರಿ ೧೧

ಮೊನ್ನೆ ಗುರುಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರಿಗೆ ಕಳೆದ ೨೫ ನೇ ತಾ॥ ನಿಂದ ಹಿಂದೆ ಆಗಿದ್ದಂತೆಯೇ ದೇಹಾಲಸ್ಯ ಉಂಟಾಗಿದೆ. ದೇವಸ್ಥಾನದ ಬಳಿ ಪ್ರತ್ಯೇಕವಾದ ಸ್ಥಳದಲ್ಲಿ ಅವರಿಗೆ ಬಿಡಾರ ಮಾಡಲಾಗಿದೆ.

ಮೈಸೂರು ವಿಶ್ವವಿದ್ಯಾಲಯದವರು ವಿಜ್ಞಾನ ಶಾಸ್ತ್ರ ತರಗತಿಗಳಲ್ಲಿ ಹೆಚ್ಚು ಜನ ವಿದ್ಯಾರ್ಥಿಗಳು ಓದುವಂತೆ ಸಾಧಕವಾಗಲು 'ಷಿಫ್ಟ್' ಪದ್ಧತಿಯನ್ನು ಅನುಸರಿಸುವರೆಂದು ಹೇಳಲಾಗಿದೆ. ಇನ್ನಷ್ಟು ವಿದ್ಯಾರ್ಥಿಗಳು ಇಷ್ಟಪಟ್ಟ ವರೆಲ್ಲರನ್ನೂ ಕಾಲೇಜಿಗೆ ಸೇರಿಸಿಕೊಳ್ಳಬಹುದೆಂದು ತಿಳಿದುಬಂದಿದೆ ಸೈನ್ಸ್ ಲ್ಯಾಬೊರೇಟರಿಗಳು ಮಿತ ಸಂಖ್ಯೆಯಲ್ಲಿರುವುದರಿಂದ ಷಿಫ್ಟ್ ಪದ್ಧತಿ [illegible]

ಶ್ರೀ ಪಿ. ಜೆ. ವಿಜಯಭಟ್ ರವರು

"ರಾಮರಾಜ್ಯ" ಮತ್ತು "ವಿಕ್ರಮಾದಿತ್ಯ" ಚಲನಚಿತ್ರಗಳ ನಿರ್ದೇಶಕರಾದ ಶ್ರೀ॥ ವಿ. ಜೆ ವಿಜಯಭಟ್‌ರವರು ರಾಜಧಾನಿಗೆ ದಯಮಾಡಿ, ಸೂಪರ್ ಕೆಫೆಯಲ್ಲಿ ಇಳಿದುಕೊಂಡಿದ್ದಾರೆ ಅರಮನೆ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿದ್ದರು. ನೆನ್ನೆಯ ದಿನ ಕೃಷ್ಣರಾಜಸಾಗರಕ್ಕೆ ದಯಮಾಡಿಸಿದ್ದರು ಅವರ ಗೌರವಾರ್ಥವಾಗಿ ನೆನ್ನೆ ಬೃಂದಾವನಕ್ಕೆ ದೀಪಾಲಂಕಾರವಾಗಿತ್ತು.

ಶ್ರೀ ನಾರಾಯಣ ಮಹಾರಾಜರವರು

ನಜರ್‌ಬಾದಿನಲ್ಲಿರುವ ಶ್ರೀ ಸಿ. ನರಿಮಾಳ್‌ಶೆಟ್ಟರವರ ಶಾಂತಿ ನಿವಾಸ ಬ್ಯಾಸಾದಲ್ಲಿ ಬಿಡಾರ ಮಾಡಿರುವ ಸದ್ಗುರು ಸಮರ್ಥ ಶ್ರೀ ನಾರಾಯಣ ಮಹಾರಾಜರವರು ಇದೇ ಮಾಹೆ ೧೫ ನೇ ತಾ॥ ಭಾನುವಾರ ಇಲ್ಲಿಂದ ಬೆಂಗಳೂರಿಗೆ ಪ್ರಯಾಣ ಮಾಡುವರೆಂದು ತಿಳಿಯಬರುತ್ತದೆ ದಿನವೂ ಎರಡು ವೇಳೆ ಭಕ್ತಾದಿಗಳು ಸಂದೋಹ ತಂಡವಾಗಿ ಗುರುಗಳನ್ನು ಸಂದರ್ಶಿಸಿ ಹೋಗುತ್ತಿದ್ದಾರೆ.

LATEST NEWS

ಮಹಾತ್ಮರಲ್ಲಿ ಮೈಸೂರು ನಿಯೋಗ

ಸ್ವಂ ಸು. ಫೋ॥] ಬೆಂಗಳೂರು ೧೨

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರೂ ಮತ್ತು ಶ್ರೀಗಳಾದ ಕೆ. ಟಿ. ಭಾಷ್ಯಂ ಮತ್ತು ಎಸ್. ಚೆನ್ನಯ್ಯನವರೂ ನಿನ್ನೆ ಸಾಯಂಕಾಲ ಮಹಾತ್ಮ ಗಾಂಧಿಯವರನ್ನು ಭೇಟಿಮಾಡಿ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕಾದ ಅವಶ್ಯಕತೆಯನ್ನು ಕುರಿತು ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ. ಇವರುಗಳು ಇನ್ನೆರಡು ಮೂರು ದಿನಗಳಲ್ಲಿ ಹಿಂದಿರುಗುವರೆಂದು ಗೊತ್ತಾಗಿದೆ.

° ° ° °

ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭವು ಅಕ್ಟೋಬರ್ ೨೩ನೇ ತಾರೀಖು ಬೆಳಗ್ಗೆ ಹತ್ತುಘಂಟೆಗೆ ಮೈಸೂರು ಜಗನ್ಮೋಹನ್ ಭವನದಲ್ಲಿ ನಡೆಯುವುದು.

° ° ° °

ಇಂಟರ್‌ಮೀಡಿಯೇಟ್ ಆರ್ಟ್ಸ್ ಮತ್ತು ಸೈನ್ಸ್ ಅರ್ಧವರ್ಷದ ಪರೀಕ್ಷೆಗಳು ಸೆಪ್ಟಂಬರ್ ೨೪ ರಿಂದ ಆರಂಭವಾಗುವುವು.

° ° ° °

ಹಿಂದೂ ಲಾ ಸುಧಾರಣಾ ಸಮಿತಿಗೆ ಶ್ರೀ ಡಿ. ಎಸ್. ಮಲ್ಲಪ್ಪನವರನ್ನೂ ಒಬ್ಬ ಸದಸ್ಯರನ್ನಾಗಿ ಸೇರಿಸಲಾಗಿದೆ. ಸಮಿತಿಯು ಬೆಂಗಳೂರಿನಲ್ಲಿ ಕೆಲಸಮಾಡುವುದು ಆಧುನಿಕ ಕಾಲಕ್ಕೆ ಅನುಗುಣವಾಗಿ ಮಹಿಳೆಯರ ಹಕ್ಕುಬಾಧ್ಯತೆಗಳನ್ನು ನಿರ್ಧರಿಸುವುದು ಈ ಸಮಿತಿಯ ಉದ್ದೇಶ.

° ° ° °

ಹೊಸದಾಗಿ ಇಟ್ಟಿರುವ ಟಿಕೆಟ್ ಇನ್ಸ್‌ಪೆಕ್ಟರ್ [illegible] ದರವನ್ನು [illegible] [illegible] ಹೆಚ್ಚಿಸಬೇಕೆಂದೂ [illegible] ಬಾಡಿಗೆಯನ್ನು ತನ್ನ [illegible] ಹೆಚ್ಚಿಸಬೇಕೆಂದೂ [illegible]

ವೀರನಗರಿ ಲಂಡನ್

ಹೋರಾಟಗಳು

ನಿರ್ಮೂಲೀಕರಣ

[illegible]

ಮಾಂಸವನ್ನು ತಿನ್ನಬಹುದು

[illegible]

ಭಾರತದಲ್ಲಿ ವಿಮಾನಗಳ ಸರ್ವಿಸ್

ಸಾಮ್ರಾಜ್ಯ ವಿಮಾನ ಸಮ್ಮೇಳನಕ್ಕೆ ಹೋಗಿರುವ ಭಾರತ ವಿಮಾನ ಕಾರ್ಯದರ್ಶಿ ಸರ್ ಗುರುನಾಥ್ ಬೇವೂರ್‌ರವರು ಭೇಟಿಯೊಂದರಲ್ಲಿ ತಿಳಿಸುತ್ತ, ಬರುವ ಐದು ವರ್ಷಗಳಲ್ಲಿ ಭಾರತದಲ್ಲಿ ಒಳನಾಡಿನ ವಿಮಾನ ಓಡಾಟಕ್ಕಾಗಿ ಏರ್ಪಡಿಸಲಾಗುವ ಸರ್ವಿಸು ತನ್ನ ಖರ್ಚನ್ನು ತಾನೇ ನೋಡಿಕೊಳ್ಳುವಷ್ಟು ಶಕ್ತಿ ಪಡೆಯುವುದೆಂದು ಹೇಳಿದ್ದಾರೆ. ಆದರೆ ಸಂದರ್ಭ ನೋಡಿ ಸರಕಾರದವರು ಅದಕ್ಕೆ ಹಣ ಸಹಾಯವನ್ನು ನೀಡಬಹುದೆಂದು ಅವರು ತಿಳಿಸಿದ್ದಾರೆ.

ಇರಾನಿನಲ್ಲಿ ಫ್ಯಾಸಿಸಂ ಭೀತಿ

ಇರಾನಿನಲ್ಲಿ ಫ್ಯಾಸಿಸಂ ಪದ್ಧತಿಯ ಭೀತಿ ತಲೆದೋರಿದೆಯೆಂದು ರಷ್ಯ ಪತ್ರಿಕೆಗಳು ಉಗ್ರವಾಗಿ ಟೀಕಿಸಿವೆ. ಸೋವಿಯಟ್ ಪರ ಇರುವವರನ್ನು ತುಳಿಯುವ ಏರ್ಪಾಡು ಆಗುತ್ತಿದೆಯೆಂದು ಹೇಳಲಾಗಿದೆ. ಅಲ್ಲಿನ ಮಿತ್ರ ಸೈನ್ಯಗಳು ಆ ದೇಶದಿಂದ ವಾಪಸು ತೆರಳಿದ ಕೂಡಲೇ ಆ ದೇಶವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಹಲವು ಪ್ರಗತಿ ವಿರೋಧಿಗಳು "ನೀಲಿ ಸೈನ್ಯ"ವನ್ನು ಕಟ್ಟುತ್ತಿರುವುದಾಗಿ ಹೇಳಲಾಗಿದೆ.

ಇರಾನ್ ಸರಕಾರದವರು ಜರ್ಮನ್ ಪರ ಇರುವ ಮಾಜಿ ನೌಕರರನ್ನು ಕೈಬಿಡುತ್ತಿರುವುದಾಗಿ ಅಲ್ಲಿನ ಮಂತ್ರಿಗಳು ತಿಳಿಸಿದ್ದಾರೆ.

[illegible] ಸೌಕರ್ಯ ಏನು ಇಲ್ಲ. ಬಾಡಿಗೆ ಇಲ್ಲದೆ ಕಟ್ಟಿದ ಹಾಲಿ ಬಿದ್ದಿರುತ್ತವೆ. ತಕ್ಕ ಇನ್ನೇ ಸೌಕರ್ಯಗಳನ್ನು ಕೊಟ್ಟು ಮಾಂಸದ ಮಾರಾಟಕ್ಕೆ ಅನುಕೂಲ ಮಾಡಿಕೊಡಬೇಕು. ಮಾರ್ಕೆಟ್ ಬಜಾರಿನ ಮಾಲಿನ್ಯ ಅದಾಯ ಹೆಚ್ಚುವುದು.

ಇಲ್ಲಿನ ಫೇರ್ ಪ್ರೈಸ್ ಶಾಪ್ ದಿನ್ನೋವಿನಲ್ಲಿ ಹಾಲು ಹಸಿ ಸೌದೆಯನ್ನು ಕಲ್ಲನ್ನು ತೂಕದ ಬಟ್ಟಾಗಿ ಮಾಡಿಕೊಂಡು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಬೆಲೆಗೆ ತಕ್ಕ ಸೌದೆ ಸಿಗುತ್ತಿದೆ. ಈ ತೊಂದರೆಗಳನ್ನು ನಿವಾರಿಸಲು ಪೌರಸಭಾಧ್ಯಕ್ಷರಿಗೆ ತಕ್ಕ ಸೂಚನೆಗಳನ್ನು ಕೊಡಲಾಗಿದ. ಜನಗಳಿಗೆ ಬಹಳ ಉಪಕಾರಮಾಡಿದಂತಾಗುತ್ತದೆ.

ಎ. ಕೃಷ್ಣಮೂರ್ತಿರಾವ್
ಜಾ|| ಪಕ್ಷದ ಕಾರ್ಯದರ್ಶಿ

Edited, printed and published by
A. R. Nagarajan at the Sadhvi Press,
D. Subbiah Road, Mysore.

ಬ್ರಿಟನ್ ಮೇಲೆ ಆಕ್ಷೇಪಣೆ

ಪೆಸಿಫಿಕ್ ಯುದ್ಧದಲ್ಲಿ ಬ್ರಿಟನ್ನು ಪೂರ್ಣ ಮನಸ್ಸಿನಿಂದ ಪಾತ್ರವನ್ನು ವಹಿಸುತ್ತಿಲ್ಲವೆಂದು ಅಮೆರಿಕಾದ ಡೆಮೊಕ್ರಾಟಿಕ್ ಸಂಗಡದ ಪ್ರತಿನಿಧಿ ಕಾಂಗ್ರೆಸ್ ಸಭೆಯಲ್ಲಿ ತಿಳಿಸಿದರು. ಜರ್ಮನ್ ಯುದ್ಧದಲ್ಲಿ ತನ್ನ ಕೈಲಾದ ಸಹಾಯ ಮಾಡಲು ಬ್ರಿಟನ್ನು ಎಲ್ಲಾ ತರಹ ವಾಗ್ದಾನಗಳನ್ನು ಮಾಡಿತುವುದಾದರೂ, ಇದುವರೆಗೆ ಒಬ್ಬ ಬ್ರಿಟಿಷ್ ಸಿಪಾಯಿಯೇ ಆಗಲಿ, ಆ ಯುದ್ಧ ಕ್ಷೇತ್ರದಲ್ಲಿ ಕಾಲಿಟ್ಟಿಲ್ಲವೆಂದು ಅವರು ಹೇಳಿದರು.

ಪರಾಜಿತ ಜರ್ಮನಿಯು

ಶಾಂತಿಗೆ ಭೀತಿಕಾರಿ

ಪ್ರಪಂಚದ ಶಾಂತಿಗೆ ಪರಾಜಿತ ಜರ್ಮನಿಯಿಂದ ಭೀತಿ ಇನ್ನೂ ಹೆಚ್ಚುವುದೆಂದು ಅಮೆರಿಕಾದ ಸೆನೇಟರ್ ಕಿಲ್‌ಗೋರ್ ಎಂಬುವರು ತಿಳಿಸಿದ್ದಾರೆ. ಪ್ರಪಂಚದ ಶೈತ್ರಯಾತ್ರೆ ಮಾಡುವ ಜರ್ಮನಿಯ ಸಂಚಿಕೆಯು ನಾಶಗತವಾಗಲು ಈಗ ಜರ್ಮನಿಯು ಉದ್ದೇಶವಾಗಿ ತಯಾರಾಗುತ್ತಿರುವುದೆಂದು ಅವರು ಹೇಳಿದ್ದಾರೆ.

೮ ಗಂಟೆ ಕಾಲ ಟೋಕಿಯೊ ಮೇಲೆ ಧಾಳಿ

೮ ಗಂಟೆಕಾಲದ ಅಮೆರಿಕ ವಿಮಾನಗಳು ವಿಶಾಲವಾಗಿ ಟೋಕಿಯೊ ನಗರದ ಮೇಲೆ ದೊಡ್ಡ ಧಾಳಿ ಮಾಡಿದವು. ಮೊದಲು ೨೦೦ ರ ಒಂದು ತಂಡ ಧಾಳಿ ಮಾಡಿದ ನಂತರ ಅದರ ನಂತರವು ಆಲೆಗಳೋಪಾದಿಯಲ್ಲಿ ಬಂದು ಬಾಂಬು ಹಾಕಿದವು. ಅನಂತರ ಇನ್ನು ೨೦೦ ವಿಮಾನಗಳು ಬಂದವು. ಇವುಗಳಲ್ಲಿ ಅನೇಕ ವಿಮಾನಗಳನ್ನು ನಾಶಪಡಿಸಲಾಯಿತೆಂದು ಜಪಾನ್ ವಾರ್ತಾ ಸಂಸ್ಥೆ ತಿಳಿಸಿದೆ.

ಅಪೆರಾ ಟಾಕೀಸ್
12-7-45 ರಿಂದ
2ನೇ ವಾರ
* ಮೆಹಬೂಬ್
* ನಸ್ಸಿಂ
* ಸಿದ್ದಿಕಿ
ಮುಂತಾದವರು ಪಾತ್ರವಹಿಸಿರುವ
ಜೀವನ್
(ಹಿಂದೀ ಭಾಷೆ)

ಆಟಗಾರರಿಗೂ ಮಂತ್ರಿ ಮಂಡಲದಲ್ಲಿ

...ಲೀಸಿನವರು ಕಳುವಾದ ಕೆಲವು ...ಗಳನ್ನು ಪತ್ತೆಹಚ್ಚಿರುವರೆಂದು ತಿಳಿ ದಿದೆ

ಪ್ಲೇಗು

...ರಿಗೆಲ್ಲಾ ಸಾಯುತ್ತಿವೆ ಮೂರುಜ ಪತ್ರೆಯೂ, ಪುರಸಭಾ ಅಧ್ಯಕ್ಷರೂ ಉ ...ಕ್ಷರೂ ವೈದ್ಯರೂ ಅನೇಕ ಜನಗಳಿಗೆ ...ಪ್ಲೇಗ್ ನಾಡಿಹಿಸುತ್ತಾರೆ

ಗೋವುಗಳ ವಧೆಯೇ?

...ಳವು ದಿನಗಳಿಂದ ಕೆಲವು ಕುಂಟರು ...ಮುವೇ ಹಿತ್ತಲುಗಳಲ್ಲಿ ಕಟ್ಟಿರುವ ...ಗಳನ್ನು ಅಪಹರಿಸಿ ವಧೆಮಾಡಿರು ...ದು ಪಟ್ಟಣ. ಇವರಿಗೆ ಏಂ ರ ಬಸುಗ ...ಗೋ ...

ಜರ್ಮನಿಯ ರಾಜಕೀಯ ಸಂಗಡಗಳು

ರಷ್ಯನರು ಹಿಡಿದುಕೊಂಡಿರುವ ಜರ್ಮನಿಯಲ್ಲಿ ಸೋಷಿಯಲ್, ಕಮ್ಯೂನಿಸ್ಟ್, ಲಿಬರಲ್ ಪಾರ್ಟಿಗಳು ಒಟ್ಟುಗೂಡಿ ಫ್ಯಾಸಿಸ್ಟ್ ವಿರೋಧಿ ಕೂಟವನ್ನು ಕಟ್ಟಿವೆ. ರಷ್ಯನ್ನರು ಹಿಡಿದಿರುವ ಪ್ರದೇಶದಲ್ಲಿ ರಾಜಕೀಯ ಚಟುವಟಿಕೆಗೆ ಅವಕಾಶವೀಯ ಲಾಗಿದೆ

ಬೆಲ್ಜಿಯಂ ರಾಜರ ಸ್ಥಾನ ತ್ಯಾಗವಿಲ್ಲ

ಬೆಲ್ಜಿಯಂ ರಾಜರಾದ ಲಿಯೊಪಾಲ್ಡ್‌ರವರು ಪದಚ್ಯುತರಾಗುವುದಿಲ್ಲವೆಂದು ನಿರ್ಧರಿಸಿದ್ದಾರೆ. ಆ ದೇಶದ ಸೋಷಿಯಲಿಸ್ಟ್ ಮತ್ತು ಕಮ್ಯೂನಿಸ್ಟ್ ಸಂಘದವರು ನಾಕ ... ಬೆಂಬಲ ... ರಾಜನನ್ನು ಗದ್ದುಗೆಯಿಂದ ಇಳಿಸಲು ಪ್ರಯತ್ನಮಾಡುವ ರೆಂದು ಹೇಳಲಾಗಿದೆ

ಬೋಸರ ಸೈನ್ಯ ಬಿಟ್ಟಳು

ಸ ಭಾಷ್ ಬೋಸರ ರಾಷ್ಟ್ರೀಯ ಸೈನ್ಯದ ಸ್ತ್ರೀವಿಭಾಗದ ಸೇನಾನಿಯಾದ ಮಿಸ್ ಲಕ್ಷ್ಮಿಯವರು ರಾಜಿನಾಮೆ ಕೊಟ್ಟು ... ಎಂಬಲ್ಲಿ ... ಕೆಲಸ ಕೈಕೊಂಡರು.

೧೧೫ ವರ್ಷದ ಮುದುಕ

ಕಳೆದ ಮಂಗಳವಾರ ವಿಕ್ಟೋರಿಯಾ ಆಸ್ಪತ್ರೆ ... ಹ್ಯಾಂಡ್ಲರ್ ಪ್ರಿಂಗಲ್ ಎಂಬ ೧೧೫ ವರ್ಷದ ಮುದುಕನು ತನ್ನ ವರ್ಷಂತಿಯನ್ನು ನೆರವೇರಿಸಿದನು. ಈತನು ಬೋಯರ್ ಯುದ್ಧದಲ್ಲಿ ಭಾಗಿಯಾಗಿದ್ದನು. ಜೇನುತುಪ್ಪದ ಸೇವನೆ ಮತ್ತು ಒಳ್ಳೆಯ ಹವಾ ಇವುಗಳಿಂದ ಬಹುಕಾಲ ಬದುಕಲು ಸಾಧ್ಯವೆಂದು ಆತನು ಹೇಳುತ್ತಾನೆ. ... ವ್ಯಕ್ತಿ ... ನಡೆಯುತ್ತಾನೆ

ಪ್ಲಾಂಟರುಗಳ ಸಂಘ

ಸ್ವ. ವ.] ಚಿಕ್ಕಮಗಳೂರು ೧೮

ಇಂಡಿಯನ್ ಪ್ಲಾಂಟರ್ಸ್ ಅಸೋಸಿಯೇಷನ್ನಿನ ವಾರ್ಷಿಕ ಸಭೆಯು ಈ ಊರಿನ ಶ್ರೀ ನರಸಿಂಹರಾಜ ಒಡೆಯರ್ ಪುರಭವನದಲ್ಲಿ ೨೩ನೇ ತಾರೀಖು ... ಸೇರುವುದು. ಕಾಫಿ ಪ್ಲಾಂಟರ್ಸ್ ... ಒದಗಿಸಬೇಕಾಗುವ ಆಹಾರ ಧಾನ್ಯ ಸರಬರಾಯಿ, ಕಾರ್ಮಿಕರ ... ಸಂಬಂಧದ ... ಮೊದಲಾದ ವಿಷಯಗಳು ಪರಿಶೀಲಿಸಲ್ಪಡುವವು

ವಿಶ್ವಶಾಂತಿಗೆ ಯಜ್ಞ

ಹರಿಹರದಲ್ಲಿ ತುಂಗಭದ್ರಾ ನದಿಯ ತೀರದ ... ಪ್ರಶಾಂತದ ಶಾಂತಿಗಾಗಿ ... ವರ್ಷಗಳ ಯಜ್ಞವನ್ನು ನಡೆಸಲಾಗುತ್ತಿದೆ ವೇದಮೂರ್ತಿ ಕಾಶೀನಾಥ ದೀಕ್ಷಿತರು ಈ ಯಜ್ಞದ ಅಧ್ವರ್ಯುಗಳು.

ಅರಬ್ಬಿ ಸಮುದ್ರದಲ್ಲಿ ರಷ್ಯಕ್ಕೆ ಅವಕಾಶ

ಅರಬ್ಬಿ ಸಮುದ್ರದಲ್ಲಿ ರಷ್ಯಕ್ಕೆ ಹಡಗುಗಳ ನೆಲೆಯೊಂದು ಬೇಕಾಗಿದೆ. ಪರ್ಷಿಯ ... ಯಲ್ಲಿ ಅದು ಹಡಗುಕಟ್ಟೆಯ ... ವನ್ನು ಕೇಳುವುದು, ಇದರಿಂದ ಬ್ರಿಟಿಷ್ ದ್ವೀಪಗಳಿಗೂ, ಸಾಮ್ರಾಜ್ಯದ ಇತರ ದೇಶಗಳಿಗೂ ಇರುವ ಮಾರ್ಗಗಳಿಗೆ ಮಧ್ಯೆ ವಿದೇಶಿ ಸರಕಾರವು ಪ್ರವೇಶಿಸುವ ಭೀತಿ ಉಂಟಾಗಿದೆ-ಎಂದು ಒಂದು ವರದಿ ತಿಳಿಸುತ್ತದೆ

ತಾ|| ಶಿರಸ್ತೇದಾರರ ಕೊಲೆ ತಮಾಷೆ ಹೋಗಿ ಪ್ರಮಾದ

ಶ್ರೀರಂಗಪಟ್ಟಣ ೧೮

ತಮಾಷೆಯು ಹೋಗಿ ಪ್ರಮಾದವಾದ ಸಂಗತಿ ಫ್ರೆಂಚ್‌ರಾಕ್ಸ್ ತಾಲ್ಲೂಕು ಕಚೇರಿಯಲ್ಲಿ ಕಳೆದ ಶನಿವಾರ ನಡೆಯಿತು. ಕ್ಯಾತನಹಳ್ಳಿಯವನೊಬ್ಬನು ತಾಲ್ಲೂಕಿಗೆ ಹೊಸದಾಗಿ ಬಂದ ಶಿರಸ್ತೇದಾರ್ ಶ್ರೀ ಎಂ. ಪಿ. ನಾರಾಣಯ್ಯಂಗಾರ್ಯರನ್ನು ಕುಡುಗೋಲಿನಿಂದ ಮುಖದ ಮೇಲೆ ಹೊಡೆದು ಘಾಯಮಾಡಿದ ಪರಿಣಾಮವಾಗಿ ಅವರು ಈ ದಿನ ಶ್ರೀರಂಗಪಟ್ಟಣದ ಆಸ್ಪತ್ರೆಯಲ್ಲಿ ಸಂಜೆ ೬ರ ಪ್ರಾಣಬಿಡಬೇಕಾಯಿತು. ಹಲ್ಲೆಯವನು ಕೆಲವು ದಿನಗಳಿಂದಲೂ ತಾಲ್ಲೂಕು ಕಚೇರಿಗೆ ಬಂದು ತನ್ನ ಜಮೀನನ್ನು ಖಾತೆಯನ್ನೂ ಸರಿಮಾಡಬೇಕೆಂದೂ ... ಕೊಂಡುಹೋದ ಅವರಿಂದ ತನಗೆ ೨ ಲಕ್ಷ ರೂ. ಗಳು ಸಂಪಾದಿಸಬೇಕೆಂದು ಕೇಳುತ್ತಿದ್ದನು. ಆತನಿಗೆ ಬುದ್ಧಿ ನೆಟ್ಟಗಿಲ್ಲವೆಂದು ತಾಲ್ಲೂಕಿನ ಅಧಿಕಾರಿಗಳು ಅವನನ್ನು ಈಗ ಬಾ ಆಗ ಬಾ ಎಂದು ಹೇಳಿಕಳು ಹಿಸುತ್ತಿದ್ದರು. ಕಳೆದ ಶನಿವಾರ ಅವನು ಅವರಿಬ್ಬರ ಕೊಠಡಿಗೆ ಹೋಗಿ ಅಲ್ಲಿ ಹೊಸದಾಗಿ ಬಂದಿದ್ದ ಶಿರಸ್ತೇದಾರರನ್ನು ಕೇಳು ... ಕೊನೆಗೆ ಕುಡುಗೋಲಿನಿಂದ ಅವರನ್ನು ... ಆನಂತರ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ, ಗಾಯವಾದ ಜಾಗವು ಊದಿಕೊಂಡು ಕೊನೆಗೆ ಅವರು ಮರಣಹೊಂದಿದರೆಂದೂ ಹೇಳಲಾಗಿದೆ

ಹಿಟ್ಲರರು ಅರ್ಜೆಂಟಿನಾದಲ್ಲಿರುವರೇ?

ಚಿಕಾಗೊ ಟ್ರಿಬ್ಯೂನ್ ಪತ್ರಿಕೆಯ ಮಾಂಟಿ ವಿಡಿಯೊ (ಉರುಗ್ವೆ ರಾಜಧಾನಿ) ವರ್ತಮಾನಗಾರರು ಹೇಳುವ ಪ್ರಕಾರ ಹಿಟ್ಲರರು ಆವರ 'ಪತ್ನಿ' ಯೆನಿಸಿದ ಈವಾಬ್ರ್ಯಾನ್ ಎಂಬಾಕೆಯೊಡನೆ ದಕ್ಷಿಣ ಅಮೆರಿಕ ದಲ್ಲಿರುವ ಆರ್ಜೆಂಟಿನಾ ರಾಜ್ಯದ ತೀರದಲ್ಲಿಳಿದು ಒಂದು ಜರ್ಮನ್ ಜಲಾಂತರ್ಗಾಮಿಯಿಂದ ಇಳಿದು ಆ ರಾಜ್ಯದಲ್ಲಿರುವ ಪಟಗೋನಿಯಾ ಎಸ್ಟೇಟಿನಲ್ಲಿ ನೆಲೆಗೊಂಡಿರುವರೆಂದು ಗೊತ್ತಾಗಿದೆ. ಈ ಎಸ್ಟೇಟು ಜರ್ಮನರಿಗೆ ಸೇರಿದ್ದು ಆದರೆ ಆರ್ಜೆಂಟಿನಾ ರಾಜಧಾನಿ ಬ್ಯೂನಸ್ ಐರ್ಸ್‌ನಲ್ಲಿರುವ 'ಕ್ರಿಟಿಕಾ' ಪತ್ರಿಕೆ ಬೇರೊಂದು ಕಥೆ ಹೇಳಿದೆ. ಹಿಟ್ಲರರು ತಮ್ಮ ಪತ್ನಿಯೊಡನೆ ದಕ್ಷಿಣಧ್ರುವದ ದ್ವೀಪವಾದ ರಾಣಿ ಮಾಡ್‌ನಲ್ಲಿರುವರೆಂದೂ, ಈ ದ್ವೀಪವು ದಕ್ಷಿಣ ಧ್ರುವದಲ್ಲಿರುವುದೆಂದೂ ೧೯೩೮ನೇ ಇಸವಿಯ ಜರ್ಮನ್ ಯಾತ್ರೆಯು ಅದನ್ನು ಅಲ್ಲಿ ಇರಿಸಿದೆಂದೂ ಆ ಪತ್ರಿಕೆ ತಿಳಿಸಿದೆ. ೧೯೪೦ರಲ್ಲಿ ಜರ್ಮನಿಯ ವೈಜ್ಞಾನಿಕರು ದಕ್ಷಿಣ ಧ್ರುವದ ಕಡೆಗೆ ಯಾನಮಾಡಿ, ಆ ದ್ವೀಪದಲ್ಲಿ ಇಳಿದಿದ್ದರು, ಅಲ್ಲಿ ಇನ್ನೊಂದು ಬರ್ಚ್ಟೆಸ್‌ಗೇಡನ್ ನಿವಾಸವನ್ನು ಅವರು ಕಟ್ಟಿದ್ದರೆಂದು ಪ್ರತೀತಿ. ಈ ಸುದ್ದಿಗಳಲ್ಲದೇ ಬೇರೆ ಬೇರೆ ಸುದ್ದಿಗಳ ಪ್ರಕಾರ ಹಿಟ್ಲರರು ಇನ್ನೂ ಜರ್ಮನಿಯಲ್ಲೇ ಇರುವರೆಂದೂ, ಸ್ವಿಟ್ಜರ್ಲೆಂಡಿನಲ್ಲಿ ಸತ್ತುಹೋದರೆಂದೂ, ... ವ ಮನುಷ್ಯನು ಹಿಟ್ಲರನನ್ನು ಹೋಲುತ್ತಿದ್ದ ನಕಲಿ ಹಿಟ್ಲರನೆಂತಲೂ ಹೇಳಲಾಗಿದೆ

ಟೋಕಿಯೊ ಮೇಲೆ ೧೫೦೦ ವಿಮಾನಗಳ ಧಾಳಿ

ಅಮೆರಿಕ ಮತ್ತು ಬ್ರಿಟಿಷ್ ವಿಮಾನ ವಾಹಕ ನೌಕೆಗಳ ಆಶ್ರಯ ಪಡೆದ ೧೫೦೦ ವಿಮಾನಗಳು ಟೋಕಿಯೊ ಪ್ರದೇಶದ ಮೇಲೆ ನೆನ್ನೆ ಮಧ್ಯಾಹ್ನ ಧಾಳಿಮಾಡಿದುದಾಗಿ ವರದಿಯಾಗಿದೆ. ಅಮೆರಿಕ ಅಧಿಕಾರಿಯಾದ್ದನು ಹೇಳುವ ಪ್ರಕಾರ ನಮ್ಮ ನೌಕೆಗಳ ಪ್ರತಿಭಟನೆಯಿಲ್ಲವೆ, ಜಪಾನಿನ ಮೇಲೆ ಏಕಕಾಲದಲ್ಲಿ ೩ ಸಾವಿರ ವಿಮಾನಧಾಳಿ ವ್ಯವಸ್ಥೆಯಾಗಲಿದೆ.

ಸಿತ್ತಾಂಗ್ ಬಳಿ ಅಂತ್ಯ ಧಾಳಿಯೇ?

ಜಪಾನರು ಸಿತ್ತಾಂಗ್ ನದಿಯ ಬಳಿ ... ನಡೆಸುತ್ತಿದ್ದಾರೆ ... ಸಾವಿರ ಜಪಾನಿಯರ ... ಈ ಧಾಳಿಯನ್ನು ಮಾಡುತ್ತಿದ್ದಾರೆ

ಹೊಡೆದಾಟ

ಮೈಸೂರು ೧೮

... ರಾತ್ರಿ ೧೧ ಗಂಟೆಯಲ್ಲಿ ... [illegible]

ಶ್ರೀ ಸದ್ಗುರು ಸಮರ್ಥ ನಾರಾಯಣ ಮಹಾರಾಜರ ವಿಶೇಷ ಪರಿಚಯ

ಉತ್ಸವಗಳು

ಪ್ರತಿ ವರ್ಷವೂ ವೈಶಾಖ ಶುದ್ಧ ಪಂಚಮಿ ದಿನ ಶ್ರೀ ದತ್ತಾತ್ರೇಯ ಸ್ಥಾಪನಾ ಮಹೋತ್ಸವ ೨) ಭಾದ್ರಪದ ಶುದ್ಧ ಪೌರ್ಣಮಿ ದಿನ ಶ್ರೀ ಗುರು ನಿರ್ವಾಣ ೩) ಮಾರ್ಗಶಿರ ಶುದ್ಧ ಪೌರ್ಣಮಾ ದಿನ ಶ್ರೀ ದತ್ತಾತ್ರೇಯ ಜನ್ಮೋತ್ಸವ-ಈ ಮೂರು ಭಾರಿ ಸಮಾರಂಭಗಳು ವಿಶೇಷ ವೈಭವದಿಂದ ನಡೆಯುತ್ತವೆ. ಈ ಎರಡನೇ ಉತ್ಸವದಲ್ಲಿ ಶ್ರೀ ಸಮರ್ಥ ಸದ್ಗುರು ಮಹಾರಾಜರವರನ್ನು ನವರತ್ನ ಖಚಿತವಾದ ಕಿರೀಟದಿಂದ ಅಲಂಕರಿಸಿ ಬೆಳ್ಳಿ ಸಿಂಹಾಸನದಲ್ಲಿ ಕೂಡಿಸಿ ಉತ್ಸವ ನಡೆಯುವುದು. ಸಹಸ್ರ ಸಂಖ್ಯೆಯಲ್ಲಿ ಶಿಷ್ಯರುಗಳು ಈ ಸಮಾರಂಭದಲ್ಲಿ ಭಾಗವಹಿಸುವರು. ಮುಕುಂದ ರಾವ ಭಾಕರೆ ಮೊದಲಾದ ಅಧಿಕಾರ ವರ್ಗದವರಿಗೆ ಸಂಬಳ ಸಾವಿರಗಳೇನೂ ಇಲ್ಲ. ಅವರ ಗೃಹ ಕೃತ್ಯದ ಅವಶ್ಯಕತೆ ಆರಾಧನೆಗಳು ಎಲ್ಲವೂ ಗುರುಗಳಿಂದಲೇ ಸರಬರಾಜು. ಮನೆಗಳಲ್ಲಿ ಪಟ್ಟ ಕಾರ್ಯ ನಡೆಯ ಬೇಕಾದ ಸಂಭವವಿದ್ದರೆ ಶಾಸ್ತ್ರ ರೀತ್ಯಾ ನಡೆಯುವಂತೆ ದೇವಾಲಯದಲ್ಲಿ ಗುರು ಕೃಪೆಯಿಂದ ಅನುಗ್ರಹವಾಗುವುದಾದ ಸಾರ್ವತ್ರಿಕ ಸಮಾರಾಧನೆ. ಭಿಕ್ಷುಕ ವ್ಯಕ್ತಿಯೇ ಅಲ್ಲಿಲ್ಲವೆನ್ನಬಹುದು ಅಷ್ಟೇನೂ ಮತ್ತು ಮಧ್ಯಾಹ್ನದ ಅದರ ಎಲ್ಲವೂ ಗುರುವರ್ಯರು ಒಬ್ಬರಿಗೆ ಮಾತ್ರ ಗೊತ್ತೇ ಹೊರತು ಮತ್ತಾರಿಗೂ ತಿಳಿಯದು. ಇದಕ್ಕಾಗಿ ಮಾಡಿದ ಸಿಬ್ಬಂದಿ ಏನೂ ಬಿರ್ಗ ಇಲ್ಲ

ಪ್ರಭುಗಳ ಭೇಟಿ

ಆಳಿದ ಶ್ರೀಮನ್ಮಹಾರಾಜ ಕೃಷ್ಣ ಭೂಪಾಲರವರು ಇವರ ಮಹಿಮೆಯನ್ನು ಅರಿತು ಯಾರಿಗೂ ವರ್ತಮಾನ ಕೊಡದೆ ಗೋಪ್ಯವಾಗಿ ಬೇಟೆ ಕ್ಷೇತ್ರಕ್ಕೆ ದಯಮಾಡಿಸಿದರು. ಈ ಸಂಗತಿಯನ್ನು ನಾರಾಯಣ ಮಹಾರಾಜರವರು ಮುಂಚಾಗಿಯೇ ಅರಿತು ಇವರ ಆಗಮನದ ಸಲುವಾಗಿ ಎಲ್ಲ ಸಿದ್ಧತೆಗಳನ್ನೂ ಸಜ್ಜುಗೊಳಿಸಿ ಐನೂರು ಜನರ ಸಂತರ್ಪಣೆಗೂ ಏರ್ಪಡಿಸಿದ್ದರು. ನಮ್ಮ ಪ್ರಭುಗಳವರು ತಮಗಾದ ಸತ್ಕಾರಕ್ಕೂ ಅಲ್ಲಿನ ವ್ಯವಸ್ಥೆಗೂ ಬಹುವಾಗಿ ಸಂತೋಷಿಸಿ ರಾಜಧಾನಿಯಾದ ಮೈಸೂರಿಗೂ ಒಂದು ಭೇಟಿ ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಂಡರು.

೧೯೩೩ ರಲ್ಲಿ ಸದ್ಗುರು ಮಹಾರಾಜರವರು ಹಿಮವತ್ ಪರ್ವತದ ಬದರಿ ನಾರಾಯಣ ಯಾತ್ರೆ ಮಾಡಿ ಬಂದರು. ಹಿಮವತ್ ಕೇದಾರಕ್ಕೂ ಕೂಡ ವೈದಿಕ ಮೂರು ಮನುಷ್ಯರನ್ನು ಕರೆದು ಕೊಂಡು ಹೋಗಿ ಅಲ್ಲಿ ಶಿವ ಪಂಚಾಕ್ಷರಿ ಜಪವನ್ನು ೪೮ ದಿನಗಳ ಕಾಲ ಮಾಡಿಸಿ ಆ ಪ್ರಸಾದವನ್ನು ಎಲ್ಲರಿಗೂ ಹಂಚಬೇಕೆಂಬ ಹಿರಿಯ ಬಯಕೆಯು ಗುರುಗಳಿಗಿತ್ತು. ಅಷ್ಟು ಕಾಲ ಅಲ್ಲಿರಲು ಯಾರೂ ಮುಂದೆ ಬರಲಿಲ್ಲವಾಗಿ ಅದು ಸಿದ್ಧಿಸಲಿಲ್ಲವಾಯಿತು

೧೯೩೪ ರಲ್ಲಿ ನೀಲಗಿರಿಯಿಂದ ವಾಪಸು ಹೊರಟು ಹಿಂದಿರುಗುವಲ್ಲಿ ಮಾರ್ಗದ ಶ್ರೀ[illegible] ಮಹಾರಾಜರವರನ್ನು ಇರಿಸ[illegible] ಮ[illegible]ದಲ್ಲಿ ಇಳಿಸಿ [illegible]ನಿಗೆ ಕರೆಸಿಕೊಂಡು ಮಹಾದ ಪೂಜೆ ಮಾಡಿ ಕಾಣಿಕೆಯನ್ನು ಒಪ್ಪಿಸಿದರು. ನಮ್ಮ ಪ್ರಭುಗಳು ಬೇಟೆ ಕ್ಷೇತ್ರದಲ್ಲಿ ತಮ್ಮದೇ ಆದ ಒಂದು ಮಹಲನ್ನು ನಿರ್ಮಿಸಬೇಕೆಂಬ ಅಭಿಲಾಷೆಯುಳ್ಳವರಾಗಿಯೂ ಇದ್ದರೆಂದು ತಿಳಿಯ ಬರುತ್ತದೆ.

ಗುರು ಪ್ರಶಂಸೆ

ಬೇಟೆ ದೇವಾಲಯದಲ್ಲಿ ಗುರು ಪೂಜಾ ನಡೆಯ ಬೇಕಾದ ಒಂದು ಸನ್ನಿವೇಶ. ಎಲ್ಲ ಸಾಮಗ್ರಿಗಳೂ ಸಿದ್ಧವಿವೆ; ಪೂಜೆ ನಡೆಯ ಬೇಕಾದ ಸ್ಥಳಬದಲಾವಣೆ ಸಂದರ್ಭ; ಎಲ್ಲ ಕೋಣೆ ಬಾಗಿಲುಗಳೂ ಮುಚ್ಚಿವೆ. ಯಾರ ಪ್ರಯತ್ನವೂ ಇಲ್ಲದೆಯೇ ಯಾರಿಗೂ ಗೋಚರವಾಗದೆಯೇ ಪೂಜೆ ಸಾಮಗ್ರಿಗಳೂ ಗುರುಗಳೂ ಉದ್ದಿಷ್ಟ ಸ್ಥಳದಲ್ಲಿ ಹಾಜರಾಗಿರೋಣ ಒಂದು ದೃಶ್ಯ. ಗುರು ಮಹಾರಾಜರವರ ಉತ್ಸವ ಜರುಗ ಬೇಕಾದ ಸನ್ನಿವೇಶ. ಆಗ ಅವರು ಬೇಟದಿಂದ ಹೊರ ಪ್ರಯಾಣದಲ್ಲಿದ್ದಾರೆ. ಹಿನ್ನೆಲೆಗ ಳೇನೋ ಮೂವರು ಅನುಸರಿಸಿ ನಡೆಯುತ್ತಿವೆ. ಮುಂಬಯಿ ಪತ್ರಿಕೆಗಳಲ್ಲೂ ಸಹ "ನಾರಾಯಣ ಮಹಾರಾಜ್ ಬೇ-ಪತ್ತೆ" ಎಂಬುದಾಗಿ ಜಾಹೀರ್ ಆಗಿದೆ. ಎಲ್ಲರಿಗೂ ಯೋಚನೆ ಹತ್ತಿತು. ಅದೇನು ಧ್ಯಾನ ಲೀಲೆಯೋ! ಕಾಲಕ್ಕೆ ಸರಿಯಾಗಿ ಬೇಟೆಯಲ್ಲಿ ಗುರುಗಳವರು ಇದ್ದೇ ಇದಾರೆ. ಅದೇ ಕಾಲದಲ್ಲಿ ಬೊಂಬಾಯಿ ಹತ್ತಿರದ ಬೋರಿವಲಿ ಊರಿನಲ್ಲಿಯೂ ಗುರುಗಳವರ ಉತ್ಸವ ಸಮಾರಂಭ ಅಲ್ಲೂ ಗುರುಗಳ ಹಾಜರಾತಿ ಇದ್ದೇ ಇದೆ. ಎರಡು ಕಡೆ ಗುರುದರ್ಶನ ಮಾಡಿದವರು ಹಲವರು ಈ ಪ್ರಭಾವಕ್ಕೆ ಬಹುವಾಗಿ ವಿಸ್ಮಯರಾದರು.

೧೯೪೫ ನೇ ಇಸವಿ ಜೂನ್ ೧೮ನೇ ತಾ|| ಮೈಸೂರಿಂದ ನೀಲಗಿರಿಗೆ ಹೊರಟ ಸಂದರ್ಭದಲ್ಲಿ ನೀಲಗಿರಿ ಬೆಟ್ಟವನ್ನು ಗುರುಗಳವರು ಮತ್ತು ಪರಿವಾರ ಎಲ್ಲರೂ ಹತ್ತುತ್ತಿದ್ದಾಗ ೨೦ ಅಂತಸ್ತುಗಳಷ್ಟು ಮೇಲೆ ಆಯಾಸವು ಹೆಚ್ಚಾದೀತೆಂದು ಗುರುಗಳನ್ನು ಒಂದು ಕಡೆ ಚೌಕ ಹಾಸಿ ಕೂರಿಸಿ ಸ್ವಲ್ಪ ಕಾಲದ ಮೇಲೆ ಕರೆದು ಕೊಂಡು ಹೋಗುವ ಉದ್ದೇಶದ ಮೇಲೆ ಪರಿವಾರದವರು ಮುಂದೆ ನಡೆದರು. ಎಲ್ಲರೂ ಮೇಲೆ ಹೋಗಿ ಪುನಃ ಬಂದು ನೋಡುವಲ್ಲಿ ಮೊದಲು ಕೂರಿಸಿದ್ದ ಜಾಗದಲ್ಲಿಯಾಗಲಿ ಅಥವಾ ಕೆಳಗೆ ಹೊರಟ ಜಾಗದಲ್ಲಿಯಾಗಲಿ ಗುರು ಮಹಾರಾಜರವರು ಇರಲೇ ಇಲ್ಲ. ಎಲ್ಲರಿಗೂ ವಿಸ್ಮಯಕ್ಕೆ ಕಾರಣವಾಯಿತು. ಸ್ವಲ್ಪ ಕಾಲದ ಮೇಲೆ ಬೆಟ್ಟದ ಮೇಲ್ಭಾಗದಲ್ಲಿ ವಿಥ ಯಕವಾದ ಸ್ಥಳದಲ್ಲಿಯೇ ಗುರುಗಳು ಇದ್ದಾರೆ. ಇದು ದಾವಣಗೆರೆ ಶ್ರೀ ಶ್ರೀನಿವಾಸ ಶೆಟ್ಟರೇ ಮೊದಲಾದವರು ಪ್ರತ್ಯಕ್ಷ ಕಂಡ ದೃಶ್ಯ!

ಈಗ ೪-೫ ದಿನಗಳಲ್ಲಿ ಗುರುಗಳವರಿಗೆ ಇದ್ದ ಅನಾರೋಗ್ಯವನ್ನು ಪರಿಹರಿಸಲಿಕ್ಕೆಂದು ಡಾಕ್ಟರೊಬ್ಬರನ್ನು ಕರೆಸಿದ್ದರು. ಡಾಕ್ಟರವರನ್ನೇ ಆರೋಗ್ಯವೇ? ಉಬ್ಬಸ ಸಾಯಿಲೆ ತಮಗಿದೆಯಲ್ಲಾ ಏನು ಮಾಡಿದಿರಿ? ಎಂದು ಮೊದಲಾಗಿ ಪ್ರಶ್ನಿಸಿದರು. ? ವೈದ್ಯರು ಹೌದೆಂದು ಎಲ್ಲವನ್ನೂ ಒಪ್ಪಿಕೊಂಡರು ಗುರುಗಳವರು ಹೇಳಿದ ರೀತಿಯ ಚಿಕಿತ್ಸಾಪ್ರಯೋಗವನ್ನೇ ತಾವೂ ಅನುಸರಿಸುವುದಾಗಿ ತಿಳಿಸಿ ಗುರುಗಳ ಆಶೀರ್ವಾದ ಪಡೆದು ಹಿಂತಿರುಗಿದರು.

ಇವರು ಆಶೀರ್ವದಿಸಿ ಕೊಡುವ ಅಂಗಾರ ಅಕ್ಷತೆಗಳಿಂದಲೇ ಬಹುಮಟ್ಟಿನ ತೊಂದರೆ ನಿವಾರಣೆಯಾಗುತ್ತಿರುವುದು ಬಹುಜನರ ತಾರ್ಕಣೆಗೆ ಬಂದಿರುತ್ತದೆ.

ಘೋರ್ ಸಂಸ್ಥಾನದ ಯುವರಾಜರಾದ ಭಾವ್ ಸಾಹೇಬರವರೂ ಬೊಂಬಾಯಿ ರತ್ನಪಡಿ ವ್ಯಾಪಾರಿ ಸೋರಾಬ್ಜಿಯವರೂ ಕಲ್ಕತ್ತಾದ ವ್ಯಾಪಾರಿ ಕಿರ್ಪಾಭಾಯಿಯವರೂ ಪೂನಾದ ಜ್ಞಾನೇಶ್ವರ್‌ರವರೂ ದಾವಣಗೆರೆ ಶ್ರೀನಿವಾಸಶೆಟ್ಟರವರೇ ಮೊದಲಾದ ಹಲವರು ಶ್ರೀಮಂತ ದೊಡ್ಡ ಮನುಷ್ಯರುಗಳು ಗುರುಮಹಾರಾಜರವರ ಶಿಷ್ಯವೃತ್ತಿಯಲ್ಲಿದ್ದಾರೆ. ಸದ್ಗುರು ಸಮರ್ಥರೂ ಮುಖ್ಯ ಗುರುಪೀಠದ ಕಾರಭಾರಿಗಳಾದ ಶ್ರೀ ಗೋವಿಂದರಾವ್ ಸಂತಿಯವರು ಅತ್ಯಂತ ಸ್ನೇಹಿಗರೂ, ಜನತಾ ಪ್ರೇಮಿಗಳೂ ಆಗಿರುವುದರಿಂದ ನಮ್ಮ ಕನ್ನಡ ಪ್ರಾಂತದಿಂದ ಬೇಟೆ ಕ್ಷೇತ್ರಕ್ಕೆ ಶ್ರೀ ದತ್ತಾತ್ರೇಯರ ಸೇವೆಗಾಗಿ ಹೋಗಿಬರಲಿಚ್ಛಿಸುವವರೆಲ್ಲರಿಗೂ ಅವರು ಶಕ್ಯ ಸೌಲಭ್ಯಗಳನ್ನು ಕಲ್ಪಿಸಲು ಸಿದ್ಧರಿರುತ್ತಾರೆ.

ಮಹಾಮಹಿಮ ಸಿದ್ಧಪುರುಷರು ಮಾಡಿರುವ ಶಾಂತಿವಿಲಾಸ ವ್ಯಾಸಾರನಾರಾಯಣರ ದೇವಾಲಯವಂತೆ ಒಂದು ವಾರದ ಬಾಗಾಯ್ತು ಭಕ್ತರಿಂದ ರಾರಾಜಿಸುತ್ತಿದೆ. ನಗರದ ವೃದ್ಧರಿಗೆ ಮಹಾಮಹಿಮರನ್ನು [illegible]ಸುವ ಸುಯೋಗವನ್ನು ಕಲ್ಪಿಸಿಕೊ[illegible] ಶ್ರೀ|| ಸಿ. ಪೆರುಮಾಳ್‌ಶೆಟ್ಟರವರೇ ಧ[illegible]

ವಿದ್ಯಾರ್ಥಿ ಕಾಂಗ್ರೆಸ್

ವಿದ್ಯಾರ್ಥಿ ಕಾಂಗ್ರೆಸ್ಸಿನವರು ಕೃಷ್ಣರಾಜಪುರಂ, ಒಂಟಿಕೊಪ್ಪಲ್ ಮತ್ತು [illegible] ದಲ್ಲಿಯುಳ್ಳಿರುವ ವಿದ್ಯಾರ್ಥಿ ಕಾಂಗ್ರೆಸ್ ವಾಚನಾಲಯ ಈ ಕಡೆಗಳಲ್ಲಿ ನೂಲುವ ವರ್ಗಗಳನ್ನು ತೆರೆಯಲು ಏರ್ಪಾಡು ಮಾಡಿದ್ದಾರೆ. ನೂತ ನೂಲನ್ನು [illegible]ತ್ತರ ೭೭ ನೇ ವರ್ಷ ವರ್ಧಂತಿ ಸ[illegible]ದಲ್ಲಿ ಕಾಣಿಕೆಯಾಗಿ ಒಪ್ಪಿಸಲಾಗು[illegible] ಈ ಕಾರ್ಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಸಹಕರಿಸಬೇಕೆಂದು ಕೋರಲಾಗಿದೆ.

ಹರಾಜು

ಮೈಸೂರು ಸಿಂಜರಾಪೋಲಿಗೆ ಸೇರಿದ ಫಸಲ್ಟಿ ಕರುಗಳನ್ನು ಮತ್ತು ಹಳೇಗಳ ದ ಕಬ್ಬಿಣ ಮತ್ತು ಮರದ ಸಾಮಾನುಗಳನ್ನು ತಾ|| ೨೨-೭-೪೫ನೇ ಭಾನುವಾರ ಬೆಳಿಗ್ಗೆ ೧೧ ಘಂಟೆಗೆ ವಾಣೀವಿಲಾಸ ರೋಡಿನಲ್ಲಿರುವ ಶ್ರೀವಾಣೀವಿಲಾಸ ಶಿಶು ಸಂಸ್ಥೆಯ [illegible]ಲಯದಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ. ಬಿಡ್ಡುದಾರರು ಹಣವನ್ನು ಹರಾಜಿನಲ್ಲಿಯೇ ಪಾವತಿಮಾಡಿ ಕರುಗಳನ್ನು ಮತ್ತು ಸಾಮಾನುಗಳನ್ನು ತೆಗೆದುಕೊಂಡು ಹೋಗಬಹುದು.

ಎಂ. ರಾಮಸ್ವಾಮಿ
ಆನರರಿ ಸೆಕ್ರೆಟರಿ

ಪ್ರತಿದಿನ ೩ ಆಟಗಳು

ಅಪೆರಾ ಟಾಕೀಸ್
20—7 45 ರಿಂದ

ಸಿತಾರಾ, ನಾಜಿರ್, ಗುಲಾಬ್
ಗೋಶಾ, ಮಜೀದ್
ಮುಂತಾದವರು ಪಾತ್ರವಹಿಸಿರುವ

ಸ್ವೀಟರ್ ಲೈ

(ಹಿಂದಿ)

Edited, printed and published by A. R. Nagarajan at the Sadhvi Press, D. Subbiah Road, Mysore.

ಭದ್ರಾವತಿಯಲ್ಲಿ ತಯಾರಾಗುತ್ತಿರುವ
ಮೈಸೂರು ಉಕ್ಕಿನ ಸಾಮಾನು
ಗಳನ್ನೇ ಉಪಯೋಗಿಸಿ !

ಶ್ರೇಷ್ಠವಾದ ಕಬ್ಬಿಣದಿಂದ ನಿಪುಣರಾದ ಸೀಮೆಯ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುತ್ತವೆ

ಸಾಮಾನುಗಳ ವಿವರ.

ಗಾಡಿಪಟ್ಟಿ ಅಥವಾ ಪಳಿಗಳು, ದುಂಡು ಮತ್ತು ಚದುರ ಸಲಾಕಿಗಳು, ಕೋನಕಂಬಿಗಳು (Angles), ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು ಮತ್ತು ಬೇಲಿ ಪಟ್ಟಿಗಳು

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುತ್ತವೆ

ಮಾದರಿಯಾದ ಗುಣವುಳ್ಳವು ಬಹುಕಾಲ ಬಾಳಿಕೆ ಬರುತ್ತವೆ	ನ್ಯಾಯವಾಗಿರುವುದರಿಂದ ಬೆಲೆಗೆಯು ಹೊಂದಿಕೊಳ್ಳುತ್ತೆ

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ
(ಮೈಸೂರು ಸರ್ಕಾರ)
ಭದ್ರಾವತಿ (ಮೈಸೂರು ಸ್ಟೇಟ್ ರೈಲ್ವೆ)

ಫೋನ್ ನಂ 392 ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೩] ಗುರುವಾರ ೧೯-೭-೪೫ [ಸಂಚಿಕೆ ೨೮೮

ಸ್ಟಾಲಿನರ ಕೈಯ್ಯಲ್ಲಿ ಜಪಾನರ ಶಾಂತಿ ಪತ್ರ

ಟ್ರೇಲ್ ಕೆಲಸಗಾರರ ಸಂಘ

ಮೈಸೂರು ೧೮

ಸಂಜೆ ರಾಜಧಾನಿಯ ಹೋಟೇಲ್ ರರು, ಕಾಂಗ್ರೆಸ್ ಕಛೇರಿಯಲ್ಲಿ ಿದ್ದರು. ಶ್ರೀ ಬಿ. ನಾರಾಯಣ ಸಿವರು ಅಧ್ಯಕ್ಷತೆ ವಹಿಸಿದ್ದರು. ದ ಹೆಚ್. ಕೆ. ಕುಮಾರಸ್ವಾಮಿ, ನಾರಾಯಣರಾಯರು ಹೋಟೆಲ್ ಗಾರರು ತಮ್ಮ ಏಳಿಗೆಗೆ ಬೇಕಾ ಾರ್ದ ಸೌಜನ್ಯತೆಗಳಿಂದ ಕೂಡಿ ಕೇಕೆಂದರು. ಅಧ್ಯಕ್ಷರು ಭಾಷಣ ಸಂಘದ ಸದಸ್ಯರು ಒಟ್ಟುಗೂಡಿ, ವುದು ಅತ್ಯಗತ್ಯವೆಂದೂ, ಮಾಲೀಕರೂ ಸಹ ತಮ್ಮಲ್ಲಿ ಕೆಲ ಸುವವರು ಕೀಳೆಂಬ ಭಾವನೆ ಇದ ಸಗಾರರ ಏಳಿಗೆಯೇ ತಮ್ಮ ಶ್ರೀ ಿಂಬ ಮನೋಭಾವನೆಯನ್ನು ಳೆಸುಕೊಳ್ಳುವುದು ಉತ್ತಮವೆಂ ಳಿದರು.

ಿರ್ಮರ್ ವಿದ್ಯಾರ್ಥಿ ನಿಲಯ

ಿದ್ಯಾರ್ಥಿ ನಿಲಯವು ರಾಜಧಾನಿ ಿದೇ ಮಾಹೆ ೩೦ ರಿಂದ ಏರ್ಪಡು ದೆ. ಅರಮನೆ ಕಂಟ್ರಾಕ್ಟರುಗಳಾ ಗಿರುವ ಟಿ. ಚಲುವಾಚಾರ್ಯರು, ಟಿ. ಸ್ವಾಚಾರ್ಯರು ಇದಕ್ಕೆ ತಿಂಗಳಿಗೆ ೪೦ ಳಂತೆ ಸಹಾಯ ದ್ರವ್ಯವನ್ನು ಕೊ ತ್ತಾರೆ. ಈ ನಿಲಯಕ್ಕೆ ಸೇರಲಿಚ್ಛೆ ವರು ತಿಂಗಳು ೨೮ ರೊಳಗೆ ಶ್ರೀ ಎಂ. ಿರಸೂರ್ತಿ, ೯೭೬ ಮಂಡಿ ಮೊ ಮೈಸೂರು ಇವರ ವಿಳಾಸಕ್ಕೆ ಬರೆ ಕೃಬೇಕಾಗಿ ಕೋರಲಾಗಿದೆ.

ಹೊಸ ಟೆಲಿಫೋನ್ ವ್ಯವಸ್ಥೆ

ಸೂರು ನಗರದ ವಿದ್ಯುತ್ ಇಲಾಖೆ ಹೊಸ ಟೆಲಿಫೋನ್ ವ್ಯವಸ್ಥೆಯ ಾಡಿ, ಕೆಲವು ಕಡೆ ಜಾರಿಗೆ ತಂದಿ . ಈ ಟೆಲಿಫೋನ್ ಬಹುತರ ಟ್ರಂ ಟೆಲಿಫೋನಿನಂತೆಯೇ ಇರುತ್ತದೆ. ಅ ಯೋ ಏ ನ್ ಪ ೯ ನ ಾ ಗ ದ್ತ ಅಂ ಟೆ ಇರುವುದಿಲ್ಲ. ಮಾತನಾಡಲಿ ವವರು ರಿಸೀವರನ್ನು ಎ ಿದು ಕೇಳಿದಲ್ಲಿ ವಿದ್ಯುತ್ ಇಲಾ ಪರೇಟರ್‌ರವರು ಬೇಕಾದ ಸಂಬಂಧ ಧವನ್ನು ಕಲ್ಪಿಸಿ ಕೊಡುವರು ನಂತ ಂಬರಿನೊಡನೆ ಮಾತನಾಡಬಹುದು.

ನಾವೆ ಚಿತ್ರಗಳ ಅನಾವರಣ

ಸೂರು ಕೋ-ಆಪರೇಟೀವ್ ಸೊಸೈ ಲ್ಲಿ ಶ್ರೀಗಳಾದ ಜಿ. ಆರ್. ಜೋಸ್ಯ .ಎಸ್. ರಾಜಗೋಪಾಲಯ್ಯಂಗಾರ್ ಶ್ರೀ ಎಸ್. ಚೆನ್ನಸ್ವಾಮಿಶೆಟ್ಟಿ ಭಾವಚಿತ್ರಗಳನ್ನು ಅನಾವರಣಮಾ ೧೦೦೦ ರೂ ವೆಚ್ಚಮಾಡಬಹುದೆಂ ರ್ನರಲ್ ಬಾಡಿಯವರು ತೀರ್ಮಾನಿಸಿ ರೆ ಈ ಕಾರ್ಯಕ್ರಮಗಳನ್ನು ನೈ ಖಾನ್ ಬಹದ್ದೂರ್ ಎಂ. ರಾಮ ಯವರನ್ನು ಅಧ್ಯಕ್ಷರನ್ನಾಗಿಯೂ ಕೃಷ್ಣಮೂರ್ತಿಯವರನ್ನು ಕಾರ್ಯ ರನ್ನಾಗಿಯೂ ಒಳಗೊಂಡ ಒಂದು ವನ್ನು ರಚಿಸಲಾಯಿತು.

ಯಾಣ ಮಹಾರಾಜರ ಪ್ರಯಾಣ

ಸ್ವಾಮಿಗಳವರು ನಾರಾಯಣ ಮಹಾರಾಜ ಈ ದಿನ ಬೆಳಗ್ಗೆ ೧೦॥ ಗಂಟೆಯಲ್ಲಿ ರ ಸಮೇತ ಶ್ರೀ ಸಿ. ಬಿ. ಸಿ. ಯವ ಟಾರು ಮತ್ತು ಬಸ್ಸುಗಳಲ್ಲಿ ಕೂರಿಗೆ ಪ್ರಯಾಣ ಮಾಡಿದರು.

ಸೂಚನೆ

ಪ್ರಥಮ ಏಕಾದಶಿ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆ ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ.

ತಿರ್ಥಹಳ್ಳಿಕೊಪ್ಪಕ್ಕೆ ಹೈಸ್ಕೂಲು

ಸ್ವಂ. ವ.] ಬೆಂಗಳೂರು ೧೮

ತೀರ್ಥಹಳ್ಳಿಕೊಪ್ಪದಲ್ಲಿ ಮುನಿಸಿಪಲ್ ಹೈಸ್ಕೂಲ್ ಒಂದನ್ನು ಸ್ಥಾಪಿಸಲು ಸರ್ಕಾರದವರು ಅನುಮತಿಯಿತ್ತಿದ್ದಾರೆ.

ಕೋಳಿ ಸಾಗಿಸ ಕೂಡದು

ತಮ್ಮ ಅನುಮತಿಯಿಲ್ಲದೆ ಬಂದಿನ ಪ್ರದೇಶದಿಂದ ಹೊರಕ್ಕೆ ಕೋಳಿ, ಮೊಟ್ಟೆ ಮುಂತಾದುವುಗಳನ್ನು ಸಾಗಿಸಕೂಡದೆಂದು ಅಲ್ಲಿನ ಕಲೆಕ್ಟರವರು ಆಜ್ಞೆಮಾಡಿರುವರು.

ರಿಜಿಸ್ಟ್ರಾರ್

ಬೆಂಗಳೂರಿನ ವಕೀಲರಾದ ಶ್ರೀ ನರಸಿಂಹರಾವ್ ನಾಯ್ಡುರವರನ್ನು ಪ್ರೊ॥ ರಿಸಿಡೆಂಟು ಅಫಿಷಿಯಲ್ ರಿಸೀವರನ್ನಾಗಿ ನೇಮಿಸಲಾಗಿದೆ.

ಮಂತ್ರಿ ಮಂಡಲದ ಸಭೆ

ನೆನ್ನೆ ದಿನ ಮಧ್ಯಾಹ್ನ ಮಂತ್ರಿಮಂಡಲದ ಸಭೆ ನಡೆದು ಪ್ರಚಲಿತ ವಿಷಯಗಳನ್ನು ಚರ್ಚಿಸಲಾಯಿತು.

ಸಿಮ್ಲಾ ನಿಯೋಗ

ಮೈಸೂರು ಕಾಂಗ್ರೆಸ್ ನಿಯೋಗದವರು ಸಿಮ್ಲಾದಿಂದ ೨೧ ನೇ ತಾ॥ ಶನಿವಾರ ಬೆಂಗಳೂರಿಗೆ ಹಿಂತಿರುಗುವರೆಂದು ಗೊತ್ತಾಗಿದೆ.

ಪ್ರಾ॥ ಪ್ರಾ॥ ಸಭೆ

ನವರಾತ್ರಿಯ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ಅಕ್ಟೋಬರ್ ೧೦ ನೇ ತಾ॥ ಮೈಸೂರಲ್ಲಿ ಪ್ರಾರಂಭವಾಗುವುದು.

೯೦ ದಿನಗಳಲ್ಲಿ ಜಪಾನ್ ದಂಡಯಾತ್ರೆ

ಜಪಾನಿನ ಮೇಲೆ ಮಿತ್ರರು ಇನ್ನು ೯೦ ದಿನ ಒಳಗೆ ಎಂದಿಗೆ ಮುಂಚೆ ಯಾವಾಗಲಾದರೂ ದಂಡಯಾತ್ರೆ ನಡೆಸುವುದಾಗಿ ಅಧಿಕಾರಯುತವಾದ ಸೂಚನೆ ಬರುತ್ತಿದೆ. ಜಪಾನಿನ ತೀರ ಪ್ರದೇಶದ ೭೦ ಮೈಲಿ ಉದ್ದಕ್ಕೂ ಮಿತ್ರ ನೌಕಾ ಧಾಳಿ ಪರಿಣಾಮವಾಗಿ ಉರಿಯಲಾರಂಭಿಸಿದೆ. ಟೋಕಿಯೋ ದಿಂದ ೫೦ ಮೈಲಿ ದೂರದಲ್ಲಿ ಈ ಧಾಳಿ ಯಾಗಿರುವುದು. ೧೫೦೦ ಟನ್‌ಗಳನ್ನು ಹೊಡೆಯಲಾಯಿತು.

ಪೋಟ್ಸ್‌ಡಾಂನಲ್ಲಿ ಆಸ್ಫೋಟನ

ಬರ್ಲಿನ್ ಮತ್ತು ಪೋಟ್ಸ್‌ಡಾಂ ನಗರಗಳು ಮೊನ್ನೆ ನೂರು ಭಾರಿ ಆಸ್ಫೋಟನೆಗಳ ಪರಿಣಾಮವಾಗಿ ತೂಗಾಡಿದವೆಂದು ಸುದ್ದಿ ಬಂದಿದೆ. ಸಿಡಿತಗಳು ಒಂದಾದ ಮೇಲೊಂದು ಕ್ರಮ ಪ್ರಕಾರವಾಗಿ ಆದವು. ಎಲ್ಲಾ ದಿಕ್ಕುಗಳಲ್ಲಿಯೂ ಸಿಡಿತದ ಪರಿಣಾಮ ಅನೇಕ ಮೈಲಿಗಳವರೆಗೆ ಆಗಿ ಅನೇಕ ಮನೆಗಳ ಕಿಟಕಿಗಳು ಅಲ್ಲಾಡಿದವು. ಬರ್ಲಿನ್ ಜನರು ಗಾಬರಿಗೊಂಡು ಆಶ್ರಯ ಸ್ಥಾನಗಳನ್ನು ಸೇರಲು ಓಡಿದರು. ಈ ಸಿಡಿತಗಳು ಯುದ್ಧಕಾಲದ ಆಸ್ಫೋಟನೆ ದಿಂದ ಭಾರಿ ಭಾರಿ ಕಟ್ಟಡಗಳನ್ನು ಉರುಳಿಸುವ ಡೈನಮೈಟ್ ಸ್ಫೋಟನಗಳಂತೆ ಕಾಣಬಂದವು. ತ್ರಿರಾಷ್ಟ್ರ ಮುಖಂಡರ ಸಭೆ ಯುತ್ತಿರುವ ಸ್ಥಳ ಇದು.

೨ ಕೋಟಿ ಕಾಂಗ್ರೆಸ್ ಸದಸ್ಯರು

ಎರಡು ಕೋಟಿ ಜನರನ್ನು ಕಾಂಗ್ರೆಸ್ಸಿಗೆ ಸದಸ್ಯರನ್ನಾಗಿ ಸೇರಿಸಲು ಬೊಂಬಾಯಿ ಪ್ರಾಂತದ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಸ್. ಕೆ. ಪಾಟೀಲ್‌ರವರು ಒಂದು ಯೋಜನೆಯನ್ನು ತಯಾರಿಸಿದ್ದಾರೆ.

ಆದಿಕರ್ನಾಟಕ-ಮುಸಲ್ಮಾನರ ಹೊಡೆದಾಟ ಪ್ರಕರಣ

ನಮ್ಮಯ ತಿಳಿಸಲಾಗಿದ್ದಂತೆ, ಮೊನ್ನೆ ರಾತ್ರಿ ನಡೆದ ಆದಿಕರ್ನಾಟಕ ಮತ್ತು ಮುಸಲ್ಮಾನರ ಹೊಡೆದಾಟದ ಪ್ರಸಂಗದಲ್ಲಿ ಸೀಳ ಗಾಯಗಳನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿದೆ.

ಸೋಮವಾರ ರಾತ್ರಿ ಒಬ್ಬ ಆದಿಕರ್ನಾಟಕ ಕನು ಕುಡಿದು ಮತ್ತೇರಿ, ಅಂಗಡಿ ಮುಂದೆ ದುರ್ಭಾಷೆಗಳನ್ನಾಡುತ್ತಿದ್ದನಂತಲೂ, ಅದಲ್ಲದೇ ಒಬ್ಬ ಆದಿಕರ್ನಾಟಕ ಹುಡುಗನು ಮುಸಲ್ಮಾನನೊಬ್ಬನಿಂದ ಬಿಸ್ಕತ್ ತೆಗೆದುಕೊಂಡು ಅಂಗಡಿ ಕೆಲಸಕ್ಕೆ ಬರದೇ ತಪ್ಪಿಸಿಕೊಳ್ಳುತ್ತಿದ್ದನಂತಲೂ, ಈ ಕಾರಣಗಳಿಗಾಗಿ ಮುಸಲ್ಮಾನನಿಗೆ ಸಿಟ್ಟು ಬಂದು ಅನರ. ದೊಣ್ಣೆ ಕಲ್ಲುಗಳ ಸಮೇತ ಆದಿಕರ್ನಾಟಕ ಕೇರಿಗೆ ಹೋಗಿ ಅಲ್ಲಿ ಮಾರಾಮಾರಿ ನಡೆದು ಗಲಾಟೆಯಾಯಿತೆಂದೂ ತನ್ನ ರಕ್ಷಣೆಗಾಗಿ ೮-೧೦ ಜನರಿಗೆ ಗಾಯವಾಯಿತೆಂದೂ ವರದಿಗಳು ಬಂದಿವೆ. ಪೋಲೀಸರು ಸಮಾಚಾರ ಬಂದ ಕೂಡಲೇ ಸ್ಥಳಕ್ಕೆ ಹೋಗಿ, ತನಿಖೆ ನಡೆಸುತ್ತಿದ್ದಾರೆ.

ಸ್ಟಾಲಿನರ ಕೈಲಿ ಜಪಾನರ ಶರಣಾಗತಿ ಸೂಚನೆ

ಜಪಾನರು ಮಾರ್ಷಲ್ ಸ್ಟಾಲಿನರ ಕೈಯ್ಯಲ್ಲಿ, ಮಿತ್ರರಿಗೆ ಶರಣಾಗತರಾಗಿ ಒಂದು ಸೂಚನೆಯನ್ನು ಕೊಟ್ಟಿರುವರೆಂದೂ, ಸ್ಟಾಲಿನ್ನರು ಉಭಯತ್ರರಿಗೂ ಮಧ್ಯಸ್ಥಿಕೆ ಮಾಡಲಿರುವರೆಂದೂ ವದಂತಿ ಹಬ್ಬಿದೆ. ಇನ್ನೊಂದು ವದಂತಿ ಪ್ರಕಾರ, ಮುಖಂಡರ ಸಭೆ ಮುಗಿದ ನಂತರ ಜಪಾನ್ ಮೇಲೆ ಯುದ್ಧ ಹೂಡುವುದಾಗಿ ಗೊತ್ತಾಗುತ್ತದೆ. ತ್ರಿರಾಷ್ಟ್ರ ಮುಖಂಡರ ಪ್ರಥಮ ಸಭೆ ನಡೆಯಿತು. ದ್ವಿತೀಯ ಸಭೆ ನಡೆಯುವುದಿದೆ. ಅಧ್ಯಕ್ಷ ಟ್ರೂಮನ್‌ರವರ ಸ್ಟಾಲಿನರು ಉಪಾಹಾರ ಸ್ವೀಕರಿಸಿದರು. ಮಾತುಕತೆಗಳು ಬಹು ಶೀಘ್ರವಾಗಿ ನಡೆಸಿನ.

ಟ್ರೂಮನ್ನರು ವಾಪಸು ಹೊರಡುವರು

ಅಧ್ಯಕ್ಷ ಟ್ರೂಮನ್‌ರವರು ಲಂಡನ್ ಮತ್ತು ಇತರ ಕಡೆಗಳ ಪ್ರವಾಸವನ್ನು ರದ್ದುಗೊಳಿಸಿ, ಸ್ವದೇಶಕ್ಕೆ ಜಾಗ್ರತ ಹಿಂತಿರುಗುವರೆಂದು ಹೇಳಲಾಗಿದೆ. ಅವರ ಸಲಹೆಗಾರರಲ್ಲಿ, ಜಪಾನ್ ಬಗ್ಗೆ ಅನುಸರಿಸಬೇಕಾದ ನೀತಿಯಲ್ಲಿ ಭಿನ್ನಾಭಿಪ್ರಾಯ ತಲೆದೋರಿರುವುದಾಗಿ ಹೇಳಲಾಗಿದೆ.

ಹಾಲೆಂಡು ಸಾಮ್ರಾಜ್ಯವಾದ ತೊರೆಯುವುದು

ಹಾಲೆಂಡು ಸಾಮ್ರಾಜ್ಯ ವಾದವನ್ನು ತೊರೆದು ಇಂಡೋ-ಚೀನಾ ಮತ್ತು ಸ್ವತಂತ್ರ ರಾಷ್ಟ್ರದ ಭವಿಷ್ಯಕ್ಕಾಗಿ ಹೋರಾಡುವುದಾಗಿ ಆ ದೇಶದ ಕಲೋನಿಯಲ್ ಮಂತ್ರಿಯು ತಿಳಿಸಿದ್ದಾರೆ.

ಸಿಕ್ಕಿಕೊಂಡ ಜಪಾನರು ತಪ್ಪಿಸಿಕೊಂಡರು

ಸಿಟಾಂಗ್ ನದಿ ಹತ್ತಿರ ಸಿಕ್ಕಿಕೊಂಡಿದ್ದ ೧೦ ಸಾವಿರ ಜಪಾನ್ ಯೋಧರ ಪೈಕಿ, ಕೆಲವರು ತಪ್ಪಿಸಿಕೊಂಡರೆಂದು ಹೇಳಲಾಗಿದೆ. ಬೇರೆಬೇರೆ ಕಡೆ ಜಪಾನರ ಪದಾತಿ ಸೈನ್ಯಗಳು ಧಾಳಿಮಾಡುವ ಪ್ರಯತ್ನ ನಡೆಸಿರುವುದರಿಂದ ಅವರ ಚಟುವಟಿಕೆ ಗಳು ಜಾಸ್ತಿಯಾದಂತೆ ಭಾಸವಾಗುತ್ತಿದೆ. ಈ ಜಯದ ದೆಸೆಯಿಂದ ಸ್ವಲ್ಪ ಚೇತರಿಸಿಕೊಂಡು ಉಳಿದವರು ಹಾಗೆಯೇ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರಬಹುದೆಂದು ನಂಬಲಾಗಿದೆ.

ದಿವಾನರು

ನೆನ್ನೆ ಸಂಜೆ ದಿವಾನರು ರಾಜಧಾನಿಗೆ ಆಗಮಿಸಿದರು. ನಾಳೆ ಇಲ್ಲಿಂದ ಬೆಂಗಳೂರಿಗೆ ತೆರಳುವರು.

ಫ್ರೆಂಚ್ ರಾಜ್ಯ ಘೋಷಣೆ

ಶ್ರೀರಂಗಪಟ್ಟಣ ೧೮

ಫ್ರೆಂಚ್ ರಾಜ್ಯ ಮುಖ್ಯ ಶಿಲ್ಪಿಗಳಾದ [illegible] ಯವರು ರಾಷ್ಟ್ರಗೀತೆ [illegible] [illegible] [illegible] [illegible]

ಕಲಾ ಜಗತ್ತಿನಲ್ಲಿ ಗಾಯಕರ ಸ್ಥಾನ ಮಾನ

ಸಂಗೀತ ವಿದುಷಿ ಶ್ರೀಮತಿ ಕಡಾಂಬಿ ನೀಲಮ್ಮನವರ ಗಾನ ಕಲಾ ಕೌಶಲ

ಲೇಖಕ :—" ಗಾನ ಲೋಲ "

ಮೊದಲ ಮಾತು

ಕಲಾಜಗತ್ತಿನಲ್ಲಿ ಗಾನ ಕಲೆಗೆ ಹಿರಿಯ ಸ್ಥಾನವಿದೆ. ಅಂತೆಯೇ ಗಾಯಕರೂ ಹಿರಿಯ ಸ್ಥಾನವನ್ನು ಪಡೆದಿರುವರು. ಶಿಲ್ಪ, ನೃತ್ಯ, ಸಾಹಿತ್ಯಗಳಿಗಿಂತಲೂ ಗಾನ ಕಲೆಯು ಸಾಮಾನ್ಯ ಜನ ಜೀವನದಲ್ಲಿ ನಿರುತ್ತರಿಣಾಮವನ್ನುಂಟು ಮಾಡಿದೆ. ಅನುದಿನದ ಜಗತ್ತಿನ ಜಂಜಾಟಗಳಿಗೆ ಸಿಲುಕಿ, ಬೇಸತ್ತು, ಜೀವನದಲ್ಲಿ ಬೇಸರವು ಉಂಟಾಗಿರುವ ಸಮಯದಲ್ಲಿ ಮಧುರ ಕಂಠದಿಂದ ಹೊರಟ ಇಂಪು ಗಾನವು ಮನದ ಬೇಸರಿಕೆಯನ್ನು ನಿವಾರಿಸಿ, ಹೊಸ ಹುರುಪನ್ನು ತುಂಬುವುದು. ಇಳೆಯ ಬಾಳಿನ ಜೀವನಾಡಿ ಮಧುರಗಾನ ತುಂಬಿದ ಹೃದಯದಿಂದ ಗಾಯಕನೋರ್ವನು, ತನ್ನ ಅಮರ ಗಾನದಿಂದ, ನರಳುವ ಮಂದಿಯನ್ನು ಆನಂದಸಾಗರದಲ್ಲಿ ಮುಳುಗಿಸುವನು; ಆಗ ಜಂಜಾಟದ ಜಗತ್ತೇ ಸ್ಮೃತಿ ಪಥದಿಂದ ಅಳಿಸಿಹೋಗುವುದು; ಮಾನವನು ತನ್ನ ವ್ಯವಹಾರದ ಕಟ್ಟುಪಾಡುಗಳಿಂದ ಪಾರನಾಗುವನು; ಅಷ್ಟೇಕೆ? ಗಾನ ಕಲೆಯು ಪಾಮರ ಮಾನವನನ್ನು ದೂರಮಾಡಿ ದೈವ ತನನನ್ನು ನೀಡಿ, ಅಮರ ಲೋಕದಲ್ಲಿ ಎಲ್ಲರನ್ನೂ ಆನಂದದಿಂದ ಕುಣಿಸಿ ತಣಿಸುವುದು. ಒಂದು ಗಾಯಕನ ಮಧುರ ಗಾಯನ, ಮತ್ತೊಂದು ಅವನು ಹೇಳುವ ಅಮರ ಗೀತೆ; ಇವೆರಡರ ಜೋಡಿಯೇ ಇಂದು ಜಗತ್ತಿನಲ್ಲಿ ಅಸದೃಶವೆನಿಸುವ ದಿವ್ಯನಾದ 'ವೇಣು ಗಾನ.' ಒಂದು ವೇಣು, ಇನ್ನೊಂದು ಗಾನ, ಇವೆರಡರ ಮಿಲನವೇ ಆನಂದದ ಸಾಗರ.

ಕನ್ನಡ ತಾಯಿಯ ಪವಿತ್ರ ಉದರದಲ್ಲಿ ಅನೇಕ ಗಾನರತ್ನಗಳು ಉದಿಸಿವೆ. ಮುಂದೆ ಉದಿಸಲೂ ಇವೆ. ತ್ಯಾಗರಾಜ, ಪುರಂದರ ಮುಂತಾದ ಗಾಯಕ ಶಿಖಾಮಣಿಗಳಿಗೆ ಆಶ್ರಯವಿತ್ತ ನಮ್ಮ ನಾಡು ಸಾಮಾನ್ಯವೇ? ಇಂದಿಗೂ ಅವರ ಕೀರ್ತಿಯು ಅಚ್ಚಳಿಯದಂತೆ ಅಮರವಾಗಿ ಉಳಿದಿದೆ. ಗಾನಕಲೆಯಲ್ಲಿ ಅನೇಕ ಸ್ತ್ರೀ ರತ್ನಗಳು ಈಗೀಗ ಬೆಳಗಿ ಬರುತ್ತಿರುವರು. ಪ್ರಕೃತ ಕರ್ನಾಟಕದಲ್ಲಿ ತಮ್ಮ ಮಧುರ ಗಾನದಿಂದ ಜನಮನದ ಪರಿಪೂರ್ಣ ಮೆಚ್ಚಿಕೆಯನ್ನು ಪಡೆದಿರುವವರು ಶ್ರೀಮತಿ ಕಡಾಂಬಿ ನೀಲಮ್ಮನವರು; ದಕ್ಷಿಣ ಭಾರತದೆಲ್ಲೆಲ್ಲಾ ತಮ್ಮ ಗಾನ ಸ್ವರಸಿಂದ ಎಲ್ಲರ ಆದರಣೆಗೂ ಪಾತ್ರರಾದ ಶ್ರೀಮತಿ ನೀಲಮ್ಮ ಕಡಾಂಬಿ ಅವರ ಜೀವನ ಸಂಬಂಧದ ಸಾಮಾನ್ಯ ರೂಪರೇಖೆಯನ್ನು ರಸಿಕರ ಮುಂದಿಡಲು ಇಲ್ಲಿ ಪ್ರಯತ್ನ ಮಾಡಿದೆ ಗಾಯಕರ ಜೀವನ ಚಿತ್ರ ರಸಿಕರ ರಸದೂಟ.

ಪರಿಚಯ

ಶ್ರೀಮತಿ ನೀಲಮ್ಮ ಕಡಾಂಬಿಯವರು. ... ... [illegible]

ಚಾತುರ್ಯದಿಂದ ಪ್ರಸಿದ್ಧ ಗಾಯಕರಾಗಿ ಕರ್ನಾಟಕದ ಬಹುಜನರ ಮನ್ನಣೆಗೆ ಪಾತ್ರರಾಗಿದ್ದರು. ಚಿಕ್ಕಂದಿನಲ್ಲಿಯೇ ನೀಲಮ್ಮನವರು ಗಾನ ಕಲಿಯಲು ಬಹಳ ಉತ್ಸಾಹಶಾಲಿಗಳಾಗಿದ್ದರು. ಯಾವ ಒಂದು ಕಲಾಜೀವಿಯೂ ತನ್ನ ಪೂರ್ವಜನ್ಮದ ಸಂಸ್ಕಾರದಿಂದ ತನ್ನ ಜನ್ಮದಲ್ಲಿ ಯಶಸ್ವಿಯಾಗಲು ಹವಣಿಸುತ್ತಾನೆ. ಅಂತೆಯೇ ಅವನ ಅನುದಿನದ ಸಾಧನೆಯೂ ತೀವ್ರತೆಯಿಂದ ಸಾಗುವುದು. ಶ್ರೀಮತಿ ನೀಲಮ್ಮನವರ ಸುಸಂಸ್ಕೃತವಾದ ಪ್ರವೃತ್ತಿಯು ಮೊದಲೇ ತನ್ನ ಮುಂದಿನ ಭವಿತವ್ಯವನ್ನು ಮನಗಂಡು ಗಾನ ದೇವಿಯನ್ನು ಆರಾಧಿಸಲು ಮೊದಲು ಮಾಡಿತು. ಕೇವಲ ಹತ್ತುವರುಷದ ಬಾಲ್ಯದಲ್ಲಿಯೇ ಶ್ರೀಮತಿ ನೀಲಮ್ಮನವರು ವೀಣಾವಾಣಿಯಾದರು. ಅಂದಿನಿಂದ ಇಂದಿನ ವರೆಗೆ ಅವರ ೨೫ ವರುಷಗಳ ನಿರಂತರ ಸಾಧನೆ ಅವರ ಕಲಾಕೌಶಲವನ್ನು ಅಪ್ರತಿಮವಾಗಿ ಹೆಚ್ಚಿಸಿದೆ.

ಸಾಧನೆ

ಶ್ರೀಮತಿ ನೀಲಮ್ಮನವರ ಸಾಧನೆಯು ಬಹಳ ಸೊಗಸಾಗಿ ಸಾಗಿದೆ. ಅವರ ಹಿರಿಂದಿನ ಸಾಧನೆಯೇ ಅವರಿಗೆ ಪಂಪ್ಯರಾದ ದಾರಿಯನ್ನು ತೋರಿಸಿದೆ. ಅನುದಿನವೂ ಸೂರ್ಯೋದಯಕ್ಕೆ ಮುಂಚೆ ಶಾಂತ ವಾತಾವರಣದಲ್ಲಿ ಶ್ರೀಮತಿಯವರ ಮಧುರ ಕಂಠದಿಂದ ಹೊರಟ ಗಾನವು ಎಲ್ಲರನ್ನೂ ಚೇತನಗೊಳಿಸುತ್ತಿದ್ದಿತು. ಇಂದಿಗೂ ಅವರ ಸಾಧನೆಯು ತಡೆಯಿಲ್ಲದೆ ಸಾಗುತ್ತಿದೆ.

'ಯಾವ ಹೆಣ್ಣುಮಕ್ಕಳ ಒಡನೆ"— ಇದು ಶ್ರೀಮತಿ ನೀಲಮ್ಮನವರ ಜೀವನ ಚಿತ್ರದಲ್ಲಿ ಅಕ್ಷರಶಃ ಒಪ್ಪುತ್ತದೆ. ನಿರಾಭರಣ ಸುಂದರಿಯಾಗಿದ್ದ ಮಧುರ ಗಾನಕ್ಕೆ ಮೊದಲುಮಾಡಿದರೆಂದರೆ, ಮಾನವನ ಎಂತಹ ಕ್ಲೇಶವನ್ನಾದರೂ ನಿವಾರಿಸಬಲ್ಲ ಶಕ್ತಿ ಶ್ರೀಮತಿ ನೀಲಮ್ಮನವರಲ್ಲಿದೆ. ತ್ಯಾಗರಾಜರ ಕೀರ್ತನೆಗಳು ಅವರ ಬಾಯಿನಲ್ಲಿ ಬರಿತುಹೋಗಿ ಪಾನ್ನ ಎಷ್ಟು ವಿದ್ಯಾಪ್ರೌಢಿಮೆಯನ್ನು ಗಳಿಸಿದ್ದರೂ ಇನ್ನೂ ಅವರ ಅಂತ ಶಾರಣೆಯು,' ಎಂದರೋ ಮಹಾನುಭಾವುಲು' ಎಂದು ನುಡಿಯುತ್ತಿದೆ.

ವ್ಯಕ್ತಿತ್ವ

ಹಸನ್ಮುಖಿಯಾಗಿ ಸಾಧಾರಣವಾದ ಉಡುಪನ್ನು ಧರಿಸಿ, ಹಣೆಯಲ್ಲಿ ಲಕ್ಷಣವಾದ ಕುಂಕುಮವನ್ನು ಇಟ್ಟು ವೀಣಾಪಾಣಿಯಾಗಿ, ಹಾಡಲು ಕುಳಿತರೆ ಪಕ್ಕನೆ ಶಾರದಾಂಬೆಯೇ ಆವಿರ್ಭವಿಸಿದಂತೆ ಕಾಣುವುದು. ಶ್ರೀಮತಿ ನೀಲಮ್ಮನವರ ಇರುವು. ಶ್ರೀಮತಿಯವರೆ ಹಾಡುಗಾರಿಕೆಯಲ್ಲಿ ಅವರದೇ ಆದ ವ್ಯಕ್ತಿತ್ವವು ಎದ್ದು ಕಾಣುತ್ತದೆ. ಎಷ್ಟು ದೂರದಿಂದ ಆಲಿಸುತ್ತಿದ್ದರೂ ಇವರ ದಾಟಿಯನ್ನು ಬಹುಬೇಗ ಕಂಡುಕೊಳ್ಳಬಹುದು. ಬೇಹಾಗ್, ಮುಖಾರಿ, ಆಠಾಣ ಮುಂತಾದ ರಾಗಗಳು ಶ್ರೀಮತಿಯವರಿಗೆ ಬಹು ಪ್ರಿಯ. ಅವರು ಸ್ವರವ... ... ಹಾಡಲು ಮೊದಲು ಮಾಡುತ್ತಾರೆ. ಹಾಡುತ್ತ, ಹಾಡುತ್ತ, ಹೃದಯವು ತೋಡಿ, ತೋಡಿ ಬರುವುದು. ಹಾಡಿನ ಸೊಗಸು ಹೇಳುವುದರಲ್ಲಿದೆ. ಕೇಳುವ ಗಾನವನ್ನು ಆದರದಿಂದ ಕೇಳುವುದರಲ್ಲಿ ಅದರ ಆನಂದವನ್ನು ಅನುಭವಿಸಬಹುದು. ಶ್ರೀಮತಿ ನೀಲಮ್ಮನವರು ಗಾನಕಲಾ ಜಗತ್ತಿನಲ್ಲಿ ಅಡಿಯಿಟ್ಟು ಕೇವಲ ೨೫ ವರುಷಗಳಾಗಿದ್ದರೂ, ಅವರ ವಿದ್ಯಾಪ್ರೌಢಿಮೆ ಅಪಾರವಾಗಿದೆ.

ಲೋಕಾನುಭವ

ಶ್ರೀಮತಿಯವರ ಪ್ರಾಪಂಚಿಕ ಅನುಭವ ಅಪೂರ್ವವಾಗಿದೆ. ಅವರು ಅನೇಕ ನಗರಗಳನ್ನು ಸುತ್ತಾಡಿಕೊಂಡು ಅಲ್ಲಿಯ ಜನರನ್ನು ಮುಗ್ಧಗೊಳಿಸಿದ್ದಾರೆ; ಅಂತೆಯೇ ಅಪಾರವಾದ ಪಾರಿತೋಷಕಗಳನ್ನೂ ಪಡೆದಿದ್ದಾರೆ. ಅವರು ಗಾಯನದಲ್ಲಿ ಎಷ್ಟು ಪ್ರವೀಣರೋ, ಪ್ರಾಪಂಚಿಕ ವ್ಯವಹಾರದಲ್ಲಿಯೂ ಅಷ್ಟೇ ಪ್ರವೀಣರು. ಶ್ರೀಮತಿಯವರ ಕಲಾಜ್ಞಾನವನ್ನು ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ದಿನದಿನಕ್ಕೆ ಅವರು ತಮ್ಮ ಪ್ರಗತಿ ಪಥದಲ್ಲಿ ಮುನ್ನಡಿಯಿಡುತ್ತಿದ್ದಾರೆ. ಈಗತಾನೆ ತಮ್ಮ ಪ್ರವಾಸದ ಕಾರ್ಯಕ್ರಮವನ್ನು ಮುಗಿಸಿಕೊಂಡು ಮೈಸೂರಿನಲ್ಲಿ ಬಂದು ವಿಶ್ರಾಂತಿ ಪಡೆಯುತ್ತಿರುವರು.

ಶ್ರೀಮತಿಯವರ ವಿದ್ಯಾ ಪ್ರೌಢಿಮೆ ಅಪೂರ್ವವಾದದ್ದು. ಅವರ ಕೀರ್ತಿ ಕರ್ನಾಟಕಕ್ಕೊಂದು ಹೆಮ್ಮೆ; ಅವರು ಎಲ್ಲಿ ಹೋದರೂ ಕರ್ನಾಟಕದ ಕೀರ್ತಿ ಪತಾಕೆಯನ್ನು ಹಾರಿಸದೆ ಹಿಂದಿರುಗುವವರಲ್ಲ. ಇಂಥಹ ಉತ್ಸಾಹ ಗಾಯಕಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಸದಾ ಕಾಲವೂ ಲೋಕಕಲ್ಯಾಣದ ಆದಿ ದೇವನು ಅನುಗ್ರಹಿಸಲಿ.

ಮಧುರ ಗಾನಕ್ಕೆ ಎಂತಹವನಾದರೂ ಮನಸೋಲದಿರಲಾರನು. ಬಾಳಿನ ಪಿಡಕಾಟಗಳಿಗೆ ಬೇಸತ್ತು, ಮಾನವನ ಆತ್ಮವು ಒಂದು ಕಡೆ ಶೂನ್ಯವಾದರೂ ಗಾನಾಂಬುಧಿಯಲ್ಲಿ ಮಿಂದು ತನ್ನ ಕಷ್ಟಗಳನ್ನು ಮರೆಯಲು ಹವಣಿಸುತ್ತದೆ. ಜಗತ್ತಿನ ಗಾನದ ವೈಶಿಷ್ಟ್ಯವನ್ನು ವರ್ಣಿಸುತ್ತಾ ಕವಿಯೋರ್ವನು ಬಹಳ ಸೊಗಸಾಗಿ ಹಾಡಿರುವನು:

" ದೇಹ ತಗ್ಗಿತು ಮನವು ಹಿಗ್ಗಿತು
ಗಾನ ಲಹರಿಯಲ್ಲಿ
ಜೀವ ಜೀವರು ಕುಣಿಯುತಿದ್ದರು
ಬಾಳ ಗರುಡಿಯಲ್ಲಿ
ಮುತಿಗೆಯೇರಿದ ದಿವ್ಯರೂಪವು ಬಂದು
ಸುಳಿಯುತಲ್ಲಿ
ಕವಿಯ ಜೀವನು ಸೇರುತ್ತಿದ್ದನು ಗಾನ
ದೇವಿಯಲ್ಲಿ "

ಅವನ ಹಾಡಿನೊಡನೆ ನಮ್ಮ ಹಾಡೂ ಸೇರಲಿ !

ಆಗಸ್ಟ್ ಗಲಾಟೆಯಲ್ಲಿ ರೈತರ ಹಿಂಸೆ

ಆಗಸ್ಟ್ ಚಳುವಳಿ ಬಗ್ಗೆ ಪಂಡಿತ ... ರೂ ವರು ಪ್ರಶಂಸೆಮಾಡಿ, ಅದು ಮುಖ್ಯವಾಗಿ ರಲ್ಲದೆ ನಿಸ್ಸಹಾಯಕರಾದ ಮತ್ತು ನಿರ... ರಾದ ದಂಗೆಯೆಂದು ತಿಳಿಸಿರುವರು. ಬಿ... ರ್, ಯು. ಪಿ. ಮುಂತಾದ ಕಡೆಗಳಲ್ಲಿ ... ನಿಕರು ಮತ್ತು ಪೋಲೀಸರು ರೈತರ... ಕ್ರೂರವಾಗಿ ಹಿಂಸೆಮಾಡಿದರೆಂದೂ, ನೂ... ರು ಹಳ್ಳಿಗಳನ್ನು ಸುಟ್ಟು ಬೂದಿಮಾಡ... ಯಿತೆಂದೂ, ಆ ಹಳ್ಳಿಗಳಿದ್ದ ಜಾಗಗಳ... ಈಗ ಉಳಲಾಗುತ್ತಿದೆಯೆಂದೂ ಅವರು ... ಸಿರುವರು.

ಪ್ಯಾಲಸ್ಟೈನ್ ಯಹೂದ್ಯ ರಾಜ್ಯವಾಗಲಿ

ಪ್ಯಾಲಸ್ಟೈನನ್ನು ಯಹೂದ್ಯರ ರಾಜ್ಯವಾ... ಪರಿವರ್ತಿಸಬೇಕೆಂದು ಬ್ರಿಟನ್ನಿಗೆ ಜಿ... ಯಹೂದ್ಯಸಂಗಡದ ನಿಯೋಗದ ಮು... ದರು ಸೂಚನೆ ಮಾಡಿದ್ದಾರೆ. ಮಧ್ಯಪ್ರಾ... ದಲ್ಲಿ ಬ್ರಿಟನ್ನಿಗೆ ಸಾಕಾದಷ್ಟು ಅಧಿಕಾ... ರುವುದೆಂದೂ, ಆದ್ದರಿಂದ ಈ ಹೊಸರಾ... ವನ್ನು ಅದು ಕಟ್ಟಿದರೆ ಯಾರೂ ಏನು... ಹೇಳಲಾರರೆಂದೂ ಅವರು ತಿಳಿಸಿದ್ದಾರೆ.

ಬಿಡುಗಡೆಗಾಗಿ ಪ್ರಯತ್ನ

ಜೈಲಿನಲ್ಲಿರುವ ರಾಜಕೀಯ ಬಂದಿ... ಬಿಡುಗಡೆ ವಿಷಯವಾಗಿ ಮೌಲಾನ ಆ... ದರು ವೈಸರಾಯರೊಡನೆ ಪತ್ರವ್ಯವಹಾ... ಮಾಡುತ್ತಿದ್ದಾರೆ. ಸಿಮ್ಲಾ ಸಮ್ಮೇಳ... ನ್ನು ಕುರಿತು ಅವರಿಬ್ಬರಿಗೂ ನಡೆದ ಪ... ವ್ಯವಹಾರ ಈಗಲೇ ಪ್ರಕಟವಾಗುವುದು...

ಪ್ರತಿದಿನ ೩ ಆಟಗಳು

ಅಪೆರಾ ಟಾಕೀಸ್
೨೦—7 45 ರಿಂದ

ಸಿತಾರಾ, ನಾಜಿರ್, ಗುಲಾಬ
ಗೋಪಾ, ಮಜೀದ್
ಮುಂತಾದವರು ಪಾತ್ರವಹಿಸಿರುವ

ಸ್ವೀಟ್ ಲೈ
(ಹಿಂದಿ)

Edited, printed and published by A. R. Nagarajan at the Sadhvi Press, D. Subbiah Road, Mysore

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. O. P.

ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-6

ಡಿ. ಪುಟ್ಟಸ್ವಾಮಿ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್ :— ದೇವರಾಜ ಮಾರ್ಕೆಟ್ ಪಕ್ಕದ ಮಂಡಿ, ಸಂತೇಪೇಟೆ

ಫೋನ್ ನಂ 392 ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೪] ಶನಿವಾರ ೨೧-೭-೪೫ [ಸಂಚಿಕೆ ೨೮೯

ಜರ್ಮನಿ ಭವಿಷ್ಯ ಕುರಿತು – – ಮುಖಂಡರ ತೀರ್ಮಾನ

...ವರೂನ್ನು ರೈತರು ಪ್ರಿ॥ ...ಕಾರವನ್ನು ಕಾಗ್ಗಿಸಿದರು

...ಪ್ಪನನ್ನು ಕೊಲ್ಲದೆ ೧೯೪೬ ರ ಚಳುವಳಿಯಲ್ಲಿ ಭಾರತದ ರೈತರು ಬ್ರಿಟಿಷರ ಅ... ಬಲವನ್ನು ಕೆಲವು ದಿನಗಳ ಮಟ್ಟಿಗೆ... ಮುಗಿಸಿದ್ದರೆಂದು ಪಂಡಿತ ನೆಹರೂರವರು ಲಾಹೋರಿನಲ್ಲಿ ತಿಳಿಸಿದರು. ...ಗೆ ಒಪ್ಪಿಸಲಾದ ೧೬ ಸಾವಿರ ರೂ. ...ಧಿ ಪೈಕಿ ಅರ್ಧ ಭಾಗವು ಕಮಲಾ ...ಆಸ್ಪತ್ರೆಗೂ, ಉಳಿದ ಅರ್ಧ ಭಾಗ ಸಂಯುಕ್ತ ಪ್ರಾಂತಗಳ ಬಲಿಯಾ ...ಲ್ಲಿ ೧೯೪೨ ರಲ್ಲಿ ಆದ ಗಲಾಟೆಯ ...ಧಿಕಾರಿಗಳು ನಾಶ ಪಡಿಸಿದ ಹಳ್ಳಿ ಜ... ಬಡಿಸಿಲುಗಳನ್ನು ಪುನಃ ಕಟ್ಟುವುದ... ವಿನಿಯೋಗವಾಗುವುದು.

ವಿದೇಶಗಳಲ್ಲಿ ಪಂಡಿತ ನೆಹರೂರ ಪ್ರವಾಸ

...ಡಿತ ಜವಾಹರಲಾಲ್ ನೆಹರೂರವರು ಯೂರೋಪ್ ಮತ್ತು ಅಮೇರಿಕಾಗಳಲ್ಲಿ ...ಸ ಕೈಗೊಳ್ಳುವವರಾಗಿದ್ದಾರೆ. ಯು... ...ತ್ತ ಯೂರೋಪಿನಲ್ಲಿ ಉಂಟಾಗಿರುವ ...ನಾಶನಗಳನ್ನು ಅವರು ನೋಡಬಿಚ್ಛಿ...ಸುವರು. ಅಮೇರಿಕಾಕ್ಕೆ ಹೋಗಿ ತಮ್ಮ ...ದರಿ ಶ್ರೀಮತಿ ವಿಜಯಲಕ್ಷ್ಮಿಯನ್ನು ...ವರು.

ವಿದ್ಯಾರ್ಥಿ ಕಾಂಗ್ರೆಸ್

...ಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಸಾ...ನ್ಯ ಸದಸ್ಯರ ಸಭೆಯು ಚಾಮರಾಜ... ...ಯಲ್ಲಿರುವ ಸಹಕಾರ ಭವನದಲ್ಲಿ ೨೭ ...ಕ್ರವಾರ ಸಂಜೆ ೬ ಗಂಟೆಗೆ ನಡೆಯು... ಸಂಘದ ಸದಸ್ಯರಾಗಲು ೨೫ ನೇ ...ಯೇ ಕೊನೆಯ ದಿನ ಮತ್ತು ಸಂಘದ ...ರ ವರ್ಗದ ಚುನಾವಣೆಯಲ್ಲಿ ಭಾಗ... ...ಸುವವರು ಮತ್ತು ಸೂಚನೆಯಗಳನ್ನು ...ಸುವವರು ೨ ದಿನ ಮುಂಚೆ ಕಾರ್ಯ...ಲಕ್ಕೆ ತಿಳಿಸಬೇಕು.

...ಸೂರು ಸಿಟಿ ರೇಷನಿಂಗ್ ಆಫೀಸಿನಿಂದ

ನೋಟೀಫಿಕೇಷನ್

ಇದರಿಂದ ತಿಳಿಯಪಡಿಸುವುದೇ...:—

ಇದೇ ಮಾಹೆ ೨೬ ನೇ ತಾರೀಖು ...ಮುಂದೆ ಹೊಸ ರೇಷನ್ ಕಾರ್ಡುಗಳು ...ನಾ ರೇಷನ್ ಡಿಪೋಗಳಲ್ಲಿಯೇ ಹಂಚ...ತ್ತನೆ.

ರೇಷನ್ ಕಾರ್ಡ್ ಹೋಲ್ಡರುಗಳು ...೬ ಜುಲೈ ತಿಂಗಳ ಪಡಿಬತ್ತವನ್ನು ...ಚಾಲ್ತಿಯಲ್ಲಿರುವ ರೇಷನ್ ಕಾರ್ಡಿನಲ್ಲಿ ...ಪಡೆದು ಡಿಕ್ಲರೇಷನ್ ಕೊಟ್ಟಿರುವ ...ವಿಗೆ ಅದನ್ನು ವಾಪಸ್ಸುಮಾಡಿ ಹೊ...ರ್ಡನ್ನು ಪಡೆಯತಕ್ಕದ್ದು.

...ರ್ಡು ಹೋಲ್ಡರುಗಳು ಹೊಸ ...ನ್ ಕಾರ್ಡಿನಲ್ಲೂ ಮತ್ತು ಇಂಡೆಕ್ಸ್ ...ನಲ್ಲೂ ಸಹಿ ದಾಖಲೆಗಾಗಿ ರುಜು ...ಡತಕ್ಕದ್ದು.

ತಮ್ಮ ಕಾರ್ಡಿನಲ್ಲಿ ಬದಲಾವಣೆ ಏ...ರೂ ಆಗಬೇಕಾದ ಸಂದರ್ಭದಲ್ಲಿ ಅಂ...ದರು ಸಂಬಂಧಪಟ್ಟ ಫುಡ್ ಇನ್ಸ್ಪೆಕ್ಟ... ತಿಳಿಸಿದ್ದಲ್ಲಿ ಅವರು ವಿಚಾರಣೆ ನಡೆಸಿ ಬದಲಾವಣೆ ಮಾಡುವರು.

ಸಹಿ:- ಟಿ. ವಿ. ರೆಡ್ಡಿ.
ರೇಷನಿಂಗ್ ಆಫೀಸರು,
ಮೈಸೂರು ಸಿಟಿ.

ಪತ್ರಿಕೋದ್ಯೋಗಿಗಳನ್ನು ಬೀಳ್ಕೊಟ್ಟರು

ಮೊನ್ನೆ ಸಾಯಂಕಾಲ, ಸ್ಥಳೀಯ ಪತ್ರಿಕೋದ್ಯೋಗಿಗಳ ಸಂಘದ ಸದಸ್ಯರು, ಒಂದು ಸತ್ಕಾರಕೂಟವನ್ನು ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಏರ್ಪಡಿಸಿ, ಕಳೆದ ೧೦ ವರ್ಷಗಳಿಂದಲೂ ರಾಜಧಾನಿಯ ತಾಯಿನಾಡು ಪ್ರತಿನಿಧಿಯಾಗಿದ್ದು ಈಗ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುವ ಶ್ರೀ ಎಸ್. ಶ್ರೀನಿವಾಸಮೂರ್ತಿಗಳನ್ನು ಬೀಳ್ಕೊಟ್ಟರು. ಶ್ರೀಗಳಾದ ಅಗರಂರಂಗಯ್ಯನವರು, ಟಿ. ನಾರಾಯಣರವರು, ಕೃಷ್ಣಸ್ವಾಮಿಗಳೂ ನರಸಿಂಹಪಂಡಿತರು ಮಾತನಾಡಿ ಶ್ರೀ॥ ಶ್ರೀನಿವಾಸಮೂರ್ತಿಗಳ ಗುಣಗಾನ ಮಾಡಿದರು. ಸಮಯೋಚಿತವಾಗಿ ಶ್ರೀ ಮೂರ್ತಿಗಳು ಉತ್ತರಕೊಟ್ಟು ಮೈಸೂರು ನಗರದಂತ ಸುಖಮಯವಾದ ಬೇರೊಂದು ಊರನ್ನು ಕಾಣುವುದು ದುಸ್ತರ ಎಂದು ತಿಳಿಸಿದರು.

ಹರಿಕಥೆ

ಮೈಸೂರು ಚಲುವಾಂಬಾ ಅಗ್ರಹಾರದ ಹಿಂಭಾಗದ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ಈ ದಿನ ರಾತ್ರಿ ೯॥ ಗಂಟೆಗೆ ಪ್ರಥಮ ಏಕಾದಶಿ ಪ್ರಯುಕ್ತ ಶ್ರೀ॥ ಗರಣಿ ಕೃಷ್ಣಸ್ವಾಮಯ್ಯಂಗಾರ್‌ರವರು "ಶ್ರೀನಿವಾಸ ಕಲ್ಯಾಣ" ಎಂಬ ಹರಿಕಥೆಯನ್ನು ನಡೆಸುವರು

ಇನ್ನೂ ಐದು ವರ್ಷ ರೇಷನಿಂಗ್ ಜಾರಿ

ಭಾರತ ಸರಕಾರದ ರೇಷನಿಂಗ್ ಸಲಹೆಗಾರರಾದ ಮಿ॥ ಕರ್ಬಿಯವರು ಛೇಟಿಯೊಂದರಲ್ಲಿ ತಿಳಿಸುತ್ತಾ, ಇನ್ನು ೩ ರಿಂದ ೫ ವರ್ಷಗಳ ವರೆಗಾದರೂ ಆಹಾರ ಧಾನ್ಯಗಳ ರೇಷನಿಂಗ್ ಪದ್ಧತಿಯು ಜಾರಿಯಲ್ಲಿರುವುದೆಂದು ತಿಳಿಸಿದ್ದಾರೆ.

ಕಳೆದುಹೋಗಿರುತ್ತದೆ

ತಾ॥ ೧೮-೭-೪೫ ರ ದಿವಸ ಕೃಷ್ಣರಾಜನಗರದಲ್ಲಿರುವ ಡಿ. ಯಂ. ಅಯೋಧ್ಯಾರಾಮಶೆಟ್ಟಿ ಅಂಡ್ ಬ್ರದರ್ಸ್‌ರವರ ಜವಳಿ ಲೈಸನ್ಸು ನಂ. ೨೦೦೩ ಮತ್ತು ಜವಳಿ ಕೋಟಾ ನಂ. ಈ ಲೈಸನ್ಸುಗಳು ಪಾಕೇಟ್ ನಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ರೈಲು ಹತ್ತುವಾಗ ಯಾರೋ ಪಾಕೇಟು ಸಮೇತ ಕದ್ದಿರುತ್ತಾರೆ. ಕದ್ದುಹೋಗಿ ತಕ್ಕ ಲೈಸನ್ಸು ಯಾರಿಗಾದರೂ ಸಿಕ್ಕಿದ್ದಲ್ಲಿ ಕೆಳಗಿನ ವಿಳಾಸಕ್ಕೆ ತಲುಪಿಸಿದರೆ ೫ ರೂಪಾಯಿಗಳ ಬಹುಮಾನವನ್ನು ಕೊಡಲಾಗುವುದು.

ಕೇರ್ ಆಫ್ ಸಾಧ್ವಿ ಆಫೀಸು
ಡಿ. ಸುಬ್ಬಯ್ಯ ರೋಡ್ ಮೈಸೂರು.

ಜರ್ಮನಿ ಭವಿಷ್ಯ ಕುರಿತು ಪ್ರಾಮುಖ್ಯ ತೀರ್ಮಾನ

ತ್ರಿರಾಷ್ಟ್ರ ಮುಖಂಡರು ಈಗಾಗಲೇ ಜರ್ಮನಿಯ ಭವಿಷ್ಯವನ್ನು ಕುರಿತು ಪ್ರಾಮುಖ್ಯ ತೀರ್ಮಾನಗಳನ್ನು ಮಾಡಿರುವುದಾಗಿ ರಾಯಟರ್ ವಿಶೇಷ ವಾರ್ತಾದಾರರು ತಿಳಿಸಿದ್ದಾರೆ. ಮುಖಂಡರ ಮಾತುಕತೆಗಳ ಸಂಬಂಧವಾಗಿ 'ಬದ್ಧತಾಮೌನ' ವನ್ನು ಅಧಿಕಾರಿಗಳು ಏರ್ಪಡಿಸಿದ್ದಾರೆ.

ಜರ್ಮನಿಯ ಬಗ್ಗೆ ರಷ್ಯದ ನೀತಿ ಸ್ಪಷ್ಟವಾಗಿದೆ. ರೈನ್ ನದಿಯಿಂದ ಹಿಡಿದು ಓಡರ್ ನದಿ ವರೆಗೆ ಇರುವ ಜರ್ಮನ್ ನಾಡು ಒಂದೇ ಆಗಿರಬೇಕೆಂದು ರಷ್ಯವು ವಾದ ಮಾಡುತ್ತಿದೆ. ಅಮೇರಿಕಾದವರು ಜರ್ಮನಿಯು ವಿಭಾಗವಾಗಬೇಕೆಂದು ಕೇಳುತ್ತಿದ್ದಾರೆ. ಈ ಅಭಿಪ್ರಾಯಕ್ಕೆ ಬ್ರಿಟನ್ನಿನ ಒಪ್ಪಿಗೆ ಇದೆ.

ಇರಾನಿನಲ್ಲಿರುವ ಬ್ರಿಟಿಷ್ ಮತ್ತು ರಷ್ಯ ಸೈನ್ಯಗಳು ಇನ್ನೂ ಅಲ್ಲಿಯೇ ಇರುವುವು, ಈ ಸಂಬಂಧವಾಗಿ ಇರಾನ್ ಸರಕಾರವು ಮಾಡಿದ ಅವು ವಾಪಸು ಹೋಗಬೇಕೆಂಬ ಸೂಚನೆಯನ್ನು ಬ್ರಿಟಿಷ್ ಮತ್ತು ರಷ್ಯ ಸರಕಾರಗಳು ಯೋಚನೆಮಾಡಿ ಯಾವ ತೀರ್ಮಾನಕ್ಕೂ ಬಂದಿಲ್ಲ

LATEST NEWS

ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ

ಸ್ವಂ. ವ. ಫೋ॥] ಬೆಂಗಳೂರು ೨೧

ಈ ದಿನ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಥಮ ಸಮ್ಮೇಳನ ಸೇರಿತು, ಸಮ್ಮೇಳನ ಸೇರುವುದಕ್ಕೆ ಪೂರ್ವಭಾವಿಯಾಗಿ ಜಿಲ್ಲೆ... ಕಾರರುಗಳ ಒಪ್ಪಿಗೆ ಪಡೆಯಲಾಗಿತ್ತು, ೧... ಘಂಟೆಗೆ ರಾಷ್ಟ್ರೀಯ ಸಾಹಿತ್ಯ ಮತ್ತು ... ಚಿತ್ರಪ್ರದರ್ಶನದ ಆರಂಭೋತ್ಸವವನ್ನು ಶ್ರೀಮತಿ ಕಮಲಾದೇವಿ, ಎಂ. ಎಲ್. ಸಿ ಯವರು ನೆರವೇರಿಸಿದರು, ೧೧ ಘಂಟೆಯ... ದ ೧ ಘಂಟೆವರೆಗೆ ವಿಷಯ ನಿಯಾಮಕ ಸಮಿತಿ ಸಭೆ ನಡೆಯಿತು.

ಸಮ್ಮೇಳನಾಧ್ಯಕ್ಷತೆ ವಹಿಸಬೇಕಾಗಿ... ಆಂಧ್ರ ಮುಖಂಡರಾದ ಶ್ರೀ ಎನ್. ಜಿ. ರಂಗಾರವರು ನಾಳಿದ್ದು ಪ್ರಾತಃಕಾಲ ಆಗಮಿಸುವರು. ಮಾರನೇ ದಿನ ಮೈಸೂರಿಗೆ ಪ್ರಯಾಣ ಮಾಡಲಿರುವರು.

ದಸ್ತಗಿರಿ

ಮೈಸೂರ...

ಮೈಸೂರು ನಗರದ ಪೋಲೀಸಿನವರು ೩೨೩, ೩೦೫ ಮತ್ತು ೧೪೮ ನೆಕ್ಷನ್ನುಪ್ರಕಾರ ಹಿಂದೂ ಮುಸ್ಲಿಂ ಗಲಭೆಗೆ ಕಾರಣರಾದ ಆರುಮಂದಿ ಮಹಮದೀಯರನ್ನೇ ಪೊಬ್ಬನು ರಿವಾಲ್ವರ್ ತೋ... ಕೊಂಡು ದಾಪ್ಪದ್ ಮತ್ತು ನಾಜ ಯೆ... ಬುವರನ್ನು ದಸ್ತಗಿರಿಮಾಡಿದ್ದಾರೆ ಉಳಿ... ನಾಲ್ವರು ಪತ್ತೆಯಿಲ್ಲ.

ವರ್ಷಾಂತ್ಯದಲ್ಲಿ ಜಪಾನು ಯುದ್ಧ ಮುಗಿಯುವುದು

ವರ್ಷಾಂತ್ಯದಲ್ಲಿ ಅಥವಾ ಮುಂದಿನ ವ... ರ್ಷದ ಆದಿ ಭಾಗದಲ್ಲಿ ಜಪಾನ್ ಯುದ್ಧ... ವನ್ನು ಮುಗಿಸುವುದಾಗಿ ಚೀನಾ ಮುಖ್ಯಮಂತ್ರಿ ಡಾ॥ ಟಿ. ವಿ. ಸೂಂಗ್‌ರವರು ಹೇಳಿದ್ದಾರೆ. ಜಪಾನನ್ನು ಸೋಲಿಸಲು ಬೇಕಾಗುವ ಸಾಮಗ್ರಿಗಳ ಸಹಾಯ ಬೇಕೆಂದು ಚಿಯಾಂಗ್ ಕೈಷೇಕರು ಸೂಚಿಸಿದ್ದಾರೆ.

॥ ವಂದೇ ಮಾತರಂ ॥

'ಸಾಧ್ವಿ' ವಾರ್ಷಿಕೋತ್ಸವ

22—7—45 ನೇ ಭಾನುವಾರ ಸಾಯಂಕಾಲ ಆರು ಗಂಟೆಗೆ

ಮೈಸೂರು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಚೇರಿಯಲ್ಲಿ "ಸಾಧ್ವಿ" ಪತ್ರಿಕೆಯ ಮೂರನೇ ವಾರ್ಷಿಕೋತ್ಸವವು ನಡೆಯುವುದು.

'ಬೆಳಕು' ಪತ್ರಿಕಾ ಸಂಪಾದಕರೂ ಶಾಸನಸಭಾ ಸದಸ್ಯರೂ ಆದ **ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ** ಎಂ. ಎ. ಅವರು ಅಧ್ಯಕ್ಷತೆ ವಹಿಸುವರು.

ಚಂದಾದಾರರೆಲ್ಲರೂ ದಯಮಾಡಿಸಬೇಕಾಗಿ ವಿನಂತಿ.

ಅಗರಂ ರಂಗಯ್ಯ.

ಕಾರ್ಯಕ್ರಮ

1. ಪ್ರಾರ್ಥನೆ:—ಶ್ರೀ ಬಿ. ಸಿ. ಕೆ. ಮೂರ್ತಿ ('ನಾಡೆ' ಪ್ರಖ್ಯಾತಿ)
2. ಮಂಗಳಾಚರಣೆ:— ಶ್ರೀ ಹೆಚ್. ಆರ್. ಸೀತಾರಾಮಶಾಸ್ತ್ರಿ
3. ಭಾರತ ವಾಚನ:—ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರು
4. ಪರಿಚಯ.
5. ಭಾಷಣ:— ಶಾಸನಸಭೆಯ ಮಾಜಿ ಉಪಾಧ್ಯಕ್ಷರುಗಳಾದ ಶ್ರೀ ಕೆ. ಸಿ. ...ಯ್ಯ ಬಿ. ಎಲ್. ಎಲ್. ಬಿ. ಮತ್ತು ಶ್ರೀ ಪಿ. ನಾರಾಯಣಸ್ವಾಮಿ ಬಿ. ಎ. ಬಿ. ಎಲ್.
6. ಅಧ್ಯಕ್ಷರ ಭಾಷಣ
7. ಸಂಗೀತ:—ಶ್ರೀಮತಿ ನೀಲಮ್ಮ, ಕರ್ಣಾಟಕ ಪತ್ರಿ.
8. ವಂದನೆ ಮತ್ತು ಪುಷ್ಪತಾಂಬೂಲ.

ಫೋನ್ ನಂ 392 ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೩] ಶನಿವಾರ ೨೧-೭-೪೫ [ಸಂಚಿಕೆ ೨೮೯

ಜರ್ಮನಿ ಭವಿಷ್ಯ ಕುರಿತು – ಮುಖಂಡರ ತೀರ್ಮಾನ

...ಮಾನ್ಯ ರೈತರು ಪ್ರಿ॥ ...ಕಾರವನ್ನು ತಗ್ಗಿಸಿದರು

...ಟ್ಟನನ್ನೂ ಕೊಲ್ಲದೆ ೧೯೪೬ ರ ಜುಲು ...ಯಲ್ಲಿ ಭಾರತದ ರೈತರು ಪ್ರತಿದಿನದ ಆ... ...ಬಲವನ್ನು ಕೆಲವು ದಿನಗಳ ಮಟ್ಟಿ...ಗೆ ಮುಗಿಸಿದ್ದರೆಂದು ಪಂಡಿತ ನೆಹ...ರೂರವರು ಲಾಹೋರಿನಲ್ಲಿ ತಿಳಿಸಿದರು. ...ಗೆ ಒಪ್ಪಿಸಲಾದ ೧೬ ಸಾವಿರ ರೂ. ...ಧಿ ಪೈಕಿ ಅರ್ಧ ಭಾಗವು ಕಮಲಾ ... ಆಸ್ಪತ್ರೆಗೂ, ಉಳಿದ ಅರ್ಧ ಭಾಗ ಸಂಯುಕ್ತ ಪ್ರಾಂತಗಳ ಬಲಿಯಾ ...ಯಲ್ಲಿ ೧೯೪೨ ರಲ್ಲಿ ಆದ ಗಲಾಟೆಯ ...ಧಿಕಾರಿಗಳು ನಾಶ ಪಡಿಸಿದ ಹಳ್ಳಿ ಜ... ...ಗುಡಿಸಲುಗಳನ್ನು ಪುನಃ ಕಟ್ಟುವುದ... ...ವಿನಿಯೋಗವಾಗುವುದು.

ವಿದೇಶಗಳಲ್ಲಿ ಪಂಡಿತ ನೆಹರೂರ ಪ್ರವಾಸ

ಪಂಡಿತ ಜವಾಹರಲಾಲ್ ನೆಹರೂರವ... ಯೂರೋಪ್ ಮತ್ತು ಅಮೇರಿಕಾಗಳಲ್ಲಿ ...ಸ ಕೈಗೊಳ್ಳುವವರಾಗಿದ್ದಾರೆ. ಯು... ...ಕ್ತ ಯೂರೋಪಿನಲ್ಲಿ ಉಂಟಾಗಿರುವ ...ಸ್ಥಾನಗಳನ್ನು ಅವರು ನೋಡತಕ್ಕ... ...ವರು. ಅಮೇರಿಕಾಕ್ಕೆ ಹೋಗಿ ತಮ್ಮ... ...ದರಿ ಶ್ರೀಮತಿ ವಿಜಯಲಕ್ಷ್ಮಿಯನ್ನು ...ವರು.

ವಿದ್ಯಾರ್ಥಿ ಕಾಂಗ್ರೆಸ್

...ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಸಾ... ...ನ್ಯ ಸದಸ್ಯರ ಸಭೆಯು ಚಾಮುಂಡಿ... ...ಯಲ್ಲಿರುವ ಸಹಕಾರ ಭವನದಲ್ಲಿ ೨೭ ...ಶುಕ್ರವಾರ ಸಂಜೆ ೬ ಗಂಟೆಗೆ ನಡೆಯು... ಸಂಘದ ಸದಸ್ಯರಾಗಲು ೨೫ ನೇ ...ತೇದಿ ಕೊನೆಯ ದಿನ ಮತ್ತು ಸಂಘದ ...ನಿರ ವರ್ಗದ ಚುನಾವಣೆಯಲ್ಲಿ ಭಾಗ... ...ಸುವವರು ಮತ್ತು ನಿರ್ಣಯಗಳನ್ನು ...ಕಳಿಸುವವರು ೨ ದಿನ ಮುಂಚೆ ಕಾರ್ಯಾ... ...ಲಕ್ಕೆ ತಿಳಿಸಬೇಕು.

ಪತ್ರಿಕೋದ್ಯೋಗಿಗಳನ್ನು ಬೀಳ್ಕೊಟ್ಟರು

ಮೊನ್ನೆ ಸಾಯಂಕಾಲ, ಸ್ಥಳೀಯ ಪತ್ರಿಕೋದ್ಯೋಗಿಗಳ ಸಂಘದ ಸದಸ್ಯರು, ಒಂದು ಸತ್ಕಾರಕೂಟವನ್ನು ಶ್ರೀ ಚಾಮುಂಡೇಶ್ವರಿ ಭವನದಲ್ಲಿ ಏರ್ಪಡಿಸಿ, ಕಳೆದ ೧೦ ವರ್ಷಗಳಿಂದಲೂ ರಾಜಧಾನಿಯ ತಾಯಿನಾಡು ಪ್ರತಿನಿಧಿಯಾಗಿದ್ದು ಈಗ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿರುವ ಶ್ರೀ ಎನ್. ಶ್ರೀನಿವಾಸಮೂರ್ತಿಗಳನ್ನು ಬೀಳ್ಕೊಟ್ಟರು. ಶ್ರೀಗಳಾದ ತಿಗಡೂರಂಗಯ್ಯನವರು, ಟಿ. ನಾರಾಯಣರವರು, ಕೃಷ್ಣಸ್ವಾಮಿಗಳೂ ಪರಿಸಂಘಪಂಡಿತರು ಮಾತನಾಡಿ ಶ್ರೀ॥ ಶ್ರೀನಿವಾಸಮೂರ್ತಿಗಳ ಗುಣಗಾನ ಮಾಡಿದರು. ಸಮಯೋಚಿತವಾಗಿ ಶ್ರೀ ಮೂರ್ತಿಗಳು ಉತ್ತರಕೊಟ್ಟು ಮೈಸೂರು ನಗರದಂತ ಸುಂದರ ಯವಾದ ಜೀರೊಂದು ಊರನ್ನು ಕಾಣುವುದು ದುಸ್ತರ ಎಂದು ತಿಳಿಸಿದರು.

ಹರಿಕಥೆ

ಮೈಸೂರು ಚಲುವಾಂಬಾ ಅಗ್ರಹಾರದ ಹಿಂಭಾಗದ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಯವರ ದೇವಸ್ಥಾನದಲ್ಲಿ ಈ ದಿನ ರಾತ್ರಿ ೯॥ ಗಂಟೆಗೆ ಪ್ರಥಮ ಏಕಾದಶಿ ಪ್ರಯುಕ್ತ ಶ್ರೀ॥ ಗರಣಿ ಕೃಷ್ಣಸ್ವಾಮಯ್ಯಂಗಾರ್‌ರವರು "ಶ್ರೀನಿವಾಸ ಕಲ್ಯಾಣ" ಎಂಬ ಹರಿಕಥೆಯನ್ನು ನಡೆಸುವರು

ಇನ್ನೂ ಐದು ವರ್ಷ ರೇಷನಿಂಗ್ ಜಾರಿ

ಭಾರತ ಸರಕಾರದ ರೇಷನಿಂಗ್ ಸಲಹೆಗಾರರಾದ ಮಿ॥ ಕರ್ಬಿಯವರು ಭೇಟಿಯೊಂದರಲ್ಲಿ ತಿಳಿಸುತ್ತಾ, ಇನ್ನು ೩ ರಿಂದ ೫ ವರ್ಷಗಳ ವರೆಗಾದರೂ ಆಹಾರ ಧಾನ್ಯಗಳ ರೇಷನಿಂಗ್ ಪದ್ಧತಿಯು ಜಾರಿಯಲ್ಲಿರುವುದೆಂದು ತಿಳಿಸಿದ್ದಾರೆ.

ಕಳೆದುಹೋಗಿರುತ್ತದೆ

ತಾ॥ ೧೮-೭-೪೫ ರ ದಿವಸ ಕೃಷ್ಣರಾಜನಗರದಲ್ಲಿರುವ ಡಿ. ಯ. ಅಯೋಧ್ಯಾರಾಮಶೆಟ್ಟಿ ಅಂಡ್ ಬ್ರದರ್ಸ್‌ರವರ ಜವಳಿ ಲೈಸನ್ಸು ನಂ. ೨೦೦೩ ಮತ್ತು ಜವಳಿ ಕೋಟ ನಂ. ಈ ಲೈಸನ್ಸುಗಳು ಪಾಕೀಟ ನಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ಸೈಲುತಪ್ಪಿನಾಗ ಯಾರೋ ಪಾಕೀಟು ಸಮೇತ ಕದ್ದಿರುತ್ತಾರೆ. ಕಳ್ಳುಹೋಗಿರತಕ್ಕ ಲೈಸನ್ಸು ಯಾರಿಗಾದರೂ ಸಿಕ್ಕಿದ್ದಲ್ಲಿ ಕೆಳಗಿನ ವಿಳಾಸಕ್ಕೆ ತಲುಪಿಸಿದರೆ ೫ ರೂಪಾಯಿಗಳ ಬಹುಮಾನವನ್ನು ಕೊಡಲಾಗುವುದು.

ಕೇರ್ ಆಫ್ ಸಾಧ್ವಿ ಆಫೀಸು
ಡಿ. ಸುಬ್ಬಯ್ಯ ರೋಡ್ ಮೈಸೂರು.

ಜರ್ಮನಿ ಭವಿಷ್ಯ ಕುರಿತು ಪ್ರಾಮುಖ್ಯ ತೀರ್ಮಾನ

ತ್ರಿರಾಷ್ಟ್ರ ಮುಖಂಡರು ಈಗಾಗಲೇ ಜರ್ಮನಿಯ ಭವಿಷ್ಯವನ್ನು ಕುರಿತು ಪ್ರಾಮುಖ್ಯ ತೀರ್ಮಾನಗಳನ್ನು ಮಾಡಿರುವುದಾಗಿ ರಾಯಟರ್ ವಿಶೇಷ ವಾತ್ತಾದಾರರು ತಿಳಿಸಿದ್ದಾರೆ. ಮುಖಂಡರ ಮಾತುಕತೆಗಳ ಸಂಬಂಧವಾಗಿ 'ಭದ್ರತಾಮೌನ' ವನ್ನು ಅಧಿಕಾರಿಗಳು ಏರ್ಪಡಿಸಿದ್ದಾರೆ.

ಜರ್ಮನಿಯ ಬಗ್ಗೆ ರಷ್ಯದ ನೀತಿ ಸ್ಪಷ್ಟವಾಗಿದೆ. ರ್ಹೈನ್ ನದಿಯಿಂದ ಹಿಡಿದು ಓಡರ್ ನದಿ ವರೆಗೆ ಇರುವ ಜರ್ಮನ್ ನಾಡು ಒಂದೇ ಆಗಿರಬೇಕೆಂದು ರಷ್ಯವು ವಾದ ಮಾಡುತ್ತಿದೆ. ಅಮೇರಿಕಾದವರು ಜರ್ಮನಿಯ ವಿಭಾಗವಾಗಬೇಕೆಂದು ಕೇಳುತ್ತಿದ್ದಾರೆ ಈ ಅಭಿಪ್ರಾಯಕ್ಕೆ ಬ್ರಿಟನ್ನಿನ ಒಪ್ಪಿಗೆ ಇದೆ

ಇರಾನಿನಲ್ಲಿರುವ ಬ್ರಿಟಿಷ್ ಮತ್ತು ರಷ್ಯ ಸೈನ್ಯಗಳು ಇನ್ನೂ ಅಲ್ಲಿಯೇ ಇರುವುವು, ಈ ಸಂಬಂಧವಾಗಿ ಇರಾನ್ ಸರಕಾರವು ಮಾಡಿದ ಅವು ವಾಪಸು ಹೋಗಬೇಕೆಂಬ ಸೂಚನೆಯನ್ನು ಬ್ರಿಟಿಷ್ ಮತ್ತು ರಷ್ಯ ಸರಕಾರಗಳು ಯೋಚನೆಮಾಡಿ ಯಾವ ನಿರ್ಣಯಕ್ಕೂ ಬಂದಿಲ್ಲ.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

ನೋಟೀಫಿಕೇಷನ್

ಇದರಿಂದ ತಿಳಿಯಪಡಿಸುವುದೇನೆಂದರೆ:—

ಇದೇ ಮಾಹೆ ೨೬ ನೇ ತಾರೀಖು ...ಯಿಂದ ಹೊಸ ರೇಷನ್ ಕಾರ್ಡುಗಳು ...ನ ರೇಷನ್ ಡಿಪೋಗಳಲ್ಲಿಯೇ ಹಂಚ...ಲಾಗುತ್ತದೆ.

ರೇಷನ್ ಕಾರ್ಡ್ ಹೋಲ್ಡರುಗಳು ...ಜುಲೈ ತಿಂಗಳ ಪಡಿಬತ್ಯವನ್ನು ಚಾಲ್ತಿಯಲ್ಲಿರುವ ರೇಷನ್ ಕಾರ್ಡಿನಲ್ಲಿ ಪಡೆದು ಡಿಪೋರೇಷನ್ ಕೊಟ್ಟಿರುವ ...ರವರಿಗೆ ಅದನ್ನು ವಾಪಸ್ಸುಮಾಡಿ ಹೊಸ ...ಕಾರ್ಡನ್ನು ಪಡೆಯತಕ್ಕದ್ದು.

...ರೇಷನ್ ಹೋಲ್ಡರುಗಳು ಹೊಸ ...ನ ಕಾರ್ಡಿನಲ್ಲೂ ಮತ್ತು ಇಂಡೆಕ್ಸ್ ...ಕಾರ್ಡಿನಲ್ಲೂ ಸಹಿ ದಾಖಲೆಗಾಗಿ ರುಜು ...ಹಾಕತಕ್ಕದ್ದು.

ತಮ್ಮ ಕಾರ್ಡಿನಲ್ಲಿ ಬದಲಾವಣೆ ಏನಾದರೂ ಆಗಬೇಕಾದ ಸಂದರ್ಭದಲ್ಲಿ ಅಂತಹುದನ್ನು ಸಂಬಂಧಪಟ್ಟ ಫುಡ್ ಇನ್ಸ್ಪೆಕ್ಟರ್‌ಗೆ ತಿಳಿಸಿದ್ದಲ್ಲಿ ಅವರು ವಿಚಾರಣೆ ನಡೆಸಿ ಬದಲಾವಣೆ ಮಾಡುವರು.

ಸಹಿ:- ಟಿ. ಪಿ. ರೆಡ್ಡಿ.
ರೇಷನಿಂಗ್ ಆಫೀಸರು,
ಮೈಸೂರು ಸಿಟಿ.

LATEST NEWS

ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನ

ಸ್ವಂ.ಮು.ಫೋ॥] ಬೆಂಗಳೂರು ೨೧.

ಈ ದಿನ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಥಮ ಸಮ್ಮೇಳನ ಸೇರಿತು, ಸಮ್ಮೇಳನ ಸೇರುವುದಕ್ಕೆ ಪೂರ್ವಭಾವಿಯಾಗಿ ಜಿಲ್ಲಾಧಿಕಾರಿಗಳ ಒಪ್ಪಿಗೆ ಪಡೆಯಲಾಗಿತ್ತು, ೧೦ ಘಂಟೆಗೆ ರಾಷ್ಟ್ರೀಯ ಸಾಹಿತ್ಯ ಮತ್ತು ಕಲಾಪ್ರದರ್ಶನದ ಆರಂಭೋತ್ಸವವನ್ನು ಶ್ರೀಮತಿ ಕಮಲಾದೇವಿ, ಎಂ. ಎಲ್. ಸಿ ಯವರು ನೆರವೇರಿಸಿದರು, ೧೧ ಘಂಟೆಯಿಂದ ೧ ಘಂಟೆವರೆಗೆ ವಿಷಯ ನಿಯಾಮಕ ಸಮಿತಿ ಸಭೆ ನಡೆಯಿತು.

ಸಮ್ಮೇಳನಾಧ್ಯಕ್ಷತೆ ವಹಿಸಬೇಕಾಗಿದ್ದ ಆಂಧ್ರ ಮುಖಂಡರಾದ ಶ್ರೀ ಎನ್. ಜಿ. ರಂಗಾರವರು ಸಾಕಷ್ಟು ಪ್ರಾತಃಕಾಲ ಆಗಮಿಸುವರು. ಮಾರನೇ ದಿನ ಮೈಸೂರಿಗೆ ಪ್ರಯಾಣ ಮಾಡಲಿರುವರು.

ದಸ್ತಗಿರಿ

ಮೈಸೂರು

ಮೈಸೂರು ನಗರದ ಪೋಲೀಸಿನವರು ೩೩೩, ೩೩೪ ಮತ್ತು ೧೪೮ ನೇ ಸೆಕ್ಷನ್ನುಗಳ ಹಿಂದೂ ಮುಸ್ಲಿಂ ಗಲಭೆಗೆ ಕಾರಣರಾದ ಆರುಮಂದಿ ಮಹಮದೀಯರಮೇಲೆ ಮೊಕದ್ದಮೆ ರಿಜಿಸ್ಟರ್‌ಮಾಡಿಕೊಂಡು ದಾವೂದ್ ಮತ್ತು ಖಾಜ ಪೆಂಬುವರನ್ನು ದಸ್ತಗಿರಿಮಾಡಿದ್ದಾರೆ ಉಳಿದ ನಾಲ್ವರು ಪತ್ತೆಯಿಲ್ಲ.

ವರ್ಷಾಂತ್ಯದಲ್ಲಿ ಜಪಾನು ಯುದ್ಧ ಮುಗಿಯುವುದು

ವರ್ಷಾಂತ್ಯದಲ್ಲಿ ಅಥವಾ ಮುಂದಿನ ವರ್ಷದ ಆದಿ ಭಾಗದಲ್ಲಿ ಜಪಾನ್ ಯುದ್ಧವನ್ನು ಮುಗಿಸುವುದಾಗಿ ಚೀನಾ ಮುಖ್ಯಮಂತ್ರಿ ಡಾ॥ ಟಿ. ವಿ. ಸೂಂಗ್‌ರವರು ಹೇಳಿದ್ದಾರೆ. ಜಪಾನನ್ನು ಸೋಲಿಸಲು ಚೀನಾಕ್ಕೆ ಸಾಮಗ್ರಿಗಳ ಸಹಾಯ ಬೇಕೆಂದು ಚಿಯಾಂಗ್ ಕೈಷೇಕರು ಸೂಚಿಸಿದ್ದಾರೆ.

॥ ವಂದೇ ಮಾತರಂ ॥

'ಸಾಧ್ವಿ' ವಾರ್ಷಿಕೋತ್ಸವ

22—7—45 ನೇ ಭಾನುವಾರ ಸಾಯಂಕಾಲ ಆರು ಗಂಟೆಗೆ
ಮೈಸೂರು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿಯಲ್ಲಿ "ಸಾಧ್ವಿ" ಪತ್ರಿಕೆಯ
ಮೂರನೇ ವಾರ್ಷಿಕೋತ್ಸವವು ನಡೆಯುವುದು.
'ಜೀವನ' ಪತ್ರಿಕಾ ಸಂಪಾದಕಿಯೂ ಶಾಸನಸಭಾ ಸದಸ್ಯರೂ ಆದ
ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಎಂ. ಎ. ಅವರು ಅಧ್ಯಕ್ಷತೆ ವಹಿಸುವರು.
ಬಂಧುಬಾಂಧವರೆಲ್ಲರೂ ದಯಮಾಡಿಸಬೇಕಾಗಿ ವಿನಂತಿ.

ಅಗರಂ ರಂಗಯ್ಯ.

ಕಾರ್ಯಕ್ರಮ

1. ಪ್ರಾರ್ಥನೆ—ಶ್ರೀ ಬಿ. ಎಸ್. ಕೆ. ಮೂರ್ತಿ ('ವಾಣಿ' ಪ್ರಕಾಶಕ)
2. ಮಂಗಳಾರಾಧನೆ— ಶ್ರೀ ಹೆಚ್. ಆರ್. ಸೀತಾರಾಮಯ್ಯ
3. ಭಾರತ ವಾಚನ—ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾವ್.
4. ಪರಿಚಯ.
5. ಭಾಷಣ — ಪೌರಸಭೆಯ ನಗರ ಉಪಾಧ್ಯಕ್ಷರುಗಳಾದ ಶ್ರೀ ಕೆ. ಪುಟ್ಟಯ್ಯ ಬಿ. ಎ. ಎಲ್. ಎಲ್. ಬಿ. ಮತ್ತು ಶ್ರೀ ಪಿ. ನಾರಾಯಣಸ್ವಾಮಿ ಬಿ. ಎ. ಬಿ. ಎಲ್.
6. ಅಧ್ಯಕ್ಷರ ಭಾಷಣ
7. ಸಂಗೀತ—ಶ್ರೀಮತಿ ಸೀತಮ್ಮ ಕರ್ಣಾಟಕ ...
8. ವಂದನೆ ಮತ್ತು ಪುಷ್ಪತಾಂಬೂಲ.

ಹಿಂದಿ ಸರ್ವಕಾರವಾದ ಚಳವಳಿ

ಮೈಸೂರು ಪ್ರಜಾಸಭೆಯ ಕಾರ್ಯಕ್ರಮದ ಪ್ರಕಾರ ಹಿಂದಿ ನಾಟಕ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ.

ವಿದ್ಯಾರ್ಥಿಗಳಿಗೆ ಸನ್ಮಾನ

ಕಾಂಗ್ರೆಸ್ಸಿನ ಕಾರ್ಯಕ್ರಮ

ಶ್ರೀ ... ಕಂಗಿರು

ಸಂಘ, ಮೈಸೂರು

ಶ್ರೀ ... ತಾತ್ಪರ್ಯ ...

ಜನತಾ ಟಾಕೀಸ್

20-7-45 ರಿಂದ

ಜೋನೆಸ್ ಹಂಚಿಕೆ

ಸ್ವಂ ಸು. ಚಾಮರಾಜನಗರ ೧... ಇಲ್ಲಿಯ ಕಟ್ಟೂರ ಮಾರ್ಕೆಟ್ಟಿನಲ್ಲಿ ಜೋನಸ್ ಹಂಚಿಕೆಯಾಗುತ್ತಿದೆ. ಈ ಹಂಚಿಕೆಯು ಸಮರ್ಪಕವಾಗಿಲ್ಲವೆಂದೂ, ಸರಿಯಾದ ರೈತರಿಗೆ ಸಲ್ಲಬೇಕಾದ ಜೋನಸ್ಸು ಹಲವರ ಸ್ವಂತ ಉಪಯೋಗಕ್ಕೆ ಹೋಗುತ್ತಿದೆಯೆಂದೂ, ಹೆಸರು, ಲೆಕ್ಕಪತ್ರಗಳ ವಿಚಾರದಲ್ಲಿ ತಪ್ಪಿದಂತಿರುವ ಹಾಗೂ ನಿಜವಾದ ರೈತರಿಗೆ ನಿಜವಾಗಿ ಸಲ್ಲಬೇಕಾದ ಜೋನಸ್ಸು ಹಿಡಿಯಲ್ಪಡುತ್ತಿದೆಯೆಂದೂ ದೂರುಗಳಿದ್ದುವೆ. ಈ ವಿಚಾರದಲ್ಲಿ ಸಂಬಂಧಪಟ್ಟವರು ಪರಿಶೀಲನೆ ನಡೆಸಬೇಕೆಂದು ರೈತರು ಅಭಿಪ್ರಾಯಪಡುತ್ತಿದ್ದಾರೆ.

UNIVERSITY OF MYSORE

Office of the University of Mysore,

Mysore Dated 17th July 1945 G. No. 4.934/44-45.

NOTIFICATION

The 27th Annual Convocation of the University of Mysore will be held in the **Jaganmohan Palace, Mysore, on Monday the 22nd October 1945, at 10 a. m.**

Candidates eligible for Degrees may obtain forms of application (IN PERSON or IN ABSENTIA) from the HEADS OF COLLEGES IN WHICH THEY STUDIED LAST FOR THE DEGREE EXAMINATION. The application forms must be sent to the Registrar, University of Mysore, Mysore, so as to reach him **on or before Friday the 21st Sep. 1945.**

By Order,

D. S. Gordon,

Registrar

೨೨-೭-೧೯೪೫ ನೇ ಭಾನುವಾರ ಸಂಜೆ ೭ ಗಂಟೆಗೆ

ಮೈಸೂರು ಟೌನ್‌ಹಾಲಿನಲ್ಲಿ

ಮೈಸೂರು ನಾಟಕ ಸಂಘವು

ವಿದ್ಯಾರ್ಥಿಗಳ ಸಹಾಯ ನಿಧಿಗಾಗಿ

ಇಂದೂರು ರಾಣಿ

ಅಹಲ್ಯಾಬಾಯಿ

ಎಂಬ ನಾಟಕವನ್ನು ಅಭಿನಯಿಸುವುದು.

ಮಹಾಜನರೂ ಸ್ಥಳೀಯ ಸ್ಟೇಷನ್ ಮತ್ತು ಈಗಿನ ವಿದ್ಯಾರ್ಥಿಗಳೂ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಪ್ರವೇಶಧನ: —

ರೂ. ೫, ೩, ೨, ಮತ್ತು ರೂ. ೧ ೮ ೦ ... ಆಣೆ ೪ ಆಣೆ

ವಿ. ಪಿ. ನಂಜುಂಡಯ್ಯ,

ಸೆಕ್ರೆಟರಿ.

ಲಕ್ಷ ರೂ. ಬೆಲೆ ಉಂಗಿಗಳ ಪತ್ತೆ

ಮದ್ರಾಸ್ ರೈಲ್ವೆ ಸ್ಟೇಷನ್ನಿನಲ್ಲಿ ಮೊನ್ನೆ ಪೋಲೀಸರು ಪಶ್ಚಿಮ ಘಟ್ಟ ಪ್ರಾಂತ್ಯದಿಂದ ಹೊರಕ್ಕೆ ಸಾಗುತ್ತಿದ್ದ ಸುಮಾರು ೧ ಲಕ್ಷ ರೂ ಬೆಲೆಯಾಗುವ ಉಂಗಿಗಳನ್ನು ಪತ್ತೆಮಾಡಿದರು. ತಮ್ಮ ಹಾಸಿಗೆಗಳಲ್ಲಿ ಅವುಗಳನ್ನು ಬಚ್ಚಿಟ್ಟುಕೊಂಡು ಹೋಗುತ್ತಿದ್ದ ೪೦ ಜನರ ವಸ್ತುಗಳು ಆಗಿವೆ.

ಸ್ಪೇನಿನಲ್ಲಿ ರಾಜತ್ವ

ಸ್ಪೇನಿನಲ್ಲಿ ರಾಜಪ್ರಭುತ್ವವು ಏರ್ಪಾಡಾಗುವುದಾಗಿದೆ. ತಮ್ಮ ಅಧಿಕಾರ ಪಟ್ಟ ತೀರಿದ ನಂತರ, ರಾಜಪ್ರಭುತ್ವ ಬರಲು ಏರ್ಪಾಡು ನಡೆಸುವುದಾಗಿ ಜನರಲ್ ಫ್ರಾಂಕೊರವರು ತಿಳಿಸಿದ್ದಾರೆ.

ಗೌರ್ವರರೊಡನೆ ವೇವ್ಹ ಸಮಾಲೋಚನೆ

ಶೀಘ್ರದಲ್ಲಿಯೇ ವೈಸರಾಯ್ ವೇವಲ್‌ರವರು ಸಿಮ್ಲಾ ಸಮ್ಮೇಳನ ಮತ್ತು ಅದರ ಪರ್ಯವಸಾನದ ವಿಷಯ ಸಮಾಲೋಚನೆ ನಡೆಸುವರು. ... ಯ ಬಂದಿಗಳ ಬಿಡುಗಡೆ, ಮಹಾ ... ವನೆ ಮತ್ತು ಇತರ ವಿಷಯಗಳ ... ಸಯೂ ಆಗುವುದು. ಈ ಸಭೆಯ ... ವರ್ಣನವನ್ನು ವೈಟ್ ಹಾಲಿಗೆ ... ವುದು.

೩೦ ಲಕ್ಷ ಜರ್ಮನರ ಬೆ... ಗುರುತು

ಅಮೆರಿಕನ್ನರು ಹಿಡಿದಿರುವ ಜ... ಯಲ್ಲಿ, ಅಧಿಕಾರಿಗಳು ೩೦ ಲಕ್ಷ ಜ... ರ ಬೆರಳು ಗುರುತುಗಳನ್ನು ತೆಗೆದುಕೊ... ಳ್ಳುವವರಾಗಿದ್ದಾರೆ.

ನಂ· 15 44–45. ತಾ. 10-7-19...

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ :–

ನೋಟಿಫಿಕೇಷನ್

ಇದರಿಂದ ಮೈಸೂರು ನಗರದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆ:

1945 ನೇ ಆಗಸ್ಟ್ ಒಂದನೇ ತಾರೀಖಿನಿಂದ ಈ ಕೆಳಗೆ ನಮೂದಿಸಿರುವ ... ಕಾರ್ಡುಗಳು ಮತ್ತು ಕೂಪನುಗಳು ಮಾತ್ರ ಮೈಸೂರು ನಗರದಲ್ಲಿ ಚಾಲ್ತಿ... ಇರುವುವು.

1. 1945 ನೇ ಆಗಸ್ಟ್ ಒಂದನೇ ತಾರೀಖಿನಿಂದ ಕೊಡಲ್ಪಡುವ ಹೊಸ ... ಕಾರ್ಡುಗಳು

2. 1944 ನೇ ನವಂಬರ್‌ನಿಂದ ಈಚೆಗೆ ಕೊಟ್ಟಿರುವ ರೇಷನ್ ಕಾರ್ಡುಗಳು ಆ... 1945 ರಿಂದ ಒಂದು ತಿಂಗಳು ಮಾತ್ರ ಚಾಲ್ತಿಯಲ್ಲಿರುವುವು.

ಅಂತವರು ತಮ್ಮ ಹೊಸ ರೇಷನ್ ಕಾರ್ಡುಗಳನ್ನು ಆಗಸ್ಟ್ ೧೫ ರ ಒಳಗಾಗಿ ... ಮಾಡೇ ಅಸಿಸ್ಟೆಂಟ್‌ಗಳಿಗಾಗಿ ತಯಾರು ಫುಡ್ ಇನ್ಸ್‌ಪೆಕ್ಟರ ಆಫೀಸಿನಲ್ಲಿ ಪಡೆಯತಕ್ಕ...

3. ರೇಷನಿಂಗ್ ಆಫೀಸರಿಂದಲೂ ಮತ್ತು ಅಸಿಸ್ಟೆಂಟ್ ರೇಷನಿಂಗ್ ಆಫೀಸ... ರಿಂದಲೂ ಕೊಡಲ್ಪಟ್ಟಿರುವ ತಾತ್ಕಾಲಿಕ ರೇಷನ್ ಕಾರ್ಡುಗಳ ಕಾಲಾವಧಿ ೧-... ರಿಂದ ಮುಂದಕ್ಕೆ ವಿಸ್ತರಿಸಲ್ಪಟ್ಟಿದ್ದಲ್ಲಿ ಚಾಲ್ತಿಯಲ್ಲಿರುವುವು

4. ಸ್ಪೆಷಲ್ ಕೂಪನ್ನುಗಳು.

ಸಹಿ :–ಟಿ. ವಿ. ರೆಡ್ಡಿ

ರೇಷನಿಂಗ್ ಆಫೀಸರು, ಮೈಸೂ...

ಭದ್ರಾವತಿಯಲ್ಲಿ ತಯಾರಾಗುತ್ತಿರುವ

ಮೈಸೂರು ಉಕ್ಕಿನ ಸಾಮಾನುಗಳನ್ನೇ ಉಪಯೋಗಿಸಿ!

ಶ್ರೇಷ್ಠವಾದ ಕಬ್ಬಿಣದಿಂದ ನಿಪುಣರಾದ ಸೀಮೆಯ ಕೆ... ಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುತ್ತವೆ

ಸಾಮಾನುಗಳ ವಿವರ :

ಗಾಡಿಪಟ್ಟಿ ಅಥವಾ ಹಳಿಗಳು, ದುಂಡು ಮತ್ತು ಚದುರ ಸ... ಗಳು, ಕೋನಕಂಬಿಗಳು (Angles), ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು ಮತ್ತು ಬೇಲಿ ಪಟ್ಟಿಗಳು

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯು...

ಮಾದರಿಯಾದ ಗುಣವುಳ್ಳವು ಬಹುಕಾಲ ಬಾಳಿಕೆ ಬರುತ್ತವೆ	ಮೈಸೂರಿನವಾಗಿರುವುದರಿಂದ ಬೆಲೆಯು ಹೊಂದಿಕೊಳ್ಳುತ್ತ...

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ

(ಮೈಸೂರು ಸರ್ಕಾರ)

ಭದ್ರಾವತಿ (ಮೈಸೂರು ಸ್ಟೇಟ್ ರೈಲ್ವೆ)

ಫೋನ್ ನಂ 392 ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು



ಸಂಪುಟ ೧] ಭಾನುವಾರ ೨೨-೭-೪೫ [ಸಂಚಿಕೆ ೧

ಪ್ರಾಂತಗಳಲ್ಲಿ ಪುನಃ ಮಂತ್ರಿಮಂಡಲ ಸ್ಥಾಪನೆ

ಶ್ರೀ

ಶಿಷ್ಯಿಯ ವರ್ಷ ವರ್ಧಂತಿ ಯುತ್ಸವ

ಇಂದು ಸಾಧ್ವಿಗೆ ಜನ್ಮದಿನವಾ
ದಜಾಯಿಕವಿಲ ವಿಬುಧರ
ಒಡನೊಂದೆದೆ ಸೇರಿ ದೇಶಾಭ್ಯು
ದಯವನು ಕೋರಿ।
ಇಂದಿನಾ ಕರ್ತವ್ಯವನು ಸನು
ದ ಮುಂದಿನ ಕಾರ್ಯವನು ಸಲ
ದೆ ಸೂಚಿಸಿ ಪಠಸುವುದು
ಸೌಹಾರ್ದಭಾವದಲಿ ||೧||
ಕೊಳಗುವೀ ಸಭೆಯಗ್ರ ಪೀಠದೊ
ಲಪಿಸಿಂ ಲಕ್ಷ್ಮಮ್ಮಂಜಿಯರು ತಾವ್
ಸಿದ್ಧರು ಸರಸತಿಯನಲ್ಮೆಯಿ ಪಡೆ
ದರಗ್ರಣಿಯರ್;
ಇಳೆಯೊಳಾ ಸರಸತಿಗೆ ಲಕ್ಷ್ಮಿಗೆ
ಯದಿಲ್ಲವೆನುತ್ತೆ ಬರಿವೇ
ಘನರ ನುಡಿಯಿವಂನಾದುದಸತ್ಯ
ವಾದಯಲು ||೨||
ನಾದಿಗಾನ್ನಾಯುವ ವಿಧಾಯಿಸೆ
ಧಿ ವಡೆದಿಹ ಸಭೆಯೊಳವರಲಿ
ಡು ವಧುವರ ಕುಲದೊಳೆಸೆವ
ಬಲುಸವಸ್ಯೆಯರು।
ನಾಡೆ ತಮ್ಮನುಭವದ ಸಾಧ್ವಿಗೆ
ದೇಶಾಭ್ಯುದಯವೆಸಗರು
ಡುವೆವು ಜಗದಂಬೆಯಿವರುದ್ಯ
ಮಕೆ ಫಲಗುದಲಿ ||೩||
ಭಾರತಾಪನಿಯೇಳ್ಗೆವಡೆಯಲಿ
ರಕೇಯರ ಜಯ್ಕೆ ಫಲಿಸಲಿ
ರೆವ್ವೆಯ ಮುದ್ದುಗನ್ನಡವವರು
ವಿಜಯಿಸಲಿ।
ಮೀರಿದಾ ಸಂಗ್ರಾಮನನ್ನಯ
ಧಾರಿಣಿ ತಣ್ಪುಗೊಳ್ಳಲಿ
ಠವಣ ಜಯ ಚಾಮುಂ
ಡೇಂದ್ರರು ವಿನರ್ಧಿಸಲಿ ||೪||
ಮಂಗಳವು ಸಮುದ್ರಿಸುಗೆ ಸಾಧ್ವಿಗೆ
ಗಳವು ವಾಚಕರ ನಿಕರಕೆ
ಗಳವು ಸಕಲಾಪ್ತ ವರ್ಗಕೆ
ಮಂಗಳವು ಜಗಕೆ।
ಮಂಗಳವು ಕರ್ನಾಟ ದೇಶಕೆ
ಗಳವು ಯದು ಭೂಪ ವಂಶಕೆ
ಗಳವು ವರ ಪತ್ರಿಕೋದ್ಯಮಿ
ವೃಂದಕನುದಿನವು ||೫||

ಆಸ್ಥಾನ ಮಹಾ ವಿದ್ವಾನ್,
ನಂಜನಗೂಡು ಶ್ರೀಕಂಠಶಾಸ್ತ್ರೀ

ವರದಕ್ಷಿಣೆ ಅಪಾದನೆ

ಧ್ ಪ್ರಾಂತದಲ್ಲಿ ಜಾರಿಗೆ ತರಲಾಗಿ
ವರದಕ್ಷಿಣೆ ನಿರೋಧದ ಶಾಸನದ ಪ್ರ
ಮೊದಲನೆ ಮೊಕದ್ದಮೆಯನ್ನು ಕಂಡಾ
ಹೂಡಲಾಗಿದೆ. ಈ ಸಂದರ್ಭ
ವರನು ೩ ಸಾವಿರ ರೂ. ಗಳನ್ನು ವ
ನ ತಂದೆಯಿಂದ ತೆಗೆದುಕೊಂ
ನು. ವಿಶೇಷ ನ್ಯಾಯಾಸ್ಥಾನ ಇದ
ಏರ್ಪಡಿಸಲಾಗಿದೆ.

ಭೂಮಿಯಲ್ಲಿ ಬೆಳೆ

ಕ್ಷಿಣ ಆಫ್ರಿಕಾದಲ್ಲಿರುವ ಕಲಹರಿ
ಭೂಮಿಯ ಮೇಲೆ ನೀರು ಹಾಯಿಸಿ
ಕಲ್ಪಾಗಿ ಮಾಡಿ ಬೆಳೆ ತೆಗೆಯಲು ಸಾ
ಎಂಬ ವಿಷಯವನ್ನು ಪರಿಶೀಲಿಸ
ದಕ್ಷಿಣ ಆಫ್ರಿಕಾದ ಕೂಟವೊಂದು
ಟಿದೆ.

ಪ್ರೊ॥ ರಂಗಾರವರ ಆಗಮನ

ಮೈಸೂರು ೨೨

ಪ್ರೊ॥ ಎನ್. ಜಿ. ರಂಗಾರವರು ನಾಳೆ ಬೆಳಗ್ಗೆ ೬ ಘಂಟೆ ರೈಲಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸುವರು. ಎಲ್ಲಾ ವಿದ್ಯಾರ್ಥಿಗಳೂ ಸ್ವಾಗತ ಬಯಸಲು ಸಕಾಲಕ್ಕೆ ರೈಲ್ವೆ ಸ್ಟೇಷನ್ನಿಗೆ ಬರಬೇಕಾಗಿ ಪ್ರಾರ್ಥಿಸಲಾಗಿದೆ. ಪ್ರೊ॥ ಎನ್. ಜಿ. ರಂಗಾರವರ ಭಾಷಣವನ್ನು ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲಿನಲ್ಲಿ ಏರ್ಪಡಿಸಿದೆ. ವಿದ್ಯಾರ್ಥಿಗಳ ಪರವಾಗಿ ಅವರಿಗೆ ಬಿನ್ನವತ್ತಳೆ ಅರ್ಪಿಸಲಾಗುವುದು. ಡಾ॥ ಬಸೀರ ಹುಸೇನರವರು ಅಧ್ಯಕ್ಷತೆ ವಹಿಸುವರು. ಎಲ್ಲಾ ವಿದ್ಯಾರ್ಥಿಗಳೂ ಬರಬೇಕಾಗಿ ಪ್ರಾರ್ಥಿಸಲಾಗಿದೆ.

ಪತ್ರಿಕೋದ್ಯೋಗಿ ಸಂಘಕ್ಕೆ ಸಹಾಯ

ಓರಿಯಂಟಲ್ ಇನ್ಷೂರೆನ್ಸ್ ಕಂಪೆನಿಯ ಶಾಖೆಯ ಶ್ರೀ ಬಿ. ಎಸ್. ಸುಬ್ಬರಾಯರು ನಿನ್ನೆ ದಿನ ತಾಯಿನಾಡು ಪ್ರತಿನಿಧಿಗಳಾಗಿದ್ದ ಶ್ರೀ ಎಂ. ಶ್ರೀನಿವಾಸ ಮೂರ್ತಿಯವರಿಗೆ ಭೋಜನ ಸತ್ಕಾರವನ್ನು ನಡೆಸಿ ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘಕ್ಕೆ ೨೫ ರೂ. ಸಹಾಯ ಮಾಡಿದರು. ಅಲ್ಲದೆ ಕನ್ನಂಬಾಡಿಯ ಶ್ರೀ ಚಂದ್ರಮೌಳೀಶ್ವರ ದೇವಾಲಯದ ಜೀರ್ಣೋದ್ಧಾರಕ್ಕಾಗಿ ೨೫ ರೂ. ಗಳನ್ನು ಕೊಟ್ಟರು.

ಕೀರ್ತನ ಸಮಾಜ

ಕೀರ್ತನಕಾರರಿಗೆ ಉತ್ತೇಜನಕೊಡಲು ಶ್ರೀಆಂಜನೇಯ ಶ್ರೀರಾಮಚಂದ್ರ ದೇವಸ್ಥಾನದಲ್ಲಿ ಶ್ರೀಗಳಾದ ಎ. ನಾರಾಯಣ ರಾವ್, ಹೆಚ್. ಆರ್. ಗಮಕಿ, ನದೀಪುರಂ ಶ್ರೀನಿವಾಸರಂಗಾಚಾರ್ಯರು, ವಿ. ಅಣ್ಣಾಜಿರಾವ್, ಎಂ ಎಸ್ ಕೃಷ್ಣರಾವ್ ಮತ್ತು ಕೆ ಗೋವಿಂದರಾಜಶೆಟ್ಟಿಯವರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟಿರುವ ಕೀರ್ತನ ಸಮಾಜದ ಆಶ್ರಯದಲ್ಲಿ ಇವಿನ ರಾತ್ರಿ ೯ ಗಂಟೆಗೆ ಶ್ರೀ ಹೆಚ್. ಆರ್. ಗಮಕಿಗಳವರು "ಶ್ರೀ ರಾಮಾಂಜನೇಯಭಾರತ" ಎಂಬ ಹರಿಕಥೆಯನ್ನು ನಡೆಸುವರು.

ಕಾಂಗ್ರೆಸ್ ಕಛೇರಿಗೆ ಪ್ರೊ॥ ರಂಗಾರವರ ಭೇಟಿ

ನಾಳೆ ಬೆಳಗ್ಗೆ ೧೦ ಘಂಟೆಗೆ ಪ್ರೊ॥ ರಂಗಾರವರು ಪಚ್ಚಾಪ್ಪರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಗೆ ಭೇಟಿ ಕೊಡುವರು. ಕಾಂಗ್ರೆಸ್ ಸದಸ್ಯರೆಲ್ಲರೂ ದಯಮಾಡಿಸಬೇಕಾಗಿ ಕೋರಲಾಗಿದೆ

ವಿದ್ಯಾರ್ಥಿ ಕಾಂಗ್ರೆಸ್ ಅಧಿವೇಶನ

ಸ್ವಂತ ಫೋನ್] ಬೆಂಗಳೂರು ೨೨

ಬೆಂಗಳೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧಿವೇಶನವು ನೆನ್ನೆ ಸಂಜೆ ನಡೆಯಬೇಕಾದುದು ಮಳೆಯ ದೆಸೆಯಿಂದ ಪ್ರಾತಃಕಾಲ ನಡೆಯಿತು, ಆಂಧ್ರ ಕಾಂಗ್ರೆಸ್ ಮುಖಂಡರಾದ ಶ್ರೀ ಎನ್. ಜಿ. ರಂಗಾರವರು ಅಧ್ಯಕ್ಷತೆ ವಹಿಸಿದ್ದರು.

ನೆನ್ನೆ ರಾಷ್ಟ್ರಧ್ವಜವನ್ನು ಆರೋಹಣ ಮಾಡುತ್ತಾ, ಶ್ರೀ ರಂಗಾರವರು ರಾಷ್ಟ್ರೀಯ ಧ್ವಜವು ಭಾರತದ ರೈತರ, ಕಾರ್ಮಿಕರ ಮತ್ತು ಎಲ್ಲಾ ಜನರ ಹಿತಗಳನ್ನೂ ಪ್ರತಿಬಿಂಬಿಸುವುದೆಂದು ತಿಳಿಸಿದರು. ಭಾರತದ ಸ್ವಾತಂತ್ರ್ಯ ಮೊದಲು ಅದನಂತರ ಅಂತರ ರಾಷ್ಟ್ರೀಯ ಸಮಸ್ಯೆಗಳನ್ನು ಪರಿಶೀಲಿಸಬೇಕೆಂಬುದಾಗಿ ಅವರು ತಿಳಿಸಿ ಕಾಂಗ್ರೆಸ್ ಧ್ವಜದೊಡನೆ ಇತರ ಧ್ವಜಗಳನ್ನು ಹಾರಿಸುವುದು ತರವಲ್ಲವೆಂದೂ ತಿಳಿಸಿದರು. ಭಾರತದ ಕೈಗಾರಿಗೆ ಉದ್ಯಮವನ್ನು ಕುರಿತು ಮಾತನಾಡುತ್ತಾ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಪ್ರಶಂಸಿಸಿದರು. ಮೈಸೂರಿನ ಕೈಗಾರಿಗೆಗಳು ಅಭಿವೃದ್ಧಿ ಹೊಂದುತ್ತಿರುವುದನ್ನು ಕಂಡು ಹರ್ಷಿಸಿದರು.

ಕಲಾ ಮತ್ತು ರಾಷ್ಟ್ರೀಯ ಸಾಹಿತ್ಯ ಪ್ರವರ್ತನವನ್ನು ಬಿಡದ ಶ್ರೀಮತಿ ಕಮಲಾ ಚಟ್ಟೋಪಾಧ್ಯಾಯರು, ಸ್ವಾತಂತ್ರ್ಯ ಹೋರಾಟದಲ್ಲಿ ಸಾಹಿತ್ಯದ ಭಾಗವನ್ನು ವಿವರಿಸಿದರು. ವಿದ್ಯಾರ್ಥಿಗಳು ಭಾರತದ ಸ್ವಾತಂತ್ರ್ಯ ಸಾಧನೆಗಾಗಿ ದುಡಿಯಬೇಕೆಂದು ಉಪದೇಶಿಸಿದರು

ದಸ್ತಗಿರಿ

ನಗರದಲ್ಲಿ ಮತ್ತು ಸುತ್ತಮುತ್ತಣ ಗ್ರಾಮಗಳಲ್ಲಿ ಬೇಗ ಮುಂದು ಕಲುಪ್ರ ಮಾಡುತ್ತಿದ್ದರೆಂಬ ಆಪಾದನೆಯಮೇಲೆ ಮುಂಡಿ ಪೋಲೀಸರು ಐದು ಹುಡುಗರನ್ನು ದಸ್ತಗಿರಿಮಾಡಿ ತನಿಖೆಯನ್ನು ನಡೆಸುತ್ತಿದ್ದಾರೆ

ರಾಜ್ಯಶಾಸ್ತ್ರ ಸಂಘ

ಮಹಾರಾಜಾ ಕಾಲೇಜು ರಾಜ್ಯಶಾಸ್ತ್ರ ಸಂಘದ ಚುನಾವಣೆಯು ನಡೆದು ಈ ಸಾಲಿನ ಶ್ರೀ ಹೆಚ್. ಎಸ್. ದಾಸಪ್ಪನವರು ಉಪಾಧ್ಯಕ್ಷರಾಗಿಯೂ ಎನ್. ನಾಗರಾಜ್ ಮತ್ತು ಅಬ್ದುಲ್ ಕರೀಂರವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿರುವರು

ಪ್ರಾಂತಗಳಲ್ಲಿ ಮಂತ್ರಿ ಮಂಡಲ ಸ್ಥಾಪನೆಯೇ?

ಲಾರ್ಡ್ ವೇವಲ್ಲರು ೯೩ ನೇ ಸೆಕ್ಷನ್ ಜಾರಿಯಲ್ಲಿರುವ ಪ್ರಾಂತಗಳಲ್ಲಿ ಪುನಃ ಮಂತ್ರಿಮಂಡಲಗಳನ್ನು ಸ್ಥಾಪಿಸುವ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಕೊಡಲಿರುವರೆಂದು ಲಂಡನ್ನಿನಲ್ಲಿ ಹೇಳಲಾಗಿದೆ. ಸಿಮ್ಲಾ ಸಮ್ಮೇಳನ ವಿಫಲವಾದುದನ್ನೇ ನೆಪ ಕಟ್ಟಿಕೊಂಡು ಸುಮ್ಮನೆ ಕೂಡದೆ ವೈಸರಾಯರು ಯಾವದಾದರೂ ಆಧಾರ ದೊರಕಿದರೆ, ತಮ್ಮ ಯೋಜನೆಯನ್ನು ಮುಂದುವರಿಸಲು ಪ್ರಯತ್ನ ನಡೆಸುವರೆಂದು ಹೇಳಲಾಗಿದೆ ಯಾವ ರೀತಿಯಲ್ಲಿಯೇ ಆಗಲಿ ಭಾರತದ ಬಿಕ್ಕಟ್ಟಿನ ಪರಿಹಾರ ಮಾಡುವುದನ್ನು ಕಾಯದೆ ಬ್ರಿಟಿಷ್ ಸರಕಾರವು ಭಾರತಕ್ಕೆ ಸ್ವಯಮಾಡಳಿತವನ್ನು ನೀಡುವುದು ಹಿತವೆಂದು ಹೇಳಲಾಗಿದೆ

ಐರ್ಲೆಂಡಿನ ವಿಭಜನೆ

ಐರ್ಲೆಂಡು ಯುದ್ಧಭಾಗಿಯಾಗದೆ ತಟಸ್ಥವನ್ನು ಅವಲಂಬಿಸಿದುದರ ಕಾರಣವು ಐರ್ಲೆಂಡಿನ ವಿಭಜನೆಯೇ, ಎಂದು ಡಿವೇಲರವರು ಡೈಲ್ ಸಭೆಯಲ್ಲಿ ತಿಳಿಸಿದರು. ಬ್ರಿಟಿಷ್ ಸರಕಾರವು ಐರ್ಲೆಂಡಿಗೆ ಈ ವಿಭಜನೆಯನ್ನು ಉಳಿಸಿಕೊಂಡು ಬರುವವರೆಗೆ ಅಲ್ಲಿಯವರೆಗೆ ಐರಿಷ್ ಜನರಿಗೆ ಬ್ರಿಟಿಷರಲ್ಲಿ ಹೇಳಿಕೆಗಳಲ್ಲಿ ನಂಬಿಕೆ ಇರದು, ಎಂದು ಅವರು ತಿಳಿಸಿದರು.

ಬರ್ಮಾದ ರಾಜರು

ಜಪಾನರು ಬರ್ಮಾದಲ್ಲಿ ಮುಖ್ಯಮಂತ್ರಿಗಳಾಗಿದ್ದ ಡಾ। ಬಾಮಾರವರನ್ನು ಟೋಕ್ಯೋದಲ್ಲಿ ಬರ್ಮಾದ ದೊರೆಯನ್ನಾಗಿ ಪಟ್ಟ ಕಟ್ಟಿದ್ದಾರೆಂದೂ, ಹೇಳಲಾಗಿದೆ ಬಾಮಾರವರ ಪತ್ನಿಯನ್ನು ಮಹಾರಾಣಿ ಪಟ್ಟಾಭಿಷೇಕ ಮಾಡಿದರೆಂದು ಪತ್ರಿಕೆಗೆ ಬಂದ ಸುದ್ದಿ ತಿಳಿಸುತ್ತದೆ.

ಸಿಂಗಪುರ ಸಂಪರ್ಕ ಕಡಿಯಿತು

ಮಲೆಯಾದ ಸಮುದ್ರ ತೀರದ ಸಿಂಗಪುರಕ್ಕೆ ಜಪಾನರು ಇಟ್ಟುಕೊಂಡಿದ್ದ ಸಂಪರ್ಕವು ನಾಶವಾಗಿಯೂ ಕಡಿದ ಯಂದು ಬ್ರಿಟಿಷ್ ನೌಕಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೆಸಿಫಿಕ್ಕಿನಲ್ಲಿ ಈಗ ಭಾರಿ ಬ್ರಿಟಿಷ್ ನೌಕಾಪಡೆಯಿದೆಯೆಂದು ಅವರು ತಿಳಿಸಿದ್ದಾರೆ.

ಅ॥ ಭಾ॥ ಕಾಂಗ್ರೆಸ್ ಅಧಿವೇಶನ

ಬರುವ ಕ್ರಿಸ್‌ಮಸ್ ಅಥವಾ ಈಸ್ಟರ್ (ಏಪ್ರಿಲ್) ಕಾಲದಲ್ಲಿ ಅಖಿಲಭಾರತ ಕಾಂಗ್ರೆಸ್ ಅಧಿವೇಶನ ನೆರವೇರುವುದೆಂದು ಕಾಂಗ್ರೆಸ್ ಅಧ್ಯಕ್ಷರು ಸೂಚನೆಯಿತ್ತಿದ್ದಾರೆ. ಈ ಅಧಿವೇಶನವು ನಾಲ್ಕು ವರ್ಷಗಳಾಗಿದ್ದು.

ಹಿಂದೂ ಮುಸ್ಲಿಮರಿಗೆ ರಾಜಿ

ನೆನ್ನೆ ಸೋಮವಾರ ರಾತ್ರಿ ನಗರದ ಹಳೆಯ ಹಿಂದೂ ಮುಸ್ಲಿಂ ನಗರ ಪಂಚಾಯಿತಿ [illegible] ಹಿಂದು [illegible] [illegible] ಗೊತ್ತಾಗಿದೆ. ಮತ್ತು [illegible] [illegible] [illegible] [illegible] ಅಧಿಕಾರಿಗಳನ್ನು [illegible] [illegible] ಗಳು ನಡೆಯುತ್ತಿವೆಯೆಂದು [illegible] ಕಿದೆ.

ನಮ್ಮ [illegible]

[illegible]

ಜರ್ಮನ್ ವಿಮಾನಗಳ ಶೋಧನೆ

ಜರ್ಮನರು ವೇಗಶಾಲಿ, ಭೂಗರ್ಭದೊಳಗೆ ಸುರಂಗ ಇಟ್ಟಿದ್ದ ಸುಮಾರು ೫೦ ತೂಕದ ವಿಮಾನಗಳನ್ನು ನಾಶಪಡಿಸಬೇಕೇ ಬೇಡವೇ ಎಂಬ ವಿಷಯವು ಮಿತ್ರ ಅಧಿಕಾರಿಗಳಿಗೆ ಸಮಸ್ಯೆಯಾಗಿದೆ. ಜರ್ಮನಿ ಯುದ್ಧ ಮುಗಿಯುವುದರೊಳಗೆ ಈ ಶೋಧನೆಯನ್ನು ನಾಶಪಡಿಸುವ ವಿಷಯವು ಇನ್ನೂ ತೀರ್ಮಾನವಾಗಿಲ್ಲ. ನಾಶಪಡಿಸುವುದಾದರೆ ಸಾಗರದ ಮಧ್ಯದಲ್ಲಿ ಅವನ್ನು ಜಲಸಮಾಧಿ ಮಾಡಲಾಗುವುದು.

ಕ್ಯಾಥಲಿಕ್ ರಾಜ್ಯಗಳ ಐಕ್ಯತೆ

ಪೋರ್ಚುಗಲ್, ಸ್ಪೇನ್, ಇಟಲಿ ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್ ಲಕ್ಸೆಂಬರ್ಗ್ ಮತ್ತು ಆಸ್ಟ್ರಿಯಾ ಈ ರಾಜ್ಯಗಳು ಸೇರಿ ರಷ್ಯ ಮತ್ತು ಆಂಗ್ಲೋ ಅಮೇರಿಕಾಗಳ ನಡುವೆ ತಕ್ಕಡಿ ಬಟ್ಟುಗಳಂತೆ ವರ್ತಿಸಬೇಕೆಂದು ಪೋರ್ಚುಗಲ್ ಪತ್ರಿಕೆಯೊಂದು ಬರೆದಿದೆ. ಈ ರಾಜ್ಯಗಳು ಕ್ಯಾಥಲಿಕ್ ಪಂಥಕ್ಕೆ ಸೇರಿದವುಗಳಾದುದರಿಂದ ಐಕ್ಯತೆಗೆ ಸಾಕಷ್ಟು ಅವಕಾಶವಿದೆಯೆಂದು ಹೇಳಲಾಗಿದೆ.

ಆಗಸ್ಟ್ ಚಳುವಳಿಯ ಸೂಚನೆ ಡಾ॥ ಪಟ್ಟಾಭಿ ಕೊಟ್ಟರು

ಮಹಾತ್ಮ ಗಾಂಧಿಯವರ ಟೀಕೆಯನ್ನು ಹೊಂದಿ ಆಂಧ್ರಪ್ರಾಂತ ಕಾಂಗ್ರೆಸ್ಸಿನವರು ಆಗಸ್ಟ್ ಚಳುವಳಿಯ ಸಂಬಂಧವಾಗಿ ಹೊರಡಿಸಿದ ತಿಳುವಳಿಕೆ ಪಟ್ಟಿಯನ್ನು ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಾವೇ ಹೊರಡಿಸಲು ಜವಾಬ್ದಾರರೆಂದು ಬೆಜವಾಡದ ವಾದಿ ಪ್ರದರ್ಶನದಲ್ಲಿ ತಿಳಿಸಿದರು. ಈ ಪಟ್ಟಿಯಲ್ಲಿ ಪೌರಸಭೆ ತೆರಿಗೆ, ಕೊಡದಿರುವುದು ಹುಚ್ಚು ಮುಂಚೆ ಇಡುವುದು, ಟೆಲಿಗ್ರಾಫ್ ತಂತಿ ಕತ್ತರಿಸುವುದು ಸೇರಿತ್ತೆಂದೂ, ರೈಲ್ವೆ ಲೈನುಗಳನ್ನು ಕೀಳುವುದು, ಮಾರ್ಗಗಳನ್ನು ಉರುಳಿಸುವುದೂ ಈ ಪಟ್ಟಿಯಲ್ಲಿ ಸೇರಿರಲಿಲ್ಲವೆಂದೂ ತಿಳಿಸಿದರು,

ಬಹುದಿನಗಳಿಂದಲೂ ಸರವಾಗಿ ಸಿಂಹದ ನರ್ನ್ಗ ಬದ ಮುಡಿದಿರುವ ಸಹೋದ್ಯೋಗಿಗಳಿಗೆಲ್ಲಾ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಮ್ಮ ಮಿತ್ರಬಾಂಧವರುಗಳಿಗೆಲ್ಲರಿಗೂ ಸಕಲ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕರುಣಿಸಲೆಂದು ಸರ್ವರಕ್ಷಕಳಾದ ಜಗನ್ಮಾತೆ, ಚಾಮುಂಡೇಶ್ವರಿಯನ್ನು ಪ್ರಾರ್ಥಿಸುತ್ತೇನೆ.

ವಿಂಡ್ಸರರ ಮತ್ತು ಶ್ರೀ॥ರಾಜರ ಮಾತುಕತೆ

ತಮ್ಮ ಚಿಕ್ಕ ಸಹೋದರ ಶ್ರೀ॥ ರಾಜರಾದ ಜಾರ್ಜರೊಡನೆ ಮತ್ತು ಮುಖ್ಯಮಂತ್ರಿ ಚರ್ಚಿಲ್ಲರೊಡನೆ, ಡ್ಯೂಕ್ ಆಫ್ ವಿಂಡ್ಸರರು ಮುಂದಿನ ತಿಂಗಳು ಲಂಡನ್ನಿನಲ್ಲಿ ಮಾತುಕತೆ ನಡೆಸುವುದಾಗಿ ಗೊತ್ತಾಗಿದೆ. ತಮ್ಮ ಭವಿಷ್ಯದ ವಾಸಸ್ಥಾನ ಮತ್ತು ಉದ್ಯೋಗ ಯಾವುದು ತನಗೆ ತಿಳಿಯದೆಂದೂ ಅವರು ಪ್ರತಿಕಾ ವರದಿಗಾರರಿಗೆ ತಿಳಿಸಿದ್ದಾರೆ. ಈಗ ಅವರು ಸಾಂಗ್‌ಟಸ್ಕಿಗೆ ಬಂದಿದ್ದಾರೆ

ಕೇಂದ್ರ ಮತ್ತು ಪ್ರಾಂತಗಳಲ್ಲಿ ಮಹಾ ಚುನಾವಣೆ

ವೈಸರಾಯರು ಗವರ್ನರುಗಳ ಸಭೆಯನ್ನು ಆಗಸ್ಟ್ ೧ ಮತ್ತು ೨ ನೇ ತಾ॥ ಗಳಲ್ಲಿ ಸೇರಿಸುವರು. ಈ ಸಭೆಯಲ್ಲಿ ಕೇಂದ್ರ ಶಾಸನ ಸಭೆಗಳಿಗೂ ಪ್ರಾಂತ ಶಾಸನ ಸಭೆಗಳಿಗೂ ಮಹಾ ಚುನಾವಣೆಗಳನ್ನು ನಡೆಸಬೇಕೆ, ಬೇಡವೇ ಎಂಬ ಪ್ರಶ್ನೆಯೂ ಚರ್ಚೆಗೆ ಬರಬಹುದೆಂದು ಹೇಳಲಾಗಿದೆ.

ಡಿಗಾಲ್ ಮತ್ತು ರಾಜಸಭೆ ತಿರಸ್ಕಾರ

ಫ್ರೆಂಚ್ ಶಾಸನ ಸಭೆಯು ಡಿಗಾಲರು ಕಳುಹಿಸಿದ್ದ ರಾಜ್ಯಾಂಗ ಸುಧಾರಣೆ ಸೂಚನೆಗಳನ್ನು ತಿರಸ್ಕರಿಸಿದೆ. ಫ್ರೆಂಚ್ ಸರಕಾರವು ಈ ತಿರಸ್ಕಾರಕ್ಕೆ ಮನ್ನಣೆ ಕೊಡುವುದಿಲ್ಲವೆಂದು ಹೇಳಲಾಗಿದೆ.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲಾ ಇವರಲ್ಲಿ ಕೊಂಡುಕೊಳ್ಳಿ

ರಹಿಮಾನ್ ಅಂಡ್ ಕೋ,

1718, ಸಯ್ಯಾಜಿರಾವ್ ರೋಡ್

(ಮೈಸೂರು ಹಾಲ್ ಬಳಿ) ಮೈಸೂರು

ಪಿ. ಸಿ. ನಟರಾಜ್

ವೈದ್ಯರು

ನೇತ್ರ ಪರೀಕ್ಷೆ ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜೆಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ವಿದ್ಯಾರ್ಥಿಗಳಿಗೂ ಚಿಕಿತ್ಸೆಯು ಬಹು ಸುಲಭ ಚಾರ್ಜಿನಿಂದ ಮಾಡಲ್ಪಡುವುದು.

ಝುಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತ.

ಲಿಲ್ಲೀ ಬ್ರಾಂಡ್ ಕಾಫಿ

ಸ್ವದೇಶೀಯಸ್ಥೇ ಉಪಯೋಗಿಸಿ.

V. O. P.

ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದವು

ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ಕ್ಕೆ ರೂ. 0 10 6

ಟಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್ :—ದೇವರಾಜ ಮಾರ್ಕೆಟ್ : : ಸಕ್ಕರೆ ಮಂಡಿ, ಸಂತೇಪೇಟೆ.

ಗಾನಕಲಾನಿಧಿ [illegible]

ಶ್ರೀಮತಿ ನೀಲಮ್ಮ [illegible] ಯವರು

ಭಾರತೀಯರ [illegible]

ಸಮುದ್ರದೊಳಗೆ ಮುಳುಗಿ [illegible] ಲಂಡನ್ನಿನಲ್ಲಿ [illegible] ಮೊದಲನೇ ಭಾರತೀಯನಿವನು [illegible]

ಯೂರೋಪ್ ವೈದ್ಯರು [illegible]

[illegible] ೭೦೦ ಜನ ಭಾರತೀಯ [illegible]

ಮಿತ್ರರಿಗೆ ಬರ್ಮಾ [illegible]

ಜಪಾನರ ಮೇಲೆ [illegible]

[illegible]

ಈ ಊರಿನ [illegible] ಮಾಡುತ್ತಿದ್ದಾರೆ [illegible]

ಅಮೃ[illegible]

ಪಿತ್ತದ ಜ್ವರ, ಮ[illegible] ಜ್ವರ, ಪ್ಲೀಹದ ಗಡ್ಡೆ [illegible] ಮೋಟ ಬಹಳ ಚನ್ನಾ[illegible] ಮಾಡುತ್ತದೆ.

ಕೆ. ವಿ. ವೆಂಕಟರಾ[illegible]

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ[illegible]

ಅಗರಲಂಬಾಡಿ [illegible]

ಏಜೆಂಟರು: ಸರಸಿಂಹ [illegible]

Edited, printed and [illegible] A. K. Nagaraja[illegible] at the [illegible] D. Subbaiah Road, Mys[illegible]

ಫೋ॥ ನಂ 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೦] ಸೋಮವಾರ ೨೩-೭--೪೫ [ಸಂಚಿಕೆ ೧

ಯಹೂದ್ಯರ ದೇಶಕ್ಕೆ ಹಿಟ್ಲರರು ಹೋದರೇ?

ಸಾಧ್ವಿ ಪತ್ರಿಕೆಯ ೧೦ನೇ ವಾರ್ಷಿಕೋತ್ಸವ

ಮೈಸೂರು ೨೩.

ನ್ನೆ ಸಂಜೆ 'ಸಾಧ್ವಿ' ಕಛೇರಿಯಲ್ಲಿ ಧ್ವಿ" ಪತ್ರಿಕೆಯ ಹತ್ತನೇ ವಾರ್ಷಿ ತ್ಸವವು ವೈಭವದಿಂದ ನಡೆಯಿತು. ಧ್ವಿ" ಪತ್ರಿಕೆಯ ಸಂಪಾದಕೀಯ ಶಾಸನ ಸಭಾ ಸದಸ್ಯರೂ ಆದ ಶ್ರೀಮಾ ಎಂ. ಆರ್. ಲಕ್ಷ್ಮಮ್ಮನವರು ಅಧ್ಯಕ್ಷ ಹಿಸಿದ್ದರು. ಅನೇಕ ಗಣ್ಯ ಮಹನೀ ಉಪಸ್ಥಿತಿಯಿರುವುದನ್ನುಮಾಡಿಸಿದ್ದರು ಗಾಣ ಚಲನಚಿತ್ರದಲ್ಲಿ ಖ್ಯಾತಿ ಪಡೆದ ಬಿ. ವಿ. ಕೆ. ಮೂರ್ತಿಯವರು ದೇವ ಪ್ರಾರ್ಥನೆ ನಡೆಸಿದರು. ಶ್ರೀ ಸೀತಾ. . ಸೀತಾರಾಮಶಾಸ್ತ್ರಿಗಳು ಮತ್ತು ಸಂ ಸ್ಕೃತ ಪಾಠಶಾಲೆಯ ಅಧ್ಯಾಪಕರಾ ದ ಶ್ರೀ ರಾಮಾನುಜಯ್ಯಂಗಾರ್ಯ ಮಂಗಳಾ ಶಾಸನಗಳನ್ನು ಮನೋಹರ ವಠಿಸಿದರು ಶ್ರೀ ಕೃಷ್ಣಗಿರಿ ಕೃಷ್ಣ ರಿಂದ ಸುಶ್ರಾವ್ಯವಾಗಿ ಭಾರತ ವಾಚ ಯಿತು.

ಶ್ರೀ ಅಗರಂ ರಂಗಯ್ಯನವರು ವೃದ್ಧ ಮಹ ಯಂ. ವೆಂಕಟಕೃಷ್ಣಯ್ಯನವರ ಸ್ಮರಣಾರ್ಥವಾಗಿ ತಾವು "ಸಾಧ್ವಿ" ಪತ್ರಿ ಯನ್ನು ನಡೆಸುತ್ತಿರುವ ಉಂಶವನ್ನು ವಿವ , ಅದಕ್ಕೆ ಮಹಾಜನರ ಸಹಾಯ ಸಹ ಗಳನ್ನು ಕೋರಿದರು.

ಶ್ರೀ॥ ಟಿ. ಮರಿಯಪ್ಪನವರು ಇಂಗ್ಲೆಂ ಮತ್ತು ಅಮೇರಿಕಾ ದೇಶಗಳಲ್ಲಿ ಜನಾ ಪ್ರಿಯವು ಒಂದು ಮಟ್ಟದಲ್ಲಿದ್ದು, ಜಾ ಬಂದಿರುವ ಪ್ರಯುಕ್ತ, ಪತ್ರಿಕೆಗಳಿಗೆ ರ್ಣ ಸ್ವಾತಂತ್ರ್ಯವಿರುತ್ತದೆ, ಎಂದರು. ನ್ನ ಹಕ್ಕು ಬಾಧ್ಯತೆಗಳಿಗೆ ಅಡ್ಡಿ ಆತಂಕ ನ್ನು ಒಡ್ಡ ಬಹುದಾದ ಕರಾಳ ಶಾಸನ ನ್ನು ಧೈರ್ಯವಾಗಿ ಎದುರಿಸಿ, ನಿರ್ದಾಕ್ಷಿ ದಿಂದ ಟೀಕೆಟಿಪ್ಪಣಿಗಳನ್ನು ಮಾಡಲು ರಿ ಸ್ವಲ್ಪವೂ ಹಿಂಜರಿಯುವುದಿಲ್ಲ, ಎಂ ರು.

ಭಾರತದಲ್ಲಿ ಆಳರಸರು ಪ್ರಜೆಗಳ ಹಕ್ಕು ಧ್ಯತೆಗಳನ್ನು ಬದಿಗೊತ್ತಿ ತಮ್ಮ ಸೌಖ್ಯ ಹೆಚ್ಚೆಂದು ಕರಾಳ ಶಾಸನಗಳನ್ನು ಜಾ ತಂದಿರುವರೆಂದೂ, ಆ ಕರಾಳ ಶಾಸನ ಗೆ ಎಷ್ಟೋ ಪತ್ರಿಕಾ ಕರ್ತರು ಬಲಿಯಾ ಬವರೆಂದೂ ತಿಳಿಸಿದರು. ಆನಂತ ಮೇಲು ಕ್ತಿಯನ್ನು ಅಕ್ಷರಶಃ ಅನುಸರಿಸಿ ಮೈಸೂ ಸರ್ಕಾರದವರೂ ಸಹ ವೃತ್ತ ಪತ್ರಿಕೆಗ ಕಲೆಯುತ್ತ ಜನಜಾಗೃತಿಯನ್ನುಂಟು ಗದಂತೆ ಕರಾಳ ಶಾಸನಗಳನ್ನು ಜಾರಿ ತಂದಿರುತ್ತಾರೆ; ಈ ಕರಾಳ ಶಾಸನಗಳ ತೊಡೆದು ಹಾಕಬೇಕೆಂದು ಅನೇಕ ವ ಗಳಿಂದ ಶಾಸನ ಸಭೆಯಲ್ಲಿ ನಡೆಸಿದ ಯತ್ನಗಳೆಲ್ಲವೂ ವಿಫಲವಾಗಿವೆ ಎಂದು ಷಾದದಿಂದ ತಿಳಿಸಿದರು. ದೇಶದಲ್ಲಿ ಜ ಭಿಪ್ರಾಯವು ಪ್ರಬಲವಾಗಿ, ಉನ್ನತ ತಿಗೆ ಬರಬೇಕಾದಲ್ಲಿ ಪ್ರಜಾಭಿಪ್ರಾಯವ ಪ್ರತಿ ಬಿಂಬಿಸುವ ಪತ್ರಿಕೆಗಳಿಗೆ ಪೂ ರ್ಣ ಸ್ವಾತಂತ್ರ್ಯ ಕೊಡುವುದು ಸರ್ಕಾರದ ಥಮ ಕರ್ತವ್ಯ ಎಂದರು. ಮೈಸೂರು ನಮಯಲ್ಲಿ ಪತ್ರಿಕೆಯ ಬೆಳವಣಿಗೆಗೆ ಪತ್ರಿಕೆ ನ್ನು ಓದಬೇಕೆಂಬಿರುವ ಆಸಕ್ತಿ ಮೊದ ಮಹುವುಗಳಿಗೆಲ್ಲಾ ದಿವಂಗತ ಪಿತಾಮಹ ವೆಂ ಕಟಕೃಷ್ಣಯ್ಯನವರೇ ಮೂಲ ಕಾರಣರೆಂ ಹೇಳಿ, ಅವರ ಜ್ಞಾಪಕಾರ್ಥವಾಗಿ ನಡೆ ಸುತ್ತಿರುವ "ಸಾಧ್ವಿ" ಪತ್ರಿಕೆಯು ಜ ಟ್ಟು ಏಳಿಗೆಗೆ ಬಂದು ಜನತಾ ಸೇವೆಯ ನ್ನು ಮತ್ತಷ್ಟು ಹೆಚ್ಚಾಗಿ ಮಾಡಲಿ, ಎಂ ದು ಹಾರೈಸಿದರು.

ಶ್ರೀ ಬಿ. ನಾರಾಯಣಸ್ವಾಮಿಯವರು ಕೂಡ ಶ್ರೀ ಮರಿಯಪ್ಪನವರ ಅಭಿಪ್ರಾ ಯಗಳನ್ನೇ ಪ್ರತಿಧ್ವನಿಸುತ್ತಾ, ವೃತ್ತ ಪ ತ್ರಿಕೆಗಳಿಗೆ ಸ್ವಾತಂತ್ರ್ಯವು ಅತ್ಯಗತ್ಯವೆಂದೂ ಮೈಸೂರು ಸರ್ಕಾರದಲ್ಲಿ ಜಾರಿಯಲ್ಲಿರುವ ಕರಾಳ ಶಾಸನಗಳನ್ನು ಸರ್ಕಾರದವರು ಕೂ ಡಲೆ ತೆಗೆದು ಹಾಕಬೇಕೆಂದೂ ಹೇಳಿ ಸಾಧ್ವಿ ಪತ್ರಿಕೆಯು ನಾಡು ಮತ್ತು ನುಡಿಯ ಸೇವೆಯನ್ನು ಅತಿಶಯವಾಗಿ ಮಾಡಲಿ, ಎಂದು ಕೋರಿದರು.

ಅಧ್ಯಕ್ಷರು ಮಾತನಾಡುತ್ತ ತಮಗೂ ಸಾಧ್ವಿ ಪತ್ರಿಕೆಗೂ ಅನೇಕ ವರ್ಷಗಳ ಸಂ ಬಂಧವಿದೆ ಎಂದರು. ವೃತ್ತ ಪತ್ರಿಕೆಗಳ ವರದಿಗಳು ಸತ್ಯ ಬಾಹಿರವಾಗಿರದೆ, ನಡೆದ ದ್ದು ನಡೆದ ಹಾಗೆ ತಿಳಿಸುವುದು ಪತ್ರಿಕಾ ರರ ಕರ್ತವ್ಯ ಅನುಭವ ಶಾಲಿಗಳೂ, ಪ್ರ ಭಾವ ಶಾಲಿಗಳೂ ಆಗಿದ್ದು ಅವರು ವರದಿ ಗಳನ್ನು ಪ್ರಕಟಿಸದಲ್ಲಿ, ಪತ್ರಿಕೆಗಳ ಘನತೆ ಗೌರವಗಳು ಮೆಚ್ಚುವುದರಲ್ಲಿ ಸಂಶಯವಿಲ್ಲವೆಂದರು. ಕೊನೆಯದಾಗಿ ಸಾಧ್ವಿ ಪತ್ರಿಕೆ ಇನ್ನೂ ಮೇಲ್ಮೆಗೆ ಬಂದು ಜನತಾಸೇವೆ ಮಾಡಲು ಚಿರಾಯುವಾಗಿ ಬಾಳಲಿ ಎಂದು ಹಾರೈಸಿದರು.

ಆನಂತರಶ್ರೀಮತಿ ಸೀತಮ್ಮ ಕದಾಂಬಿ ಯವರ ಮನೋಹರವಾದ ವೀಣಾ ವಾದನ ನಡೆಯಿತು.ವಿದ್ವಾನ್ ರಾಜಯ್ಯಂಗಾರ್ಯರ ಪಿ ಟೀಲು ಮತ್ತು ವಿದ್ವಾನ್ ನಾಗಣ್ಣನವರಮೃ ದಂಗವು ಬಹಳ ಮನೋಹರವಾಗಿದ್ದವು.

ಶ್ರೀ ಅಗರಂ ರಂಗಯ್ಯನವರು ಎಲ್ಲರಿ ಗೂ ಧನ್ಯವಾದಗಳನ್ನು ಅರ್ಪಿಸಿದರು. ಪು ಷ್ಪ ತಾಂಬೂಲ ವಿನಿಯೋಗವಾದ ನಂತರ, ಸಮಾರಂಭವು ಮುಕ್ತಾಯವಾಯಿತು.

ಹೋಟೇಲು ಕೆಲಸಗಾರರ ಸಭೆ

ಈ ರಾತ್ರಿ ೧೦॥ ಘಂಟೆಗೆ ಕಾಂಗ್ರೆಸ್ ಕ ಛೇರಿಯಲ್ಲಿ ಹೊಟೇಲ್ ಕೆಲಸಗಾರರ ಸಂ ಘದ ಆಶ್ರಯದಲ್ಲಿ ಪ್ರೊ॥ ರಂಗಾರವರು ಹೋಟೇಲು ಕೆಲಸಗಾರರನ್ನು ಉದ್ದೇಶಿಸಿ ಭಾಷಣ ಮಾಡುವರು. ಕೆಲಸಗಾರರೆಲ್ಲ ರೂ ಸಭೆಗೆ ಬರಬೇಕೆಂದು ಕೋರಲಾಗಿದೆ.

ಬರ್ಮಾ ಸರಕಾರ ವಾಪಸು

ಸಿಮ್ಲಾದಲ್ಲಿರುವ ಬರ್ಮಾ ಸರಕಾರವು ಸ್ವದೇಶಕ್ಕೆ ಜಾಗ್ರತೆಯಾಗಿಯೇ ವಾಪಸು ತೆರಳುವದು. ಆದರೆ ದಿನ ಮಾತ್ರ ಇನ್ನೂ ಗೊತ್ತು ಪಡಿಸಿಲ್ಲವೆಂದು ಪತ್ರಿಕಾ ಪ್ರಕಟ ಣೆಯನ್ನು ಕೊಡಲಾಗಿದೆ.

ಪ್ರೊ॥ ರಂಗಾರವರ ಸಂಭಾಷಣೆ

ಮೈಸೂರು ೨೩.

ಅಖಿಲ ಭಾರತ ಕಿಸಾನ್ ಮಹಾಸಭೆಯ ಅಧ್ಯಕ್ಷರೂ, ಕೇಂದ್ರಶಾಸನ ಸಭೆ ಸದಸ್ಯ ರೂ ಆದ ಪ್ರೊಫೆಸರ್ ಎನ್. ಜಿ. ರಂಗಾರ ವರು ಈ ದಿನ ಬೆಳಗ್ಗೆ ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿಸಿದರು. ರೈಲ್ವೆ ನಿಲ್ದಾಣದಲ್ಲಿ ವಿದ್ಯಾರ್ಥಿಗಳೂ, ಕಾಂಗ್ರೆಸ್ ಪ್ರಮುಖರೂ ಅವರನ್ನು ಬರಮಾಡಿಕೊಂ ಡರು. ಪ್ರೊ॥ ರಂಗಾರವರು ಈ ದಿನ ಬೆ ಳಗ್ಗೆ ಕಾಂಗ್ರೆಸ್ ಕಛೇರಿಯಲ್ಲಿ ಕೆಲಸಗಾರ ರೊಡನೆ ಕಲೆತು ಪ್ರಕೃತ ರಾಜಕೀಯ ವಿ ಚಾರವಾಗಿ ಮಾತನಾಡಿದರು. ಭಾರತದ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು ಕಾಂ ಗ್ರೆಸ್ಸಿನವರು ಪ್ರಯತ್ನಪಟ್ಟರೆಂದೂ, ಸಿ ಮ್ಲಾ ಸಮ್ಮೇಳನವು ವಿಫಲವಾದರೂ ಸಹ ಕಾಂಗ್ರೆಸ್ಸಿಗೆ ನಷ್ಟವೇನೂ ಆಗಿಲ್ಲವೆಂದೂ, ಕಾಂಗ್ರೆಸ್ ಪ್ರಭಾವವು ಇದರಿಂದ ಹೆಚ್ಚಿದೆ ಎಂದೂ ಹೇಳಿದರು. ದೇಶೀಯ ಸಂಸ್ಥಾ ನಗಳಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಚ ಳುವಳಿಯನ್ನು ಪ್ರಶಂಸಿಸಿದರು.

ರಸ್ತೆಯಲ್ಲಿ ನಿರಾಶ್ರಿತನು

ಮೈಸೂರಿನ, ರಸ್ತೆಯಲ್ಲಿರುವ ಕೈಲಾ ಸ್ಪೆಷಲ್ ಹೋಟೆಲ್ ಎದುರು ರಸ್ತೆಯಲ್ಲಿ ನೆನ್ನೆ ರಾತ್ರಿಯಿಂದ ಒಬ್ಬ ನಿರಾಶ್ರಿತನು ನರಳು ತ್ತಾ ಬಿದ್ದಿದ್ದನು. ಈ ದಿನ ಅವನನ್ನು ಯಾರೋ ಎದುರಿಗಿರುವ ಗಲ್ಲಿಯೊಂದರಲ್ಲಿ ಎಳೆದುಹಾಕಿದ್ದರು. ಮೈ ಕೈ ಸ್ವಲ್ಪ ಗಾ ಯವಾಗಿತ್ತು. ರಸ್ತೆಯಲ್ಲಿ ಹೋಗುವವ ರು ಸ್ವಲ್ಪ ಆಹಾರವನ್ನು ಕೊಟ್ಟರು ಈ ಮಧ್ಯಾಹ್ನ ಅವನನ್ನು ಪೌರಸಭೆಯ ಆ ರೋಗ್ಯ ಇಲಾಖೆಯ ನೌಕರರು ಲಾರಿಯ ಲ್ಲಿ ಅಂಟುರೋಗದ ಆಸ್ಪತ್ರೆಗೆ ಸಾಗಿಸಿದರು.

ಬಟ್ಟೆ ಕೂಪನ್ನುಗಳು

ಈ ಮಾಹೆ ೩೧ ನೇ ತಾ॥ ಆಗಾಯಿತು ಬಟ್ಟೆ ಕೂಪನ್ನುಗಳನ್ನು ಕೊಡುವುದನ್ನು ನಿಲ್ಲಿಸಲ ಗಿದೆಯೆಷ್ಟೆ? ಇನ್ನೂ ಕೂಪನ್ ಪ ಡೆಯದಿರುವವರ ಕೋರಿಕೆಯ ಮೇಲೂ ಮತ್ತು ಟೆಕ್ಸ್‌ಟೈಲ್ ಕಮಿಷನರ ಸಲಹೆ ಯ ಪ್ರಕಾರವೂ ಕಳೆದ ೨೦ ನೇ ತಾ॥ ಲಾ ಗಾಯಿತು ಆಗಸ್ಟು ೪ ನೇ ತಾ॥ ವರೆಗೆ ಪ ನಃ ಕೂಪನ್ನುಗಳನ್ನು ಕೊಡಲು ಏರ್ಪಡಿ ಸಿದೆ ಮರೆಂದೂ ಆನಂತರ ಒದಗುವ ಕೋರಿಕೆ ಗಳನ್ನು ಗಮನಿಸಲಾಗುವುದಿಲ್ಲವೆಂದೂ ಆ ದ್ದರಿಂದ ಎಲ್ಲರೂ ಕೂಪನ್ನುಗಳನ್ನು ಪಡೆ ಯಬೇಕೆಂದೂ ರಾಜಧಾನಿಯ ಜವಳಿ ವ ರ್ತಕ ಸಂಘದ ಕಾರ್ಯದರ್ಶಿಗಳು ತಿಳಿಸು ತ್ತಾರೆ.

ಪ್ಯಾಲಸ್ಟೈನಿನಲ್ಲಿ ಹಿಟ್ಲರರು

ಹಿಟ್ಲರರು ಯಹೂದ್ಯರ ದೇಶವಾದ ಪ್ಯಾ ಲಸ್ಟೈನಿನಲ್ಲಿರುವರು. ಈ ಕದನ [illegible] ಸ್ಟ್ ಸೈನಿಕರು ಹೇಳುತ್ತಾರೆ [illegible] ತ್ರಿಕೆಗಳು ಈ ಸುದ್ದಿಯನ್ನು ಪ್ರಕಟಿಸಿವೆ ಯಹೂದ್ಯರ ವೇಷ ಧರಿಸಿರುವ ಹಿಟ್ಲ ರು ಈಗ ಅಲ್ಲಿರುವುದು [illegible] ವ್ಯಾಖ್ಯಾನ ಮಾಡಿವೆ, ರಷ್ಯನ್ ಸೈನಿಕರು ಹಿಟ್ಲರರು ಎಂತಹ ವೇಷವನ್ನಾದರೂ ತ ಯಾರಾಗಿರುವರೆಂದು ಹೇಳುತ್ತಾರೆ.

ದಳವಾಯಿ ಹೈಸ್ಕೂಲ್

ಈ ದಿನ ಮಧ್ಯಾಹ್ನ ತರಾಲು ಕಛೇರಿಯಲ್ಲಿ ಇಂಡಿಯಾ ಸರ್ಕಾರದ ಮತ್ತು ಮೈಸೂರು ಸರ್ಕಾರದ ಪ್ರತಿನಿಧಿಗಳು ಸೇರಿ ರೇಷ್ಮೆ ಹತೋಟಿ ಆಜ್ಞೆಯನ್ನು ರದ್ದುಪಡಿಸುವ ವಿಚಾರವಾಗಿ ಸಮಾಲೋಚನೆ ನಡೆಸಿದರು.

ಸಭೆಕ್ಕೆ ಆಯುರ್ವೇದಾಧಿಕಾರಿಗಳಿಲ್ಲ

ಬೆಂಗಳೂರಿನ ಜಯಚಾಮರಾಜೇಂದ್ರ ಆಯುರ್ವೇದ ಮತ್ತು ಯುನಾನಿ ಸಂಸ್ಥೆಗೆ ಒಬ್ಬ ಭಾರಿ ಅಧಿಕಾರಿಯನ್ನು ನೇಮಿಸುವ ವಿಷಯವು ಸಭೆಕ್ಕೆ ಮನ್ನಾ ಮಾಡಲ್ಪಟ್ಟಿದೆಯೆಂದು ಗೊತ್ತಾಗಿದೆ

ಮೆಕಾರ್ಥರ್ ಭೇಟಿ ಮಾಡಲಿಲ್ಲ

ಜಪಾನಿನಿಂದ ಮನಿಲಾಕ್ಕೆ ಬಂದಿದ್ದ ರಾಯಭಾರಿಗಳು ಜ॥ ಮೆಕಾರ್ಥರೊಡನೆ ಭೇಟಿ ಮಾಡಲೇ ಇಲ್ಲವೆಂದೂ ಮಿತ್ರ ಸೇನಾಧಿಕಾರಿಗಳೊಡನೆ ಮಾತುಕತೆ ನಡೆಸಿ ವಾಪಸು ತೆರಳಿದರೆಂದೂ ತಿಳಿದುಬಂದಿದೆ.

ಪಂ॥ ತತ್ವಭೂಷಣರವರ ನಿಧನ

ಬ್ರಹ್ಮಸಮಾಜದ ನಾಯಕರೂ, ಬಹಳ ವೇದಾಂತಿಗಳೂ ಮತ್ತು ಸಂಸ್ಕೃತ ಪಂಡಿತರೂ ಆದ ಪಂ॥ ತತ್ವಭೂಷಣರವರು ನೆನ್ನೆ ಕಲ್ಕತ್ತೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮಿಲಿಟರಿಗೆ ತಯಾರಿಸುವುದು ನಿಂತಿತು

ಅಮೇರಿಕದಲ್ಲಿ ಎಲ್ಲಾ ಕಾರ್ಖಾನೆಗಳಲ್ಲಿಯೂ ಯುದ್ಧಕ್ಕೆ ತಯಾರಿಸುತ್ತಿದ್ದ ಸಾಮಗ್ರಿಗಳನ್ನು ನಿಲ್ಲಿಸಿ ಇನ್ನುಮುಂದೆ ನಾಗರೀಕರಿಗೆ ಆವಶ್ಯಕವಾದ ಸಾಮಗ್ರಿಗಳನ್ನು ತಯಾರಿಸುವರೆಂದು ತಿಳಿದಿದೆ ಯುದ್ಧನಿಂತಾಗಿನಿಂದಲೂ ಜಂಬಫೋಟಗೂ ನಾವಿಕರು ಜಗೆ ನಿರುದ್ಯೋಗಿಗಳು ಹೆಚ್ಚುತ್ತಿರುವರ

ಅಣುಬಾಂಬನ್ನು ನ್ಯಾಯಬಾಹಿರವನ್ನಾಗಿ ಮಾಡಬೇಕು

ಕಳೆದ ಶನಿವಾರ ಲಂಡನ್ನಿನಲ್ಲಿ ಮಿ॥ ಸೋರೆನ್ಸನ್‌ರವರ ಅಧ್ಯಕ್ಷತೆಯಲ್ಲಿ ಪ್ರಪಂಚ ಶಾಂತಿ ಸಮ್ಮೇಳನವು ನಡೆಯಿತು ಅಣುಬಾಂಬನ್ನು ಉಪಯೋಗಿಸುವುದು ಕಾನೂನಿಗೆ ವಿರುದ್ಧವಾದುದೆಂದು ಘೋಷಿಸುವಂತೆ ಶಾಂತಿಪ್ರತಿಜ್ಞಾ ಸಂಘದ ಮಿ॥ ರಾಯ್ ವಾಕರ್ರವರು ಸೂಚನೆ ಮಾಡಿದ್ದಾರೆ.

ಅಂಚೆ ನೌಕರರ ಸಂಬಳ

ಅಂಚೆ ಮತ್ತು ತಂತಿ ಇಲಾಖೆಯ ಗುಮಾಸ್ತರ ಸಂಬಳಗಳನ್ನು ಕನಿಷ್ಠಪಕ್ಷ ೪೦ ರಿಂದ ೫೦ ರೂ. ವರೆಗೆ ನಿಗದಿಮಾಡಬೇಕೆಂದು ಇಂಡಿಯಾ ಸರ್ಕಾರದವರು ಆಲೋಚಿಸುತ್ತಿದ್ದಾರೆ.

ಅಣುಬಾಂಬಿನ ಪರಿಣಾಮ ಪ್ರಪಂಚದ ಧ್ವಂಸ

ಅಣುವನ್ನು ಛೇದಿಸುವುದರ ಅಂತಿಮ ಪರಿಣಾಮವು ಪ್ರಪಂಚವನ್ನೇ ಛೇದಿಸಲು ಸಮರ್ಥವಾಗಬಹುದೆಂದು ಸುಪ್ರಸಿದ್ಧ ಲೇಖಕರಾದ ಬರ್ನಾರ್ಡ್ ಷಾರವರು ಹೇಳಿದ್ದಾರೆ ಅಣುವಿನೊಡನೆ ಮಾನವ ಜನಾಂಗವು ಕಣ್ಣುಮುಚ್ಚಾಲೆಯಲ್ಲಿ ತೊಡಗಿದೆ ಎಂಬುದು ಅವರ ಅಭಿಪ್ರಾಯ

ಸಂಗೀತ

ಉಪಾಕರ್ಮದ ಪ್ರಯುಕ್ತ ಎಂಟನೇ ತಾರೀಕು ಗುರುವಾರ ಸಂಜೆ ಏಳು ಘಂಟೆಗೆ ಶ್ರೀ ಸರಸ್ವತಿ ಸಂಗೀತ ಸಮಾಜದ ಪರವಾಗಿ ಮೈಸೂರ ಸಹಕಾರ ಭವನದಲ್ಲಿ ವಿದ್ವಾಂಸರುಗಳಾದ ಆರ್ ಕೆ. ಶ್ರೀಕಂಠನ್ ಮತ್ತು ಆರ್. ಕೆ. ರಾಮನಾಥನವರ ಗಾನ ಸಂಗೀತವು ನಡೆಯುತ್ತದೆ ಸಕ್ಕರೆಗೂ ಸ್ವಾಗತ ಪ್ರತಿ... ಮುಂದಿನ ತಿಂಗಳಲ್ಲಿ ಶ್ರೀ ಚಾರ... ...ರ ಗಾನಾ ... ... ಸಂಗೀತವು ನಡೆಯಲಾಗಿದೆ

ಜಪಾನಿಗೆ ಜ॥ ಮೆಕಾರ್ಥರರು

ಮಿತ್ರ ಸೈನ್ಯಗಳು ಜಪಾನನ್ನು ಪ್ರವೇಶಿಸಲು ಸಿದ್ಧಪಡಿಸಿಕೊಳ್ಳುತ್ತಿವೆ. ... ಮೆಕಾರ್ಥರರವರೇ ಇದರ ನಾಯಕತ್ವ ವಹಿಸುವರು. ಜಪಾನಿಯರು ಷರತ್ತುಗಳನ್ನು ಪರಿಶೀಲಿಸುವುದಕ್ಕೆ ಮುಂಚೆ ... ಮಿತ್ರ ಸೈನ್ಯಗಳು ಬಂದಿಳಿಯಲು ... ಯಾದ ಸಮಾಚಾರಗಳನ್ನೆಲ್ಲಾ ... ಸಬೇಕೆಂದು ಸೂಚನೆ ಕೊಡಲಾಗಿದೆ.

ಜಪಾನಿನ ಬಗ್ಗೆ ಬ್ರಿಟನ್ನಿನಲ್ಲಿ ಸಂಶಯ

ಮನಿಲಾದಲ್ಲಿ ಶರಣಾಗತಿ ವ್ಯವಹಾರದ ಪ್ರಾರಂಭದಲ್ಲಿಯೇ ಬಗ್ಗೆ ಜಪಾನರು ತೋರಿಸಿದ ವರ್ತನೆಯು ಅವರ ನಿಜವಾದ ಉದ್ದೇಶದ ವಿಚಾರದಲ್ಲಿ ಬ್ರಿಟನರಿಗೆ ಸಂಶಯವನ್ನು ಉಂಟುಮಾಡಿದೆ ಜಪಾನು ತನ್ನ ತಪ್ಪನ್ನು ಒಪ್ಪಿಕೊಂಡಿಲ್ಲ; ಪರಾಜಯಕ್ಕಾಗಿ ಅಗ್ರಹವನ್ನು ತೋರುತ್ತಿದೆ. ಇಷ್ಟು ಬೇಗ ಜಪಾನು ತೋರಿಸುತ್ತಿರುವ ತಂತ್ರವು ಎಲ್ಲರ ಸಂಶಯವನ್ನೂ ಕೆರಳಿಸಿದೆ; ಅವರಿಗೆ ಸರಿಯಾಗಿ ಬುದ್ಧಿ ಕಲಿಸಬೇಕು ಎಂದು ಬ್ರಿಟಿಷ್ ಪತ್ರಿಕೆಗಳು ಸಾರುತ್ತಿವೆ

ಭಾರತ ರಾಷ್ಟ್ರೀಯ ಸೇನೆ

ಬ್ರಿಟನರಿಗೆ ವಿರುದ್ಧವಾಗಿ ಜಪಾನರೊಡನೆ ಹೋರಾಡಿದ ಭಾರತ ರಾಷ್ಟ್ರೀಯ ಸೇನೆಯ ವಿಷಯವಾಗಿ ತಮ್ಮ ನೀತಿಯನ್ನು ಸರ್ಕಾರದವರು ನಿರ್ಧರಿಸಬೇಕೆಂದು ಪಂಡಿತ ಜವಾಹರಲಾಲರು ಕೋರಿದ್ದಾರೆ. ೩೫,೦೦೦ ಸಂಖ್ಯೆಯುಳ್ಳ ಈ ಸೈನಿಕರು ಸಿಂಗಪುರದ ಪತನಾನಂತರ ಜಪಾನರೊಡನೆ ಸೇರಿ ಬ್ರಿಟನರನ್ನು ಎದುರಿಸಲು ಭಾರತ ರಾಷ್ಟ್ರೀಯ ಸೇನೆಯನ್ನು ರಚಿಸಿದರು; ಅವರು ಹಿಡಿದ ದಾರಿ ತಪ್ಪು, ಆದರೆ ದೇಶಾಭಿಮಾನವು ಅವರ ಈ ವರ್ತನೆಗೆ ಮೂಲಕಾರಣವಾಗಿತ್ತು; ಈಗ ಅವರುಗಳು ನಮ್ಮ ದೇಶದಲ್ಲಿ ಬಂಧನದಲ್ಲಿದ್ದಾರೆ, ಅವರ ಮೊಕದ್ದಮೆಯ ವಿಚಾರದಲ್ಲಿ ಭಾರತೀಯರೆಲ್ಲರೂ ಕುತೂಹಲರಾಗಿದ್ದಾರೆ. ಅವರಿಗೆ ಕೊಂಚವೂ ಅನ್ಯಾಯವಾಗದಂತೆ ನ್ಯಾಯ ದೊರಕಬೇಕು... ಜವಾಹರಲಾಲರು ತಿಳಿಸಿರುವರು.

ಪೆಸಿಫಿಕ್ ನೆಲೆಗಳು ಅಮೇರಿಕದ ಹತೋಟಿಯಲ್ಲಿ

ಇಂಗ್ಲೆಂಡ್ ಫ್ರಾನ್ಸ್ ಮತ್ತು ಹಾಲೆಂಡುಗಳಿಗೆ ಸೇರಿದ ದ್ವೀಪಗಳಲ್ಲದೆ ಇತರ ಪೆಸಿಫಿಕ್ ದ್ವೀಪಗಳ ಒಂದು ಗುಂಪನ್ನು ಅಮೇರಿಕವು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿಯೇ ಇಟ್ಟುಕೊಳ್ಳಬೇಕೆಂಬ ... ವನ್ನು ಅಲ್ಲಿನ ನೌಕಾ ಸಮಿತಿ ... ಕೊಟ್ಟಿರುತ್ತದೆ ಇದರಿಂದ ಅಮೇರಿಕವು ಪೆಸಿಫಿಕ್ಕಿನಲ್ಲಿ ಪ್ರಾಬಲ್ಯವನ್ನು ... ... ಸಾಧಿಸುತ್ತದೆ ಎಂದು ಬ್ರಿಟನ್ನಿನ ಡೈಲಿ ... ಪತ್ರಿಕೆ ಟೀಕಿಸಿದೆ.

ದಯಾನಂದ [illegible]

[illegible] ಶ್ರೀ ದಯಾನಂದ [illegible] ... ನಡೆಯುತ್ತದೆ

ಸಾಧ್ವಿ

ತಾ॥ ೨೧-೮-೪೫ ಮಂಗಳವಾರ

ಮೈಸೂರಿನಲ್ಲೂ ಪ್ರತಿಬಂಧಕಗಳು ಹೋಗಬಾರದೇ ?

ಯುದ್ಧ ಮುಕ್ತಾಯದ ಪರಿಣಾಮವಾಗಿ ಹಿಂದೂಸ್ಥಾನದಲ್ಲೆಲ್ಲಾ ಪ್ರತಿಬಂಧಕಗಳು ಒಂದಾಗುತ್ತಲೊಂದು ಹೋಗುತ್ತಿವೆ. ಅಸ್ಸಾಂ ಪ್ರಾಂತ್ಯವು ಇದನ್ನೇ ನೀತಿಯನ್ನು ಹಾಕಿ ಕಾಂಗ್ರೆಸ್ ಮೇಲಿನ ನಿಬಂಧಗಳನ್ನೆಲ್ಲ ವಜಾ ಮಾಡಿತು. ಅನಂತರ ಪಂಜಾಬು ಪ್ರಾಂತ್ಯವು ಕಾಂಗ್ರೆಸ್ ಮತ್ತು ಇತರ ಸಂಸ್ಥೆಗಳ ಮೇಲಿನ ಪ್ರತಿಬಂಧಕಗಳನ್ನೆಲ್ಲಾ ತೆಗೆದು ಮುಟ್ಟುಗೋಲಾಗಿದ್ದ ಆಸ್ತಿಪಾಸ್ತಿಗಳನ್ನೂ ಹಣಕಾಸುಗಳನ್ನೂ ಕೊಟ್ಟಿತು. ಸಿಂಧ್ ಸರ್ಕಾರದವರು ಈ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡಿದ್ದಾರೆ.

ಇತ್ತೀಚಾಗಿ ಬಂಗಾಳ ಸರ್ಕಾರದವರು ಭಾರತ ರಕ್ಷಣಾ ಶಾಸನದನ್ವಯ ಹಲವು ಪ್ರಕಟನೆ ಹೊರಡಿಸಿದ್ದಾರೆ. ಆ ಪ್ರಕಟನೆಯ ಪ್ರಕಾರ ಎಲ್ಲಾ ಕಾಂಗ್ರೆಸ್, ವಿದ್ಯಾರ್ಥಿ, ಸ್ವಯಂ ಸೇವಕ ಸಂಸ್ಥೆಗಳ ಮೇಲೂ ಮತ್ತು ಸಮಿತಿಗಳ ಮೇಲೂ ಇದ್ದ ಪ್ರತಿಬಂಧಕಗಳನ್ನು ತೆಗೆದು ಹಾಕಿದ್ದಾರೆ.

ಇಂಡಿಯಾ ಸರ್ಕಾರದವರೂ ಸಹ ಇನ್ನು ಒಂದು ವಾರದೊಳಗಾಗಿ ಕಾಂಗ್ರೆಸ್ ಸಂಸ್ಥೆಯ ಮೇಲಿರುವ ಅಡ್ಡಿಗಳನ್ನೆಲ್ಲಾ ತೆಗೆದು ಅದರ ಆಸ್ತಿಪಾಸ್ತಿಗಳನ್ನು ವಾಪಸು ಕೊಡುವಂತೆ ನಿರ್ಧರಿಸಿರುವುದಾಗಿ ಗೊತ್ತಾಗಿದೆ. ಇನ್ನು ಎಂಟು ದಿನಗಳಲ್ಲಿ ಇಡೀ ದೇಶದಲ್ಲಿಯೇ ಶಾಂತಿ ವಾತಾವರಣವು ನೆಲೆಸಿ ಇನ್ನೂ ಬಂಧನದಲ್ಲಿರುವ ಕೈದಿಗಳ ಬಿಡುಗಡೆಯಾಗಿ ಸಾಮಾನ್ಯ ಪರಿಸ್ಥಿತಿಯು ಬರುವುದೆಂಬ ನಿರೀಕ್ಷಣೆಯಿದೆ.

ಹೀಗಿರುವಲ್ಲಿ ನಮ್ಮ ಮೈಸೂರಿನ ವಿಚಾರವನ್ನು ಗಮನಿಸಬೇಕಾದುದು ಅಗತ್ಯ. ಮೇಲ್ಕಂಡ ನಿರ್ಬಂಧಗಳೆಲ್ಲವೂ ಯುದ್ಧದ ಪರಿಸ್ಥಿತಿಯಿಂದ ಮೊದಲು ಇಂಡಿಯಾ ಸರ್ಕಾರದವರಿಂದ ಜಾರಿಮಾಡಲ್ಪಟ್ಟವು. ಅವುಗಳನ್ನೇ ಮೈಸೂರು ಸರ್ಕಾರವು ಅಕ್ಷರಶಃ ಇಲ್ಲಿಗೂ ಅನ್ವಯಿಸಿತು. ಈ ನಿರ್ಬಂಧಗಳ ಮೂಲ ಕಾರಣಗಳೇ ನಿವಾರಣೆಯಾಗಿರುವಾಗ ಅವುಗಳನ್ನು ಮುಂದುವರಿಸುವ ಅಗತ್ಯವಿಲ್ಲವೆಂದು ಇಂಡಿಯಾ ಸರ್ಕಾರದವರು ಮನಗಂಡಿದ್ದಾರೆ.

ಇಂತಹ ಪ್ರತಿಬಂಧಕಗಳಿಗೆ ಬ್ರಿಟಿಷ್ ಇಂಡಿಯಾದಲ್ಲಿರುವುದಕ್ಕಿಂತಲೂ ಮೈಸೂರಿನಲ್ಲಿ ಅಗತ್ಯವು ಕಡಿಮೆ. ಭಾರತ ಸರ್ಕಾರವು 'ಕ್ವಿಟ್ ಇಂಡಿಯಾ' ನಿರ್ಣಯವನ್ನು ಮಾಡಿದ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಮೇಲಿನ ಪ್ರತಿಬಂಧಕವನ್ನು ತೆಗೆದು ಎಲ್ಲಾ ನಾಯಕರನ್ನೂ ಬಿಡುಗಡೆ ಮಾಡಿದೆ. ಯಾವ ನಿರ್ಣಯವನ್ನೂ ಮಾಡದ ಮೈಸೂರ ಕಾಂಗ್ರೆಸ್ ಸಂಸ್ಥೆಗಳ ಪ್ರತಿಬಂಧಕಗಳನ್ನು ಇನ್ನೂ ತೆಗೆಯದಿರುವುದು ವಿಷಾದಕರ. ಈ ಬಗ್ಗೆಯೂ ಮತ್ತು ಈ ವಿಧವಾದ ಇತರ ಅಡಚಣೆಗಳ [illegible] ಮೈಸೂರು [illegible] ಭಾರತ ಸರ್ಕಾರಕ್ಕಿಂತಲೂ [illegible] ಎಲ್ಲಾ ಅಡ್ಡಿಗಳನ್ನು [illegible] ಮೈಸೂರು ದೇಶಕ್ಕೇ [illegible] [illegible]?

ಅನ್ನ ಶಾಂತಿ

ಸ್ವಂ.ಸು.] ನಂಜನಗೂಡು ೨೦

ಏಕಯೋತ್ಸವದ ಪ್ರಯುಕ್ತ ನೆನ್ನೆ ಇಲ್ಲಿರುವ ಎಲ್ಲಾ ಜಾಡಮಾಲಿಗಳಿಗೂ, ನೂರಾರು ಇತರ ಬಡಜನಗಳಿಗೂ ಅನ್ನ ಹಾಕಲಾಯಿತು; ಶಾಲಾ ಮಕ್ಕಳಿಗೆಲ್ಲಾ ಸಿಹಿ ತಿಂಡಿ ಹಂಚಲ್ಪಟ್ಟಿತು ಮತ್ತು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು.

ರೈಲ್ವೆ ತೊಂದರೆ

ತಾಂಡವಪುರದ ಬಳಿ ಬಸವನಪುರದ ರೈಲ್ವೆ ಗೇಟಿನಲ್ಲಿ ಒಬ್ಬ ಜವಾನನಿಲ್ಲದೆ ಹಲವು ಅಪಾಯಗಳಾಗುವ ಸಂಭವವಿದೆ, ಕೆಲವು ತಿಂಗಳ ಕೆಳಗೆ ಒಬ್ಬಳು ಸತ್ತೇ ಹೋದಳೆಂದು ತಿಳಿದುಬಂದಿದೆ. ಇಲಾಖೆಯವರು ಕೂಡಲೆ ಒಬ್ಬ ಗೇಟ್ ಕೀಪರನ್ನು ಇಡದಿದ್ದರೆ ಅಪಾಯ ಹೆಚ್ಚು.

ಬಟ್ಟೆ ಡಿಪೋ:—ಹೊಸ ಏರ್ಪಾಡಿನಿಂದ ಸರ್ಕಾರಿ ಸ್ಟ್ಯಾಂಡರ್ಡ್ ಬಟ್ಟೆ ಡಿಪೋ ಜನರಿಗೆ ಉಪಯೋಗವಾಗಿ ಕೆಲಸ ಮಾಡುತ್ತಿದೆ. ಹೆಚ್ಚು ತರಹೆ ಬಟ್ಟೆಗಳನ್ನು ತರಿಸಿಟ್ಟರಾದೀತು.

ಕುಮುಪಲಕ್ಕಿ:—ಡಿಪೋಗಳಲ್ಲಿ ಈಗ ಮಾರಾಟವಾಗುತ್ತಿರುವ ಈ ಅಕ್ಕಿ ಉಪಯೋಗಿಸುತ್ತಿರುವವರು ಹೊಟ್ಟೆನೋವೆಂದು ಹೇಳುತ್ತಿದ್ದಾರೆ. ಬಿಳಿ ಅಕ್ಕಿಯನ್ನು ಹಂಚುವುದು ಮೇಲು.

ಶಿಥಿಲವಾದ ಮಂಟಪ:—ಬಾಳೆ ಎಲೆ ಮಾರುತ್ತಿರುವ ಊರಿನ ಮಧ್ಯದ ಪೋಲಿಸ್ ಸ್ಟೇಷನ್ ಬಳಿ ಪಾಳು ಬಿದ್ದ ಮಂಟಪವೂ ಅದರಲ್ಲಿ ತಲೆ ಇಲ್ಲದ ಗಣಪತಿ ವಿಗ್ರಹವೂ ಇದ್ದು ಸುತ್ತಲೂ ಹೊಲಸಿಗೆ ತೌರುಮನೆಯಾಗಿರುತ್ತೆ. ಇದು ಯಾರ ಕಣ್ಣಿಗೂ ಬಿದ್ದಿಲ್ಲವೆ? ಪುರಸಭೆ ಏಕೆ ಕ್ರಮ ಕೈಗೊಳ್ಳಬಾರದು?

ಒಪೆರಾ ಟಾಕೀಸ್
22—8—45 ರಿಂದ
ಪ್ರತಿದಿನ ೩ ಆಟಗಳು
ಭಾಯ್ - ಚಾರ
ಭಾರತ್ ಭೂಷಣ್, ರಾಯ್ ಮೋಹನ್
ಮೊಹಮದ್ ಹಾದಿ, ಸುನಿತ್ರ,
ಬೇಹಾಲ್ ಮುಂತಾದವರ ಪಾತ್ರ.

Edited, printed and published by
A. R. Nagarajan at the Sadhvi Press
D. Subbiah Road, Mysore

ಯಕ್ಷಗಾನ

ತಾ॥ ೨೩ ನೇ ಗುರುವಾರ ರಾತ್ರಿ ೯॥ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀರಾಮ ಪ್ರೆಸ್ಸಿನ ಮಹಡಿ ಮೇಲೆ ಪೂರ್ಣಿಮಾ ಪ್ರಯುಕ್ತ ಶ್ರೀ ಹನುಮನ್ತಂಕಲ್ಪಿತ ಯಕ್ಷಗಾನ ಪುನರುಜ್ಜೀವಿನಿ ಸಂಘದವರು ದಿವಂಗತ ಎಂ. ಸುಬ್ಬಯ್ಯ ಭಾಗವತರಿಂದ ರಚಿಸಲ್ಪಟ್ಟ 'ಭಕ್ತ ಅತಿಕಾಯ' ಎಂಬ ಯಕ್ಷಗಾನ ಪ್ರಸಂಗವನ್ನು ನಡೆಸುತ್ತಾರೆ. ಸರ್ವರಿಗೂ ಸ್ವಾಗತವುಂಟು.

ಸಹಾಯಾರ್ಥ ನಾಟಕ

ರಾಜಧಾನಿಯ ಎಸ್. ಟಿ. ಇ. ಆರ್ ಆರ್. ನಾಟಕ ಮಂಡಳಿಯವರು ಇದೇ ಮಾಹೆ ೨೩ ನೇ ಗುರುವಾರ ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ, 'ನವೀನ ಸಂಸಾರವು' ಎಂಬ ನೂತನ ಸಾಮಾಜಿಕ ನಾಟಕವನ್ನು ಅಭಿನಯಿಸುವರು. ಈ ಪ್ರದರ್ಶನದಿಂದ ಬಂದ ಉತ್ಪತ್ತಿಯನ್ನು ಮೇಲ್ಕಂಡ ನಾಟಕ ಮಂಡಲಿಯ ಪುನರುದ್ಧಾರಕ್ಕಾಗಿ ವಿನಿಯೋಗಿಸಲಾಗುವುದು.

ಹೋಟೇಲು ಕೆಲಸಗಾರರ ಸಂಘ

ಈ ದಿನ ರಾತ್ರಿ ೧೦॥ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಹೋಟೇಲು ಕೆಲಸಗಾರರ ಸಂಘದ ಸಭೆಯು ನಡೆಯುತ್ತದೆ. ಮೆಂಬರುಗಳೆಲ್ಲರೂ ತಪ್ಪದೆ ಬರಬೇಕಾಗಿ ಕಾರ್ಯದರ್ಶಿಗಳು ಕೋರಿರುತ್ತಾರೆ.

ಪ್ರವಾಹದಿಂದ ವ್ಯಾಘ್ರಗಳು ಊರಿಗೆ ನುಗ್ಗಿದವು

ಬ್ರಹ್ಮಪುತ್ರಾನದಿಯಲ್ಲಿ ಉಂಟಾಗಿರುವ ವಿಪರೀತ ಪ್ರವಾಹದ ದೆಸೆಯಿಂದ ನೀರು ಉಕ್ಕಿಬಂದು ಸಿರಾಜ್‌ಗಂಜಿನ ಮಧ್ಯಪ್ರದೇಶವಿನಃ ಮಿಕ್ಕ ಭಾಗಗಳು ನೀರಲ್ಲಿ ಮುಳುಗಿ ಸುತ್ತಮುತ್ತಲಿನ ಕಾಡುಮೇಡುಗಳಿಂದ ಹಾವುಗಳು ಬಂದು ಊರಿನ ಮನೆಗಳಲ್ಲಿ ಸೇರಿಕೊಂಡುಬಿಟ್ಟಿವೆ. ಕಾಡುಹಂದಿಗಳೂ ಆನೆಗಳೂ ಕೋಣಗಳೂ ಕೊಚ್ಚಿ ಬಂದು ಜನ ಗಾಬರಿಯಾಗಿದ್ದಾರೆ.

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿ
ತಿಂಗಳಿಗೆ ಚಂದಾ ಎಂಟಾಣೆ ಮಾತ್ರ
ಜಾಹಿರಾತಿನ ದರಗಳಿಗೆ
ವಿಚಾರಿಸಿರಿ

ಸ್ವರಾಜ್ಯ ಬರುವವ[illegible] ಸಂತಾನ ಬೇಡ

ಪತ್ರಿಕೋದ್ಯೋಗಿಗಳಾದ [illegible] ವರಿಗೂ ಇಂದುಮತಿಯರಿಗೂ [illegible] ಮದಲ್ಲಿ ನೂತನ ರೀತಿಯಲ್ಲಿ [illegible] ಜರುಗಿತು, ಆಂಧ್ರದೇಶದ [illegible] ರೋಹಿತರಾದ ಪ್ರಭಾಕರರವರು [illegible] ಮಾಡಿಸಿದರು. ಹಿಂದೂಸ್ಥಾನ[illegible]ಲ್ಲಿಯೇ ಮಂತ್ರಗಳು ಹೇಳಲ್ಪಟ್ಟ[illegible] ಮಹಾತ್ಮಾ ಗಾಂಧಿಯವರು ದಂಪತಿಗಳಿಗೆ ನೂಲಿನ ಹಾರಗಳನ್ನು [illegible] ಆಶೀರ್ವದಿಸಿದರು. ಮಹಾತ್ಮ[illegible]ಯಂತೆ ಸ್ವರಾಜ್ಯ ಬರುವವರೆಗೆ [illegible]ನ್ನು ಪಡೆಯುವುದಿಲ್ಲವೆಂದೂ [illegible]ಲ್ಲಿಯೇ ಇರುವುದಾಗಿಯೂ [illegible] ಪ್ರಮಾಣ ಮಾಡಿದರು.

ದಸ್ತಗಿರಿ ಖಂಡನೆ

ಶ್ರೀ ತಿಮ್ಮಾರೆಡ್ಡಿಯವರ [illegible] ಬಂಧಕಾಜ್ಞೆಯನ್ನು ಹಾಕಿ [illegible] ಗೃಹಬಂಧನ ಮಾಡಿರುವ ಸರ್ಕಾರ[illegible]ಯನ್ನು ಖಂಡಿಸಿ ಕೂಡಲೆ ಮೇಲ್ಕಂಡ ಆಜ್ಞೆಗಳನ್ನು ವಾಪಸ್ಸು [illegible] ಬೇಕೆಂಬ ನಿರ್ಣಯವನ್ನು [illegible] ರಸಭೆಯ ಕಾಂಗ್ರೆಸ್ ಪಕ್ಷದವರು [illegible] ಡೆದ ಪಾರ್ಟಿಯ ವಿಶೇಷ ಸಭೆ[illegible] ಡಿದ್ದಾರೆ.

ಹುಡುಗ ತಪ್ಪಿಸಿಕೊಂಡಿದ್ದಾನೆ

ಇಪ್ಪತ್ತು ವರ್ಷ ವಯಸ್ಸಿನ [illegible]ತ್ತು ತೆಳ್ಳಗೆ ಇರುವ ಚಿಟ್ಟ್ಯ [illegible]ನು ಬುದ್ಧಿಸ್ವಾಧೀನವಿಲ್ಲದೆ [illegible] ವಾರಗಳ ಲಾಗಾಯ್ತು ಮನೆಯಿಂದ [illegible]ಗಿಕೊಂಡಿದ್ದಾನೆ. ಮಾತು [illegible] ಕರಿಗೀರಿನ ಸ್ವಾಂಡರ್ [illegible] ಕೆಂಪುಗೀರಿನ ಷರಟನ್ನು [illegible] ಯಾರಾದರೂ ಕಂಡವರು ಅವನ [illegible]ಕೆಯ ವಿವರವನ್ನು ದಯವಿಟ್ಟು [illegible] ತುಂಬಾ ಕೃತಜ್ಞನಾಗಿರುತ್ತೇನೆ.

ಎ. ಆರ್. ಶ್ರೀಕಂಠ[illegible]
ದೇವೀರಮ್ಮಣ್ಣಿ ಅಗ್ರಹಾರ [illegible]

ಅಮೃತ[illegible]
ನಿತ್ಯದ ಜ್ವರ, ಮ[illegible]
ಜ್ವರ, ಜ್ವರದ ಗಡ್ಡೆ [illegible]
ಮೇಲೆ ಬಹಳ ಚೆನ್ನಾಗಿ[illegible]
ಮಾಡುತ್ತದೆ.
ಕೆ. ವಿ. ವೆಂಕಟರಾಮ[illegible]
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ[illegible]
ಅರಕಲವಾಡಿ.
ಏಜೆಂಟರು, ನರಸಿಂಹಾ ಸ್ಟೋ[illegible]
ಚಾಮರಾಜನಗರ

ಟಿ. ಸಿ. ನಟರಾ[illegible]
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತ[illegible]
ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ [illegible] ಔಷಧಿಗಳೂ ಸದಾ ದೊರೆಯುವುದಲ್ಲದೆ ಸಮಸ್ತ [illegible] ಚಿಕಿತ್ಸೆಯು [illegible] ಸುಲಭ [illegible] ಮಾಡಲ್ಪಡುವುದೆ.
ಝಂಡೂರವರ ಆಯುರ್ವೇದ ಔಷಧಿಗಳೆಲ್ಲವೂ ದೊರೆಯುತ್ತವೆ.

ಲಿಲ್ಲೀ ಬ್ರಾಂಡ್ ಕಾಫಿ
ಪುಡಿಯನ್ನೇ ಉಪಯೋಗಿಸಿ
V. O. P.
ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ (ವನಸ್ಪತಿ)
ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು
ಮತ್ತು ಪುಷ್ಟಿಕರವಾದದ್ದು
ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ಕ್ಕೆ ರೂ 0-10-6
ಡಿ. ಪುಟ್ಟಯ್ಯ,
ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.
ಬ್ರಾಂಚ್.—ದೇವರಾಜ ಮಾರ್ಕೆಟ್ : : ಸಕ್ಕರೆ ಮಂಡಿ, ಸಂತೇಪೇಟೆ

ಫೋನ್ ನಂ 392 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಬುಧವಾರ ೨೨-೮-೪೫ [ಸಂಚಿಕೆ ೨೧

ಕಾಂಗ್ರೆಸ್ ಸಂಸ್ಥೆಗಳ ಪ್ರತಿಬಂಧಕ ರದ್ದು

ಯ್ಯನವರ ಜಾಮೀನು ರದ್ದು

ಹೇಳಿಕೆಯ ವಿವರಗಳು

ಮೈಸೂರು ೨೨

ನ್ನು ಅಕ್ರಮವಾಗಿ ಬಂಧಿಸಿರಲಿಲ್ಲ ಶ್ರೀ॥ ಬಸವರಾಜು ರವರು ತಿಳಿಸಿರು ರವರ ಹೇಳಿಕೆಗೆ ಏಕೆ ಬೆಲೆಕೊಡ ಈ ಕಾರಣಗಳಿಂದ ಶ್ರೀ॥ ಚನ್ನ ಶ್ರೀ॥ ಬಸವರಾಜುರವರನ್ನು ನಿರ್ಬಂಧದಲ್ಲಿಟ್ಟಿದ್ದರೆಂಬುದಕ್ಕೆ ಸರಿ ರುಜುವಾತು ಇಲ್ಲ; ಮತ್ತು ಸಾಕ್ಷಿ ಳು ಪ್ರಾಸಿಕ್ಯೂಷನ್ನಿಗೆ ವಿರೋಧ ಇರುವ ಪ್ರಯುಕ್ತ ಕೆಳ ಕೋರ್ಟಿ ರ್ಮಾನವನ್ನು ತಳ್ಳಿಹಾಕಿ, ಆಪಾದಿತ ಲಾಸೆ ಮಾಡಲಾಗಿದೆ" ಎಂಬ ಟ ನ್ನು ಒಳಗೊಂಡ ತೀರ್ಪನ್ನು ಸೆಷ ನ್ಯಾಧೀಶರು ಶ್ರೀ॥ ಚನ್ನಯ್ಯನವ ಅಪೀಲಿನ ವಿಮರ್ಶೆ ಮಾಡು ರುತ್ತಾರೆ

೪ ನೇ ರಾತ್ರಿ ತಮ್ಮನ್ನು ಶ್ರೀ॥ ನವರು ಅಕ್ರಮವಾಗಿ ನಿರ್ಬಂಧಿ ಶ್ರೀ ಬಸವರಾಜುರವರು ದೂರಿ ಸಿದ್ಧಮೆಯಲ್ಲಿ, ಮ್ಯಾಜಿಸ್ಟ್ರೇಟರು ತಪ್ಪಿತಸ್ಥರೆಂದು ತೀರ್ಮಾನಿಸಿ ದಂಡ ವಿಧಿಸಿದ್ದರು. ಈ ತೀರ್ಪಿ ರೆ, ಶ್ರೀ॥ ಚನ್ನಯ್ಯನವರು ಅಪೀ ಸೆಸ್ ನ್ಯಾಯಾಧೀಶರ ಮುಂದೆ ನ್ಯಾಯಾಧೀಶ ರು ಅಪೀಲು ಮಾಡುತ್ತಾ ಈ ರೀತಿ ಅಭಿಪ್ರಾ ದ್ದಾರೆ—

ಸ್ ಸ್ಟೇಷನಿಗೆ ದಾಖಲುಮಾಡಿಸಿದ ಲ್ಲಿ ಆಪಾದಿತರ ಹೆಸರು, ವಿಳಾಸ ಇಲ್ಲ. ಮತ್ತು ಆಪಾದಿತರೇ ಬಂಧನಕ್ಕೆ ಕಾರಣರೆಂದೂ ನಮೂ ಇಲ್ಲ; ಮತ್ತು ಸಬ್ ಇನ್ಸ್‌ಪೆಕ್ಟರ್ ಕೆಳಗೆ ಬರೆದು ಇಟ್ಟಿದ್ದ ಕೆಲವು ಹ್ಲಾ ಸೇರಿಸಿರುವಂತೆ ತ್ತದೆ. ಜಿಲ್ಲಾ ಬೋರ್ಡಿನ ಅಧ್ಯ ಚುನಾವಣೆ ಸಂಬಂಧವಲ್ಲಿ ರಾಂ ನೋಡುವಾರರಿಗೆ ಮತ ಕೊಡಿಸ ಭಾವನೆಯಿಂದ ಈ ಅಪರಾಧ ತ್ತಿತೆಂದು ಹೇಳಲಾಗದೆ ಆಪಾ ಮೈಸೂರು ಕಾಂಗ್ರೆಸ್ ಸಂಸ್ಥೆಯ ಕಾರ್ಯಕರ್ತರಾಗಿದ್ದಾರೆ ೧೯-೬-೪೪ ಕಾಂಗ್ರೆಸ್ ಕಛೇರಿಯಲ್ಲಿ ರಾಂ ಸುಮಾರು ರಾತ್ರಿ ೧೦ ಗಂಟೆಯ ದ್ದರು. ಅವರಲ್ಲಿ ಒಬ್ಬರನ್ನಾದ ಪ್ರಾಸಿಕ್ಯೂಷನ್ ಪರ ವಿಚಾರಣೆ ಮತ್ತು ಅದೇ ರಾತ್ರಿ ಶ್ರೀ॥ ಚನ್ನ ಮನೆಯಲ್ಲಿ ಇದ್ದವರಲ್ಲಿ ಯಾರ ಚಾರಣೆಗೆ ಗುರಿಪಡಿಸಿಲ್ಲ. ಶ್ರೀ॥ ಜರವರು ಏಕಮಾತ್ರ ಸಾಕ್ಷಿಗಳು. ಕ್ಷರು ಚಾರ್ಜ್‌ಷೀಟ್ ಹಾಕುವ ಯಾರನ್ನೂ ವಿಚಾರಣೆ ಮಾಡ ಸಲ್ಲಿಸಿದ ಶ್ರೀ॥ ರಾಜಯ್ಯನವರ ವಿವರವಾಗಿ ವಿಚಾರಿಸಿಲ್ಲ ರಾ ಗೆ ವಿವರ ಗೊತ್ತಿತ್ತೇ ಎಂಬುದೂ ಇಲ್ಲ. ಸಾಕ್ಷಿ ಸಾಹಿತ್ಯಗಳು ಮ ಸರಿತೋರುತ್ತಿಲ್ಲ. ಪ್ರಾಸಿ ಹೇಳಿಕೆಗಳಲ್ಲಿ ಅನೇಕ ದೊಡ್ಡ , ಸಣ್ಣಪುಟ್ಟ ವ್ಯತ್ಯಾಸಗಳೂ ಒಟ್ಟಿನಲ್ಲಿ ಹೇಳಿಕೆಗಳನ್ನು ತ್ತಿರುವುದು, ಅದಲ್ಲದೆ ಆಪಾ ರಾಧಿಗಳಿಂದ, ಮ್ಯಾಜಿಸ್ಟ್ರೇಟ ರುತ್ತಾರೆ ಇದು ಸರಿಯಲ್ಲ.

ಸೂಚನೆ

ನಾಳೆಯ ದಿನ ಯಜುರುಪಾಕರ್ಮದ ಪ್ರಯುಕ್ತ "ಸಾಧ್ವಿ" ಪತ್ರಿಕೆಗೆ ರಜ ಕೊಡಲಾಗಿದೆ. —ವ್ಯವಸ್ಥಾಪಕ

ಕಾಂಗ್ರೆಸ್ ಪ್ರತಿಬಂಧಕ ಗಳು ರದ್ದು

ಎಲ್ಲೆಲ್ಲಿ ಕಾಂಗ್ರೆಸ್ ಸಂಸ್ಥೆಗಳ ಮೇಲೆ ಪ್ರತಿಬಂಧಕಗಳಿವೆಯೋ ಅವುಗಳನ್ನೆಲ್ಲಾ ರದ್ದು ಮಾಡುವಂತೆ ಇಂಡಿಯಾ ಸರ್ಕಾರದವರು ಎಲ್ಲಾ ಪ್ರಾಂತ ಸರ್ಕಾರಗಳಿಗೂ ಕೂಡಲೇ ಸೂಚನೆ ಕೊಡಲಿದ್ದಾರೆಂದು ವಿಶ್ವಾಸಾರ್ಹ ಅಧಿಕಾರ ವಲಯಗಳಿಂದ ತಿಳಿದು ಬಂದಿದೆ. ಈ ದಿನ ಅಥವ ನಾಳೆ ಈ ಬಗ್ಗೆ ಪ್ರಕಟಣೆ ಹೊರಬೀಳುವ ನಿರೀಕ್ಷಣೆ ಇದೆ

ಇನ್ನೂ ಏನೇನೂ ವಿಚಾರಣೆ ಇಲ್ಲದ ಬಂಧನದಲ್ಲಿರುವ ಕಾಂಗ್ರೆಸ್ ವ್ಯಕ್ತಿಗಳನ್ನೆಲ್ಲಾ ಬಿಡುಗಡೆ ಮಾಡುವರೆಂದು ಹೇಳಲಾಗಿದೆ.

ಪ್ರಾಸಿಕ್ಯೂಷನ್ನಿನವರು ಆಪಾದನೆ ಸ್ಥಿರಪಡಿಸುವುದಕ್ಕಾಗಿ ವಾದಿಸುವುದು ಸ್ವಾಭಾವಿಕ. ಆದರೆ ಅದರಲ್ಲಿರುವ ನ್ಯೂನತೆಗಳನ್ನು ಬದಿಗಿಡುವುದು ಸರ್ವಥಾ ಸಾಧುವಲ್ಲ. ಶ್ರೀ ಬಸವರಾಜುರವರೇ ತಮ್ಮನ್ನು ಅಕ್ರಮವಾಗಿ ಬಂಧಿಸಿರಲಿಲ್ಲವೆಂದು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ ಆಪಾದಿತರು ಬಲಪ್ರಯೋಗಮಾಡಿದ್ದು ನನಗೆ ಸ್ಥಿರಪಟ್ಟಿರುವುದಿಲ್ಲ ತಮ್ಮ ಮೇಲೆ ಬಲಪ್ರಯೋಗ ಮತ್ತು ಅಕ್ರಮ ಬಂಧನ ನಡೆಸಲ್ಪಡುತ್ತಿದೆ ಎಂದು ತೋರಿಬಂದಾಗ ಹೊರಗಿನ ಸಹಾಯವನ್ನು ಯಾವ ವೇಳೆಯಲ್ಲೂ ಕೋರಲಿಲ್ಲವೆಂದು ಶ್ರೀ ಬಸವರಾಜುರವರು ಸಬ್ ಇನ್ಸ್‌ಪೆಕ್ಟರ್‌ರವರ ಮುಂದೆ ತಿಳಿಸಿರುತ್ತಾರೆ. ಮತ್ತು ಆಪಾದಿತರ ಮನೆಗೆ ಬಂದೊಡನೆಯೂ ಸಹ ತಮ್ಮನ್ನು ಅಕ್ರಮ ಬಂಧನಕ್ಕೆ ಒಳಪಡಿಸಿದರೆಂಬುದನ್ನು ಅವರು ತಿಳಿಸಿಲ್ಲ. ಆ ರಾತ್ರಿ ಅವರಿಗೆ ಮಲಗುವುದಕ್ಕಾಗಿ ಹಾಸಿಗೆ ಮೊದಲಾದ ಸೌಕರ್ಯಗಳನ್ನು ಒದಗಿಸಿದ್ದರೆಂದೂ ಮತ್ತು ತಾವು ಇದ್ದ ಸ್ಥಳದಿಂದಲೇ ಮನೆಯೊಳಗೆ ಮಾತನಾಡುವಂತೆ ಧ್ವನಿ ಕೇಳಬರುತ್ತಿತ್ತೆಂದೂ ತಿಳಿಸಿದ್ದಾರೆ, ಈ ಕಾರಣಗಳಿಂದ ಆಪಾದನೆ ಸ್ಥಿರಪಡುವುದಿಲ್ಲವಾದ ಕಾರಣ ಕೆಳಕೋರ್ಟಿನ ತೀರ್ಮಾನವನ್ನು ತಳ್ಳಿಹಾಕಿ, ಅವರನ್ನು ಖುಲಾಸೆ ಮಾಡಿದ್ದೇನೆ

ಆಪಾದಿತರ ಪರ ಶ್ರೀ ಟಿ. ಸುಬ್ಬಯ್ಯನವರು ಪ್ರಾಸಿಕ್ಯೂಷನ್ ಪರ ಶ್ರೀ ಕೆ. ಎಂ. ಸುಬ್ರಾಯರು ವಕಾಲತ್ತು ವಹಿಸಿದ್ದರು.

ಭಾರತದಲ್ಲಿ ಮಹಾ ಚುನಾವಣೆ

ಕತ್ತು ವರ್ಷಗಳ ಅವಧಿಯ ನಂತರ ಕೇಂದ್ರ ಶಾಸನ ಸಭೆಗೂ, ಪ್ರಾಂತ ಸಭೆಗಳಿಗೂ ಚುನಾವಣೆ ನಡೆಯುವಂತೆ ಇಂಡಿಯಾ ಸರ್ಕಾರದವರು ನಿನ್ನೆ ದಿನ ಆಜ್ಞೆ ಮಾಡಿದ್ದಾರೆ. ಮುಂದಿನ ಬಜೆಟ್ ಅಧಿವೇಶನಕ್ಕೆ ಮುಂಚೆ ಚುನಾವಣೆಗಳು ನಡೆಯುವುವು. ವೋಟರುಗಳ ಪಟ್ಟಿಯು ಸಿದ್ಧವಾಗುತ್ತಿದೆ.

ಕೌನ್ಸಿಲ್ ಆಫ್ ಸ್ಟೇಟ್ ಸಭೆಯ ವೋಟರುಗಳ ಪಟ್ಟಿಯು ಇನ್ನೂ ಸಿದ್ಧವಾಗಿಲ್ಲದಿರುವುದರಿಂದ ಆ ಸಭೆಗೆ ಮುಂದಿನ ಮೇ ತಿಂಗಳಿನ ವರೆಗೂ ಜೀವದಾನ ಮಾಡಲ್ಪಡುವುದು. ಕೇಂದ್ರ ಶಾಸನ ಸಭೆಗೂ ಇದೆ ರೀತಿ ಅನೇಕ ಸಾರಿ ಜೀವದಾನ ಮಾಡಲ್ಪಟ್ಟಿದೆ.

ಪ್ರಾಂತಿಕ ಸರ್ಕಾರಗಳು ಬೇಗನೆ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವರೆಂದು ನಿರೀಕ್ಷಿಸಲಾಗಿದೆ ಈಗಿನ ಕೇಂದ್ರ ಶಾಸನ ಸಭೆಯ ಅವಧಿಯು ಅಕ್ಟೋಬರ್ ಒಂದನೇ ತಾ॥ಗೆ ಮುಕ್ತಾಯವಾಗುವುದು.

ಪ್ರಾಂತ ಶಾಸನ ಸಭೆಗಳ ಚುನಾವಣೆಗೂ ಆಜ್ಞೆ ಹೊರಟಿದೆ.

—

ಕಸ್ತೂರಿ ಬಾ ಶಿಕ್ಷಣ ಶಿಬಿರ

ಕಡಹಾರವಳ್ಳಿಯಲ್ಲಿರುವ ಈ ಶಿಬಿರದ ಪ್ರತಿದಿನದ ಕಾರ್ಯಕ್ರಮಗಳು ಈ ರೀತಿ ಇವೆ:—ಪ್ರಾತಃಕಾಲ ೬-೩೦ಕ್ಕೆ ಪ್ರಾರ್ಥನೆ, ೬-೪೫ ರ ವರೆವಿಗೆ ವ್ಯಾಯಾಮ, ಪಾತ್ರೆಪದಾರ್ಥಗಳನ್ನು ತೊಳೆಯುವುದು, ೯ ಗಂಟೆಗೆ ಫಲಹಾರ, ೧೧ ರಿಂದ ೧ ಗಂಟೆಯ ವರೆಗೆ ತರಗತಿಗಳು ೧ ಗಂಟೆಗೆ ಊಟ ೩ ರಿಂದ ೬ ರ ವರೆಗೆ ತರಗತಿಗಳು ೬॥ ವರೆವಿಗೆ ಆಟಪಾಟಗಳು, ರಾತ್ರಿ ೮ ಗಂಟೆಗೆ ಊಟ.

ದಸ್ತಗಿರಿ

ನಂಜನಗೂಡಿನಲ್ಲಾ ನಿವಾಸಿಗಳಾದ ಲಕ್ಷ್ಮಯ್ಯ ಮತ್ತು ಶಿವಣ್ಣಯ್ಯ ಇವರುಗಳು ಕನ್ನೇಗೌಡನಕೊಪ್ಪಲಿನಲ್ಲಿ ಕಳವು ಒಡವೆಗಳನ್ನು ಮಾರುತ್ತಿದ್ದಾಗ ಅನುಮಾನದ ಮೇಲೆ ದಸ್ತಗಿರಿಯಾಗಿದ್ದಾರೆ. ಈ ಕಳವು ಸುಗಳು ಕೆಲವು ದಿನಗಳ ಹಿಂದೆ ನಂಜನಗೂಡು ತಾಲ್ಲೂಕಿನಲ್ಲಿ ನಡೆದ ಕಳುವಿಗೆ ಸಂಬಂಧಪಟ್ಟವೆಂದು ಗೊತ್ತಾಗಿದೆ. ತನಿಖೆ ನಡೆಯುತ್ತಿದೆ

ಕಾಂಗ್ರೆಸ್ ನಿರ್ಬಂಧ ಹೋಗುವುದು

ಸ್ವಂ.ಸು.ಪ್ರೆ॥] ಬೆಂಗಳೂರು, ೨೨

ಸಂಸ್ಥಾನದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಇತರ ನಾನಾ ಸಮಿತಿಗಳ ಮೇಲೆ ಇರುವ ನಿರ್ಬಂಧವನ್ನು ಹಿಂದು ಹಾಕಲು ಸರ್ಕಾರದವರು ತೀರ್ಮಾನಿಸಿ ಆಲೋಚಿಸುತ್ತಿರುವುದಾಗಿ ನಂಬಲರ್ಹ ಮೂಲ ಕಡೆಗಳಿಂದ ಗೊತ್ತಾಗಿದೆ

ಲಂಚಕೋರುವವರುಗಳ ವಿಚಾರಣಾ ಸಮಿತಿ

ಸಂಸ್ಥಾನದಲ್ಲಿ ಲಂಚ ತಿನ್ನುವವರುಗಳ ಹಾವಳಿಯನ್ನು ನಿವಾರಿಸಿ ಪರಿಹಾರೋಪಾಯಗಳ ಬಗ್ಗೆ ಸಲಹೆಗಳನ್ನು ಕೊಡಲು ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿರುತ್ತಾರೆ ರಾಜಸೇವಾಸಕ್ತ ಸಂಬ್ಯಾನರ್ಜಿಯವರು ಇದರ ಅಧ್ಯಕ್ಷರು; ಆಹಾರ ಶಾಖೆಯ ಡೈರೆಕ್ಟರೂ ವಿದ್ಯಾ ಇಲಾಖೆಯ ಕಾರ್ಯದರ್ಶಿಗಳೂ ಶ್ರೀಗಳಾದ ಡಿ. ಎಸ್. ಮಲ್ಲಪ್ಪ, ಭೂಪಾಳಂ, ಚಂದ್ರಶೇಖರಯ್ಯ ಮತ್ತು ಸಿದ್ದಿಖ್ ಎ. ಜೆ. ವಿಲೇರ್ ರವರುಗಳೂ ಸದಸ್ಯರುಗಳು.

ಂ ಂ ಂ ಂ

ಬೆಂಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ಎಸ್. ನಾರಾಯಣರಾಯರನ್ನು ಚೀಫ್ ಕಾರ್ಯದರ್ಶಿ ಸೆಕ್ರೆಟರಿಯೇಟ್ಗೆ ಒಂದು ತಿಂಗಳ ಕಾಲ ವರ್ಗ ಮಾಡಿದೆ. ಜಿಲ್ಲಾ ಎಕ್ಸೈಸ್ ಅಧಿಕಾರಿಗಳಾದ ಮಿ॥ ಎ ಎಸ್. ಬಿಳಿಗಿರಿರವರು ತಮ್ಮ ಕೆಲಸದ ಜೊತೆಗೆ ಡೆಪ್ಯುಟಿ ಕಮೀಷನರ್‌ರವರ ಕೆಲಸವನ್ನೂ ನೋಡುವರು

ಮೈಸೂರಿನವರು ಲಂಡನ್ನಿಗೆ

ಭಾರತದ ಹಲವು ಸಮಸ್ಯೆಗಳನ್ನು ಕುರಿತು ಚರ್ಚಿಸಲು ಅವಶ್ಯ ಬೇಗನೆ ಲಂಡನ್ನಿಗೆ ಬರಬೇಕೆಂದು ದಿವಾನ್ ಸರ್ ಮಿರ್ಜಾ ರವರಿಗೆ ಬ್ರಿಟನ್ ಸರ್ಕಾರದಿಂದ ಆಹ್ವಾನ ಬಂದಿದೆ. ಅವರು ಅಲ್ಲಿಗೆ ಪ್ರಯಾಣ ಮಾಡುವವರಾಗಿದ್ದಾರೆ.

ಶ್ರೀ ಶಿವಾನಂದ ತೀರ್ಥಸ್ವಾಮಿಗಳ ನಿರ್ಯಾಣ

ಮೊನ್ನೆ ಸಾಯಂಕಾಲ ನಂಜನಗೂಡಿನಲ್ಲಿ ಶ್ರೀ ಶಿವಾನಂದ ತೀರ್ಥ ಸ್ವಾಮಿಗಳು ತಮ್ಮ ೭೦ನೇ ವಯಸ್ಸಿನಲ್ಲಿ ನಿರ್ಯಾಣರಾದರೆಂದು ತಿಳಿಯಲು ವಿಷಾದಿಸುತ್ತೇವೆ ಇವರು ಶೃಂಗೇರಿ ಮಠದ ವೇ॥ ಬ್ರಂ॥ ಶ್ರೀ ಶ್ರೀಕಂಠಶಾಸ್ತ್ರಿಗಳ ಜ್ಯೇಷ್ಠ ಸಹೋದರರು. ಶ್ರೀಸ್ವಾಮಿಗಳು ಎರಡು ವರ್ಷದ ಹಿಂದೆ ಸನ್ಯಾಸಾಶ್ರಮವನ್ನು ಸ್ವೀಕರಿಸಿದ್ದರು. ಶ್ರೀ ವರ ಕ್ಷೇತ್ರದ ವೃಂದಾವನ ಸ್ವಾಮಿಗಳ ಸಾನ್ನಿಧ್ಯದ ವಿಶೇಷ.

ಮೆಣಸು ಪ್ರಯೋಗಿಸಿದ್ದಕ್ಕೆ ದಂಡ

೧-೮-೪೫ ರಲ್ಲಿ ಬಿ. ಪಿ. ಸುಬ್ಬರಾಯರು ಎಂಬ ನೋಟೀಸ್ ಮೈಸೂರು ಆರಕ್ಷಕರಿಗೆ ಗಳನ್ನು ಬಲವಾಗಿ ಕರೆದು ಒಪ್ಪಿಸಿ ಮೆಣಸಿನ ಪುಡಿಯಿಂದ ಆಪಾದನೆ ಸ್ಥಿರಪಟ್ಟಿತೆಂದು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಬಿ ಟಿ ಕೇಶವಣ್ಣನವರು ೮ ದಿವಸ ಸಾದಾ ಶಿಕ್ಷೆಯನ್ನೂ ದಂಡ ವಿಧಿಸಿದ್ದಾರೆ.

—

ಜಾನ ಶಿವಮೊಗ್ಗ ಮೊದಲಾದ ಕಡೆಗಳಲ್ಲಿ ಗಾಂಧಿ ಟೋಪಿ ಧರಿಸಿದ್ದ ವಿದ್ಯಾರ್ಥಿಗಳನ್ನು ಶಾಲೆಗೆ ಬರದಂತೆ ಶಾಲೆಯ ಅಧಿಕಾರಿಗಳು ತಡೆದರೆಂದು ಮತ್ತು ಕೆಲವರನ್ನು ಹೊರಹಾಕಿದರೆಂದು ತಿಳಿದುಬಂದಿದೆ. ವಿದ್ಯಾ ಇಲಾಖೆಯವರು ಈ ವಿಷಯದಲ್ಲಿ ತನಿಖೆ ನಡೆಸುತ್ತಿದ್ದಾರೆ.

ಸಾಧ್ವಿ

ತಾ|| ೨೨-೮-೪೫ ಬುಧವಾರ

ಲಂಚದ ನಿರ್ಮೂಲನ

ಜನರು ಹಲವು ಸಂದರ್ಭಗಳಲ್ಲಿ ತಮ್ಮ ಸೌಖ್ಯಾನುಸಾರ ಇತರರಿಂದ ಕೆಲಸ ಕಾರ್ಯಗಳನ್ನು ಮಾಡಿಸಿಕೊಂಡು ಅವರಿಗೆ ತಮ್ಮ ಕೃತಜ್ಞತೆಯನ್ನು ನಗದಾಗಿಯಾಗಲಿ, ಮತ್ತಾವ ರೂಪದಲ್ಲಿಯಾಗಲಿ ವ್ಯಕ್ತಪಡಿಸುವುದು ಮಾನವ ಸ್ವಭಾವ. ಇಂಜನಿಯರಿಂಗ್, ಎಕ್ಸೈಸ್, ಪಬ್ಲಿಕ್ ವರ್ಕ್ಸ್ ಮುಂತಾದ ಪರಿಪಾಲು ಇಲಾಖೆಗಳಂತೂ ಸಂಭಾವನೆಗಳ ಸಗ್ಗಿಗೆ ಹೆಸರು ಪಡೆದಿರುತ್ತವೆ. ಕಾನೂನಿಗೆ ಎದುರು ಸಂಭಾವನೆ ಕಾಣಿಸಿ ಕೊಡಿಸಿ ಕಾಸು ಬಂದಲ್ಲದೆ ಕಾರ್ಯದ ಮುನ್ನಡೆಯೇ ಸಾಗದಂತಿದ್ದು ವಸೂಲಿಯೇ ವ್ಯಾಪಾರವಾಗಿದ್ದರೆ ಅನ್ಯಾಯವಾದ ಜುಲ್ಮಾನೆ, ಇಲ್ಲವೇ ಲಂಚ ಎನಿಸಿಕೊಳ್ಳುತ್ತದೆ.

ಕ್ಷಾಮ—ಈ ಮಹಾಗಳ ಸಂಗ್ರಾಮ ಸಂದಿಗ್ಧ ಸಮಯಗಳು ಲಂಚಕೋರತನಕ್ಕೆ ತಕ್ಕ ಪರ್ವ ಕಾಲಗಳು. ಕಳೆದ ಆರು ವರ್ಷಗಳ ಘೋರ ಸಂಗ್ರಾಮವು ದೇಶದ ಸಮಸ್ಯೆಯನ್ನೇ ಜನತೆಗೆ ಅತಿ ಕಠೋರವನ್ನಾಗಿ ಮಾಡಿದ್ದಿತು. ಸಂಗ್ರಾಮದ ಕಾವು ಏರಿದಂತೆಲ್ಲಾ ಆಹಾರ ಸಾಮಗ್ರಿಗಳು ವ್ಯಾಪಾರಸ್ಥರ ಕೈಗೆ ಸಿಕ್ಕಿ ಮಿತಿಮೀರಿ ಜನತೆಯ ದಿಕ್ಕೆಟ್ಟಿಂದಲೇ ದೂರವಾಗಿ ಎಲ್ಲೆಲ್ಲೂ ಕಾಳಸಂತೆಗಾರಂಭವಾಯಿತು. ಸರ್ಕಾರವು ಜನಪದದ ಹಿತದಿಂದ ಆಹಾರ ಪದಾರ್ಥಗಳನ್ನು ಒಂದು ಹಿಡಿತಕ್ಕೆ ತೆಗೆದುಕೊಂಡು ರೇಷನಿಂಗ್ ಜಾರಿಗೆ ತರದೆ ಇಲ್ಲದಿದ್ದರೆ ವಾಣಿಜ್ಯ ಪ್ರಪಂಚವು ಇಷ್ಟರೊಳಗಾಗಿ ಫುಟ್‌ಬಾಲ್ ಪ್ರಪಂಚವೇ ಆಗಿಬಿಡುತ್ತಿದ್ದಿತು.

ಎಷ್ಟೊಂದು ಬಂಧನಗಳ ಪರಿಸ್ಥಿತಿಯನ್ನು ಸರ್ಕಾರವು ಕಲ್ಪಿಸಿದ್ದರೂ ಜನತೆಯನ್ನು ಕಾಡುವ ಆಸುರೀ ಸ್ವಭಾವವು ಬೇರೆ ತಪ್ಪಲಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ ಸಾಮಾನ್ಯ ಜನರು ಮಾತ್ರವೇ ಅಲ್ಲದೆ ಹಲವರು ಭಾರಿ ಅಧಿಕಾರಿಗಳೂ ಈ ಗೊಂದಲಕ್ಕೆ ಸಿಲುಕಿ ಉಗ್ರ ಶಿಕ್ಷೆಗೆ ಗುರಿಯಾಗಿದ್ದಾರೆ. ವಿದ್ಯಾವಂತರಾಗಲಿ ಅವಿದ್ಯಾವಂತರಾಗಲಿ ವಿವೇಚನಾ ಸಂಜ್ಞಾನವಿಲ್ಲದೆ ತಾತ್ಕಾಲಿಕ ಸೌಕರ್ಯಕ್ಕಾಗಿ ಲಂಚಕೋರತನವನ್ನು ಅವಲಂಬಿಸುವುದು ಹೀನಾಯವಾದ ವಿಷಯ. ಇಂದಿನ ಶಾಂತಿ ವಾತಾವರಣ ಸಮಯವೇ ಲಂಚಕೋರತನದ ನಿರ್ಮೂಲಕ್ಕೆ ತಕ್ಕ ಕಾಲ.

ಭಾರತದ ಒಂದು ಭಾಗವಾದ ನಮ್ಮ ಮೈಸೂರಲ್ಲೂ ಲಂಚಕೋರತನವು ಪರಮಾವಧಿಯನ್ನೇ ಮುಟ್ಟಿತು. ಜನರು ಬಹಳವಾಗಿ ಬೊಬ್ಬೆ ಇಟ್ಟರು. ಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆಗಳಲ್ಲೂ ಮೇಲಿಂದ ಮೇಲೆ ಪ್ರತಿನಿಧಿಗಳು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರು. ಪ್ರಭುತ್ವವು ಜನಪದ ಹಿತಕ್ಕಾಗಿ ಈ ಲಂಚಕೋರತನವನ್ನು ನಿರ್ಮೂಲಗೊಳಿಸಲು ನಮ್ಮ ಸಂಸ್ಥಾನದ ಮಾಜಿ ಮಂತ್ರಿಗಳಾದ ಸರ್ [illegible] ರಾಜಾ ನಾರಾಯಣ ಬ್ಯಾನರ್ಜಿಯವರ ನೇತೃತ್ವದಲ್ಲಿ [illegible] ತಿಯನ್ನು ರಚಿಸಿದೆ [illegible] ಗತಿಸಿತ್ತೇನೆ [illegible] ವಿಷಯ

ಅರಮನೆಯಲ್ಲಿ ಉಪಾಕರ್ಮ

ಮೈಸೂರು ೨೨

ಈ ದಿನ ಬೆಳಗ್ಗೆ ೧೧ ಗಂಟೆಯಲ್ಲಿ ಶ್ರೀ ಮಹಾರಾಜರವರು ಅರಮನೆಯಲ್ಲಿ ಉಪಾಕರ್ಮವನ್ನು ವಿಧಿಪೂರ್ವಕವಾಗಿ ಆಚರಿಸಿದರು. ರಾಜಗುರುಗಳಾದ ಉ|| ವೇ|| ಬ್ರ|| ಲಕ್ಷ್ಮೀನಾರಾಯಣಾಚಾರ್ಯರವರು ರಾಜಮಾರ್ಗದಿಂದ ಅರಮನೆಗೆ ದಯಮಾಡಿಸಿ ಈ ಕಾರ್ಯವನ್ನು ನೆರವೇರಿಸಿದರು.

ಜೂಜಾಟಕ್ಕೆ ಜುಲ್ಮಾನೆ

ಕೃಷ್ಣರಾಜ ಮೊಹಲ್ಲ ಸೀನೀರುಕಟ್ಟೆಯಲ್ಲಿ ಈ ಮಾಹೆ ತಾ|| ೧೬ ರಲ್ಲು ಜೂಜಾಡುತ್ತಿದ್ದರೆಂದು ನಾರಾಯಣ ವಗೈರೆ ೧೩ ಜನರಿಗೆ ೨ ನೇ ಸಿಟಿ ಮ್ಯಾಜಿಸ್ಟ್ರೇಟರು ತಲಾ ಹತ್ತು ರೂ. ಜುಲ್ಮಾನೆ, ತಪ್ಪಿದರೆ ೧೦ ದಿನ ಸಾದಾ ಸಜಾ ವಿಧಿಸಿದ್ದಾರೆ. ಜೂಜಿಗೆ ಮನೆ ಕೊಟ್ಟ ಕೃಷ್ಣಜಂಗ್‌ಗೆ ೧೦ ರೂ. ಜುಲ್ಮಾನೆ ತಪ್ಪಿದರೆ ೫ ದಿನ ಸಾದಾ ಸಜಾ ಆಗಿದೆ. ದೇವರಾಜ ಮೊಹಲ್ಲದ ನರಸಾಚಾರಿ ಮಗ ಚಲುವಾಚಾರಿ ಎಂಬಾತನು ಕಾಸು ಕಟ್ಟಿಣದ ಸಲಾಕಿಗಳನ್ನು ಇಟ್ಟುಕೊಂಡು ಜೂಜಾಡುತ್ತಿದ್ದನೆಂದು ೨ ನೇ ಸಿಟಿ ಮ್ಯಾಜಿಸ್ಟ್ರೇಟರು ಆತನಿಗೆ ೨೫ ರೂ. ಜುಲ್ಮಾನೆ ತಪ್ಪಿದರೆ ೧೦ ದಿನ ಸಾದಾ ಸಜಾ ವಿಧಿಸಿದ್ದಾರೆ. ನಜರ್‌ಬಾದಿನಲ್ಲಿ ಜೂಜಾಡುತ್ತಿದ್ದುದಕ್ಕಾಗಿ ರಾಮಯ್ಯ ವಗೈರೆ ೮ ಮಂದಿಗೆ ತಲಾ ೧೦ ರೂ. ಜುಲ್ಮಾನೆಯನ್ನು ತಪ್ಪಿದರೆ ೧೦ ದಿನ ಸಾದಾ ಸಜವನ್ನು ಆಟಕ್ಕೆ ಸ್ಥಳಕೊಟ್ಟ ಪುಟ್ಟಲ್ ಎಂಬಾತನಿಗೆ ೧೦ ರೂ. ಜುಲ್ಮಾನೆ ತಪ್ಪಿದರೆ ೩ ದಿನ ಸಾದಾ ಸಜಾ ೨ ನೇ ಸಿಟಿ ಮ್ಯಾಜಿಸ್ಟ್ರೇಟರು ವಿಧಿಸಿದ್ದಾರೆ.

ಉಪನ್ಯಾಸ

ಶ್ರೀ ಶಂಕರಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ತಾ|| ೨೪ ನೇ ಶುಕ್ರವಾರ ಸಾಯಂಕಾಲ ೬-೩೦ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ವೇದಾಂತ ಶಿರೋಮಣಿ ಎಸ್. ವಿಠಲಶಾಸ್ತ್ರಿಗಳು "ಜಗತ್ತು, ಜೀವ ಮತ್ತು ಈಶ್ವರ ಇವರ ಸ್ವರೂಪ" ಎಂಬ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ ಸರ್ವರಿಗೂ ಆಹ್ವಾನವಿದೆ.

— —

ಜಪಾನಿನಲ್ಲಿ ಸಂಪೂರ್ಣವಾಗಿ ಬ್ಲಾಕ್-ಔಟ್‌ನ್ನು ತೆಗೆದುಹಾಕಲು ವಾಯುರಕ್ಷಣಾಬಲದವರು ಆಜ್ಞೆ ಹೊರಡಿಸಿದ್ದಾರೆ.

ಅತಿರುದ್ರ ಮಹಾಯಾಗ

ನಾರಾಯಣಮಹಾರಾಜರವರು ಬೆಂಗಳೂರು ನಗರದಲ್ಲಿ ಇದೇ ಶ್ರಾವಣ ಬಹುಳ ದಶಮಿ, ಏಕಾದಶಿ, ದ್ವಾದಶಿ ಮೂರು ದಿನ ನಡೆಸಬೇಕೆಂದಿರುವ ಮಹಾಯಾಗದ ಪೂರ್ವಸಿದ್ಧತೆಗಳು ಭರದಿಂದ ಸಾಗುತ್ತಲಿವೆ. ಈ ಯಾಗಕ್ಕೆ ಬರಬೇಕಾಗಿರುವ ಪರಸ್ಥಳದ ಋತ್ವಿಜರು ನವಮಿ (೩೧-೮-೪೫) ಬೆಳಿಗ್ಗೆಯೇ ವಿಶ್ವೇಶ್ವರಪುರದ ಡಯಾಗನಲ್ ರೋಡ್ ೮೪ ನೇ ನಂ. ಬಂಗ್ಲೆಯಲ್ಲಿರತಕ್ಕ ಗುರುಮಹಾರಾಜರವರ ಮೊಕ್ಕಾಮಿಗೆ ದಯಮಾಡಿಸಬೇಕು ; ಋತ್ವಿಜರಿಗೆ ಅವರು ಊರಿಂದ ಬಂದುಹೋಗತಕ್ಕ ರೈಲ್ ಖರ್ಚು ; ಯಥಾಶಕ್ತಿ ಸಂಭಾವನೆ ಕೊಡಲು ನಿರ್ಧರಿಸಿರುತ್ತೆ.

ಕಾರಣಾಂತರಗಳಿಂದ ಬರಲು ಅಶಕ್ಯರಾದವರು ತಕ್ಷಣ ಋತ್ವಿಜರು ದಯಮಾಡಿ ಮೂರು ದಿನಗಳು ಮುಂದಾಗಿ ತಿಳಿಸಬೇಕೆಂದು ವ್ಯವಸ್ಥಾಪಕರು ಕೋರಿದ್ದಾರೆ.

ಕ್ರತುವನ್ನು ವಿಧ್ಯುಕ್ತವಾಗಿ ನಡೆಸುವ ವಿಷಯದಲ್ಲಿಯೂ ಯಾವ ಕ್ರಮವನ್ನು ಅನುಸರಿಸಬೇಕು ಎಂದು ಇತ್ಯರ್ಥಪಡಿಸಿಕೊಳ್ಳಲು ಪೂರ್ವಭಾವಿಯಾಗಿ ಈ ಮಾಹೆ ೨೫ ನೇ ತಾ|| ಶನಿವಾರ ಮಧ್ಯಾಹ್ನ ಮೈಸೂರು, ಬೆಂಗಳೂರು, ಧಾರವಾಡ ಮುಂ

ಅರುಣಗಿರಿ ನಟರಾ

— —

ಭರತನಾಟ್ಯಾಚಾರ್ಯರೂ ಕಲಾಕೋವಿದರೂ ಆದ ಶ್ರೀ ಕೆ. ಲಕ್ಷ್ಮೀ ನಾಸರವರು ಮೊನ್ನೆ ಭಾನುವಾರದ ಯ ನಾಗರಿಕರಿಗೆ ಚಿತ್ತಾಕರ್ಷಕ ಯಲ್ಲಿ ಭರತ ನಾಟ್ಯವನ್ನು ತಮ್ಮ ಯವರೊಡನೆ ಪ್ರದರ್ಶಿಸಿ ರಂಗದಲ್ಲಿ ಭರತ ನಾಟ್ಯದ ವೈಶಿಷ್ಟ್ಯ ಗೋಳಿಸಿದರು.

ಶ್ರೀಯುತರು ಸಂಜನಗೂಡಿನ ರಾತ್ರಿ ತಮ್ಮ ಕಲಾಪ್ರಾವೀಣ್ಯ ಪ್ರದರ್ಶಿಸುವರು. ಗರಳಪುರಿಯಾದ ಶ್ರೀ ಶ್ರೀಕಂಠೇಶ್ವರಸ್ವಾಮಿ ಕಲಾಯುರಾರೋಗ್ಯಗಳನ್ನು ಕೊಟ್ಟು ಇವರ ಭರತನಾಟ್ಯಾರಾಧನೆಯು ನಿರಂತರವೂ ರಸಿಕರಿಗೆಲ್ಲಾ ಲಭಿಸುವಂತೆ ಡು ಹಾರೈಸುತ್ತೇವೆ

ತಾದ ಪ್ರಾಂತಗಳಿಂದ ಸಮಾ ಜನಾಗಿ ದಯಮಾಡಿಸತಕ್ಕ ಸಮಾಲೋಚನಾ ಸಭೆಯೊಂದು ವಿಶ್ವೇಶ್ವರಪುರದಲ್ಲಿರುವ ರಾಜರವರ ನೇತೃತ್ವದಲ್ಲಿ ನಡೆ ತಿಳಿಯಬಂದಿದೆ;

ವನ್ನು ಈ ಸಮಿತಿಯು ಚೆನ್ನಾಗಿ ಸಂಶೋಧಿಸಿ ಜನ ಹಿತಕ್ಕೆ ಸಾಧಕವಾಗುವ ಸಲಹೆಗಳನ್ನು ಕೊಟ್ಟು, ಫಲಕಾರಿಯಾಗುವ ಹಾಗೆ ಕೆಲಸ ಮಾಡಿ ಕೀರ್ತಿ ಭಾಜನವಾಗುವುದೆಂದು ಆಶಿಸುತ್ತೇವೆ

ಬಟ್ಟೆಯ ಹಂಚಿಕೆ

ಉಪಯೋಗಿಸುವವರು ಗಮನಿಸಬೇಕಾದ ಅಂಶಗ

1. ನಿಜವಾದ ಅವಶ್ಯಕತೆಯಿದ್ದಾಗ ಮಾತ್ರ ಬಟ್ಟೆಯನ್ನು ಪ ಮಾಣದಲ್ಲಿ ಕೊಳ್ಳಿ.

2. ಬಟ್ಟೆಯ ಅಭಾವವಿದೆಯೆಂಬ ಕಟ್ಟುಕತೆಯಿಂದ ಧೈರ್ಯಗೆಡಬೇ ನವರು ಅತ್ಯಾಶಾಯುತರಾದರೆ ವರ್ತಕರಿಗೂ, ಕಳ್ಳ ವ್ಯಾಪಾರಗಾರರಿಗೂ, ಬಡವರಿಗೂ ಸಹಾಯ ಮಾಡಿದಂತಾಗುವುದು.

3. ಮಾರ್ಕೆಟ್ಟಿನಲ್ಲಿ ಸಾಮಾನುಗಳು ಸರಿಯಾಗಿ ಹಂಚಲು ಸಾಧ್ಯವಾ ತ್ತಗಳನ್ನು ಮಾಡಿದೆ. ಮಿಲ್ಲುಗಳು ತಯಾರಿಕೆಯನ್ನು ಹೆಚ್ಚಿಸುತ್ತಿವೆ. ರುವ ನಿರೀಕ್ಷಣೆಯಿದೆ ಸಂಗ್ರಾಮ ಮುಗಿದಿದೆ ಮತ್ತು ಹೆಚ್ಚಿನ ಸರಬರಾಜು ಬಹುದಾಗಿದೆ.

4. ಸ್ವಲ್ಪ ಕಾಲ ತಡೆದರೆ ನೀವು ಒಳ್ಳೆಯ ಬಟ್ಟೆಯನ್ನು ಹೆಚ್ಚಾಗಿ ಹುದು.

5. ನೀವು ಕೊಳ್ಳುವಾಗ ನಿಯಮಿತ ಬೆಲೆಗಿಂತಲೂ ಹೆಚ್ಚಿನ ಬೆಲೆ ಡಬೇಡಿ. ಈ ಬೆಲೆಯಲ್ಲೇ ವರ್ತಕರಿಗೆ ಧಾರಾಳವಾದ ಲಾಭವಿದೆ.

6. ದೇಶದ ತಯಾರಿಕೆಯಲ್ಲಿ ಕೈ ಮಗ್ಗ ಮತ್ತು ಪವರ್ ಮಗ್ಗ ಟ್ಟಿನ ಪ್ರಮಾಣದಲ್ಲಿವೆ. ನಿಮಗೆ ಬೇಕಾದಾಗ ಅವುಗಳನ್ನು ಕೊಳ್ಳಿರಿ

7. ಕೇಜಿಂಗಲು ಬಟ್ಟೆ ಕೊಳ್ಳಬೇಡಿ. ಕಳ್ಳವ್ಯಾಪಾರವನ್ನು ಪ್ರೋ ಮೋಷಕಗಾರರು ಸಾಮಾನ್ಯ ಪ್ರಮಾಣದಲ್ಲಿ ಬಟ್ಟೆ ಮಾರಲು ನಿರಾಕರಿಸಿದ ನ ಬೆಲೆ ಕೇಳಿದರೆ ಕೂಡಲೇ ಹತ್ತಿರದ ಪೋಲೀಸ್ ಅಧಿಕಾರಿಗಳಿಗೆ ಅಥವ ಸ್ ಪ್ಲಾಯಿ ಇನ್ಸ್‌ಪೆಕ್ಟರಿಗೆ ಅಥವ ಅಸಿಸ್ಟೆಂಟ್ ಇನ್ಸ್‌ಪೆಕ್ಟರಿಗೆ ವರದಿ ಮಾ

8. ಮುಂದಿನ ಸುದಿನಗಳಿಗೆ ನಿಮ್ಮ ಕೊಳ್ಳುವಿಕೆಯನ್ನು ಕಾದಿ

ಸಿವಿಲ್ ಸಪ್ಲೈಸ್ ಶಾಖೆಯಿಂದ ಪ್ರಕಟಿಸಲಾದ

ಆಪೆರಾ ಟಾಕೀಸ್

22—8—45ರಿಂದ

ಪ್ರತಿದಿನ ೩ ಆಟಗಳು

ಭಾಯ್ —
— ಜಾನ

ಭಾರತ್ ಭೂಷಣ್, ರಾಯ್ ಮೋಹನ್ ಮೊಹಮದ್ ಹಾದಿ, ಸುನಿತ್ರ, ಬೇಗಂ ಮುಂತಾದವರ ಪಾತ್ರ.

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. O P

ಚಾಮುಂಡಿ ಬ್ರಾಂಡ್ ವೆಜಿಟೆಬಲ್ ಪ್ರಾಡಕ್ಟ್

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇ

ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-

ಡಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು

ಬ್ರಾಂಚ್ :— ದೇವರಾಜ ಮಾರ್ಕೆಟ್ : : ಸಕ್ಕರೆ ಮಂ

Edited, printed and published by A. R. Nagarajan at the Sadhvi Press D. Subbiah Road, Mysore

ಫೋನ್ ನಂ ೩೦೨ ||ವಂದೇಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶುಕ್ರವಾರ ೨೪-೮-೪೫ [ಸಂಚಿಕೆ ೨೪

ಜಪಾನ್ ಪ್ರವೇಶಕ್ಕೆ — — ಪೂರ್ವ ಸಿದ್ಧತೆ

...ಬೋಸರ ಮರಣ

ಸುಭಾಷ್ ಚಂದ್ರಬೋಸರು ...ರಾತ್ರಿ ಜಪಾನಿನ ಆಸ್ಪತ್ರೆ ...ರಾದರೆಂದು ಜಪಾನಿ ...ಸಿವೆ. ಅವರು ೧೭ ನೇ ...ರಂದ ವಿಮಾನದಲ್ಲಿ ಜಪಾ... ...ದಾಗ ಅದು ಅಪಘಾತಕ್ಕೆ ...ವರಿಗೆ ಗಾಯವಾಯಿತೆಂದೂ ...ಚಿಕಿತ್ಸೆಯಿಂದ ಗುಣವಾಗದೆ ...ರೆಂದೂ ತಿಳಿಸಲಾಗಿದೆ ಮೂ... ಹಿಂದೆ ಇದೇ ರೀತಿ ವಿಮಾನ ...ತ್ತಿದ್ದಾಗ ಅವರು ಮಡಿದರೆಂ... ...ಂದಿತ್ತು. ಮಹಾತ್ಮರೇ ಯೂಂ... ...ಅವರ ವೃತ್ತ ವಾರೆಗೆ ಅನು... ...ಸೂಚಿಸಿದ್ದರು

...ಹೊರಟ ವಿಮಾನದಲ್ಲಿ ಇದ್ದ ... ಜ|| ನಾಸುವಾನಸಿಡಿಯ... ...ಮೃತರಾದರು ಬೋಸರ ...ದ ಕರ್ನಲ್ ಹಬೀಬುರ್ ರಹ... ...ನಾಲ್ಕು ಜನ ಜಪಾನೀ ಅಧಿ... ...ಗಾಯ ಹೊಂದಿದರು.

...ರಂಗೂನನ್ನು ಬಿಟ್ಟು ನಾ... ...ದಿವಸ ಬೋಸರು ರಂಗೂನ ...ನ್ನು ಸರ್ಕಾರವನ್ನು ಬಾಂಕಾ... ...ಸಿದರು. ಜಪಾನೀ ಸರ್ಕಾ... ...ಮಾತುಕಥೆಗಾಗಿ ಬೋಸರು ...ದ್ದರು. ಟೋಕಿಯೋಕ್ಕೆ ವಿಮಾ... ಅವರ ವಿಮಾನವು ಮುರಿ... ...ನಂತರ ಅವರನ್ನು ಜಪಾನಿನ ...ಗಿಸಲಾಯಿತು

...ಸುಭಾಷ್ ಬೋಸರು ಐ.ಸಿ. ...ಡಿಯನ್ ಸಿವಿಲ್ ಸರ್ವಿಸ್ ನ ...ರ್ಗಡೆಯಾಗಿ ಕೆಲಸಕ್ಕೆ ಸೇ... ...ರಾಜೀನಾಮೆ ಇತ್ತು ಕಾಂಗ್ರೆ... ...ಚಳುವಳಿಗೆ ಸೇರಿದರು, ಇವರ ...ಚಟುವಟಿಕೆಗಳಿಗಾಗಿ ಇವರನ್ನು ...ಗಡೀಪಾರು ಮಾಡಿದ್ದರು. ...ಕ್ಲೋರಿನಲ್ಲಿ ಕೆಲವು ಕಾಲವಿ... ...ದಿಂದ ಮೇಲೆ ಚಳುವಳಿಗ... ...ನಾರಿ ಕಾಂಗ್ರೆಸ್ ಧುರೀಣರ... ...ದ್ದರು ಬೋಸರು ಗ್ರೇಸಿ... ...ನಡೆದ ಕಾಂಗ್ರೆಸ್ ನ ...ಅಧ್ಯಕ್ಷರಾಗಿ ಚುನಾಯಿತರಾ... ...ವರ್ಷವೂ ಕಾಂಗ್ರೆಸ್ಸಿ... ...ದನ್ನ ಎದುರಿಸಿ ಕ್ರಿಪುರಿಯ ...ಗ್ರೆಸ್ ಅಧಿವೇಶನಕ್ಕೆ ...ನಾಯಿತರಾದರು

...ಮುಖಂಡರುಗಳೊಡನೆ ಭ... ...ಭಿನ್ನಾಭಿಪ್ರಾಯ ರಲ್ಲಿ ಅವ... ...ಗೆ ರಾಜೀನಾಮೆ "ಫಾರ್ವರ್ಡ್ ...ಪಕ್ಷವನ್ನು ಸ್ಥಾಪಿಸಿ ಜನ... ...ಯತ್ನಗಳನ್ನು ವಿರೋಧಿಸ... ...ದರು

...ಬ್ಲಾಕ್" ಎಂಬ ತಮ್ಮ ...ಪತ್ರಿಕೆಯಲ್ಲಿ ಲೇಖನ ...ಬಂಗಾಳ ಸರ್ಕಾರ ...ಮೇಲೆ ಕಾರ್ಯಕ್ರಮ ... ...ಮುನ್ನ ಅವರು ಒಂದು ... ...ವಾಸವನ್ನು ಕೈಕೊಂಡು ...ಸಿಕೊಳ್ಳುವ ... ...ನಾಗರ... ...

...ನಂತರ ಜಪಾನೀ ... ...ಟೋಕಿಯೋ ತಲುಪಿದರೆಂ... ...ಯು. ಅಲ್ಲಿಂದ ರಸ್ತೆಯ...

ಹೊಟೇಲು ಕೆಲಸಗಾರರ ಸಂಘ

ತಾ|| ೨೧-೮-೪೫ ರಲ್ಲಿ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ನಾಮಿನಾನ್ ಮೋಹನ್ ಬಾಬುರವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಸಂಘದ ಸಭೆಯು ನಡೆದು ಈ ಕೆಳಗೆ ಕಂಡ ರೀತಿ ಸರ್ವಾನುಮತದಿಂದ ತೀರ್ಮಾನವಾಯಿತು.

೧. ಎಗ್ಬಿನ್ ಸರ್ ಕೆಫೆಯಲ್ಲಿ ಸಿಬ್ಬಂದಿಯಾಗಿ ಒಬ್ಬನನ್ನು ಕೆಲಸದಿಂದ ತೆಗೆದಿದ್ದಕ್ಕಾಗಿ ಅವರ ನಡೆ ನ್ಯಾಯವಲ್ಲ ಈ ಸಭೆಯು ಖಂಡಿಸುತ್ತದೆ. ಅಲ್ಲದೆ ಮತ್ತೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ.

೨. ಮೈಸೂರು ಎಗ್ಬಿನ್ ಸರ್ ಕೆಫೆಯಿಂದ ಡಿಸ್ ಮಿಸ್ ಆದ ಶ್ರೀ ಸುಬ್ಬರಾಯರು ಬಂದ ಕಷ್ಟವನ್ನು ಅನುಭವಿಸಿ ಸಂಘಕ್ಕೆ ನೆರವನ್ನು ಕೊಟ್ಟದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆ.

೩. ಮೈಸೂರು ನಗರದ ಪ್ರಜೆಗಳು ಕೆಲಸಗಾರರಿಗೆ ಕೆಡುಕು ಮಾಡುವ ಹೋಟೆಲುಗಳಿಗೆ ಉತ್ತೇಜನ ಕೊಡಬಾರದೆಂದು ಈ ಸಭೆಯು ಅವರನ್ನು ಪ್ರಾರ್ಥಿಸಿಕೊಳ್ಳುತ್ತದೆ.

ಯುದ್ಧದ ಪರಿಣಾಮದಿಂದ ಚೀಣಾ ದೇಶದಲ್ಲಿ ಹೊಟ್ಟೆಗಿಲ್ಲದೆ ಒಂದು ಕೋಟಿ ಜನರೂ ಯುದ್ಧದಲ್ಲಿ ... ಲಕ್ಷ ಜನರೂ ಮಡಿದಿರುವರೆಂದು ಅಂದಾಜು ಮಾಡಲಾಗಿದೆ

...ಮೂಲಕ ಯೂರೋಪಿಗೆ ಹೋಗಿ ಹಿಟ್ಲರರನ್ನು ಕಂಡು ಕೆಲವು ಕಾಲ ಅಲ್ಲಿಯೇ ಇದ್ದರು ಬರ್ಲಿನ್ ರೇಡಿಯೋದಿಂದ ಆಗಾಗ್ಗೆ ಭಾಷಣ ಮಾಡುತ್ತಿದ್ದರು. ಜಪಾನು ಯುದ್ಧಕ್ಕೆ ಇಳಿದ ಮೇಲೆ ಪೂರ್ವಕ್ಕೆ ಬಂದರು. ಸಿಂಗಪುರದಲ್ಲಿ "ಆಜಾದ್ ಹಿಂದ್" ಸೈನ್ಯವನ್ನು ರಚಿಸಿದರು.

ಸುಭಾಷ್ ಬೋಸರು ಬ್ರಹ್ಮಚಾರಿಗಳು. ಆಧ್ಯಾತ್ಮಿಕ ವಿದ್ಯಾಭ್ಯಾಸಂಗತರಲ್ಲಿದೆ ನಾನಾ ಮಾರ್ಗಿಕ ವಿಚಾರಗಳಲ್ಲಿಯೂ ವಿಶೇಷ ಪರಿಶ್ರಮವುಳ್ಳವರಾಗಿದ್ದರು. ಆಪಾರವಾದ ದ್ರವ್ಯವನ್ನು ಸಂಪಾದಿಸಿದರು. ಅದನ್ನು ದೇಶ ಸೇವಾ ಕಾರ್ಯಗಳಿಗಾಗಿ ಸೂರೆ ಮಾಡಿದರು. ಹಿಮಾಲಯದ ಏಕಾಂತ ಪ್ರಶಾಂತತೆಯ ತಪ್ಪಲನ್ನು ಯಾವಾಗಲೂ ಆಶಿಸುತ್ತಿದ್ದರು. ... ಹೋಗಬೇಕೆಂದೂ ... ಇತ್ತು

ರೇಷ್ಮೆ ಕರಖಾನೆಗಳು — ಒಪ್ಪಂದದ ಮುಕ್ತಾಯ

ಸ್ವಂ ವ.] ಬೆಂಗಳೂರು ೨೪

ಯುದ್ಧವು ಮುಕ್ತಾಯವಾಗಿರುವುದರಿಂದ ಇಂಡಿಯಾ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ರೇಷ್ಮೆ ತಯಾರಿ ಮತ್ತು ಸರಬರಾಜು ಬಗ್ಗೆ ಆಗಿದ್ದ ಮೂರು ವರ್ಷದ ಒಪ್ಪಂದವು ಅಂತ್ಯಕ್ಕೆ ಕೆಲವು ತಿಂಗಳು ಮುಂಚೆಯೇ ಪರಸ್ಪರ ಸಮ್ಮತಿಯಿಂದ ಮುಕ್ತಾಯ ಮಾಡಲ್ಪಟ್ಟಿದೆಯೆಂದು ಗೊತ್ತಾಗಿದೆ ಈ ಬಗ್ಗೆ ಸಂಸ್ಥಾನದ ವಿವಾದನೂ, ಮಂತ್ರಿಗಳೂ, ಇತರ ಅಧಿಕಾರಿಗಳೂ, ಡಿಲ್ಲಿ ಇಂಡಿಯಾ ಸರ್ಕಾರದ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದರು. ಇಂಡಿಯಾ ಸರ್ಕಾರದವರು ಹೊಸ ಫಿಲೇಚರ್ ಬೇಸಿನ್ನುಗಳ ಮೂಲ ಧನಕ್ಕಾಗಿ ೧೫ ಲಕ್ಷ ರೂ. ಗಳನ್ನು ಮುಂಗಡವಾಗಿ ಕೊಟ್ಟಿದ್ದಾರೆ.

ಒಪ್ಪಂದದ ಪರಿಣಾಮವಾಗಿ ಮೈಸೂರಿನಲ್ಲಿ ತಯಾರಾದ ಉತ್ತಮ ದರ್ಜೆಯ ರೇಷ್ಮೆಯು ಕಂಟ್ರೋಲ್ ದರದಲ್ಲಿ ಇನ್ನು ಮೇಲೆ ಮುಕ್ತವಾಗಿ ದೊರೆಯುವುದು. ರೇಷ್ಮೆ ಬೆಲೆಯನ್ನು ಸೇರು ಒಂದಕ್ಕೆ ... ರೂ. ನಿಂದ ೪೦ ರೂ ಗೆ ಹೆಚ್ಚಿಸುವುದರಿಂದ ಫಿಲೇಚರ ಗಳಿಗೆ ... ಲಾಭ ಬರುವುದೆಂದು ಹೇಳಲಾಗಿದೆ

ರೇಷ್ಮೆ ಮಂಡಳಿ ಆಫೀಸನ್ನು ಸರ್ಕಾರದವರು ವಜಾ ಮಾಡಿ ರೇಷ್ಮೆ ಇಲಾಖೆಯಲ್ಲಿ ಸೇರಿಸುವುದಕ್ಕೆ ನಿಯಮಗಳನ್ನು ಮಾಡುವರೆಂದು ಗೊತ್ತಾಗಿದೆ.

ನಗರಾಂತ ವಿಚಾರದಲ್ಲಿ ಆರೋಪಣೆ ಅಧಿಕಾರಿ ಆಪಾದನೆಗಳ್ಳಿಲ್ಲ ಸ್ಕಲ್ಪ ಕಾಲವಾದರೆ ಸ್ಥಗಿತವಾಗುವುದಾಗಿ ವರದಿಯಾಗಿದೆ ಮುಕ್ತ ಗನ್ನು ಅವನ್ನು ಸುಳಿಸ ವಾಣಿಜು ಜಪಾನು ತನ್ನ ಸರ್ವ ಶಕ್ತಿಯನ್ನೂ ಉಪಯೋಗಿಸುವುದೆ, ಎಂದು ಹೇಳಲಾಗಿದೆ. ಯುದ್ಧಾರಂಭದಲ್ಲಿ ಜಪಾನರು ಮಾಡಿದಂತೆ ಈಗಲೂ ರಾಜತಾಂತ್ರಿಕ ಪರ್ಲ್ ಹಾರ್ಬರ್ ಪ್ರಕರಣವನ್ನು ಅವರು ಕೈಗೊಳ್ಳಬಹುದೆಂದು ಅನೇಕರು ಭಾವಿಸಿದ್ದಾರೆ.

ಕೃಷ್ಣರಾಜೇಂದ್ರ ಮಿಲ್ ಕೆಲಸಗಾರರ ಸಂಘ

ತಾ|| ೩೦ ನೇ ಭಾನುವಾರದ ಮಧ್ಯಾಹ್ನ ೧ ಘಂಟೆಯಿಂದ ೫ ಘಂಟೆಯವರೆಗೆ ಮೈಸೂರು ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಕೆಲಸಗಾರರ ಸಂಘದ ... ಮೈಸೂರು ... ಶ್ರೀ ... ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯ ... ಸಲುವಾಗಿ ಕೋರಲಾಗಿದೆ

ಜಪಾನಿನ ಶರಣಾಗತಿ ಸಿದ್ಧತೆ

ಮುಂದಿನ ವಾರದೊಳಗೆ ಜಪಾನಿನಲ್ಲಿ ಇಳಿಯಲು ಸಮರಾರಂಭಗಳು ನಡೆದಿವೆ, ಮಂಗಳವಾರದೇ ಜ|| ಮೆಕಾರ್ಥರ್ ರವರೂ ಇತರ ನೌಕಾ, ವಿಮಾನ ... ಸೈನ್ಯಗಳೂ ಟೋಕಿಯೋ ಬಳಿ ... ನೆಲೆಗಳಲ್ಲಿ ಬಂದಿಳಿಯುವರು, ... ಜನರಲ್ ರವರು ಜಪಾನಿಗೆ ... ಯಾಗಿ ಈ ರೀತಿ ಸೂಚನೆಗಳನ್ನು ಕೊಟ್ಟಿದ್ದಾರೆ:—

ಜಪಾನಿನ ಸೈನ್ಯ, ನೌಕೆ ಮತ್ತು ವಿಮಾನಗಳು ಮುಂದೆ ತಿಳಿಸುವ ತನಕ ತಮ್ಮ ತಮ್ಮ ಸ್ಥಾನಗಳಲ್ಲಿಯೇ ಇರಬೇಕು, ಅನುಮತಿ ಇಲ್ಲದೆ ಜಪಾನರು ಯಾವ ಚಟುವಟಿಕೆಗಳನ್ನೂ ಇಟ್ಟುಕೊಳ್ಳಕೂಡದು; ಸಮುದ್ರದಲ್ಲಿರುವ ಹಡಗುಗಳಲ್ಲಿರುವ ಸಿಡಿಮದ್ದುಗಳನ್ನು ಕೂಡಲೇ ಇಳಿಸಬೇಕು, ಜಪಾನೀ ಸಬ್ ಮರೀನುಗಳು ನೀರಿನ ಮಟ್ಟದ ಮೇಲೆ ಇರಬೇಕು; ಅಲ್ಲದೆ ಕಪ್ಪುಬಾವುಟವನ್ನು ಹಾರಿಸಿಕೊಂಡಿರಬೇಕು.

ಪ್ರಭುಗಳಿಗೆ ಆಹ್ವಾನ

ಮೈಸೂರು ೨೪

ಬೆಂಗಳೂರಿನಲ್ಲಿ ಶ್ರೀ ನಾರಾಯಣ ಮಹಾರಾಜರು ನಡೆಸುವ ಆತಿಥ್ಯ ಮಹಾಯಾಗಕ್ಕೆ ಶ್ರೀಮನ್ಮಹಾರಾಜರವರು ದಯಮಾಡಿಸಬೇಕೆಂದು ಶ್ರೀ ಗುರುಗಳ ಪರವಾಗಿ ಅನುಷ್ಠಾನ ಕಾರ್ಯದರ್ಶಿಗಳಾದ ಶ್ರೀ ಎಚ್. ಸಿ. ... ರವರುಗಳು ಸಿಕ್ಕ ವೇಳೆಗೆ ಪ್ರಭುಗಳನ್ನು ಭೇಟಿಮಾಡಿ ಆಹ್ವಾನಿಸಿಕೊಂಡರೆಂದು ತಿಳಿದುಬಂದಿದೆ

ಮತ್ತೆ ಹಾಸ್ಟಲ್ ಸಮಸ್ಯೆ

ಕಳೆದ ... ಹಾಸ್ಟಲಿನಲ್ಲಿ ವಿದ್ಯಾರ್ಥಿಗಳಿಗೆ ಕೊಡತಕ್ಕ ಊಟದ ... ಮುಷ್ಕರ ... ಸರಕಾರ ಅವರ ... ಅವರ ... ಸಭೆ ... ಇದ್ದ ... ಆಗ ಈ ತಿಂಗಳು ೨೫ ನೇ ತಾ|| ನಿಂದ ಹಾಸ್ಟೆಲನ್ನು ಮುಚ್ಚುವ ... ವಿದ್ಯಾರ್ಥಿಗಳು ... ಖಾಲಿ ಮಾಡಬೇಕೆಂದು ತಿಳಿಸುವುದಾಗಿಯೂ ಗೊತ್ತಾಗಿದೆ.

ತಿಮ್ಮಾರೆಡ್ಡಿಗಳ ಮೇಲೆ ಚಾರ್ಜ್‌ಶೀಟು

ಸ್ವಂ ವ.] ಬೆಂಗಳೂರು ೨೪

ಈ ದಿನ ಶ್ರೀ ತಿಮ್ಮಾರೆಡ್ಡಿ ಯವರ ಮೇಲೆ ಕ್ರಿಮಿನಲ್ ... ಮ್ಯಾಜಿಸ್ಟ್ರೇಟ್ ... ಚಾರ್ಜ್ ಷೀಟು ಹಾಕಿದ್ದಾರೆ, ... ತಾ|| ... ಇದೆ

ಆಕ್ರಮವಾಗಿ ... ... ಆರೋಪದ ಮೇಲೆ ... ... ಆರು ತಿಂಗಳ ... ...

ಬೆಂಗಳೂರಿನ ಶ್ರೀ ... ... ಮತ್ತು ಶ್ರೀ ಸಿ. ಎಸ್. ... ...

... ...

ಸಾಧ್ವಿ

[illegible]

ಮೈಸೂರಲ್ಲೂ ಹೀಗಾಗ ?

ಇದೀಗ ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ಕಾಂಗ್ರೆಸ್ ಮೇಲಿನ ಪ್ರತಿಬಂಧಕಗಳೆಲ್ಲ ಹೋದವು. ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಹಲವು ಸಂಸ್ಥೆಗಳ ಪ್ರತಿಬಂಧಗಳೂ ನಿವಾರಣೆಯಾದವು. ಸಭೆಗಳು ನಡೆಸಲು, [illegible] ಒಂದವು, ಕಾಂಗ್ರೆಸ್ [illegible] ಸಾರ್ವಜನಿಕವಾಗಿ [illegible] ಪ್ರಕಟಿಸಲ್ಪಟ್ಟವು.

[illegible] ಮಹಾ ಚುನಾವಣೆ [illegible] ಇಂಡಿಯಾ ಸರ್ಕಾರದವರು [illegible] ಕಾಂಗ್ರೆಸ್ [illegible] ತಮ್ಮ [illegible] ಕಾಂಗ್ರೆಸ್ ಸಂಸ್ಥೆಯ [illegible] ಪ್ರತಿಬಂಧಕಗಳನ್ನು [illegible], ವ್ಯಕ್ತಿಗಳನ್ನು ಬಿಡುಗಡೆ [illegible] ಪತ್ರಗಳನ್ನು [illegible] ನಡೆಸುವುದು [illegible]. ಯುದ್ಧ ಮುಗಿದ ಮರುಗಳಿಗೆಯೇ ಯೂರೋಪಿನಲ್ಲಿ ಎಲ್ಲಾ ವ್ಯಕ್ತಿಗಳನ್ನು ಬಿಡಲಾಯಿತೆಂದೂ ಎಲ್ಲಾ ನಿರ್ಬಂಧಗಳನ್ನು ತೆಗೆಯಲಾಯಿತೆಂದೂ ಇಲ್ಲಿ ಇನ್ನೂ ಹಾಗೆ ಮಾಡದಿರುವುದು ಸರಿಯಲ್ಲವೆಂದೂ [illegible] ಸರ್ಕಾರದವರು ನಿರ್ಬಂಧಗಳನ್ನೆಲ್ಲಾ ತೆಗೆದಿರುವುದಾಗಿ ಪ್ರಕಟಿಸಿದರು. ಹೀಗೆ ಇನ್ನು [illegible] ಕಾಂಗ್ರೆಸ್ ಮತ್ತು ರಾಷ್ಟ್ರೀಯ [illegible] ದೊರೆಯುತ್ತಿದೆ.

ಬ್ರಿಟಿಷ್ ಇಂಡಿಯದಲ್ಲಿ ಪ್ರತಿಬಂಧಕ ಹಾಕಿದಾಗಲೇ ನಮ್ಮ ಮೈಸೂರಿನಲ್ಲೂ ಹಾಕಲಾಯಿತು. ಇಲ್ಲೂ ಅದನ್ನು ತೆಗೆದುಹಾಕಲಾಗುವುದೆಂದು ಮೊನ್ನೆಯೇ ವರದಿಯಾಗಿತ್ತು. ಅಂತಹ ಆಜ್ಞೆಯನ್ನು ನಾವು ಪ್ರತಿ ಕ್ಷಣದಲ್ಲಿಯೂ ಇದಿರು ನೋಡುತ್ತೇವೆ. [illegible] ಇಲ್ಲಿಯೂ ಎಲ್ಲಾ ನಿರ್ಬಂಧಗಳು ತೊಲಗಿ ಸಾರ್ವಜನಿಕ ಜೀವನವು ನಿರಾತಂಕವಾಗಿ ಸಾಗಲೆಂದು ಹಾರೈಸುತ್ತೇವೆ.

ಬೋಸರ ಮನೆಗೆ ಪುನಃ ಬಿಡುಗಡೆ ಇಲ್ಲ

ಕಳೆದ ಹದಿನೈದನೇ ತಾರೀಖು ಕಲ್ಕತ್ತಾದಲ್ಲಿ ಬಾಬು ಸುಭಾಸ್ ಚಂದ್ರಬೋಸರ ಮನೆಯನ್ನು ಸರ್ಕಾರದವರು ಹಿಂದಕ್ಕೆ [illegible] ಕೊಡುವುದಾಗಿ [illegible] ಪುನಃ ಮೊನ್ನೆ ನಡೆಸಲ್ [illegible] ಬದ್ಧರುಗಳು ಮಾತ್ರ [illegible] ಮನೆಯಲ್ಲಿ [illegible] ಭಾಗ ಮಾತ್ರ ಬೇಕೆಂದು ಕೇಳಿದರು. [illegible] ಇಂಗ್ಲೆಂಡಿನ [illegible] ಕೇಳಿದರು. [illegible] ಬಿಡುಗಡೆಯಾಗಲೆಂದು [illegible] ಇನ್ನೆಲ್ಲಾ [illegible] ಸ್ಕ್ವಿಸಿದ್ದಾರೆ.

[illegible] ಕೋಣೆಯ ಮರ [illegible] ಒಂದಿದ್ದವು.

ಬೆಂಗಳೂರಿನ ಪ್ರತಿನಿಧಿಗಳು

[illegible]

ಪತ್ರ ವ್ಯವಹಾರ

ಆರೋಗ್ಯಾಧಿಕಾರಿಗಳು ಗಮನಿಸುವರೇ ?

ಮೊನ್ನೆ ಬನುಮಯ್ಯನ ಕ್ಷಯದಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರವರಿಗೆ ವರ್ಗವಾದ ಪ್ರಯುಕ್ತ ಆಸ್ಪತ್ರೆಯ ರೋಗಿಗಳೆಲ್ಲಾ ಸೇರಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಲೋಸುಗ ಒಂದು ಸತ್ಕಾರವನ್ನು ಏರ್ಪಡಿಸಿದ್ದರು. ಮೈಸೂರು ಮಾಡರ್ನ್ ಕೆಫೆಯ ವರು ಸುಚಿ ರುಚಿಯಾದ ತಿಂಡಿಯನ್ನು ಒದಗಿಸಿದ್ದರು ತಿಂಡಿಯನ್ನು ಕೆಲವು ರೋಗಿಗಳಿಗೆ ಕಾಗದದಲ್ಲೂ ಕೆಲವರಿಗೆ ಪ್ಲೇಟಿನಲ್ಲೂ ಒದಗಿಸಿದ್ದರೆಂದೂ ಆದರೆ ಕಾಫಿ ಮಾತ್ರ ಎಲ್ಲರಿಗೂ ಹೋಟೇಲಿನ ಕಪ್ ಸಾಸರ್ ಗಳಲ್ಲಿ ಕೊಟ್ಟರೆಂದೂ ಗೊತ್ತಾಗಿದೆ. ಕ್ಷಯವು ಅಂಟು ರೋಗವೆಂಬುದರಲ್ಲಿ ಅನುಮಾನ ವಿಲ್ಲ. ಅಂತಿರುವಾಗ ಸಾವಿರಾರು ಜನ ಬಂದು ಉಪಯೋಗಿಸುವ ಕಪ್ ಸಾಸರುಗಳನ್ನು ಆಸ್ಪತ್ರೆಯಲ್ಲಿ ಕ್ಷಯರೋಗಿಗಳಿಗೆ ಕೊಟ್ಟಿರುವುದು ಸರಿಯೇ ? ಹಾಗೆ ಮಾಡುವುದರಿಂದ ಅಂಟು ರೋಗ ಹರಡಲು ಅವಕಾಶವಾಗುವುದಿಲ್ಲವೆ ? ಈ ವಿಚಾರವನ್ನು ಆರೋಗ್ಯ ಖಾತಾಧಿಕಾರಿಗಳು ವಿಚಾರಿಸುವರೆಂದು ನಂಬಲಾಗಿದೆ

ಒಬ್ಬ ಗಿರಾಕಿ.

ಪುಣ್ಯದಿನಾಚರಣೆ

ಮೈಸೂರು ಪಿಳ್ಳೆ ಸೊಪ್ಪಲ್ಲಾ ಪೀಟೆ ಶಾಮಣ್ಣನವರ ಬೀದಿಯಲ್ಲಿರುವ ಶ್ರೀ ಶ್ರೀನಿವಾಸ ರಾಘವೇಂದ್ರ ಗಾಂಧರ್ವ ವಿದ್ಯಾ ಶ್ರೀರಾಮಮಂದಿರದಲ್ಲಿ ೧೯ ನೇ ತಾ॥ ವಿಜಯೋತ್ಸವ ಸಂಬಂಧವಾಗಿ ವಿಶೇಷ ಪೂಜೆ ಪುರಸ್ಕಾರಗಳು ನಡೆದುವು. ನಾಳೆ ಶನಿವಾರದಿಂದ ಮೂರು ದಿನಗಳವರೆಗೆ ಶ್ರೀ ರಾಘವೇಂದ್ರ ಸ್ವಾಮಿಗಳವರ ಪುಣ್ಯ ದಿನಾಚರಣೆಯು ನಡೆಯುವಂತೆ ಏರ್ಪಾಡು ಮಾಡಲಾಗಿದೆ. ಗುರು ಸೇವೆಯು ಯಶಸ್ವಿಯಾಗಿ ನಡೆಯಬೇಕಾದರೆ ಸಾರ್ವಜನಿಕರು ಉದಾರ ಧನ ಸಹಾಯ ಮಾಡಬೇಕೆಂದು ಮಂದಿರದ ಕಾರ್ಯದರ್ಶಿಗಳು ಪ್ರಾರ್ಥಿಸಿಕೊಂಡಿದ್ದಾರೆ.

ವರ್ಗಾ ವರ್ಗಿ

ಕೃಷ್ಣರಾಜ ಸಾಗರದ ಮ್ಯಾನೇಜರಾಗಿದ್ದ ಕೆ ವೆಂಕಟೇಶಯ್ಯ ಬಿ ಎ ರವರನ್ನು ಬೆಂಗಳೂರು ಕಂಟ್ರೋಲರ ಆಫೀಸಿನಲ್ಲಿ ಸೂಪರಿಂಟೆಂಡೆಂಟರನ್ನಾಗಿ ವರ್ಗಾಯಿಸಲಾಗಿದೆ ಶ್ರೀಮಾನ್ ರಂಗರಾಜೈಂಗಾರ್‌ರವರನ್ನು ಕಟ್ಟೆ ಮ್ಯಾನೇಜರನ್ನಾಗಿ ನೇಮಿಸಲಾಗಿದೆ.

Edited, printed and published by A. N. Nagarajan at the Sadhvi Press D. Subbiah Road, Mysore

ಕಸ್ತೂರಿ ಬಾ ಶಿಕ್ಷಣ [illegible]

ಕಸ್ತೂರಿ ಬಾ ಶಿಕ್ಷಣ ಶಿಬಿರ [illegible] ಯಿಂದ ನಿಯಮಿತ ತರಗತಿಗಳು [illegible] ವಾಗಿವೆ. ಹತ್ತಿರದ ಸಮೀಪ [illegible] ತಿ ಸಾಯಂಕಾಲ ಹೋಗಿ [illegible] ಮಕ್ಕಳಿಗೆ ಮಕ್ಕಳ ಪಾಲನೆ, [illegible] ರ್ಮಲ್ಯ, ಆರೋಗ್ಯಗಳ ನಿಯ [illegible] ಗಳ ವಿಚಾರಗಳಲ್ಲಿ ತಿಳಿಸ [illegible] ಕಾರ್ಯಕ್ರಮವು ಅತಿ ಮು [illegible] ಇದಕ್ಕೆ ಹಳ್ಳಿಯ ಜನಗಳ ಸಂ [illegible] ಕಾರ ದೊರೆಯುತ್ತಿದೆ.

ಶಿಕ್ಷಣಕ್ಕಾಗಿ ಮೊದಲೇ [illegible] ಲ್ಪಟ್ಟ ಸಂಖ್ಯೆಗಿಂತ ಹೆಚ್ಚು [illegible] ಕೊಳ್ಳುವ ವಿಚಾರವನ್ನು [illegible] ಯೋಚಿಸುತ್ತಿದ್ದಾರೆ

ಯಕ್ಷಗಾನ

ಮೈಸೂರು ಕೋಟೆ ಉತ್ತರ [illegible] ಶ್ರೀ ಆಂಜನೇಯಸ್ವಾಮಿ [illegible] ನಾಳೆ ಸಂಜೆ ಶ್ರಾವಣ [illegible] ಕ್ತ ದಿವಂಗತ ಪರಿಕಥಾ [illegible] ಸುಬ್ಬಯ್ಯ ಭಾಗವತರ ಶಿಷ್ಯ [illegible] ದ ಶ್ರೀ ಹನುಮಂತ್ಸಂಕಲ್ಪಿತ [illegible] ಸಂಘದವರಿಂದ " ಲಕ್ಷ್ಮಿ [illegible] ವೆಂಬ ಕಥೆಯು ಪ್ರಸಂಗ [illegible] ಸಲ್ಪಡುತ್ತದೆ. ಸರ್ವರಿಗೂ [illegible] ಟು ಮೇಲ್ಕಂಡ ಸಂಘದ [illegible] ಶ್ರೀ ಶ್ರೀರಾಮ ಪ್ರೆಸ್ ಮಹಡಿ [illegible] ಕ್ಷಗಾನವನ್ನು ಪ್ರದರ್ಶಿಸಿ [illegible] ಲ್ಲರಿಂದ ಬಹುವಾಗಿ ಪ್ರಶಂಸಿಸ [illegible]

ಉದಾರ ಸಹಾಯ

ಶ್ರೀ ಶಂಕರ ಜಯಂತಿ [illegible] ಸಭೆಯ ಮೂಲ ಧನಕ್ಕಾಗಿ [illegible] ಜಸ್ಟಿಸ್ ವಿ ಕೃಷ್ಣಸ್ವಾಮಿ [illegible] ಸ್ಮಾರಕಾರ್ಥವಾಗಿ ಅವರ [illegible] ರಾ। ಸುಬ್ರಹ್ಮಣ್ಯಯ್ಯರ್‌ರವರು ಕೊಟ್ಟಿರುವ ೧೦೦ ರೂ ಗಳನ್ನು [illegible] ವರು ವಂದನಾಪೂರ್ವಕವಾ [illegible] ರುತ್ತಾರೆ.

ಭಾಷಣ

ಕಸ್ತೂರಿ ಬಾ ಗಾಂಧೀ ರಾಷ್ಟ್ರ [illegible] ರಕ ನಿಧಿಯ ಗ್ರಾಮಸೇವಿಕಾ [illegible] ಬಿರದಲ್ಲಿ ನಾಳೆ ಸಂಜೆ ೫ ಗಂ [illegible] ದ ಆಕ್ಷರ ಪ್ರಚಾರ ಸಮಿತಿ [illegible] ಶ್ರೀ ಎಸ್. ಪಿ. ಶ್ರೀನಿವಾಸರಾ [illegible] ಕ್ಷರ ಪ್ರಚಾರ ಏಕೆ ? ಎಂಬ [illegible] ವಿಷಯದ ಮೇಲೆ ಭಾಷಣ [illegible] ಸಾರ್ವಜನಿಕರಿಗೆ ಆಹ್ವಾನ [illegible]

ಬೆನಿಫಿಟ್ ನಾಟಕ

ಪ್ರಭಾಕರ ಕಲಾ [illegible] ಮೈಸೂರು ಸಿಟಿ ಮುನಿಸಿಪಲ್ [illegible] ರ್ ಆದ ಶ್ರೀ ಆರ್. [illegible] ರವರ ಅಧ್ಯಕ್ಷತೆಯಲ್ಲಿ " [illegible] ವರ " ಎಂಬ ನಾಟಕವನ್ನು [illegible] ೧೧-೩೦ ಕ್ಕೆ ಟೌನ್‌ಹಾಲಿನಲ್ಲಿ [illegible] ಬಾಯ್ಸ್ ಫುಟ್ ಬಾಲ್ ಕ್ಲಬ್ಬಿನ [illegible] ರ್ಥವಾಗಿ ಅಭಿನಯಿಸುವರು [illegible] ವನ್ನು ಸಂಜೆ ೬॥ ಗಂಟೆಗೆ [illegible] ಕಾದು ರಾತ್ರಿ ೧೧ ೩೦ ಕ್ಕೆ [illegible] ಪ್ರದರ್ಶನ ಮಹಾಜನರ [illegible] ಡಿವೆ. [illegible] ಬೇಕಾಗಿ ಪ್ರಾರ್ಥಿಸಲಾಗಿದೆ.

ಭದ್ರಾವತಿಯಲ್ಲಿ ತಯಾರಾಗುತ್ತಿರುವ ಮೈಸೂರು ಉಕ್ಕಿನ ಸಾಮಾನು ಗಳನ್ನೇ ಉಪಯೋಗಿಸಿ !

ಶ್ರೇಷ್ಠವಾದ ಕಬ್ಬಿಣದಿಂದ ನಿಪುಣರಾದ ಸೀಮೆಯ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುತ್ತವೆ

ಸಾಮಾನುಗಳ ವಿವರ :

ಗಾಟುಪಟ್ಟಿ ಅಥವಾ ಹಳಿಗಳು, ದುಂಡು ಮತ್ತು ಚದುರ ಸಲಾಕಿಗಳು, ಕೋನಕಂಬಿಗಳು (Angles), ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು ಮತ್ತು ಬೇಲು ಪಟ್ಟಿಗಳು

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುತ್ತವೆ.

ಮಾದರಿಯಾದ ಗುಣವುಳ್ಳವು ಬಹುಕಾಲ ಬಾಳಿಕೆ ಬರುತ್ತವೆ	ಮೃದುವಾಗಿರುವುದರಿಂದ ಬೆಸುಗೆಯು ಹೊಂದಿಕೊಳ್ಳುತ್ತೆ

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ

(ಮೈಸೂರು ಸರ್ಕಾರ)

ಭದ್ರಾವತಿ (ಮೈಸೂರು ಸ್ಟೇಟ್ ರೈಲ್ವೆ)

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. O. P.

ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-6

ಡಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್.—ದೇವರಾಜ ಮಾರ್ಕೆಟ್ : . ಸಕ್ಕರೆ ಮಂಡಿ, ಸಂತೇಪೇಟೆ

ಫೋ॥ ನಂ 302 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸೆ

ಸಂಪುಟ ೪] ರವಿವಾರ ೨೫-೮-೪೫ [ಸಂಚಿಕೆ ೨೪

ಶರಣಾಗತಿ ಕಾರ್ಯಗಳಿಗೆ ಚಂಡ ಮಾರುತದ ಅಡ್ಡಿ

ಯುದ್ಧಾನಂತರದ ಯೋಜನೆ

(ಸ್ವಂ.ಸು.ಪ್ರೋ.] ಬೆಂಗಳೂರು ೨೪

ಯುದ್ಧಾನಂತರದಲ್ಲಿ ಸಂಸ್ಥಾನವು ಸರ್ವತೋಮುಖವಾಗಿ ಅಭಿವೃದ್ಧಿಹೊಂದಲು ತಯಾರಿಸಿರುವ ಯೋಜನೆಗಳನ್ನು ಜಾರಿಗೆ ತರುವ ವಿಚಾರದಲ್ಲಿ ಈಗ ಸರ್ಕಾರದವರು ತೀವ್ರವಾಗಿ ಆಲೋಚಿಸುತ್ತಿದ್ದಾರೆ. ಈ ಸಂಬಂಧದಲ್ಲಿ ದಿವಾನರೊಡನೆ ಸಮಾಲೋಚನೆ ನಡೆಸಲು ನಾನಾ ಇಲಾಖೆಗಳ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಇದೂ ಸುಮಾರು ೧೫ ದಿನಗಳು, ಸ್ವತಃ ದಿವಾನರು ನಾನಾ ಅಧಿಕಾರಿಗಳನ್ನು ಕರೆದುಕೊಂಡು ಮಾತುಕತೆ ನಡೆಸುವರೆಂದು ಹೇಳಲಾಗಿದೆ.

ಪನಲ್ ಸೇವಿಂಗ್ಸ್ ಕಮೀಷನರು ಕೇಂದ್ರ ಸರ್ಕಾರದ ನ್ಯಾಷನಲ್ ಸೇವಿಂಗ್ ಯೋಜನೆಯ ಕಮೀಷನರಿಂದ ಮೋಜ ಫೋರ್ಸ್‌ರವರು ೨೫ ನೇ ತಾರೀಖು ಬೆಂಗಳೂರಿಗೆ ಭೇಟಿಕೊಟ್ಟು ಎರಡು ದಿನಗಳು ಅಧಿಕಾರಿಗಳೊಡನೆ ಮಾತುಕತೆ ನಡೆಸುವರು.

ಲಂಚ ರುಷುವತ್ತು ಸಮಿತಿ

ರ್ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ನೇಮಕವಾಗಿರುವ ಲಂಚ ರುಷುವತ್ತು ವಿರೋಧಕ ಸಮಿತಿಯ ಪ್ರಥಮ ಸಭೆಯು [illegible] ೫ ನೇ ತಾರೀಖು ನ್ಯಾಯಶಾಸ್ತ್ರ ಸಭಾ ಭವನದಲ್ಲಿ ನಡೆಯುತ್ತದೆ. [illegible] ಸಭೆಯ ಸೆಕ್ರೆಟರಿಗಳು ಈ ಸಮಿತಿ ಸೆಕ್ರೆಟರಿಗಳಾಗಿಯೂ ನೇಮಿತರಾಗಿ[illegible]

ಕಚೇರಿ ಸುದ್ದಿ

ಕ್ಕಮಗಳೂರಿನ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀ ಜೆ. ವಿಶ್ವನಾಥರಾಯರು [illegible] ತಿಂಗಳ ರಜ ಮಂಜೂರಾಗಿದೆ. [illegible] ಕಾಲದಲ್ಲಿ ಹೈಕೋರ್ಟಿನ ಬೆಂಚ್ ರ್ಕ್ಕರಾದ ಶ್ರೀ ಜೆ. ಸಿ. ಮಂಜು ಅಯ್ಯರ್‌ರವರನ್ನು ಎರಡನೇ ದರ್ಜೆಯ ಅಧಿಕಾರವನ್ನಾಗಿ ನೇಮಿಸಿ, ಚಿಕ್ಕಮಗ ಳೂರು ಮುನಿಸಿಪಲ್-ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಾಕಲಾಗಿದೆ.

ಈ ತೆರಿಗೆಗೆ ಜಿ॥ ಬೋರ್ಡ್ ವಿರೋಧ

ಮೈಸೂರು ೨೫

ದಿನ ಮಧ್ಯಾಹ್ನ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು ಶ್ರೀ॥ ಕೆ. ಸಿ. [illegible]ನವರ ಅಧ್ಯಕ್ಷತೆಯಲ್ಲಿ ನಡೆದು ವಿಷಯ ಸಾಧನೆಗಾಗಿ ಸಂತೋಷ ಸೂಚಿಸುವ ನಿರ್ಣಯ ಮಾಡಿತು. ಬೋ॥ ೬ ನೇ ಸೆಕ್ಷನ್ ಪ್ರಕಾರ ಜ [illegible]ಕಂದಾಯದ ಮೇಲೆ ರೂ. ೧ ಕ್ಕೆ ೨ [illegible] ಸೆಸ್ ವಿಧಿಸಬೇಕೆಂದು ಬಂದಿ[illegible] ಸರ್ಕಾರದ ಸಲಹೆಯನ್ನು ಸರ್ವಾನುಮತದಿಂದ ವಿರೋಧಿಸಲಾಯಿತು.

ಪ್ರಕೃತಿ ಚಿಕಿತ್ಸೆ

ನಾರಹಳ್ಳಿ "ಸ್ವರಾಜಾಯ ಶಿಬಿರ"ದ ಟೆಲಿಗ್ರಾಫ್ ರಿಂದ ೧೧-೦ ರ ವರೆಗೆ [illegible]ಟಿಯ ಪ್ರಕೃತಿ ಚಿಕಿತ್ಸಾ ಸ್ವಾಮಿ [illegible] ರಿಂ ಡೆ॥ ಪ್ರಸಿದ್ಧರಾದ ಶ್ರೀ ಕಾಸೋ[illegible]ರವರು ಪ್ರಕೃತಿ ಚಿಕಿತ್ಸೆಯ ವಿಷಯ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

[illegible] ರು ಗಲಭೆಯಲ್ಲಿ ಮರಣದಂಡನೆ [illegible] ಸ್ವಯಂಸೇವಾ ಚಳವಳಿಯವರ [illegible] ನೀಡಿದವನ್ನು ನಮ್ಮ ಮೇಲ್ಮಂಡ ಶಿಕ್ಷಣ ಪಡೆಯಲು ಬಂದಿರು

ಬೊಂಬಾಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ

ಸೆಪ್ಟೆಂಬರ್ ೨೧ ನೇ ತಾರೀಖು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬೊಂಬಾಯಿನಲ್ಲಿ ನಡೆಯುವುದು. ಅಧಿವೇಶನವು ಮೂರು ದಿನ ನಡೆಯುತ್ತದೆ. ೬೦ ವರ್ಷದ ಹಿಂದೆ ಕಾಂಗ್ರೆಸ್ಸು ಹುಟ್ಟಿದಾಗ ಮೊದಲನೆ ಅಧಿವೇಶನ ನಡೆದ ಸ್ಥಳದಲ್ಲಿಯೇ ಇದು ನಡೆಯುವುದು. ಮೂರು ವರ್ಷದ ಹಿಂದೆಯೂ ಅಲ್ಲಿ ನಡೆದಿತ್ತು.

ಸಮತಾವಾದಿ ನಿಷೇಧವನ್ನು ತೆಗೆಯಬೇಕು

ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧಕಗಳನ್ನು ಮಾತ್ರ ತೆಗೆಯಲಾಗಿದೆ, ಆದರೆ ಅಂಗವಾದ ಸಮತಾವಾದೀ ಪಕ್ಷದ ಮೇಲಿನ ನಿರ್ಬಂಧವನ್ನು ತೆಗೆದಿಲ್ಲ; ಇದರಿಂದ ಕಾಂಗ್ರೆಸ್ಸು ಸಂಪೂರ್ಣವಾಗಿ ಕೆಲಸ ಮಾಡಲು ಅವಕಾಶವಾಗಿದೆ; ಮೇಲ್ಕಂಡ ಅಡ್ಡಿಯನ್ನು ತೆಗೆದುಹಾಕಬೇಕೆಂ[illegible]ಬುದಾಗಿ ಮೌಲಾನಾ ಅಜಾದರು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬೋಸರ ಮರಣದ ಬಗ್ಗೆ ಸಂಶಯ

ಲಂಡನ್ನಿನಲ್ಲಿರುವ ಭಾರತ ಸ್ವಾತಂತ್ರ್ಯ ಸಂಘದ ಅಧ್ಯಕ್ಷರಾದ ಶ್ರೀ ಸೋಹನಲಾಲರು ಸುಭಾಸ್ ಬೋಸರ ಮರಣದ ಬಗ್ಗೆ ಟೋಕಿಯೋ ಕಥೆಯು ತೃಪ್ತಿಕರವಾಗಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಮರಣದ ವಾರ್ತೆಯು ಲಂಡನ್ನಿನ ಭಾರತೀಯ ವೃಂದಗಳಲ್ಲಿ ಆಶ್ಚರ್ಯವನ್ನೂ ಅಪನಂಬಿಕೆಯನ್ನೂ ಹುಟ್ಟಿಸಿದೆ. ಸರಿಯಾದ ರುಜುವಾತನ್ನು ತಾವು ನಿರೀಕ್ಷಿಸುತ್ತಿರುವುದಾಗಿ ಬೋಸರ ಮಾಜೀ ಅನುವರ್ತಿ ಶ್ರೀ ಪಿ. ಬಿ. ಸೀಲರು ಹೇಳಿದ್ದಾರೆ. ಹಿಂದೆಯೂ ಜಪಾನೀ ರೇಡಿಯೋ ಹೀಗೆಂದೇ ಹೇಳಿತ್ತೆಂದು ಅವರು ಹೇಳಿದ್ದಾರೆ.

ಮಿತ್ರರು ಜಪಾನನ್ನು ಆಕ್ರಮಿಸಿದ ಮೇಲೆ ವಾಸ್ತವಾಂಶವು ತಿಳಿಯುವುದೆಂದು ಬ್ರಿಟನ್ನಿನ ಭಾರತೀಯ ಸಂಘಗಳ ಮಾಜೀ ಅಧ್ಯಕ್ಷರಾದ ಶ್ರೀ ವಿ. ಎಸ್. ಎಲ್. ಶಾಸ್ತ್ರಿಗಳು ತಿಳಿಸಿದ್ದಾರೆ.

ಸಿಂಗಪ್ಪೂರದ ಪತ್ರಿಕೆಗಳು

ಮಿತ್ರ ಸೈನ್ಯಗಳು ಸಿಂಗಪ್ಪೂರ ಪತ್ರಿಕೆ [illegible] ಡೆಯೊಳಿಯಾದವರ ನೆಲೆಗಳನ್ನು ಆಕ್ರಮಿಸುವುದಕ್ಕಾಗಿ ತೆರಳಲು ಅಪ್ಪಣೆಗಾಗಿ ಕಾದಿವೆ.

ಚಂಡಮಾರುತದಿಂದ ಶರಣಾಗತಿಗೆ ಅಡ್ಡಿ

ಮಿತ್ರ ಸೈನ್ಯಗಳು ಜಪಾನನ್ನು ಪ್ರವೇಶಿಸಲು ಕೈಗೊಂಡಿರುವ ಸಿದ್ಧತೆಗಳಿಗೆ ಚಂಡಮಾರುತವು ಬಹಳವಾಗಿ ಅಡಚಣೆಯನ್ನುಂಟುಮಾಡುತ್ತಿದೆ ಎಂದು ಜಪಾನೀ ಸರ್ಕಾರದವರು ತಿಳಿಸಿದ್ದಾರೆ. ಆದ್ದರಿಂದ ಮಿತ್ರರಾಷ್ಟ್ರಗಳ ಪಡೆಗಳು ಜಪಾನಿಗೆ ಬರಲು ಅವರಿಂದ ಶರಣಾಗತಿಯನ್ನು ಪಡೆದು ಆ ದೇಶವನ್ನು ಆಕ್ರಮಿಸಲು ಸಿದ್ಧರಾಗುತ್ತಿದ್ದಾರೆ. ಬುಧವಾರ ಸಂಜೆಯಿಂದ ಗುರುವಾರ ಬೆಳಿಗ್ಗಿನವರೆಗೆ ಉಂಟಾದ ಚಂಡಮಾರುತವು ಮಾರ್ಗಸೂಚಿಗಳಿಗೂ ಸಂಚಾರ ಸೌಲಭ್ಯಗಳಿಗೂ ಅಪಾರ ನಷ್ಟವುಂಟುಮಾಡಿತೆಂದು ಜಪಾನರು ಹೇಳಿರುವರು.

ದಮಿಯಂತಿಯಲ್ಲಿ ದರ್ಬಾರ್ ಪ್ರೆಸ್ ಸಮಸ್ಯೆ

ಕಳೆದ ಗುರುವಾರ ಜನ ಸಂಘ ಪ್ರೆಸ್ಸಿನ ಹೊಸ ಭವನ ಸಭೆಯಲ್ಲಿ ಆರಂಭ ಭಾಷಣವನ್ನು ಅಪ್ಪಿದ ಸ. ರಾಜಾರಾವ್ ಮಾಡಿದಾಗ ಹದಿನಾಲ್ಕು ಜನ ಸದಸ್ಯರು ದರ್ಬಾರ್ ಪ್ರೆಸ್ಸನ್ನು ಹಾಕಿಕೊಳ್ಳದೆ ಟೋಪಿಗಳನ್ನು ಹಾಕಿಕೊಂಡು ಬಂದರೆಂಬ ಕಾರಣದ ಮೇಲೆ ಅವರನ್ನು ಸಭೆಗೆ ಸೇರಿಸಲಿಲ್ಲ. ಆದೇ ಕಾರಣಕ್ಕಾಗಿ ಕಳೆದ ಸಾರಿಯೂ ಅವರನ್ನು ಸೇರಿಸಿರಲಿಲ್ಲ.

ಕಡೇ ಸುದ್ದಿ

ಸುಭಾಸ್ ಬೋಸರ ಬಗ್ಗೆ ಪೌರಸಭೆಯ ಸಂತಾಪ

ಮೈಸೂರು ೨೫

ಈ ಮಧ್ಯಾಹ್ನ ಪೌರಸಭೆಯ ಅಧಿವೇಶನಕ್ಕೆ ಮುಂಚೆ ಸುಭಾಸ್ ಚಂದ್ರಬೋಸರ ಮರಣಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಶ್ರೀ ಸಿ. ಸೀತಾರಾಮಯ್ಯನವರು ಮಂಡಿಸಿದರು. ಅಧ್ಯಕ್ಷರು ಅದಕ್ಕೆ ಅವಕಾಶ ಕೊಡಲಿಲ್ಲ. ಆಮೇಲೆ ಸಭೆಯು ಹತ್ತು ನಿಮಿಷ ಮುಂದುವರೆಯಬೇಕೆಂದು ಶ್ರೀ ಸೀತಾರಾಮಯ್ಯನವರು ಇನ್ನೊಂದು ನಿರ್ಣಯವನ್ನು ಸೂಚಿಸಿದರು. ಅದು ಮಂಜೂರಾಗಿ ಹತ್ತು ನಿಮಿಷದ ನಂತರ ಸಭೆ ಮುಂದುವರೆಯಿತು.

LATEST NEWS

ಶ್ಯಾನುಭೋಗರ ಸಮ್ಮೇಳನ

ಸ್ವಂ.ಸು.ಪ್ರೋ.] ಬೆಂಗಳೂರು ೨೫

ಪಟೇಲರು, ಶ್ಯಾನುಭೋಗರು ಮೊದಲಾದ ಗ್ರಾಮಾಧಿಕಾರಿಗಳ ೧೦ ನೇ ಸಮ್ಮೇಳನವು ಸೆಪ್ಟೆಂಬರ್ ೧ಕ್ಕೆ ಪುಟ್ಟಣ್ಣಶೆಟ್ಟಿ ಟೌನ್ ಹಾಲ್ ಭವನದಲ್ಲಿ ನಡೆಯಬೇಕಾಗಿದೆ. ಪ್ರಾರಂಭೋತ್ಸವವನ್ನು ನೆರವೇರಿಸುವುದಕ್ಕೆ ದಿವಾನರನ್ನು ಪ್ರಾರ್ಥಿಸಲು ನಿನ್ನೆ ಸಂಜೆ ಶ್ಯಾನುಭೋಗ ಸಂಘದವರು ದಿವಾನರಲ್ಲಿ ನಿಯೋಗ ಬಂದಿದ್ದರು.

ಪ್ರಜಾಪ್ರತಿನಿಧಿ ಸಭೆಯ ಹಕ್ಕುಬಾಧ್ಯತೆಗಳ ಸಮಿತಿ

ಈ ಮಧ್ಯಾಹ್ನ ಮೇಲ್ಕಂಡ ಸಮಿತಿಯು ಅಧ್ಯಕ್ಷರಾದ ಶ್ರೀ ಪುಟ್ಟಣ್ಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು.

ಕಾಂಗ್ರೆಸ್ ಲಾಯರುಗಳ ಸನ್ನದ್ದು

ಶ್ರೀ ನಿಜಲಿಂಗಪ್ಪ, ಸಂಪಂಗಿ ರಾಮಯ್ಯ, ರಾಮಾಚಾರ್ ಮೊದಲಾದವರುಗಳ ಪರವಾಗಿ ಸನ್ನದನ್ನು ವಾಪಸುಕೊಡುವ ಬಗ್ಗೆ ಹೈಕೋರ್ಟಿನಲ್ಲಿ ಹಾಕಲಾಗಿರುವ ಅರ್ಜಿಯು ೨೭ ನೇ ತಾರೀಖು ವಿಚಾರಣೆಗೆ ಬರುವುದೆಂದು ಗೊತ್ತಾಗಿದೆ.

ಕಚೇರಿ ಸುದ್ದಿ

[illegible] ಜಿಲ್ಲಾಧಿಕಾರಿಗಳಾದ ಶ್ರೀ ಭರಮಪ್ಪನವರ [illegible] ಅವರು ಉಪಯೋಗಿಸಿಕೊಳ್ಳುವ ದಿನದಿಂದ ೧೦ ದಿನಗಳ ರಜವೂ, ಸಹಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀ ವೆಂಕಟೇ ಅಯ್ಯಂಗಾರರಿಗೆ ೩೦ ದಿನಗಳ ರಜವೂ ಮಂಜೂರಾಗಿದೆ.

ಮೈಸೂರು ಪೌರ ಸಭೆಯ ಆರೋಗ್ಯಾಧಿಕಾರಿಗಳಾದ ಶ್ರೀ॥ ಎಂ. ರಾಮಚಂದ್ರರಾಯರನ್ನು ಎಂಟಿಮಾಲಜೀ ಬ್ಯೂರೋದ [illegible]ಟೆಂಡೆಂಟ್ರನ್ನಾಗಿಯೂ, ಶ್ರೀ॥ ಟಿ. ಅನಂತರಾಯರನ್ನು ಮೈಸೂರು ಪೌರ ಸಭೆಯ ಆರೋಗ್ಯಾಧಿಕಾರಿಯನ್ನಾಗಿಯೂ, ಶ್ರೀ ಟಿ. ಚಂದ್ರಶೇಖರಯ್ಯನವರನ್ನು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳನ್ನಾಗಿ ಬದಲಿ ನೇಮಕ ಮಾಡಲಾಗಿದೆ.

ಸರ್ವೆ ಸೂಪರಿಂಟೆಂಡೆಂಟರಾದ ಶ್ರೀ॥ ಹೆಚ್. ಎಲ್. ತಿಪ್ಪಯ್ಯನವರನ್ನು ಶಿವಮೊಗ್ಗಾ ಜಿಲ್ಲಾ ಸರ್ವೆ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಹೃದಯಾಘಾತದಿಂದ ಮರಣ

ಲಾಸ್ ಏಂಜಲೀಸ್ಸಿನ ೮ ವರ್ಷ ವಯಸ್ಸಿನ ಹುಡುಗ [illegible] ತನ್ನೊಡನೆ [illegible] ಹೃದಯ ಹಲಗೆ [illegible] ತಾನು ಜಿಮುವಿನಂತೆ [illegible] ಬಿಡಲಿಲ್ಲವೆಂದು [illegible] ದಿನ ೩ ಗಂಟೆಯಲ್ಲಿ [illegible] ಗಳ ನಿಯಾಯು [illegible]

ಮರಣ ಶಿಕ್ಷೆ

ಮೈಸೂರು ೨೫

[illegible]

ಮಹಾ ಮ್ಯಾಜಿಸ್ಟ್ರೇಟರು ಶ್ರೀ [illegible] ಮರಣ ಶಿಕ್ಷೆ ವಿಧಿಸಿರುವ [illegible] ನಡೆಸಲಾಯಿತು.

ಸಾಧ್ವಿ

ತಾ॥ ೨೫-೮-೪೫ ಶನಿವಾರ

ಮೈಸೂರು ಮುಂದಣಿಯಾಗಲಿ !

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಹೇಳಿಕೆಯೊಂದನ್ನು ಹೊರಡಿಸಿ ಸಂಸ್ಥಾನದಲ್ಲಿರುವ ಎಲ್ಲಾ ಪ್ರತಿಬಂಧಕಗಳೂ ಹೋಗಬೇಕೆಂದು ಕೋರಿರುವರು. ಬ್ರಿಟಿಷ್ ಇಂಡಿಯಾದಲ್ಲಿ ಆಗಿರುವಂತೆ ಕಾಂಗ್ರೆಸ್ ಸಮಿತಿಯ ಮೇಲಿರುವ ಅಡ್ಡಿಗಳೆಲ್ಲಾ ಹೋಗಬೇಕೆಂದು ಕೋರಿದ್ದಾರೆ. ಅಲ್ಲಿ ಹೋದ ಮೇಲೆ ಇಲ್ಲಿಯೂ ಹೋಗುವುದು ಖಂಡಿತ. ಆದರೆ ಇನ್ನೂ ಏಕೆ ಸಾವಕಾಶವೋ ತಿಳಿಯದು.

ಮೂರು ವರುಷಗಳ ಹಿಂದೆ ಬ್ರಿಟಿಷ್ ಹಿಂದೂಸ್ಥಾನದಲ್ಲಿ ನಿರ್ಬಂಧಗಳು ಬಂದ ಒಡನೆಯೇ ಇಲ್ಲಿಯೂ ಬಂದವು. ಆದ್ದರಿಂದ ಅಲ್ಲಿ ಅವುಗಳು ನಿವಾರಣೆಯಾದ ಕೂಡಲೇ ಇಲ್ಲಿಯೂ ಆಗುವುವೆಂದು ನಿರೀಕ್ಷಿಸುವುದು ಸಹಜವೇ ಆಗಿದೆ. ಕಾಂಗ್ರೆಸ್ ಅಧ್ಯಕ್ಷರು ಮಾಡಿರುವ ಅರಿಕೆಗೆ ಸರಕಾರದವರು ಒಡನೆಯೇ ಮನ್ನಣೆ ಕೊಡುವರೆಂದು ನಾವು ನಿರೀಕ್ಷಿಸುತ್ತೇವೆ.

ಸಂಸ್ಥೆಗಳ ಮೇಲಿನ ಪ್ರತಿಬಂಧಕವೇ ಅಲ್ಲದೆ ವ್ಯಕ್ತಿಗಳ ಮೇಲೆ ಅನೇಕ ಅಡ್ಡಿಗಳವೆ. ಮೂರು ವರುಷಗಳ ಹಿಂದೆ ಬಂಧನಕ್ಕೊಳಗಾಗಿ ಅನಂತರ ಬಿಡುಗಡೆಯಾದ ನೂರಾರು ಮಂದಿಯ ಚಲನವಲನಗಳಿಗೆ ಅಡ್ಡಿ ಮಾಡಲ್ಪಟ್ಟಿದೆ. ಕೆಲವರನ್ನು ಸಂಸ್ಥಾನದಿಂದಲೇ ಗಡೀಪಾರು ಮಾಡಲಾಗಿದೆ. ಮತ್ತೆ ಕೆಲವರು ಭದ್ರಾವತಿ, ಕೋಲಾರ, ಮುಂತಾದ ಕಡೆಗಳಿಗೆ ಬರಬಾರದೆಂದು ತಿಳಿಸಲಾಗಿದೆ ಇಂತಹ ಆಜ್ಞೆಗಳನ್ನು ಈಗ ಅಳಿಸಿಹಾಕುವುದು ಅತ್ಯಗತ್ಯ.

ಆಗಸ್ಟ್ ಚಳುವಳಿಯ ಸಂಬಂಧವಾಗಿ ಶಿಕ್ಷೆಗೆ ಗುರಿಯಾದ ಅನೇಕರು ಇನ್ನೂ ಕಾರಾಗೃಹದಲ್ಲಿಯೇ ಕೊಳೆಯುತ್ತಿರುವರು. ಮುಖ್ಯವಾಗಿ ಹಾಸನ, ಶ್ರವಣಬೆಳಗೊಳದವರ ವಿಷಯವು ಬಹಳ ಶೋಚನೀಯವಾದುದು. ಅವರಲ್ಲಿ ಚಿಕ್ಕವಯಸ್ಸಿನ ತರುಣರೂ, ವೃದ್ಧರಾದವರೂ ಹಾಗೂ ಮಹಿಳೆಯರೂ ಇದ್ದಾರೆ. ಇವರುಗಳು ಈಗಾಗಲೇ ಸುಮಾರು ಮೂರು ವರುಷದ ಬಂಧನವನ್ನು ಅನುಭವಿಸಿರುವರು. ಅವರ ಮೇಲಿನ ಆಪಾದನೆಯ ನಿರ್ಣಯವನ್ನು ನಾವು ಮಾಡಬೇಕಾಗಿಲ್ಲ. ಕೇವಲ ಭೂತದಯಾ, ಸಹಾನುಭೂತಿ ದೃಷ್ಟಿಯಿಂದ ಅವರು ಇದುವರೆಗೆ ಅನುಭವಿಸುತ್ತಿರುವ ಶಿಕ್ಷೆಯನ್ನು ರದ್ದುಮಾಡಿ ಅವರುಗಳನ್ನು ಈ ಸಮಯದಲ್ಲಿ ಬಿಡುಗಡೆಮಾಡಬೇಕೆಂದು ನಾವು ಸರ್ಕಾರದವರನ್ನು ಪ್ರಾರ್ಥಿಸುತ್ತೇವೆ. ಹಾಗೆ ಮಾಡಿದರೆ ಇಡೀ ದೇಶವೇ ಮೆಚ್ಚುವುದು. ಮೈಸೂರು ಸರಕಾರವು ಭಾರತ ಸರಕಾರಕ್ಕಿಂತಲೂ ಒಂದು ಹೆಜ್ಜೆ ಮುಂದಿಟ್ಟಂತಾಗುವುದು. ಇದರಿಂದ ಸಂಸ್ಥಾನದಲ್ಲಿ ಶಾಂತಿ, ಸೌಹಾರ್ದಯುತ ವಾತಾವರಣವು ತಲೆದೋರುವುದು. ನಮ್ಮ ಸರ್ಕಾರದವರು ಕೂಡಲೇ ಈ ಬಗ್ಗೆ ಸ್ವಾಕ್ರಮವನ್ನು ಕೈಗೊಳ್ಳುವರೆಂದು ನಾವು ನಂಬುತ್ತೇವೆ

ವಾರ್ತಾ ವಾಹಿನಿ

ಮಹಾತ್ಮಾಜಿಯವರಿಗೆ ಅವರ ಹುಟ್ಟುಹಬ್ಬದ ದಿನ ಹಣಕ್ಕೆ ಬದಲಾಗಿ ಸಾಧ್ಯವಾದಷ್ಟು ಕೈ ನೂಲನ್ನು ಅರ್ಪಿಸಬೇಕೆಂದು ತೀರ್ಮಾನವಾಗಿದೆ. ನೂಲಿಗಿಂತಲೂ ಅತಿಶಯವಾದ ಕಾಣಿಕೆಯನ್ನು ದೇಶವು ತನ್ನ ಭಕ್ತನಿಗೆ ಅರ್ಪಿಸಲು ಸಾಧ್ಯವಿಲ್ಲ.

o o o o

ಭಾರತ ವರ್ಷದ ವೈಸ್‌ರಾಯರು ನೆನ್ನೆಯ ದಿನ ಲಂಡನ್ನಿಗೆ ತಮ್ಮ ಕಾರ್ಯಗೌರವದ ಸಲುವಾಗಿ ಪ್ರಯಾಣ ಬೆಳಸಿದರು.

o o o o

ಸುಪ್ರಸಿದ್ಧ ಚಲನ ಚಿತ್ರ ತಾರೆ ದೇವಿಕಾ ರಾಣಿಯು ರಷ್ಯ ಕಲಾ ಕೋವಿದರಾದ ಸ್ವೆಂಟೋಸ್ಲಾವ್‌ರೋರಿಚ್‌ರವರನ್ನು ಮದುವೆಯಾದಳು. ನೂತನ ದಂಪತಿಗಳು ಕೆಲವು ಕಾಲ ಹಿಮಾಲಯಕ್ಕೆ ಪ್ರಯಾಣ ಮಾಡಿ ಅಲ್ಲಿ ಸ್ವಲ್ಪ ದಿವಸ ತಂಗಿರುವರು.

o o o o

ಬಾಬು ಸುಭಾಷ್ ಬೋಸರ ಆಕಸ್ಮಿಕ ಮರಣದ ಬಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ತಮ್ಮ ಸಂತಾಪವನ್ನು ಸೂಚಿಸಿರುವರು.

o o o o

ಕೇವಲ ಎರಡೇ ಎರಡು ಅಣು ಬಾಂಬಿನ ಪ್ರಯೋಗದಿಂದ ಜಪಾನಿನಲ್ಲಿ ಗಾಯಗೊಂಡವರ ಹಾಗೂ ಮರಣ ಹೊಂದಿದವರ ಸಂಖ್ಯೆ ಐದು ಲಕ್ಷಕ್ಕೆ ಮಿಕ್ಕಿದೆ.

o o o o

ಜಪಾನರು ಶರಣಾಗತಿ ಕರಾರಿಗೆ ಮುಂದಿನ ಮಂಗಳವಾರ ಬರೆಹ ಮೂಲಕ ತಮ್ಮ ಒಪ್ಪಿಗೆಯನ್ನು ಸೂಚಿಸಲಿರುವರು.

o o o o

ಅಹಮದಾಬಾದಿನಲ್ಲಿ ಸುಮಾರು ಹದಿನಾರು ಜನ ಹಿಂದೂ ಮಹಾಸಭೆಯ ಸ್ವಯಂ ಸೇವಕರು ಅಲ್ಲಿಯ ಜಿಲ್ಲಾ ಮ್ಯಾಜಿಸ್ಟ್ರೇಟರ ನಿರ್ಬಂಧಾಜ್ಞೆಯನ್ನು ಮುರಿದ ಆಪಾದನೆ ಮೇಲೆ ಅವರನ್ನು ವಿಚಾರಣೆಗೆ ಗುರಿಪಡಿಸಿದ್ದಾರೆ.

o o o o

ಜಪಾನಿ ಪಡೆಗಳಿಗೆ ಕದನ ನಿಲ್ಲಿಸುವಂತೆ ಸೂಚಿಸಿರುವುದಾಗಿ ಬರ್ಮಾದಲ್ಲಿಯ ಜಪಾನಿ ಸೇನಾನಿಯು ಮಿತ್ರ ಸೇನಾನಿಗಳಿಗೆ ಮತ್ತೊಮ್ಮೆ ನಿಖರವಾಗಿ ತಿಳಿಸಿದ್ದಾರೆ.

Edited, printed and published by A. R. Nagarajan at the Sadhvi Press D Subbiah Road, Mysore

ಮಹದೇವ ದೇಸಾಯಿ ದಿನಾಚರಣೆ

ಸ್ವಂ. ಸು.] ಚಾಮರಾಜನಗರ ೨೪

ದಿವಂಗತ ಮಹದೇವ ದೇಸಾಯಿಯವರ ದಿನಾಚರಣೆಯನ್ನು ಸ್ಥಳೀಯ ಯುವಕರ ಸಂಘದವರು ನಿನ್ನೆ ರಾತ್ರಿ ಸಂಘದ ಕಛೇರಿಯಲ್ಲಿ ನಡೆಸಿದರು. ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಕೆ. ಕುಮಾರ ಸ್ವಾಮಿಯವರು ದಿವಂಗತ ದೇಸಾಯಿಯವರ ಜೀವನ ಚರಿತ್ರೆಯನ್ನು ವಿವರಿಸಿ ಅವರು ತುರಂಗದಲ್ಲಿ ಪ್ರಾಣ ನೀಗಿದ ಸನ್ನಿವೇಶವನ್ನು ಯಾರೂ ಮರೆಯಬಾರದೆಂದು ತಿಳಿಸಿ ಯುವಕರು ಮುಂದಿನ ಹೋರಾಟಕ್ಕೆ ಸಿದ್ಧರಾಗಬೇಕೆಂದು ಹೇಳಿದರು.

ವಿದ್ಯಾರ್ಥಿ ಕಾಂಗ್ರೆಸ್ ಸ್ಥಾಪನೆ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಕೆ ಕುಮಾರ ಸ್ವಾಮಿಯವರು ಚಾಮರಾಜನಗರಕ್ಕೆ ನಿನ್ನೆ ದಿನ ಭೇಟಿ ಇತ್ತು ಮುನಿಸಿಪಲ್ ಹೈಸ್ಕೂಲ್ ಮತ್ತು ಇತರ ವಿದ್ಯಾರ್ಥಿ ಮುಖಂಡರನ್ನು ಕಂಡು ಸಂಭಾಷಣೆ ನಡೆಸಿದರು. ವಿದ್ಯಾರ್ಥಿ ಕಾಂಗ್ರೆಸ್ಸನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು. ಸದಸ್ಯರನ್ನು ಸೇರಿಸುವ ಸಲುವಾಗಿ ಶ್ರೀಗಳಾದ ರಂಗಪ್ಪ, ನಂಜುಂಡ ಶೆಟ್ಟಿ ಮತ್ತು ಸಣ್ಣಯ್ಯನವರನ್ನು ಸಂಚಾಲಕರನ್ನಾಗಿ ನೇಮಿಸಲಾಯಿತು.

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಚಾರ್ಜಿನಿಂದ ಮಾಡಲ್ಪಡುದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ದೊರೆಯುತ್ತವೆ.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

ತಿಂಗಳಿಗೆ ಚಂದಾ ಎಂಟಾಣೆ ಮಾತ್ರ

ಜಾಹಿರಾತಿನ ದರಗಳಿಗೆ ವಿಚಾರಿಸಿರಿ

ಜಪಾನ್ ವಿದೇಶಾಂಗ ಸಚಿವರ ರಾಜೀ

ಜಪಾನಿನ ವಿದೇಶಾಂಗ ಸಚಿವ ಷಿಗಿಮಿಟ್ಸೂರವರು ರಾಜೀನಾಮೆ ... ರುವರು. ಚೀನಾದಲ್ಲಿ ಜಪಾನಿ ... ತಿಯಾಗಿದ್ದವರು ಈಗ ಯುದ್ಧ ... ಗಿರುವರು ಕೇಂದ್ರ ಸಮಿತಿಯ ... ಗೊಳಿಸಲಾಗಿದೆ, ಶಾಂತಿಸಮಿತಿ ... ಮಿಸಲಾಗಿದೆ.

ಬೋಸರ ಬಗ್ಗೆ ಗಾ... ಶೋಕ

ಸುಭಾಷ್ ಬೋಸರ ಮರಣ... ಯನ್ನು ತಿಳಿಸಿದಾಗ ಗಾಂಧಿಜ... ಮ್ಮ ಬಿಡಾರದಲ್ಲಿ ಹಾರಲಾಗಿದ್ದ ... ಜವನ್ನು ಇಳಿಸಿಬಿಡುವಂತೆ ಆಜ್ಞೆ... ರು. ಅನಂತರ ಪ್ರಾರ್ಥನೆಯು ... ವಾಗಿ ನಡೆಯಿತು.

ಗೌರ್ನರರೊಡನೆ ಜವಹರ ... ಭೇಟಿ

ಪಂಡಿತ ಜವಾಹರಲಾಲರು ... ಪ್ರಾಂತದ ಗೌರ್ನರಾದ ಸರ್ ... ಹಾಲಂಡರ ಆಹ್ವಾನದಂತೆ ಅವ... ಬುಧವಾರ ಭೇಟಿಮಾಡಿ, ಉಪ... ಕರಿಸಿದರು. ೨ ಗಂಟೆಯ... ಯಾಗಿ ಸಂಭಾಷಣೆ ನಡೆಯಿತೆ... ಲಾಗಿದೆ.

ಸ್ವತಂತ್ರ ಚುನಾವ... ಭರವಸೆ

ಬರುವ ಮಹಾ ಚುನಾವಣೆ ... ಲ್ಲಾ ಭಾಗಗಳಲ್ಲಿಯೂ ಸ್ವ... ವಾತಾವರಣವು ಕಲ್ಪಿಸಲ್ಪಡ... ಬ್ರಿ॥ ಸರ್ಕಾರದ ನೀತಿಯೆ... ಪಾರ್ಲಿಮೆಂಟ್ ಸಭೆಯಲ್ಲಿ ... ಇಂಡಿಯ ಸೆಕ್ರೆಟರಿಯವರು ...

ಹಯವದನನ ಹುಟ್ಟು...

ಶ್ರೀ ಪರಕಾಲಸ್ವಾಮಿಗಳವರು ... ಲ್ಲಿ ಹಯವದನನ ಹುಟ್ಟಿದ ... ಬಹು ವಿಜೃಂಭಣೆಯಿಂದ ಆಚ...] ಸುಂದರವಾದ ವಜ್ರದ ತೊ... ಯವದನನ್ನು ಅಲಂಕರಿಸಿದ ... ಕಣ್ಣಿಗೆ ಹಬ್ಬದೂಟವಾಗಿದ್ದಿತ ... ಶೀಲವನ್ನು ಕದಂಬಿಯು... ಬಹಳ ಮನೋಹರವಾಗಿದ್ದಿತು

ಅಪೆರಾ ಟಾಕೀಸಿನಲ್ಲಿ

22—8—45

ಪ್ರತಿದಿನ ೩ ಆಟ...

ಭಾಗ್ಯ

— ಚಿ...

ಭಾರತ್ ಭೂಷಣ್, ರಾ... ಮೋಹನ್ ಹಾ... ಬಿಡಾಲ್ ಮುಂ...

ಮುಂದಿನ ಬದಲಾವಣೆ.—

ಕೋಕಿಲ

ಹರ್ಷ ಭಾನು ಸುಮಿತ್ರ ... ಕಲ್ಯಾಣ ... ಪಾತ್ರವಹಿಸಿರುವ ...

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. O P.

ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ಕ್ಕೆ ರೂ. 0 10 6

ಡಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್.—ದೇವರಾಜ ಮಾರ್ಕೆಟ್ : : ಸಕ್ಕರೆ ಮಂಡಿ, ಸಂತೇಪೇಟೆ.

ಫೋ॥ ನಂ 392 ॥ವಂದೇಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪ ಭಾನುವಾರ ೨೬-೮-೪೫ ಸಂಚಿಕೆ ೨೫

ಶರಣಾಗತಿಯು ೨ ದಿನ -ಮುಂದೆಹೋಯಿತು-

ಅಣು ಬಾಂಬಿಗೆ ಆಹುತಿ

ಜಪಾನಿನ ಪ್ರಧಾನ ನಗರಗಳಾದ ಹಿರೋಷಿಮೋ, ನಾಗಸಾಕಿ ನಗರಗಳ ಮೇಲೆ ಬಿದ್ದ ೫೨೦-ಪೌಂಡು ತೂಕದ ಎರಡು ಅಣುಬಾಂಬುಗಳು ಎರಡು ಲಕ್ಷ ಜನಗಳನ್ನು ಕೊಂದವು, ಅಥವಾ ಗಾಯಪಡಿಸಿದುವೆಂದು ಈಗ ವರದಿಯಾಗಿದೆ. ಒಂಭತ್ತು ಮೈಲಿ ಪ್ರದೇಶದಲ್ಲಿ ಎಲ್ಲಾ ಮನೆಗಳೂ ಪುಡಿಯಾ ಹೋದವು ಅಥವಾ ನಾಶವಾದವು, ನಾಗಸಾಕಿಯಲ್ಲಿ ೩೦,೦೦೦ ಜನರು ಮಡಿದರು ಅಥವಾ ಗಾಯಗೊಂಡರು.

೧೫೦೦೦ ಅಡಿ ಎತ್ತರದಲ್ಲಿ ಈ ಬಾಂಬುಗಳು ಸಿಡಿದವು. ಮೊದಲು ಭಾರಿ ಶಬ್ದ ಕೇಳಿಸಿತು. ಅನಂತರ ಹೊಗೆಯ ಮೋಡಗಳು ಕವಿದವು. ಅನಂತರ ಅಗ್ನಿ ಕಿರಣಗಳು ಬಂದವು. ಅನಂತರ ಕಪ್ಪು ದ್ರಾವಕವು ಬಿತ್ತು, ಹತ್ತು ನಿಮಿಷಗಳಲ್ಲಿ ಎಲ್ಲವೂ ನಾಶವಾದವು.

ವಿದ್ಯಾರ್ಥಿಗಳ ಭೋಜನ ಸೌಕರ್ಯ

ಮೈಸೂರು ೨೬

ರಾಜಧಾನಿಯ ಬಡ ವಿದ್ಯಾರ್ಥಿಗಳ ಭೋಜನಕ್ಕೆ ಸೌಕರ್ಯ ಪಡಿಸುವ ಸಮಿತಿಯವರು ಕಳೆದ ರವಿವಾರ್ತನೇ ತಾರೀಖಿನಲ್ಲಿ ಸಭೆ ಸೇರಿ ಒಟ್ಟು ೬೪ ಜನ ಬಡ ವಿದ್ಯಾರ್ಥಿಗಳಿಗೆ ಊಟದ ಏರ್ಪಾಡನ್ನು ಮಾಡಲು ಶಿಫಾರಸು ಮಾಡಿದ್ದಾರೆ. ಅವರ ಪೈಕಿ ಆರು ಜನ ಬ್ರಾಹ್ಮಣರು, ಆರು ಜನ ಒಕ್ಕಲಿಗರು, ಮೂರು ಜನ ಲಿಂಗಾಯತರು, ಮೂವರು ಕುಂಚಿಟಿಗರು, ಆರು ಜನರು ಇತರ ಕೋಮಿನವರು ಒಟ್ಟು ೬೪ ಜನರಿಗೆ ಊಟದ ಏರ್ಪಾಡು ಮಾಡಲ್ಪಟ್ಟಿದೆ. ಮಹನೀಯರು ಉದಾರ ಮನಸ್ಸಿನಿಂದ ಸಹಾಯ ಮಾಡಿ ಇನ್ನೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಅನುಕೂಲಪಡಿಸಬೇಕೆಂದು ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಕೋರಿರುತ್ತಾರೆ.

ಯಕ್ಷಗಾನ

ಮೈಸೂರ ಸಂತೇಪೇಟೆ ಮಹಾ ಲಕ್ಷ್ಮಿ ವಿಲಾಸ ಶಾಸಿಕ್ಷಣದಲ್ಲಿ ತಾ॥ ೨೬ ನೇ ಭಾನುವಾರ ರಾತ್ರಿ ೧೦ ಗಂಟೆಗೆ, ದಿವಂಗತ ಹರಿಕಥಾ ವಿದ್ವಾನ್ ಎಂ. ಸುಬ್ಬಯ್ಯ ಭಾಗವತರ ಶಿಷ್ಯರಾದ ಹನುಮಂತ್ಯಂಕಲ್ಲು ಯಕ್ಷಗಾನ ಸಂಘದವರಿಂದ "ಭೀಷ್ಮ ವಿಜಯ" ಎಂಬ ಯಕ್ಷಗಾನ ಕಥೆಯು ಪ್ರಸಂಗ ರೂಪದಲ್ಲಿ ನಡೆಸಲ್ಪಡುತ್ತದೆ. ಸರ್ವರಿಗೂ ಆಹ್ವಾನ ಉಂಟು.

ಜಪಾನಿನಲ್ಲಿ ಗೊರಿಲ್ಲಾ ಕಾರ್ಯಾಚರಣೆಯೇ?

ಜ॥ ಮೆಕಾರ್ಥರ್‌ರವರ ಸೇನೆಗಳು ಜಪಾನಿನಲ್ಲಿ ಇಳಿದಾಗ ಅವರಲ್ಲಿ ಗೊರಿಲ್ಲಾ ಪ್ರತಿಭಟನೆಗಳು ಆಗಬಹುದೆಂದು ಯುದ್ಧ ಇಲಾಖೆಯ ಅಧಿಕಾರಿಗಳು ತಿಳಿಸಿರುತ್ತಾರೆ. ಜಪಾನ್ ಸೈನ್ಯದಲ್ಲಿರುವ ಕೆಲವು ಅಹಂ ಬ್ರಹ್ಮತ್ವಗಳ ಸೈನಿಕರನ್ನು ಹತೋಟಿಯಲ್ಲಿಡಲು ಹಿರೋಹಿಟೋ ಚಕ್ರವರ್ತಿಗಳಿಗೆ ಸಾಧ್ಯವಾಗುವುದಿಲ್ಲವೆಂದು ಹೇಳಲಾಗಿದೆ.

ಜಪಾನ್ ಆಕ್ರಮಣ

ಮಿತ್ರ ಸೈನ್ಯಗಳು ಜಪಾನ್ ಆಕ್ರಮಿಸಲು ಈ ದಿನ ಮೊದಲನೆಯ ಬಾರಿ ಜಪಾನ್ ಭೂ ಪ್ರದೇಶದಲ್ಲಿ ತಮ್ಮ ಕಾಲನ್ನು ಇಡುವವು. ಮೊದಲು ಒಂದು ಸಣ್ಣ ಸೇನಾ ದಳವು ಹೋಗುವುದು. ಮುಂಗಳವಾರ ಜ॥ ಮೆಕಾರ್ಥರ್‌ರವರ ನೇತೃತ್ವದಲ್ಲಿ ಬರುವ ಸೇನೆಗಳಿಗೆ ದಾರಿ ಮಾಡುವುವು.

ಇನ್ನೂ ಪ್ರತಿಭಟನೆ

ಬರ್ಮಾದಲ್ಲಿ ಕದನವು ನಿಂತಿದೆ. ಆದರೆ ಬೋರ್ನಿಯೋವಿನಲ್ಲಿ ಇನ್ನೂ ನಡೆಯುತ್ತಿದೆ. ಫಿಲಿಪೈನಿನಲ್ಲೂ ಲೂಜಾನ್ ದ್ವೀಪದಲ್ಲಿ ಒಬ್ಬ ಬಲವಾದ ಯೋಧ ಜಪಾನೀ ಸೇನಾಪತಿಯು ತನ್ನ ಸೈನ್ಯಗಳು ಶರಣಾಗಲು ಅವಕಾಶ ಕೊಡುತ್ತಿಲ್ಲ. ಚೀಣಾದಲ್ಲಿ ಕಮ್ಯೂನಿಸ್ಟ್ ಪಡೆಗಳೂ ಸಹ ಜಪಾನೀ ಸೇನೆಗಳೊಡನೆ ಹೋರಾಡುತ್ತಿವೆ.

ಕಾಂಗ್ರೆಸ್ ಕೆಲಸ ಮುಂದುವರಿಯಲಿ

ಪ್ರತಿಬಂಧಕಗಳನ್ನು ತೆಗೆದಿರುವ ಕಡೆಗಳಲ್ಲೆಲ್ಲಾ ಕಾಂಗ್ರೆಸ್ ಸಂಸ್ಥೆಗಳು ಮಾಮೂಲು ಕಾರ್ಯಕ್ರಮಗಳನ್ನು ಮುಂದುವರಿಸಬೇಕೆಂದೂ, ಸದಸ್ಯರುಗಳನ್ನು ಕೂಡಿಸುವುದೇ ಅಲ್ಲದೆ ಬರುವ ಚುನಾವಣೆಗೆ ಸಿದ್ಧತೆಯನ್ನು ಮಾಡಬೇಕೆಂದೂ, ಅಧ್ಯಕ್ಷ ಮೌಲಾನಾ ಆಜಾದರು ತಿಳಿಸಿರುತ್ತಾರೆ.

ಸತ್ಕಾರ

ನಂಜನಗೂಡು ೨೫

ವ್ಯವಸಾಯ ಇಲಾಖೆ ಇನ್ಸ್‌ಪೆಕ್ಟರ್ ಶ್ರೀ ರಾಜಶೇಖರಮೂರ್ತಿಯವರನ್ನು ಮೈಸೂರಿಗೆ ವರ್ಗಮಾಡಿರುವ ಪ್ರಯುಕ್ತ ಇಲ್ಲೂ ಕಿನ ಮಹನೀಯರು ಕಳೆದ ಭಾನುವಾರ ಅವರು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಶ್ರೀಗಣಪತಿ ಇ. ಆರ್. ಶ್ರೀಕಂಠಯ್ಯನವರು ಮತ್ತು ಸುಬ್ರಹ್ಮಣ್ಯಯ್ಯನವರು ಅತಿಥಿಗಳ ಗುಣ ಕಥನ ಮಾಡಿದರು.

ಅಮೆರಿಕಕ್ಕೆ ಬ್ರಿಟನ್ನಿನ ಖಂಡನೆ

ಎರವು ಸಾಲಗಳ ವ್ಯವಹಾರವನ್ನು ಅಧ್ಯಕ್ಷ ಟ್ರೂಮನ್ನರು ರದ್ದುಪಡಿಸಿದಾಗ ಬ್ರಿಟನನ್ನು ಮೊದಲು ಕೇಳಲೇ ಇಲ್ಲವೆಂದೂ ಹೇಳಿ ಬ್ರಿ॥ ಮುಖ್ಯ ಮಂತ್ರಿ ಮಿ॥ ಅಟ್ಲಿಯವರು ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ತಮ್ಮ ಪ್ರತಿಭಟನೆಯನ್ನು ಸೂಚಿಸಿರುವರು. ಹಠಾತ್ತಾಗಿ ಹೀಗೆ ಮಾಡುವುದರಿಂದ ಬ್ರಿಟನ್ನಿನ ಆರ್ಥಿಕ ಸ್ಥಿತಿಯು ಶತಿ ಕೆಳಗಾಗುವುದೆಂದು ಹೇಳಿರುವರು. ಬಹಳ ಸ್ನೇಹದಿಂದಿದ್ದ ಒಂದು ರಾಷ್ಟ್ರವು ಹೀಗೆ ಒರಟು ತನವನ್ನು ತೋರಿಸಿರುವುದರಿಂದ ಪರಿಸ್ಥಿತಿಯು ಬಹಳ ಘೋರವಾಗಿದೆ ಎಂದು ಮಿ॥ ಚರ್ಚಿಲ್ಲರು ಹೇಳಿದರು.

ಅಣುಬಾಂಬಿನ ಪ್ರಭಾವ ನಿಂತಿಲ್ಲ

ಹಿರೋಷಿಮಾ ನಗರದ ಮೇಲೆ ಅಣುಬಾಂಬನ್ನು ಹಾಕಿ ೨೦ ದಿನಗಳಾದರೂ ವ್ಯಕ್ತಿಗಳ ಕ್ರೂರ ಸಾವು ಇನ್ನೂ ಆದಷ್ಟು ಆವರಿಸಿಯೇ ಇದೆ. ಅಣುಬಾಂಬಿನ ಯುರೇನಿಯಂ ವಸ್ತುವಿನಿಂದ ರೇಡಿಯೋ ಕಿರಣಗಳ ತೀಕ್ಷ್ಣತೆಯು ಅಲ್ಲಿ ಇನ್ನೂ ಹುಸಿರಿನಿಂದ ಇರುವರೆಲ್ಲರನ್ನೂ ಕೊಲ್ಲುತ್ತಿದೆ ಎಂದು ವರದಿಯಾಗಿದೆ.

ನವಂಬರ್‌ನಲ್ಲಿ ಮಹಾ ಚುನಾವಣೆ

ಕೇಂದ್ರ ಶಾಸನ ಸಭೆಗಳಿಗೆ ಚುನಾವಣೆಯು ನವಂಬರ್ ೩ ನೆಯ ವಾರ ನಡೆಯುವುದೆಂದು ವರದಿಯಾಗಿದೆ.

ಸತಾರಾಜಿಲ್ಲೆಯಲ್ಲಿ ಪ್ರತಿ ಸರಕಾರ

ಬೊಂಬಾಯಿ ಅಧಿಪತ್ಯದ ಸತಾರ ಜಿಲ್ಲೆಯ ಕೆಲವು ಆಕ್ರಮ ಸಂಸ್ಥೆಗಳು ಸರ್ಕಾರಕ್ಕೆ ವಿರುದ್ಧವಾಗಿ ಬೇರೆ ಸರಕಾರವನ್ನು ಸ್ಥಾಪಿಸಿ ಜನರ ಮೇಲೆ ಘೋರ ನಡೆಸುತ್ತಿರುವುದಾಗಿ ಬೊಂಬಾಯಿ ಸರ್ಕಾರದವರು ಹೇಳುತ್ತಾರೆ. ೧೯೪೨ ನೇ ಇಸವಿ ಆಗಸ್ಟ್ ತಿಂಗಳಿನಿಂದಲೂ ಅಲ್ಲಿ ಗಲಭೆಗಳಾಗುತ್ತಾ ಅಲ್ಲಿನ ನಿವಾಸಿಗಳಿಗೆ ವಿಶೇಷ ಕಿರುಕುಳಗಳನ್ನು ಕೊಡುತ್ತಿದ್ದರು. ಅವರುಗಳೇ ಕೋರ್ಟುಗಳನ್ನು ನಡೆಸಿ ಶಿಕ್ಷೆಗಳನ್ನೂ ಜುಲ್ಮಾನೆಗಳನ್ನೂ ವಿಧಿಸುತ್ತಿದ್ದರು.

ಈ ಚಳುವಳಿಯನ್ನು ಅಡಗಿಸಲು ಸರ್ಕಾರದವರು ಅನೇಕ ಜನಗಳನ್ನು ಬಂಧಿಸಿ ಕೋರ್ಟಿನಿಂದ ಸಾರಿ ಅವುಗಳ ಕಾರ್ಯ ಕಲಾಪಗಳಿಗೆ ಅಡ್ಡಿಯನ್ನುಂಟುಮಾಡಿರುತ್ತಾರೆ.

ಬೋಸರ ಬಗ್ಗೆ ಸಂತಾಪ

ಬಾಬು ಸುಭಾಸ್ ಚಂದ್ರಬೋಸರ ಮರಣದ ಬಗ್ಗೆ ತಮ್ಮ ಸಂತಾಪವನ್ನು ಸೂಚಿಸುವ ಸಲುವಾಗಿ ಪೆ. ಐ. ಸಿ. ಕೈಗಾರಿಕೆ ಕೆಲಸಗಾರರು ನೆನ್ನೆ ದಿನ ಕೆಲಸಕ್ಕೆ ಹೋಗಲಿಲ್ಲ. ಬೆಂಗಳೂರು ನಗರದ ಮುಖ್ಯ ವ್ಯಾಪಾರ ಕೇಂದ್ರಗಳೂ ಸಹ ತಮ್ಮ ವ್ಯಾಪಾರವನ್ನು ನಿಲ್ಲಿಸಿದ್ದವು. ಶ್ರೀ ಸುಭಾಸ್ ಬೋಸರ ಮರಣ ವಾರ್ತೆಯನ್ನು ಕೇಳಿ ಅನುತಾಪವನ್ನು ವ್ಯಕ್ತಪಡಿಸಲು ಬೆಂಗಳೂರು ಪೌರಸಭೆಯು, ಸಭೆ ಸೇರಿ ತನ್ನ ಕೆಲಸವನ್ನು ನಿಲ್ಲಿಸಿತು.

ಸಂತಾಪ ಸೂಚನೆಗೂ ಅಡ್ಡಿಯೇ?

ನಗರ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ. ನಾರಾಯಣಸ್ವಾಮಿಯವರು ಈ ರೀತಿ ಹೇಳಿಕೆ ಕೊಟ್ಟಿರುವರು:—

... ನಡೆದ ಪೌರಸಭೆಯಲ್ಲಿ, ಸಭಾ ಕಾರ್ಯಗಳು ಪ್ರಾರಂಭವಾಗುವುದಕ್ಕೆ ಮುಂಚೆ ದಿವಂಗತ ಬಾಬು ಸುಭಾಷ್ ಚಂದ್ರಬೋಸರ ಮರಣಕ್ಕಾಗಿ ನಗರ ನಿವಾಸಿಗಳ ಪರವಾಗಿ ಪೌರಸಭಾ ಸದಸ್ಯರಾದ ... ಸಿ. ಸೀತಾರಾಮಯ್ಯನವರು ಮಂಡಿಸಿದ ಸಂತಾಪ ಸೂಚನೆ ರಿಯಾವನ್ನು ಅಧಿಕಾರಿ ... ಶ್ವರು ತಳ್ಳಿಹಾಕಿದ್ದು ಬಹಳ ಶೋಚನೀಯ. ಮಹಾಪುರುಷರೊಬ್ಬರ ಬಗ್ಗೆ ... ಸಂತಾಪ ಸೂಚನೆಯನ್ನು ಮಾಡುವುದಕ್ಕೆ ಅಡ್ಡಿ ತಂದಿರುವುದು ಯಾವ ಪೌರಸಭೆಯ ಇತಿಹಾಸದಲ್ಲೂ ಕಂಡುಕೇಳಿಲ್ಲ ... ಅಧ್ಯಕ್ಷರು ಸದರಿ ರಿಯಾವನ್ನು ತಳ್ಳಿ ... ಕೊಟ್ಟಿರುವ ಕಾರಣಗಳು ತೀರ್ಪ ... ಚಿತ ಮತ್ತು ಅಗೌರವಯುತವಾಗಿವೆ. ... ಭಾರತ ಖಂಡವೇ ಬಾಬು ಬೋಸರ ... ವ-ತೆಯನ್ನು ಕೇಳಿ ತನ್ನ ಅ... ದ ಶೋಕವನ್ನು ವ್ಯಕ್ತಪಡಿಸುತ್ತಿ ... ಕಾಲದಲ್ಲಿ ಭಾರತೀಯರೇ ಆದ ಈ ... ಅಧ್ಯಕ್ಷರ ವರ್ತನೆಯು ಖಂಡ ... ವಾದದ್ದು. ದಿವಂಗತರು ಅಪ್ರತಿಮ ... ಶಕ್ತ, ವೀರ ತ್ಯಾಗಿಗಳು; ಇವರು ದೇಶ ಸ್ವಾತಂತ್ರ್ಯ ಸಾಧನೆಗೆ ಅನುಸರಿಸಿದ ... ಪಯವಾಗಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ, ಇವರ ದೇಶಪ್ರೇಮ, ತ್ಯಾಗಗಳು ನಿಸ್ಸಂಶಯವಾದುವೆಂಬುದನ್ನು ಎಲ್ಲರೂ ಒಪ್ಪಲೇಬೇಕು. ... ಅಂಥಹ ವೀರಪುರುಷನ ವಿಷಯದಲ್ಲಿ ... ಪೌರಸಭೆಯಲ್ಲಿ ಅಧಿಕಾರಿ ಅಧ್ಯಕ್ಷ ... ನ್ನದ್ದರಿಂದ ಇಂಥಾ ಅಭಾಸಕ್ಕೆ ಅವಕಾಶವಾಗಿರುತ್ತದೆ. ... ನೇ ಆಗಲೀ ಕಾಂಗ್ರೆಸ್ ಪೌರಸಭಾ ... ರುಗಳು ತಮ್ಮ ಕರ್ತವ್ಯವನ್ನು ಪಾ... ಸಭೆಯ ಕೆಲಸಕಾರ್ಯಗಳನ್ನು ೧೦ ... ಗಳು ಮುಂದುವರಿಸಿದುದು ಅಭಿನಂದನೀಯವೇ ಸರಿ.

ಸ್ವತಂತ್ರ ವಾರ

... ತಿರುಚಂಗೋಡು ೧೬ ... ಧೀ ಆಶ್ರಮದ ಮೂಲ ವಿದ್ಯಾಲಯದಲ್ಲಿ ಇದೇ ತಿಂಗಳು ೯ ರಿಂದ ಸ್ವತಂತ್ರವನ್ನು ಆಚರಿಸಲಾಯಿತು. ಪ್ರತಿದಿನ ಪ್ರಭಾತ ಫೇರಿ ಮತ್ತು ಧ್ವಜ ವಂದನೆ, ಸಂಜೆ ಸಭೆಗಳು ನಡೆದವು.

ಶರಣಾಗತಿಯು ಎರಡು ದಿನ ಮುಂದೆ ಹೋಯಿತು

... ಜಪಾನಿನ ಶರಣಾಗತಿಯ ಕಾರ್ಯಕ್ರಮ ... ಬಿರುಗಾಳಿಯ ದೆಸೆಯಿಂದ ... ಗಳ ಕಾಲ ಮುಂದಕ್ಕೆ ಹಾಕಲ್ಪಟ್ಟಿ ... ದು ಅಧಿಕಾರಯುತವಾಗಿ ತಿಳಿ ... ೬. ಭಾನುವಾರ ಮಿತ್ರ ಆಕ್ರಮಣ ... ಳು ಜಪಾನಿನಲ್ಲಿ ಇಳಿಯಲು ... ಸುಗಮವಾಗಿದೆ ಎಂದು ಜಪಾ... ಸಿದೆ; ಮಿತ್ರರು ಇಳಿಯುವ ಎ... ಳಗಳಿಂದಲೂ ಜಪಾನೀ ಸೇನೆಗ... ವಾಸಸ್ಸು ಕರೆಸಲಾಗಿದೆ. ಶೀರವು ... ನ್ನಿನ ಜಪಾನೀ ಹಡಗುಗಳನ್ನೂ ... ಕಳುಹಿಸಲಾಗುವುದು. ಆಕ್ರಮಣ ... ರ್ಯಾಡುಗಳನ್ನು ನೋಡಿಕೊಳ್ಳಲು ... ಸರ್ಕಾರವು ಒಂದು ವಿಶೇಷ ಕಚೇ... ರಿ ಏರ್ಪಡಿಸಿದೆ.

ಸಾಧ್ವಿ

ತಾ|| ೨೬-೮-೪೫ ಭಾನುವಾರ

ಗಡೀಪಾರುಗಳು ರದ್ದಾಗಲಿ!

ಇಂದು ಭಾರತದಲ್ಲಿ ಎಲ್ಲಾ ವಿಧವಾದ ಪ್ರತಿಬಂಧಕಗಳೂ ಅಳಿದುಹೋಗುವ ಕಾಲ ಒದಗಿದೆ ಈಗಾಗಲೇ ಬ್ರಿಟಿಷ್ ಇಂಡಿಯಾದ ಅನೇಕ ಪ್ರಾಂತಗಳಲ್ಲಿ ಪ್ರತಿಬಂಧಕಗಳೆಲ್ಲಾ ರದ್ದಾಗಿವೆ ಕೇವಲ ಸಂಸ್ಥೆಗಳ ಮೇಲಿರುವವಲ್ಲದೆ ಪ್ರತಿಯೊಬ್ಬ ವ್ಯಕ್ತಿಯ ಮೇಲಿರುವ ಅಡೆತಡೆಗಳೆಲ್ಲವೂ ನಾಶವಾಗುವ ಸಮಯ ಬಂದಿದೆ.

ಜನರಲ್ ಟೋಜೋರವರು ಜಪಾನಿನ ಅಮೆರಿಕಾದ ಬಾತ್ಮೀದಾರರೊಬ್ಬರಿಗೆ ಕೊಟ್ಟ ಹೇಳಿಕೆಯಲ್ಲಿ ಜಪಾನು ಅಮೆರಿಕನ್ನರ ಯುದ್ಧ ಹೂಡಿದ ತಪ್ಪಿಗಾಗಿ ನಾರವೇ ಜಪಾನು ದೋಷಾರೋಪಣೆಗೆ ಗುರಿಯಾದರೂ, ಅದರೆ ೧೯೦೦ ವರ್ಷದ ನಂತರ ಬರೆಯುವ ಚರಿತ್ರಕಾರರು ಈ ಆರೋಪಣೆಯ ವಿಚಾರವಾಗಿ ಬೇರೆಯೇ ತೀರ್ಮಾನ ಮಾಡುವರೆಂದೂ ಹೇಳಲಾಗಿದೆ. ಟೋಜೋರವರನ್ನು ವಿಚಾರಣೆಗೆ ಗುರಿಪಡಿಸುವ ಸಂದರ್ಭದಲ್ಲಿ ಅವರು ನ್ಯಾಯಾಸ್ಥಾನದ ಎದುರಿನಲ್ಲಿ ರೂಸ್ವೆಲ್ಟರೇ ಪ್ರಪಂಚದ ಪ್ರಥಮ 'ವಾರ ಕ್ರಿಮಿನಲ್' ಎಂದು ಸಾರಿ, ಅನಂತರ ತಾವು ಆತ್ಮ ಹತ್ಯೆ ಮಾಡಿಕೊಳ್ಳುವರೆಂದು ಜಾಗ್ರತೆ ಸುದ್ದಿ ವಿಚಾರವನ್ನು ಕೇಳಲಾಗಿ, ಟೋಜೋರವರು ಪತ್ರಿಕಾ ಪ್ರತಿನಿಧಿಗಳಿಗೆ ಉತ್ತರವೇ ಕೊಡಲಿಲ್ಲವೆಂದು ಹೇಳಲಾಗಿದೆ. ಯುದ್ಧದಲ್ಲಿ ಜಯ ಪಡೆದ ಶತ್ರುವಿಗೆ ಶರಣಾಗುವುದಕ್ಕಿಂತ ಯೋಧ ಗೌರವವೇ ಮೇಲೆಂದು ಅವರು ತಿಳಿಸಿದರು.

ಜ॥ ಟೋಜೋರ ಆತ್ಮಹತ್ಯೆ

ಜನರಲ್ ಮೆಕ್‌ಆರ್ಥರ್‌ರವರು ಜಪಾನಿನ ಮಾಜಿ ಪ್ರಧಾನಿ ಜನರಲ್ ಟೋಜೋರವರನ್ನು ದಸ್ತಗಿರಿ ಮಾಡಬೇಕೆಂದು ಕೊಟ್ಟ ಆಜ್ಞೆಯನ್ನು ತಪ್ಪಿಸಿಕೊಳ್ಳುವ ಬುದ್ಧಿಯಿಂದ ಟೋಜೋರವರು ತಮ್ಮನ್ನು ತಾವೇ ಕೊಂದುಕೊಂಡರೆಂದು ವರ್ತಮಾನ ಬಂದಿದೆ. ಅವರ ದಸ್ತಗಿರಿಗಾಗಿ ಪ್ರಯತ್ನ ನಡೆದಿತ್ತು. [illegible] ಅವರು ಸತ್ತರು.

ಸುಭಾಷ ಬೋಸರ ಅಂತ್ಯ ದಿನಗಳು

ಜಪಾನಿನಲ್ಲಿದ್ದ ಪತ್ರಿಕೋದ್ಯೋಗಿ ಆ ಮೇರ್ ಲಹಿರಿ ಎಂ.ಎ.ರವರು ಬಾಬು ಸುಭಾಷ್ ಬೋಸರು ಅಂತ್ಯ ದಿನಗಳನ್ನು ಹೇಗೆ ಕಳೆದರೆಂಬುದನ್ನು ವಿವರಿಸಿದ್ದಾರೆ. ಸೈಗಾನ್‌ನಲ್ಲಿ ಜಪಾನಿಗೆ ಸೋಲುಂಟಾದಾಗಲೇ ಬೋಸರಿಗೆ ಜಪಾನಿನ ವಿಜಯದಲ್ಲಿ ನಂಬಿಕೆ ಹೋಯಿತೆಂದು ಅವರು ತಿಳಿಸಿದ್ದಾರೆ. ಟೋಕಿಯೊ ವಿಶ್ವವಿದ್ಯಾಲಯದಲ್ಲಿ ರಷ್ಯವನ್ನು ಕುರಿತು ಬೋಸರು ಮಾತನಾಡಿದರೆಂದು ಹೇಳಲಾಗಿದೆ. ಅಲ್ಲದೆ ಜಪಾನರು ರಷ್ಯನರಿಗೂ ತಮಗೂ ಮಧ್ಯೆ ಬೋಸರು ಮಧ್ಯಸ್ಥಿಕೆ ವಹಿಸಬೇಕೆಂದು ಬಯಸುತ್ತಿದ್ದರೆಂದು ಲಹಿರಿಯವರು ತಿಳಿಸಿದರು.

ಜಪಾನು ಚಕ್ರವರ್ತಿ ಶರಣಾಗತಿ ಸಂದೇಶ ಓದಿದ ದಿನ ಬೋಸರನ್ನು ಸಿಂಗಪುರದಿಂದ ಟೋಕಿಯೋವಿಗೆ ಕರೆತರಲು ವಿಮಾನ ಹಾಯಿತೆಂದೂ, ಫಾರ್ಮೋಸದಲ್ಲಿ ಒಂದು ಕಡೆ ವಿಮಾನದ ಇಂಜನ್ನು ಕೆಟ್ಟುದರಿಂದ ನೆಲಕ್ಕೆ ಅಂತರಿಕ್ಷದಿಂದ ನೇರವಾಗಿ ಬಿದ್ದು ಬೆಂಕಿ ಹೊತ್ತಿತೆಂದೂ ಹೇಳಲಾಗಿದೆ.

ಸಿಂಗಪುರ ಆಕ್ರಮಣಕ್ಕೆ ಬೋಸರ ವಿರೋಧ

ಜಪಾನರು ಸಿಂಗಪುರವನ್ನು ಆಕ್ರಮಿಸಿಕೊಂಡನಂತರ ಭಾರತ ಮತ್ತು ಬರ್ಮಾದ ಮೇಲೆ ದಾಳಿ ನಡೆಯಬೇಕೆಂದೂ, ಆದರೆ ಬೋಸರು ಇದನ್ನು ಪ್ರತಿಭಟಿಸಿ ಅದನ್ನು ತಪ್ಪಿಸಿ, ಭಾರತದ ಮೇಲೆ ಒಕ್ಕೂಟದ [illegible] ಸೈನ್ಯವನ್ನು ಕಳುಹಿಸಬೇಕೆಂದು ಜಪಾನರನ್ನು ಪ್ರೇರಿಸಿದರೆಂದೂ ಸಿಂಗಪುರದಲ್ಲಿರುವ ಜಯಕೃಷ್ಣ ಎಂಬ ಸಿಲೋನ್ ನಿವಾಸಿಗಳು ಹೇಳಿದರೆಂದು ವರದಿಯಾಗಿದೆ.

ಭಾರತದ ರಾಷ್ಟ್ರೀಯ ಸೇನೆ

ಭಾರತದ ರಾಷ್ಟ್ರೀಯ ಸೇನಾ ಮುಖಂಡರನ್ನು ಮಿಲಿಟರಿ ವಿಚಾರಣೆಗೆ ಒಳಪಡಿಸುವ ಪ್ರಸಂಗದಲ್ಲಿ ಅವರ ಪರವಾಗಿ ಡಿಫೆನ್ಸ್ ಕೊಡಲು ಸರ್ ತೇಜ್ ಬಹದ್ದೂರ್ ಸಪ್ರೂರವರೇ ಮೊದಲಾದವರು ಸೇರಿದ ಸಮಿತಿಯು ರಚಿಸಲ್ಪಟ್ಟಿರುವುದು.

ಕೋ. ಆಪರೇಟಿವ್ ಬ್ಯಾಂಕು

ಮೈಸೂರು ಜಿಲ್ಲಾ ಕೋ-ಆಪರೇಟಿವ್ ಬ್ಯಾಂಕಿನ ೨೦ ನೇ ವಾರ್ಷಿಕ ಸಭೆಯು [illegible] ಭಾನುವಾರ ಮಧ್ಯಾಹ್ನ ೩-೩೦ ಗಂಟೆಗೆ ಮಹಿಳೆಯರ ಸಮಾಜದ ಕಟ್ಟಡದಲ್ಲಿ ನಡೆಯುವುದು.

ಟಾಟಾ ಮಂದಿರದ ಗವರ್ನಿಂಗ್ ಕೌನ್ಸಿಲ್

(ಸ್ವಂ. ವ. ಪ್ರೋ.) ಬೆಂಗಳೂರು ೧೬

ಟಾಟಾ ವಿಜ್ಞಾನ ಮಂದಿರದ ಗವರ್ನಿಂಗ್ ಕೌನ್ಸಿಲ್‌ನಲ್ಲಿ ಮೈಸೂರು ಸರ್ಕಾರದ ಪ್ರತಿನಿಧಿಗಳಾಗಿ ಸರ್ಕಾರದವರು ಡಾ॥ ರಾಜರತ್ನ, ಶ್ರೀ ಜಿ. ಪಿ. ಗೋಪಾಲ ಅಯ್ಯರ್ ರನ್ನು ನಾಮಕರಣ ಮಾಡಿದ್ದಾರೆ.

ಸ್ಟೇಟುಗಳ ಸಮ್ಮೇಳನಕ್ಕೆ ಪ್ರತಿನಿಧಿಗಳು

[illegible] ನಡೆಯುವ ಅ. ಭಾರತದ ಸ್ಟೇಟುಗಳ ಸಮ್ಮೇಳನಕ್ಕೆ ನಮ್ಮ ಸ್ಟೇಟ್ ಪೀಪಲ್ಸ್ ಕಾನ್ಫರೆನ್ಸ್ ಕಾರ್ಯಕಾರಿ ಸಮಿತಿಯವರು ಶ್ರೀಗಳಾದ ಜಿ. ಪಿ. ಮಲ್ಲಪ್ಪ, ಪಿ. ಶಿವಶಂಕರ್ ಮೊದಲಾದ [illegible] ಸ್ಟೇಟುಗಳನ್ನು ಪ್ರತಿನಿಧಿಗಳನ್ನಾಗಿ ಚುನಾಯಿಸಿದ್ದಾರೆ.

ಆಗಮನ

ಸರ್ಕಾರದ ಕನ್ಸಲ್ಟಿಂಗ್ ಎಂಜನೀಯರ್ ರಾವ್ ಸರ್ ಜೆ. [illegible] ರವರು, ಸಿನ್ನ ಸಂಜೆಯೂ [illegible] ಸಲಹೆಗಾರರಾದ ಶ್ರೀ ರತ್ನಸ್ವಾಮಿಯವರು ಈ ಪ್ರಾತಃಕಾಲವೂ ಬೆಂಗಳೂರಿಗೆ ಬಂದರು. ಸರ್ ಹ ಮನ್ನಿರ ಈ ಪ್ರಾತಃಕಾಲ ದಿವಾನರೊಡನೆ [illegible] ಯೋಜನೆಗಳ ಬಗ್ಗೆ ಮಾತುಕತೆ ನಡೆಸಿದರು. ಶ್ರೀ ರತ್ನಸ್ವಾಮಿಯವರು ಈ ಮಧ್ಯಾಹ್ನ ಕಾರ್ಲ್‌ಟನ್ ಭವನದಲ್ಲಿ ದಿವಾನರೊಡನೆ ಮಾತುಕತೆ ನಡೆಸಿದರು.

ಅಧಿಕಾರಿಗಳ ವರ್ಗಾವರ್ಗಿ

ಮಿ॥ ಹನುಮಂತರಾವ್ ರವರನ್ನು ಬೆಂಗಳೂರಿನ ಮುನಿಸಿಪಲ್ ಕಮಿಷನರನ್ನಾಗಿಯೂ ಮಿ॥ ಎ. ಎಲ್. ಖಲೀಲ್‌ರವರನ್ನು ಸಿವಿಲ್ ಸಪ್ಲೈಸ್ ಅಸಿಸ್ಟೆಂಟ್ ಕಂಟ್ರೋಲರನ್ನಾಗಿಯೂ ಶ್ರೀ ಶಿವನಂಜೇಗೌಡರನ್ನು ಬೆಂಗಳೂರು ಜಿಲ್ಲಾಧಿಕಾರಿಗಳನ್ನಾಗಿಯೂ ವರ್ಗಮಾಡಲಾಗಿದೆ.

"ಸೋಷಿಯಲ್ ಬೆಟರ್ಮೆಂಟ್" ಭಾಷಣ

ನಿನ್ನೆ ಸಂಜೆ ಟಾಟಾ ವಿಜ್ಞಾನ ಮಂದಿರದ ಡಾ॥ ಸುಬ್ರಹ್ಮಣ್ಯಂರವರು ಸಾಮಾಜಿಕ ಸುಧಾರಣೆಯನ್ನು ಕುರಿತು ಭಾಷಣ ಮಾಡಿದರು. ಭಾರತದ ಕೈಗಾರಿಕೆ ಹಾಗೂ ವ್ಯವಸಾಯ [illegible] ಸಂಶೋಧನೆಯಿಂದ ನಮ್ಮ ದೇಶದ [illegible] ಎಂದೂ [illegible] ಮುಂತಾಗಿ ಅವರು ಹೇಳಿದರು.

ತಟಸ್ಥ ರಾಷ್ಟ್ರಗಳಲ್ಲಿನ ಜರ್ಮನ್ ಆಸ್ತಿ

ಸ್ವೀಡನ್, ಸ್ವಿಟ್ಸರ್ಲೆಂಡ್, ಸ್ಪೇನ್, [illegible] ಮುಂತಾದ ತಟಸ್ಥ ರಾಷ್ಟ್ರಗಳಲ್ಲಿರುವ ಜರ್ಮನ್ [illegible]

[illegible]

ಜರ್ಮನಿಯ ರಾಜ್ಯ [illegible]

ಪೂಜಾಟಕ್ಕೆ ಜುಲ್ಮಾನೆ

ಮೈಸೂರು ೧೬

[illegible] ಬೀದಿಯ [illegible] ಮನೆಯಲ್ಲಿ ಜೂಜಾಡುತ್ತಿದ್ದ [illegible] ಜುಲ್ಮಾನೆ [illegible]

[illegible]

ವಿದ್ಯಾರ್ಥಿ ಪಾರಿತೋಷಿಕ ಸಭಾ

[illegible]

ವಿದ್ಯಾಗಣಪತಿ ಸಭೆ

[illegible]

ಚರಖಾ ಸಪ್ತಾಹ

[illegible]

ಸೈಕಲ್ ಕಳುವಿಗಾಗಿ ದಸ್ತಗಿರಿ

[illegible]

ಸೆ ಕಳುವಿಗೆ ಮಹಿಳೆಯ ದಸ್ತಗಿರಿ

[illegible]

ಸಾಧ್ವಿ

ತಾ॥ ೧೨-೯-೪೫, ಬುಧವಾರ

ಮತದಾರರ ಪಟ್ಟಿಯ ವಿಷಯ

ಅಖಿಲ ಭಾರತದ ಚುನಾವಣಾ ಮತದಾರರ ಪಟ್ಟಿಯನ್ನು ಸರಿಪಡಿಸುವಂತೆ ಬ್ರಿಟಿಷ್ ಸರ್ಕಾರವು ಭರತಖಂಡದ ಕೇಂದ್ರ ಸರ್ಕಾರಕ್ಕೆ ಆಜ್ಞಾಪಿಸಿದೆ ಎಂದ ಗೊತ್ತಾಗಿದೆ. ಇದು ನಿಜವಾಗಿಯೂ ಗಮನೀಯವಾದ ವಿಚಾರ; ಭಾರತೀಯ ಮಹಾಸಭೆಯೂ ಈ ವಿಚಾರವನ್ನು ಆಗಾಗ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುತ್ತಿತ್ತು. ಇದರಿಂದ ನಮ್ಮ ದೇಶದಲ್ಲಿ ಚುನಾವಣಾ ಪಕ್ಷ ಪಕ್ಷಗಳ ... ದಲ್ಲಿ ... ಅನುಕೂಲವಾಗುವುದು.

ಇಂದಿನ ನಾಗರಿಕ ಜನಾಂಗಗಳಲ್ಲಿ ಮತದಾನದ ಪ್ರಶ್ನೆಯು ಗಹನವಾದ ಬಹು ಮುಖ್ಯವಾದ ವಿಚಾರವಾಗಿದೆ. ಇಂದು ಜಗತ್ತಿನಲ್ಲಿ ಅಧುನಿಕ ನವನಾಗರೀಕತೆಯ ... ಇಂಗ್ಲೆಂಡ್, ಅಮೇರಿಕ, ಮುಂತಾದ ದೇಶಗಳಲ್ಲಿ ಪ್ರತಿಯೊಬ್ಬ ಪ್ರಜೆಗೂ ಮತವನ್ನು ಕೊಟ್ಟು, ತನ್ನ ಪ್ರತಿನಿಧಿಯನ್ನು ಚುನಾಯಿಸಲು ಹಕ್ಕು ಇದೆ. ಪ್ರಜಾಪ್ರಭುತ್ವದ ತತ್ವದಲ್ಲಿ ಚುನಾವಣಾ ಹಕ್ಕು ಎಲ್ಲರಿಗೂ ಇರಬೇಕಾದ್ದು ಮುಖ್ಯ ವಿಷಯ ... ಈ ಪ್ರಶ್ನೆಯನ್ನು ... ಎಲ್ಲರೂ ಗಮನಿಸಬೇಕು. ಈಗ ಇರುವ ಮತದಾರರ ಪಟ್ಟಿಯು ಸಿದ್ಧವಾಗಿ ಅನೇಕ ಸಂವತ್ಸರಗಳು ಕಳೆದಿವೆ. ಪ್ರತಿಬಾರಿ ... ಚುನಾವಣೆಯು ನಡೆಯುವಲ್ಲಿ, ಹೊಸದಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಕ್ರಮಬದ್ಧವಾದ ಪದ್ಧತಿಯನ್ನು ಅನುಸರಿಸುವುದು ಬಹಳ ಅಗತ್ಯ. ಹೊಸ ಸಭೆಯು ರಚಿತವಾಗುವ ಕಾಲದಲ್ಲಿ ಹೊಸ ಪಟ್ಟಿಯು ಸಿದ್ಧವಾಗುವುದರಲ್ಲಿ ಎಲ್ಲರ ಮೆಚ್ಚಿಗೆಯೂ ಇದೆ.

ಸಿನಿಮಾದಲ್ಲಿ ಭಾರಿ ಬೆಂಕಿ

ಅಮೆರಿಕದ ಮೆಟ್ರೋಪಾಲಿಟನ್ ಥಿಯೇಟರ್ಸ್ ಎಂಬ ಮೂರು ಅಂತಸ್ತಿನ ಮನೆಗೆ ಬೆಂಕಿ ತಗುಲಿ ಒಬ್ಬ ಸ್ತ್ರೀ, ೫ ಜನ ಮಕ್ಕಳು ಮೃತಪಟ್ಟರು ಸತ್ತರೆಂದು ಹೇಳಲಾಗಿದೆ. ಭವನದ ಇತರ ಕೊಠಡಿಗಳಲ್ಲಿದ್ದ ಏಳು ಜನರಿಗೆ ಬೆಂಕಿ ತಗಲಿ ಅವರೆಲ್ಲರೂ ಆಸ್ಪತ್ರೆಯಲ್ಲಿ ಸತ್ತರು. ಸಿನಿಮಾಟೋಗ್ರಾಫ್ ಫಿಲಂಗಳಿಗೆ ಮೊದಲು ಬೆಂಕಿ ತಗುಲಿತೆಂದು ಹೇಳಲಾಗಿದೆ. ೧ ಲಕ್ಷ ರೂ. ನಷ್ಟವಾಗಿದೆ. ಇದರಲ್ಲಿ ಫಿಲಂಗಳಿಗೆ ಆದ ನಷ್ಟ ಸೇರಿಲ್ಲ.

ಜೆಕ್-ಪೋಲಿಷ್ ತಿಗ್ವಾಟ

ಟೆಸ್ಚೆನ್ ಪ್ರದೇಶದ ಮೇಲೆ ಹಕ್ಕು ಸ್ಥಾಪನೆ ವಿಚಾರವಾಗಿ ಪೋಲೆಂಡಿಗೂ, ಜೆಕೊಸ್ಲೊವಾಕಿಯಾಕ್ಕೂ ಇರುವ ವ್ಯಾಜ್ಯವು ಇನ್ನೊಂದು ಬಿಕ್ಕಟ್ಟನ್ನು ತರುವಂತೆ ಕಾಣಬರುತ್ತದೆ. ಯೂರೋಪಿನ ಅತ್ಯಂತ ಭಾರಿ ಕೈಗಾರಿಕಾ ಪ್ರದೇಶವು ಇಲ್ಲಿ ಇರುವುದು. ಪೋಲೆಂಡು ಮತ್ತು ಜೆಕ್ ನಾಡಿನ ಗಡಿಯ ಮಧ್ಯದಲ್ಲಿ ಈ ಪ್ರದೇಶವಿರುವುದು.

೦ ೦ ೦ ೦

ಒಪ್ಪಿರುವ ೧೩೦೮ ನೌಕಾಗಳನ್ನು ಹೊಂದಿದೆ. ಈ ಸೈತೆ, ೩೭ ವಿಮಾನ ವಾಹಕ, ೭೯ ವಾಹಕಗಳಿಗೆ ರಕ್ಷಣೆ ಕೊಡುವ ಹಡಗು, ೧೮ ಯುದ್ಧ ನೌಕೆ (ಬ್ಯಾಟಲ್ ಶಿಪ್) ೮೩ ಕ್ರೂಸರ್, ೩೭೩ ಡಿಸ್ಟ್ರಾಯರ್ ಮತ್ತು ೨೦೦ ಸಬ್‌ಮೆರಿನ್‌ಗಳನ್ನು ಉಳಿಸಿಕೊಳ್ಳಲು ಕಾಂಗ್ರೆಸ್ಸಿಗೆ ಸಿರ್ಫಾಯು ಬರುವುದು

ಚುನಾವಣಾ ಕಾಲವು ಸ್ವಲ್ಪದಿನಗಳವರೆಗೆ ಮುಂದೆ ಹೋದರೂ ನಷ್ಟವಿಲ್ಲ, ಇಂದಿನ ಮತದಾರರ ಪಟ್ಟಿಯು ಹೊಸ ವಿಧವಾಗಿ ಭಾರತೀಯರೆಲ್ಲರೂ ಚುನಾವಣೆಯಲ್ಲಿ ತಮ್ಮ ಮತವನ್ನು ಸೂಚಿಸುವ ಹಕ್ಕು ಪಡೆಯುವುದು ಅಗತ್ಯ.

Edited, printed and published by A. R. Keperaian at the Sadhvi Press D. Subbiah Road, Mysore

ಲೋಕಲ್ ಫಂಡ್ ಡಿಸ್ಪೆನ್ಸರಿ

ಅತಿರುದ್ರ ಮಹಾಯಾಗ

ಬೆಂಗಳೂರಿನಲ್ಲಿ ನಡೆದ ಮೊಲ್ಲಂದ ಯಾಗದಲ್ಲಿ ಆಚಾರ್ಯರು, ಋತ್ವಿಕರು, ಧರ್ಮ ಸೇವಕರು ಮುಂತಾಗಿ ಭಾಗವಹಿಸಿದ್ದ ಮಹನೀಯರ ಪೈಕಿ ಪ್ರಯಾಣದ ವೆಚ್ಚವನ್ನು ಇನ್ನೂ ಪಡೆಯದಿರತಕ್ಕಂಥವರುಗಳು ನಾಳೆ (೧೬-೯-೪೫) ಗುರುವಾರ ಸಾಯಂಕಾಲದಿಂದ ಶ್ರೀನಿವಾಸಾಚಾರರವರ ಸಂಸ್ಕೃತ ಪಾಠಶಾಲಾ ಆವರಣದಲ್ಲಿರುವ ಶ್ರೀ ಸದ್ಗುರು ಸೇವಾ ಮಂಡಲಿಯ ಕಛೇರಿಯಲ್ಲಿ ಅನುಷ್ಠಾನ ಕಾರ್ಯಾಧ್ಯಕ್ಷರವರಲ್ಲಿ ತಮ್ಮ ಟಿಕೆಟ್ಟುಗಳನ್ನು ಕೊಟ್ಟು ವೆಚ್ಚ ... ವನ್ನು ಪಡೆಯಬಹುದೆಂದ ಶ್ರೀನಿವಾಸ ... ಯಜ್ಞೇಶ್ವರ ಶಾಸ್ತ್ರಿಗಳವರು ತಿಳಿಸುತ್ತಾರೆ

ಮೈಸೂರು ವಿಶ್ವವಿದ್ಯಾನಿಲಯ

UNIVERSITY OF MYSORE
No. G4-9344 45 —

Office of the University
of Mysore,
Mysore, dated 1st
September 1945.

NOTIFICATION

The 27th annual Convocation of the University of Mysore will be held in the Jaganmohan Palace, Mysore, on Monday the 29th October 1945 at 10 A. M. (instead of 22nd October 1945)

Candidates eligible for degrees may obtain forms of application (IN PERSON or IN ABSENTIA) from the HEADS OF THE COLLEGES IN WHICH THEY STUDIED LAST FOR THE DEGREE EXAMINATION. The application forms must be sent to the Registrar, University of Mysore, Mysore, so as to reach him ON OR BEFORE FRIDAY THE 21ST SEPTEMBER 1945.

By Order,
D. S. Gordon,
Registrar.

ವಾರ್ತಾ ಸಾರ

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ... ಕೆಂದು ಅಧ್ಯಕ್ಷ ಆಜಾದರು ... ದನ್ನು ಆಹ್ವಾನಿಸಿದ್ದಾರೆ.

ಬೇಡಿಕೆ ಹಿಂದೆ ಅಮೆರಿಕಾ ... ಕೊಟ್ಟ ರೀತಿಯಲ್ಲಿ ಬ್ರಿಟನ್ನಿಗೂ ... ಕೊಡಲಿದೆ

ಅಂತರ ರಾಷ್ಟ್ರೀಯ ಭದ್ರತಾ ... ಪ್ರಥಮ ಸಭೆ ಬರುವ ವರ್ಷ ... ತಿಂಗಳಲ್ಲಿ ನಡೆಯಬಹುದು

೪ ಲಕ್ಷ ನಾವಿಕರನ್ನು ಯುದ್ಧ ... ರುಗಳಿಗಾಗಿ ವಿಚಾರಣೆಗೆ ಗುರಿಪಡಿಸು ... ವುದು

ವಿಶ್ವ ಸಂಸ್ಥಾನಗಳಿಗೆ ಜಂಟಿ ... ಟರ್ ಸ್ಥಾಪನೆಯಾಗುವುದು ... ದೇಶದಲ್ಲಿ ಸೆಕ್ರೆಟರಿಯೇಟ್ ... ವುದು.

ಬ್ರಿಟನ್ನಿನ ವಿಸ್ಕ್ರೌಂಟ್ ... ೬೦ ದಿನಗಳ ಪರ್ಯಂತ ಎಲ್ಲಿಯೂ ... ರದೆ ಸಮುದ್ರದಲ್ಲಿ ... ಹೊಸ ... ಸ್ಥಾಪಿಸಿದೆ

ಇಟಲಿಯ ಸಾಮ್ರಾಜ್ಯಕ್ಕೆ ಸೇರಿದ ... ಪ್ರಿಯಾದ ಒಂದು ಭಾಗವನ್ನು ... ಯಾಕ್ಕೆ ಕೊಡಲಾಗುವುದು ... ಮೇಲೆ ಅಂತರ ರಾಷ್ಟ್ರೀಯ ಹತೋಟಿ ... ವುದು

ಟ್ಯಾಂಗಿಯರ್‌ನಿಂದ ಸ್ಪೇನ್ ಸೈನ್ಯ ... ಹೊರಟಿದೆ. ಮಿತ್ರರು ಕಾಠೀಕು ... ವುದಕ್ಕೆ ಮುಂಚೆಯೇ ೫ ಊರನ್ನು ... ಲು ನಿರ್ಧರಿಸಿತು ಗತ್ತೆಂದು ಸ್ಪ್ಯಾನಿಷ್ ... ಶ್ರೀ ಹೇಳಿದ್ದಾರೆ

ಬಾಬು ಸುಭಾಷ್ ಚಂದ್ರ ಬೋಸರ ... ತ್ತ ವಿಷಯ ಬಗ್ಗೆ ಸಿಂಗಪುರದ ಭಾರತೀ ... ರಿಗೆ ನಂಬಿಕೆ ಸಾಲದು. ಅವರು ... ನ್ನು ಅದೃಶ್ಯರಾಗಿದ್ದರೆಂದು ಅವ ... ವಿಸಿದ್ದಾರೆ

ಸಯಾಂ ಕಿತ್ತುಕೊಂಡಿದ್ದ ಮ... ದೇಶದ ಭಾಗಗಳಾದ ಕೇಡಾ, ಕೇಲಂ ... ಟ್ರೆಂಗಾನೂ ಮತ್ತು ಪರ್ಲಿಸ್ ಗಳ ... ಮೌಂಟ್‌ಬ್ಯಾಟನರು ಪುನಃ ವಶ ... ಕೊಂಡರು.

ಮಾರಾಟಕ್ಕಿದೆ

—: ಮಾರಾಟಕ್ಕಿದೆ :—

ಪ್ರಿಂಸ್ ಅಫ್ ವೇಲ್ಸ್ ರೋಡಿನಲ್ಲಿ 1133 ನೇ ನಂಬರು ಬಂಗಲೆ ... ಕ್ರಯಕ್ಕಿದೆ. ಬೆಲೆ ರೂ ...

Apply to—

The Seller,
C/o Mithra & Company,
No 5 Lansdowne Building,
Mysore.

ಭದ್ರಾವತಿಯಲ್ಲಿ ತಯಾರಾಗುತ್ತಿರುವ
ಮೈಸೂರು ಉಕ್ಕಿನ ಸಾಮಾನು
ಗಳನ್ನೇ ಉಪಯೋಗಿಸಿ !

ಶ್ರೇಷ್ಠವಾದ ಕಬ್ಬಿಣದಿಂದ ನಿಪುಣರಾದ ಸೀಮೆಯ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುತ್ತವೆ

ಸಾಮಾನುಗಳ ವಿವರ.

ಗಾಡಿಪಟ್ಟಿ ಅಥವಾ ಹಳಿಗಳು, ದುಂಡು ಮತ್ತು ಚಮುರ ಸಲಾಕಿಗಳು. ಕೋನಕಂಬಿಗಳು (ಆಂಗಲ್ಸ್), ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು ಮತ್ತು ಬೇಲಿ ಪಟ್ಟಿಗಳು

ನಿರ್ದಿಷ್ಟವಾಗಿ ಬಳಸಲ್ಪಡುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುತ್ತವೆ

ಮೊದಲಿನಂತೆ ... ಬರೇ ...	ಸ್ಥಿರವಾಗಿರುವುದರಿಂದ ಬೆಲೆಯು ...

ಮೈಸೂರು ... ಉಕ್ಕಿನ ಕಾರ್ಖಾನೆ
(ಮೈಸೂರು ಸರ್ಕಾರ)
ಭದ್ರಾವತಿ (ಮೈಸೂರು ಸ್ಟೇಟ್ ರೈಲ್ವೆ)

ಲಿಲ್ಲಿ ಬ್ರಾಂಡ್ ಕಾಫಿ

ಪಡೆಯನ್ನೇ ಉಪಯೋಗಿಸಿ

V O F.

ಚಾಮುಂಡಿ ಬ್ರಾಂಡ್ ವೆಜಿಟೆಬಲ್ ಪ್ರಾಡೆಕ್ಟ್ಸ್ (ವನ ...
... ಮತ್ತು ... ಅತ್ಯಂತ ಶ್ರೇಷ್ಠವಾದ ...
ಮತ್ತು ... ವಾದವು
... ಪೌಂಡು ೧ಕ್ಕೆ ರೂ. 0-10-0

ಡಿ. ...

... ಮರ್ಚೆಂಟ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್ — ದೇವರಾಜ ಮಾರ್ಕೆಟ್ : : ... ಮಂಡಿ, ಸಂತೇ...

ಫೋನ್ ನಂ 392 ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಗುರುವಾರ ೧೩—೯—೪೩ [ಸಂಚಿಕೆ ೪೦

ಜಪಾನು ಕಿರೀದರ್ಜೆಗೆ ಇಳಿಯಬೇಕಾಗುವುದು

ಪಟ್ಟಾಭಿಷೇಕ ದಿನಾಚರಣೆ

ಮೈಸೂರು ೩೩

ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎ ... ಅವರ ಪಟ್ಟಾಭಿಷೇಕ ಮಹೋತ್ಸವ ... ಈ ದಿನ ಚಾಮುಂಡಿ ಬೆಟ್ಟದಲ್ಲಿ ಅತಿ ವೈಭವದಿಂದ, ರಾಜಬಂಧುಗಳಾದ ಶ್ರೀ ಟಿ. ರಾಮ ... ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅರಮನೆಯ ಅಧಿಕಾರಿಗಳೆಲ್ಲರೂ ಈ ... ದಲ್ಲಿ ಭಾಗವಹಿಸಿದ್ದರು. ... ದೇವತಾ ಪ್ರಾರ್ಥನೆಯಿಂದ ಆರಂಭವಾಯಿತು ... ಶ್ರೀಕಂಠಶಾಸ್ತ್ರಿಗಳಿಂದ ವಿರಚಿತವಾದ ... ಪದ್ಯಗಳನ್ನು ... ನಾರಾಯಣರಾಯರು ಸುಶ್ರಾವ್ಯವಾಗಿ ಹಾಡಿದರು. ... ವೈದಿಕ ಪ್ರ ... ಶ್ರೀ ವೆಂಕಟಗಿರಿಯಪ್ಪನವರ ... ವಿ. ದೊರೆಸ್ವಾಮಿ ಐಯ್ಯಂಗಾರ್ ... ಗಾನ ಮಾಡಿದರು ... ಭಾಷಣ ಮಾಡುತ್ತಾ ಮ ... ಅವರ ಪಟ್ಟಾಭಿಷೇಕವಾದಂದಿನಿಂದ ಸಂಸ್ಥಾನವು ಸರ್ವತೋಮುಖ ಅಭಿವೃದ್ಧಿಗೆ ಬಂದಿರುತ್ತದೆಂದು ಹೇಳಿ ... ಪ್ರಗತಿ ದೃಷ್ಟಿಯಿಂದ ... ಈ ವರ್ಷದಲ್ಲಿ ... ಜಿ. ಸಿ. ಎಸ್. ಐ. ಬಿರುದು ... ಮಿತ್ರರಾಷ್ಟ್ರಗಳಿಗೆ ಸಂಪೂರ್ಣ ಜಯ ಲಭಿಸಿರು ... ಸೇರಿ ವರ್ಷದ ಪ್ರಾಮು ... ಪ್ರಾರ್ಥಿಸಿದೆ ಎಂದು ಹೇಳಿದರು ... ರಾಜ ಭಕ್ತಿಪೂರ್ವಕವಾದ ... ಸೂಚನೆಗಳನ್ನು ಮಹಾಸ್ವಾಮಿ ... ಸಲ್ಲಿಸುವುದು ಎಲ್ಲರ ಕರ್ತವ್ಯವೆಂದರು. ನಂತರ ಶ್ರೀ ಸ್ವಾಮ್ಯ ... ಗಳಿಗೆ ಬಹು ಉಚ್ಚ ಬಿರುದನ್ನು ... ದಕ್ಕಾಗಿ ಭಕ್ತಿ ಪೂರ್ವಕ ... ಗಳನ್ನು ಅರ್ಪಿಸುವ ... ಪುಷ್ಪಗಳಿಗೂ ರಾಜ ಮನೆತನಕ್ಕೂ ... ಬಾಳ್ವಿಕೆ ಮತ್ತು ಕೀರ್ತಿಯು ... ಬಾಳಲಾಯಿತು.

... ಸಂಭ್ರಮದಲ್ಲಿ ಏರ್ಪಡಿಸಿದ್ದ ಆಟ ... ನಲ್ಲಿ ವಿಜಯಿಗಳಿಗೆ ಬಹುಮಾನಗಳನ್ನು ... ವಿತರಿಸಲಾಗಿರುವುದು. ... ಬಾಯ್ ಸ್ಕೌಟ್ಸ್ ... ಶ್ರೀ ... ಸಂದೇಶಗಳನ್ನು ... ಈ ಸಂಬಂಧದಲ್ಲಿ ಎಲ್ಲರಿಗೂ ... ಭೋಜನ ಕೊಟ್ಟವನು ...

... ಅವರ ಪಟ್ಟಾಭಿಷೇಕ ... ಸಂಬಂಧವಾಗಿ ಈ ದಿನ ... ಕೊಡಲಾಗಿತ್ತು. ... ಬೆಳಗ್ಗೆ ಅರಮನೆ ... ಕಾಲು ತೋಪುಗಳು ಹಾರಿಸಲ್ಪಟ್ಟವು.

ಭೋಗಗಳಿಗೆ ಪ್ರಸಾದ ಸಮರ್ಪಣೆ

... ಮಹಾಯಾಗದ ... ಶ್ರೀ ... ಯ ... ಈ ದಿನ ಮಹಾ ... ಯಾಗದ ಪ್ರಧಾನ ... ರಕ್ಷೆ ... ಸುಂದರವಾದ ... ಗಳಲ್ಲಿ ... ಅರಮನೆ ... ಅರಿಕೆ ಮಾಡಿದರು.

ಜಪಾನರ ಭಯಂಕರ ಗುಪ್ತಾಸ್ತ್ರ

ಜಪಾನರು ಹೊಸ ಎಂಟು ಗುಪ್ತಾಸ್ತ್ರವನ್ನು ಹೊಂದಿದ್ದಾರೆಂದು ಮೆಲ್‌ಬೋರ್ನ್ ರೇಡಿಯೋ ತಿಳಿಸಿದೆ.

ಲಕ್ಷ್ಮೀನೃಸಿಂಹ ಸೋಮಯಾಜಿಗಳ

ಮೈಸೂರು ಸಂಸ್ಥಾನದ ವೈಶ್ಯ ಯುವಜನ ಮಹಾಸಭೆಯವರು ಪ್ರಕಟಿಸಿರುವ ಶ್ರೀ ಜಗದ್ಗುರು ಲಕ್ಷ್ಮೀನರಸಿಂಹ ಸೋಮಯಾಜಿಯವರ ಚರಿತ್ರೆಯ ಪ್ರತಿ ಒಂದನ್ನು ಸಮಸ್ತಗಳಿಗಾಗಿದೆ. ಅದನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಶ್ರೀ ಸೋಮಯಾಜಿಗಳ ದಶಮಾನೋತ್ಸವದ ಸವಿನೆನಪಿಗಾಗಿ ಇದನ್ನು ಪ್ರಕಟಿಸಲಾಗಿದೆ. ವಿದ್ವಾನ್ ಎಸ್. ರಾಜಗೋಪಾಲ ಇದರ ಲೇಖಕರು ... ವೇದೋಕ್ತ ವಿಚಾರದಲ್ಲಿ ವೈಶ್ಯರ ಹಕ್ಕನ್ನು ಸ್ಥಾಪಿಸಿ ಇದೇ ಜೀವಮಾನದಲ್ಲೆಲ್ಲಾ ... ನಡೆಸಿದ ... ಜೊತೆಗಿದ್ದ ... ಸೋಮಯಾಜಿಗಳ ಜೀವನ ಚರಿತ್ರೆಯನ್ನು ಇದರಲ್ಲಿ ಕೊಡಲಾಗಿದೆ. ಸರ್ವರಿಗೂ ಗ್ರಾಹ್ಯವಾಗಿದೆ.

ಹಾಲಿನ ಬದಲು ಸೋಯಾಬೀನ್

... ಪಶುಗಳ ... ತೈಲವನ್ನು ... ಸೋಯಾಬೀನ್ (ಹುರುಳಿ) ನಿಂದ ತೆಗೆಯಬಹುದೆಂದು ಬಂಗಳೂರಿನ ಟಾಟಾ ವಿಜ್ಞಾನ ಮಂದಿರದ ಶ್ರೀ ಸುಬ್ರಹ್ಮಣ್ಯಂ ಮತ್ತು ಡಾ. ದೇವನವರು ಕಂಡು ಹಿಡಿದಿದ್ದಾರೆ. ಈ ವಸ್ತುವಿನಲ್ಲಿ ಹಲವು ಪರೀಕ್ಷೆಗಳನ್ನು ನಡಸಿ ಅದರ ಹಾಲು ಮತ್ತು ಅದರ ಪದಾರ್ಥಗಳಂತೆಯೇ ಉಪಯೋಗಿಸಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

o o o o o

ಸಿಂಗಪುರದಲ್ಲಿದ್ದ ೩೦, ಜರ್ಮನ್ ಅಧಿಕಾರಿಗಳು ಹೈಕಮೀಷನನ್ನು ... ನಡೆಸುತ್ತಿದ್ದು ಅವರು ... ಜರ್ಮನ್ ... ಬಂದಿರುವ ... ನನ್ನ ... ನಾಡಿಕೊಂಡರು.

ಜಪಾನಿನ ಶ್ರೀ ... ಪ್ರತಿನಿಧಿಗಳು ... ಪಡೆದ ... ಅಧಿಕಾರ ... ಸ್ವಾತಂತ್ರ್ಯ ... ದ್ದಾರೆ.

ಜಪಾನನು ಕಿರಿಯ ರಾಷ್ಟ್ರವಾಗುವುದು

ಜನರಲ್ ಮೆಕಾರ್ಥರ್‌ರವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಜಪಾನು ತನ್ನ ಸೈನಿಕ ಶಕ್ತಿಯನ್ನು ಪುನಃ ಬೆಳೆಸಲು ಸಾಧ್ಯವೇ ಆಗುವುದಿಲ್ಲವೆಂದಿದ್ದಾರೆ. ಇನ್ನೆರಡು ವರ್ಷದಲ್ಲಿ ಜಪಾನು ತನ್ನ ದೇಶದಲ್ಲಿ ಉತ್ಪತ್ತಿಯಾಗುವನ್ನು ಪದಾರ್ಥಗಳನ್ನು ಮಾತ್ರ ಹೊಂದಿ, ಸಾಧ್ಯವಾಗುವ ಕಿರಿಯ ರಾಷ್ಟ್ರದ ದರ್ಜೆಗೆ ಬೇಕಾಗುವನ್ನು ... ಮಾತ್ರ ಅವಕ್ಕೆ ಸಿಗುವುದೆಂದು ಅವರು ಹೇಳಿದ್ದಾರೆ.

ಕೋಲಾರದಲ್ಲಿ ಮ. ಹಾ. ಸಮಾರಂಭ

ಸ್ವಂತ] ಕೋಲಾರ ೧೩

ಕೋಲಾರ ಶ್ರೀ ... ಕೋಲಾರ, ಮಂಗಳವಾರ, ಬುಧವಾರಗಳಲ್ಲಿ ಶ್ರೀ ವಿದ್ಯಾ ಪ್ರಸನ್ನ ತೀರ್ಥರ ... ಶ್ರೀ ... ವ್ಯಾಸಾಧಿ ತೀರ್ಥರ ... ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ... ಭಾರತದ ಅನೇಕ ಭಾಗಗಳಿಂದ ... ವಿದ್ವಜ್ಜನ ಸಂಭಾವನೆ ಮತ್ತು ವಿದ್ಯಾರ್ಥಿಗಳಿಗೆ ... ವಿದ್ವತ್ಸಭೆ ... ನಡೆಯಿತು. ... ಪ್ರಸಿದ್ಧ ವ್ಯಾಖ್ಯಾನ ... ಭಾಷಣ ... ಅಯಿತು.

ಮೊನ್ನೆ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಮಹಾ ಮಹಾಸಭೆ ನಡೆಯಿತು. ಶ್ರೀ ... ಶರ್ಮ ... ಸುಧಾ ... ಪಾಠ ... ಭಾಷಣ ಮಾಡಿದರು. ... ಕನ್ನಡ ಮತ್ತು ಸಂಸ್ಕೃತಗಳ ... ಪೃಥಿ, ಸ್ಮೃತಿ ಮತ್ತು ... ವಿಶೇಷವಾಗಿ ... ಧರ್ಮಾಚರಣೆಗಳು ... ಮತ್ತು ... ರಣವೆಂದು ... ಬಾಳಿಗೆ ... ಶ್ರೀ ... "ಭಕ್ತ ಕುಚೇಲ" ... ನಡೆಸಿದರು.

ವಿಹಾರ ಹಡಗಿನಲ್ಲಿ ಓಟ್ಟರರು!

ಓಟ್ಟರರ ಅಧಿಕಾರವರ್ಗದವರು ... ದಲ್ಲಿ ಓಡಾಡುತ್ತಿದ್ದ ಸ್ತ್ರೀಯೊಬ್ಬಳು ... ಹಿಟ್ಲರ್‌ನ ತಮ್ಮ ... ಇದ್ದರೂ ... ನೋಡಿದರೆಂದು ತಿಳಿಸಿದರು. ... ಆ ಗೃಹವನ್ನು ಬಿಟ್ಟು ... ಒಪ್ಪಿದ್ದರೂ ... ಓಟ್ಟರರ ... ಅಧಿಕಾರಿಗಳು ... ವಿಹಾರದ ... ಹಿಟ್ಲರನು ... ಪ್ರತೀಕ ...

ಭಾರತೀಯರ ... ಮುಕ್ತ ಆಗಮನ ...

... ಜರ್ಮನಿ ... ಸೇನೆಯ ಅಧ್ಯಕ್ಷರಾದ ... ವರನ್ನು ... ಜರ್ಮನ ... ಕೊಳ್ಳಲಾಗಿದೆ.

ಕಿರೀಟಧಾರಣ ಸರಕುಗಳಿಲ್ಲ

... ಜರ್ಮನಿ ... ತಿಳಿಸಿದೆ ... ಅಧಿಕಾರ ... ಕೊಡಲಾಯಿತು ...

ಜೀವಿತ ಕೆಲಸಗಾರರ ಮಾನ್ಯತೆ?

ಸ್ವಂತ] ... ೧೧

... ೧೦ ... ಬೇಕೆಂದು ... ನಡೆಸಬೇಕೆಂದು ... ಈ ಸಂದರ್ಭದಲ್ಲಿ ... ಕೂಲಿ ... ಕೂಲಿ ... ಕೆಲಸಗಾರರ ... ಸಂಘಗಳು ... ರಾಜ್ಯದ ... ಯುದ್ಧ ...

ಕೂಲಿ ಆಹಾರ...

... ಕಾರ್ಖಾನೆ ... ಈ ಮರ್ಮ ... ಮನೆ ... ಸ್ವತಂತ್ರ ... ವಿಧಾನವಾಗಿದೆ.

ಸಂತಾಪ ಸೂಚನೆ

... ಶ್ರೀ ... ವಿಶ್ವನಾಥ ... ನವರು ...

ಸಾಧ್ವಿ

೧೩-೯-೪೫ ಗುರುವಾರ

ಮೈಸೂರಿನಲ್ಲಿ ಯಾವಾಗ?

ಬೊಂಬಾಯಿ ಪ್ರಾಂತದಲ್ಲಿ ಸಹ, ಮ[illegible] ಪ್ರತಿನಿಧಿಗಳ [illegible] ಅಲ್ಲಿನ ಸರ್ಕಾರದವರು ರದ್ದುಪಡಿಸಿದ್ದಾರೆ. ಈ ನಿರ್ಬಂಧಗಳು [illegible] ಇದರಿಂದಾಗಿ [illegible] ಇದಲ್ಲದೆ ಕಾಂಗ್ರೆಸ್ ಸಂಸ್ಥೆಯ [illegible] ಈ ಮೊದಲೇ ಹೋಗಿದೆ [illegible] ಕಾಂಗ್ರೆಸ್ [illegible] ನಿರ್ಬಂಧವು ಸ್ಥಗಿತವಾಗಿದೆ.

[illegible] ಮೈಸೂರು ನಗರಗಳಲ್ಲಿ [illegible] ಇದರಿಂದ [illegible] ಈ ಕಾಲದಲ್ಲಿ [illegible] ಸರ್ಕಾರ [illegible] ಇಲ್ಲಿ [illegible].

ಈ ಆಜ್ಞೆಗಳನ್ನು [illegible] ದಿನಗಳಾದರೂ [illegible] ಫಲವಿಲ್ಲ [illegible] ಪ್ರತಿಬಂಧಕಗಳನ್ನು [illegible] ಇಲ್ಲಿಯೂ [illegible] ಇಲ್ಲಿ ಯಾವ [illegible] ಸಮಂಜಸವಾಗಿದೆ.

[illegible] ನಮ್ಮ ಸರ್ಕಾರದವರು ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಪ್ರತಿಬಂಧಕಗಳನ್ನು [illegible] ಹಿಂತೆಗೆದುಕೊಳ್ಳಬೇಕೆಂದು [illegible] ಕೋರುತ್ತೇವೆ.

ಕ್ವಿಸ್ಲಿಂಗನಿಗೆ ಗಲ್ಲು

[illegible] ಇದ್ದ [illegible] ಮಂತ್ರಿ [illegible] ಕ್ವಿಸ್ಲಿಂಗನಿಗೆ ಗಲ್ಲು ಶಿಕ್ಷೆ ವಿಧಿಸಲಾಗಿದೆ

ಭಾರತ [illegible]

[illegible] ಆಲೋಚನೆ

ಇಂಗ್ಲೆಂಡಿನ [illegible] ಭಾರತದ [illegible] [illegible]

ಮಹಿಳೆಯರಿಂದಲೇ ಗ್ರಾಮೋದ್ಧಾರ!

ಲೋಕ ಸುಂದರಿ ರಾಮೇಶ್ವರರಿಂದ ಕಸ್ತೂರಿ ಬಾ ಶಿಬಿರದ ಆರಂಭೋತ್ಸವ

ಮೈಸೂರು ೧೧.

ಕಸ್ತೂರಿ ಬಾ ನಿಧಿಯ ಸಮಿತಿಯ ಆಶ್ರಯದಲ್ಲಿ ಏರ್ಪಟ್ಟಿರುವ ಶಿಕ್ಷಣ ಶಿಬಿರದ ಆರಂಭೋತ್ಸವವು, ನಿನ್ನೆ ಸಾಯಂಕಾಲ, ಮೈಸೂರು ನಗರದ ವಾಣೀವಿಲಾಸ ಮೊಹಲ್ಲಾ ಪಡುವಾರಳ್ಳಿ ಜಯಲಕ್ಷ್ಮೀವಿಲಾಸ ಕಟ್ಟಡದಲ್ಲಿ, ಶ್ರೀಮತಿ ಲೋಕಸುಂದರಿ ರಾಮೇಶ್ವರರಿಂದ ನೆರವೇರಿಸಲ್ಪಟ್ಟಿತು. ಅಧ್ಯಕ್ಷರನ್ನು ಸ್ವಾಗತಿಸಿದ ನಂತರ ಧ್ವಜಾರೋಹಣ ಕಾರ್ಯಕ್ರಮವು ನಡೆಯಿತು. ಪ್ರಾರ್ಥನೆಯಾದನಂತರ ಸಭೆಯ ಕಾರ್ಯಕಲಾಪಗಳು ಆರಂಭವಾದುವು.

ಕಸ್ತೂರಿ ಬಾಯಿ ಗಾಂಧಿ ಸ್ಮಾರಕ ನಿಧಿ ಸೃಷ್ಟಿ ಅದರ ಉದಾತ್ತ ಧ್ಯೇಯಗಳು, ಗಾಂಧಿಯವರು ಈ ಕಾರ್ಯಕ್ರಮದಿಂದ ನಿರೀಕ್ಷಿಸುತ್ತಿರುವ ಫಲಿತಾಂಶ ಇವುಗಳನ್ನು ಕುರಿತು, ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರು ತಿಳಿಗನ್ನಡದಲ್ಲಿ ಭಾಷಣ ಮಾಡಿದರು. ಅಹಿಂಸೆಯ ಸಂದೇಶವನ್ನು ಸಾರಲು ಪುರುಷರಿಗಿಂತಲೂ ಸ್ತ್ರೀಯರೇ ಹೆಚ್ಚು ಸಮರ್ಥರು ಆದುದರಿಂದ, ಈ ಕಸ್ತೂರಿ ಬಾ ಸ್ಮಾರಕದ ಫಲವಾಗಿ ದೇಶದ ಯಾವುದಾದರೊಂದು ಕಡೆ ಅಹಿಂಸೆಯ ಮೂರ್ತಿ ಸ್ವರೂಪಳಾದ ಒಬ್ಬ ಮಹಿಳಾಮಣಿಯು ಉದ್ಭವಿಸಿ ಈ ಸಂದೇಶವನ್ನು ಜಗತ್ತಿಗೆ ಸಾರಬೇಕು ಎಂಬುದೇ ಸ್ಮಾರಕದ ಮುಖ್ಯ ಉದ್ದೇಶವೆಂದು ಶ್ರೀ ಶರ್ಮರು ಹೇಳಿದರು.

ಸ್ಮಾರಕ ನಿಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಧರ್ಮಪ್ರಕಾಶ ಎಲ್. ಎಸ್. ವೆಂಕಾಜಿರಾಯರು ಅಧ್ಯಕ್ಷರನ್ನು ಸ್ವಾಗತಿಸುತ್ತಾ, ತಮ್ಮ ದೇಶ ವಿದೇಶಗಳ ಅನುಭವಗಳಿಂದ ತಾವು ಕೈಗೊಂಡಿರುವ ಕೆಲಸಕ್ಕೆ ಮತ್ತಷ್ಟು ಉಪಯೋಗವಾಗುವ ಸಲಹೆಗಳನ್ನು ಕೊಡುವರೆಂದು ಆಶಿಸಿದರು. ಉತ್ಸವವು ಯಶಸ್ವಿಯಾಗಿ ನಡೆದು ದೇಶ ಸೇವೆಗೆ ಶಿಬಿರವು ಪೂರ್ಣ ಪ್ರಯೋಜನಕಾರಿಯಾಗಿರಬೇಕೆಂದು ಹಾರೈಸಿ ಬಂದಿದ್ದ ಶುಭ ಸಂದೇಶಗಳನ್ನು ಶ್ರೀ ಕೃಷ್ಣಯ್ಯಂಗಾರರವರು ಓದಿ ತಿಳಿಸಿದರು. ಅಖಿಲ ಭಾರತ ಕಸ್ತೂರಿ ಬಾಯಿ ಸ್ಮಾರಕ ನಿಧಿ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀ ಠಕ್ಕರ್‌ರವರೂ, ಶ್ರೀಗಳಾದ ಸಿ. ರಾಜಗೋಪಾಲಾಚಾರಿ, ಎಸ್. ನಿಜಲಿಂಗಪ್ಪ, ಕೆ. ಟಿ. ಭಾಷ್ಯಂ, ಟಿ. ಸುಬ್ರಹ್ಮಣ್ಯಂ, ಮೋಹನ ಸೋಫಿಯಾ ವಾಡಿಯಾ, ಮುಂತಾದವರು ಶುಭ ಸಂದೇಶಗಳನ್ನು ಕಳುಹಿಸಿದ್ದರು.

ಮೈಸೂರು ಸಮಿತಿ ಕಾರ್ಯದರ್ಶಿಗಳಾದ ಶ್ರೀ ಯಶೋಧರಾ ದಾಸಪ್ಪನವರು ಕಳೆದ ಒಂದು ತಿಂಗಳಿನ ಶಿಬಿರದ ಕಾರ್ಯಕಲಾಪಗಳ ವರದಿಯನ್ನು ತಿಳಿಸಿದರು.

ಅಧ್ಯಕ್ಷರು ಭಾಷಣ ಮಾಡುತ್ತಾ ಈ ರೀತಿ ತಿಳಿಸಿದರು:— ಕಸ್ತೂರಿ ಬಾ ರವರು, ಅಷ್ಟೇನೂ ವಿದ್ಯಾವಂತರಲ್ಲದಿದ್ದರೂ ದೇಶಸೇವೆಗಾಗಿ ಸ್ವಾರ್ಥತ್ಯಾಗ ಮಾಡಿರುವ [illegible] ಆದರ್ಶ ವ್ಯಕ್ತಿ ಆದರು [illegible] ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳು ವಿದ್ಯಾವಂತರಾಗಿದ್ದರಲ್ಲದೆ ಪೂರ್ಣ ಆಯುರಾರೋಗ್ಯ ಭಾಗ್ಯವನ್ನು ಅನುಭವಿಸುತ್ತಿದ್ದರು. ಈಗಿನ ಹೆಣ್ಣುಮಕ್ಕಳಲ್ಲಿ ಆರೋಗ್ಯ ಭಾಗ್ಯವೇ ಕಾಣ ಬರದೆಯಾಗಿ, ಹೆಚ್ಚು ಕಷ್ಟ [illegible] [illegible] ಹಳ್ಳಿಯವರು, ಪಟ್ಟಣಿಗರು ಎಂಬ ಭಾವನೆ ಪಟ್ಟಣಗಳಲ್ಲಿ ನೂತನ ಜನತೆಯ ಪ್ರಗತಿಗೆ ಅಡಚಣೆ ತಂದು ಒಡ್ಡಿದೆ; ಎಲ್ಲರೂ ಒಂದೇ; ನಮಗೂ ಅವರಿಗೂ ಭಿನ್ನಭಾವನೆ ಇಲ್ಲ, ಎಂಬ ಅಭಿಪ್ರಾಯ ನಮ್ಮಲ್ಲಿ ಹುಟ್ಟಬೇಕು. ಹಿಂದೆ ಬಿದ್ದಿರುವ ಹಳ್ಳಿಗರನ್ನು ಮೇಲ್ಮಟ್ಟಕ್ಕೆ ತರಲು ನಮ್ಮ ಜೊತೆಯಲ್ಲಿ ನಿಲ್ಲುವಂತೆ ಮಾಡಬೇಕು; ಭಾರತವು ಹಳ್ಳಿಗಳ ದೇಶ; ಹಳ್ಳಿಗಳು ಶೋಚನೀಯ ಸ್ಥಿತಿಯಲ್ಲಿವೆ; ಆದುದರಿಂದ ಈ ಬಗೆಯ ಶಿಬಿರ ಶಿಕ್ಷಣವು ನಾಲ್ಕಾರು ತಿಂಗಳುಗಳು ಸಾಲದು; ಇದನ್ನು ಶಾಶ್ವತಗೊಳಿಸಿ ನಿರಂತರವಾಗಿ [illegible] ಮಾಡುತ್ತಿರಬೇಕು; ಹಳ್ಳಿಗಳಲ್ಲಿ ಮಾತಾಡಲು ತಿಳಿದಿರುವ ಜನರು ನಿರೀಕ್ಷಿಸಿದಷ್ಟು ಸುಲಭವಾಗಿ [illegible] ಮನಸ್ಸಿನವರಾಗಿರುವುದಿಲ್ಲ. ಪ್ರಚಾರ ಮಾಡುವಾಗ ಬಹಳ ಕಷ್ಟಪಟ್ಟು, ಹಿತ್ತಿಗುಡ್ಡೆಗಳನ್ನು ಹತ್ತಿ [illegible] ಜನರ ಮನಸ್ಸನ್ನು ಒಲಿಸಿಕೊಂಡು ಅವರಿಗೆ ಶ್ರದ್ಧೆ ಹುಟ್ಟಿಸಿ, ಮತ ಪ್ರಚಾರ ನಡೆಸಿರುವ ಹಾಗೆ ಅದರಂತೆಯೇ ಗ್ರಾಮ ಸೇವಕಿಯರೂ ಸಹ ಸಹನೆ ಶ್ರದ್ಧೆಗಳಿಂದ ಕೂಡಿ, ಹಳ್ಳಿಗರಲ್ಲಿ ಶ್ರದ್ಧೆಯನ್ನು ಮೂಡಿಸಿ, ಜನರ ವಿಶ್ವಾಸಕ್ಕೆ ಪಾತ್ರರಾಗಿ ತಮ್ಮ ಗುರಿಯನ್ನು ಮುಟ್ಟಬೇಕು. ಯುಕ್ತಿಯಿಂದ ಈ ಕೆಲಸಕ್ಕಾಗಿ ಹೆಚ್ಚು ಹೆಚ್ಚು ಸೇವಕಿಯರು ಬೇಕು.

ಕೊನೆಯದಾಗಿ, ಶಿಕ್ಷಣ ಶಿಬಿರಕ್ಕೆ [illegible] ಹೆಚ್ಚು ವಿದ್ಯಾರ್ಥಿಗಳನ್ನು ತಯಾರಿಸಿ ಅವರ ಕೆಲಸ ಯಶಸ್ವಿಯಾಗಿ [illegible] ಪ್ರತಿ ಹಳ್ಳಿಯಲ್ಲೂ [illegible] ಎಂದು ಹಾರೈಸಿದರು.

ಕಸ್ತೂರಿಬಾಯಿ ಗೀತೆ, ವಂದನಾರ್ಪಣೆ, ರಾಷ್ಟ್ರಗೀತೆಯಾದನಂತರ ಸಮಾರಂಭವು ಮುಕ್ತಾಯವಾಯಿತು.

ಈ ಉತ್ಸವ ಸಂಬಂಧದಲ್ಲಿ ನೂಲು, ಸಣ್ಣ ಪುಟ್ಟ ಕೈಗಾರಿಕೆ ಸಾಮಾನು [illegible] ಮಾಡುವುದು, ಅಕ್ಷರ ಪ್ರಚಾರ ಮ[illegible] ಪ್ರದರ್ಶನಗಳೂ ಸಹ ಏರ್ಪಾಡಾಗಿ[illegible]

ಜಪಾನರ ಕೇಂದ್ರ [illegible] ಕಛೇರಿ ರದ್ದು

ಜನರಲ್ ಮೆಕ್‌ಆರ್ಥರ್‌ರವರು [illegible] ಯೊಂದನ್ನು ಹೊರಡಿಸಿ, ಜಪಾನ್ [illegible] ಸಾಮ್ರಾಜ್ಯ ಸೈನ್ಯ ಕಛೇರಿಯನ್ನು ರದ್ದುಗೊಳಿಸಿದ್ದಾರೆ

Edited, printed and published by A. P. [illegible] at the Sadhvi Press D. Subbiah Road, Mysore

[illegible]

ಮೈಸೂರು ಸಿಟಿ ಮುನ್ಸಿ[illegible]
ಪ್ರೆಸಿಡೆಂಟ್‌ರವರ ಆಫೀಸು
ತಾ|| ೪-೯-೧೯೪೫

—: ಹರಾಜಿನ ಇಸ್ತಿಹಾರ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ ಮೈಸೂರು ಮುನಿಸಿಪಲ್ [illegible] ರುವ ಸುಮಾರು [illegible] ಬೀಜದ [illegible] ರಿಗಳನ್ನು [illegible] ಬೀಳದ [illegible] ಷರತ್ತುಗಳನ್ನು ಅನುಸರಿಸಿ ಸೆಪ್ಟೆಂಬರ್ [illegible] ನೆ ತಾರೀಖು ೧೫ ನೇ (೧೫-೯-೪[illegible] [illegible]ವಾರ ಮಧ್ಯಾಹ್ನ ೪ ಗಂಟೆಗೆ ಮುನ್ಸಿ[illegible] ಆಫೀಸ್ ಬಳಿ ಮುನಿಸಿಪಲ್ ಪ್ರೆಸಿಡೆಂಟ್‌ರವರಿಂದ ಬಹಿರಂಗವಾಗಿ [illegible] ಹಾಕಲ್ಪಡುತ್ತೆ. ಇಷ್ಟಪಟ್ಟವರು [illegible] ಬಾಸ್ತು ಮಾಡಿ ಪಡೆಯಬಹುದು.

R ರಾಮಚಂದ್ರರಾವ್ ಬಾಂ[illegible]
ಪ್ರೆಸಿಡೆಂಟ್
ಸಿಟಿ ಮುನ್ಸಿಪಲ್ ಕೌ[illegible]
ಮೈಸೂರು.

[illegible] ಟಾಕೀಸ್
ತಾ|| ೧೩-೯-೪೫ನೇ ಗುರುವಾರ
ಎರಡನೇ ವಾರ
[illegible], ಸಾಹು ಮೋದಕ್
[illegible]
ಅಭಿನಯಿಸಿರುವ
ಗೀತಾ
[illegible] ಅತ್ಯುತ್ತಮವಾದ ಚಿತ್ರ
ಮುಂದಿನ ವಿನೋದ:—
20—9—45 ರಿ[illegible]
ಪ್ರತಿದಿನ ೩ ಆಟಗಳು
[illegible]
[illegible] ಫರ್ಸ್ಟ್ [illegible]
ಎಂ. ಜಿ. ಎಂ. ಸ್ಪೆಷಲ್

ಲಿಲ್ಲೀ ಬ್ರಾಂಡ್ ರಾಖಿ
ಪ್ರತಿಯೊಬ್ಬರೂ ಉಪಯೋಗಿಸಿ
V O P.
ಚಾಮುಂಡಿ ಬ್ರಾಂಡ್ ವೆಜಿಟಬಲ್ [illegible] (ವನಸ್ಪತಿ)
[illegible]
ಮತ್ತು [illegible]
ನಮ್ಮಲ್ಲಿ ದೊರೆಯುತ್ತೆ [illegible] ರೂ. 0-10-6
[illegible]
ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್, [illegible], ಮೈಸೂರು.
ಬ್ರಾಂಚ್ —ದೇವರಾಜ ಮಾರ್ಕೆಟ್
[illegible] ಪೇಟೆ.

ಫೋ೯ ಫಂ ೧೨೭೨ ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶುಕ್ರವಾರ ೧೪—೯—೪೫ [ಸಂಚಿಕೆ ೪೧

ಜಪಾನಿನಲ್ಲಿ ಪುನಃ ಆತ್ಮಹತ್ಯಗಳ ಪ್ರಾರಂಭ

ಹರಿಜನ ದೇವಾಲಯ ಪ್ರವೇಶ

ಮೈಸೂರು ೧೪

ಮೈಸೂರು ಸಂಸ್ಥಾನದ ಹರಿಜನ ದೇವಾಲಯ ಪ್ರವೇಶ ಸಮಿತಿಯ ಸಭೆಯು ನಿನ್ನೆ ಕಸ್ತೂರಿಬಾಯಿ ಶಿಕ್ಷಣ ಶಿಬಿರ ಸಮಿತಿಯ ಅಧ್ಯಕ್ಷರಾದ ಶ್ರೀ ಸಿ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ... ಶ್ರೀಗಳಾದ ಪಾಮಡಿ ಸುಬ್ಬಶೆಟ್ಟಿ, ಸ್ವಾಮಿಸಿದ್ಧಾನಂದಜಿ, ... ದಾಸಪ್ಪ, ಕೆ. ಪಟ್ಟಾಭಿರಾಮಯ್ಯ, ಯಶೋಧರಾ ದಾಸಪ್ಪ ಇವರು ಹಾಜರಿದ್ದರು. ಮುಂದಿನ ಗಾಂಧಿ ಜಯಂತಿ ಸಂಬಂಧದಲ್ಲಿ ಸಂಸ್ಥಾನದಲ್ಲಿ ಒಂದು ದಿವಸ ಹರಿಜನ ದೇವಾಲಯ ಪ್ರವೇಶದ ಬಗ್ಗೆ ಸಭೆಗಳನ್ನು ... ರಾಪುಗಳನ್ನು ಮಾಡಿ ಸರಕಾರಕ್ಕೆ ಕಳುಹಿಸಿಕೊಡಬೇಕೆಂದೂ, ದೇವಾಲಯ ಪ್ರವೇಶಕ್ಕೆ ಸಹಕಾರಿಯಾಗುವ ಶಾಸನಗಳನ್ನು ನಮ್ಮ ಸಂಸ್ಥಾನದಲ್ಲಿ ಜಾರಿಗೆ ತರುವಂತೆ ಪ್ರಾರ್ಥಿಸಬೇಕೆಂದೂ ನಿರ್ಣಯಗಳಾದುವು.

ಜನವಾಣಿ-ಪ್ರಜಾಮತ ಕಾರ್ಯಾಲಯ

ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರಿನ ಮೇಲೆ 'ಜನವಾಣಿ-ಪ್ರಜಾಮತ' ಪತ್ರಿಕೆಗಳ ಮೈಸೂರು ಶಾಖೆಯ ಕಾರ್ಯಾಲಯವು ನೆನ್ನೆಯಿಂದ ಆರಂಭವಾಯಿತು. ರಾಜಧಾನಿಯ ಪತ್ರಿಕೋದ್ಯೋಗಿಗಳು ಕಾರ್ಯಾಲಯದವರು ಈ ದಿನ ... ಮಾಡಿಕೊಂಡು ಉಪಾಹಾರಾದಿ ಸತ್ಕರಿಸಿದರು. ಎಲ್ಲರನ್ನೂ ಸ್ವಾಗತಿಸಿ ಉದ್ಯಮಕ್ಕೆ ಸಹೋದ್ಯೋಗಿಗಳು ಸಂಪೂರ್ಣ ಬೆಂಬಲವನ್ನೂ ಆಶೀರ್ವಾದವನ್ನೂ ನೀಡಬೇಕೆಂದು ಜನವಾಣಿ ... ಶ್ರೀ ಹೆಚ್. ಕೆ. ಕಮಾಲಯನವರು ಪ್ರಾರ್ಥಿಸಿದರು. ಶ್ರೀಗಳು ಸರ್. ಮ್ಯೋಕ್ಸ್ಪೆಲ್ ಮತ್ತು ಆ... ಗಯ್ಯನವರು ಭಾಷಣ ಮಾಡಿ ಉದ್ಯಮಕ್ಕೆ ಸಕಲ ಶ್ರೇಯಸ್ಸನ್ನು ಕೋರಿ ... ಹಾರೈಸಿದರು.

ಚಾಮುಂಡೇಶ್ವರಿ ಟಾಕೀಸ್

ಮೈಸೂರು ಮಹಾರಾಜರವರ ೫ ನೇ ವರ್ಷದ ಷಷ್ಟಿಪೂರ್ತಿ ಮಹೋತ್ಸವದ ಸಂಬಂಧದಲ್ಲಿ ಚಾಮುಂಡೇಶ್ವರಿ ಟಾಕೀಸಿನಲ್ಲಿ ಸಂಜೆ ಗಣಪತಿ ಮಂಗಳಾರತಿ ನಡೆಸಿದರು. ಇದರ ಅಂಗವಾಗಿ ಗಾನ ಸರಸ್ವತಿ ಡಿ. ಕೆ. ಪಟ್ಟಮ್ಮನವರ ಸುಪ್ರಸಿದ್ಧವಾದ ಸಂಗೀತವನ್ನು ಏರ್ಪಡಿಸಲಾಗಿತ್ತು. ನೂರಾರು ಜನ ಪ್ರೇಕ್ಷಕರು ಮತ್ತು ಮಹಿಳೆಯರು ... ಆಗಮಿಸಿದ್ದರು ... ಗಂಧಪುಷ್ಪಗಳಿಂದ ಸತ್ಕರಿಸಿ...

ಶ್ರೀ ಬಾಯಿ ನಿಧಿ ಸಮಿತಿ

ಶ್ರೀಮತಿ ಶ್ರೀ ಎಲ್. ಎಸ್. ವೆಂ... ಅಧ್ಯಕ್ಷತೆಯಲ್ಲಿ ನಿನ್ನೆ ಜೇ... ಕಸ್ತೂರಿಬಾಯಿ ನಿಧಿ ಸಮಿತಿಯ ... ಶಿಕ್ಷಣ ಶಿಬಿರದಲ್ಲಿ ನಡೆ... ತರಗತಿಯ ... ವಿದ್ಯಾರ್ಥಿನಿಯ ... ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ನಿರ್ಣಯವಾಯಿತು. ... ಸಮಿತಿಯು ಸಾಮಾನ್ಯ ... ಬೇಕೆಂದೂ ಗೊತ್ತಾಯಿತು.

ಮೌಕ್ ಆರ್ಥರ್‌ರವರ ಭಾರಿ ತಪ್ಪು

ಕೊರಿಯಾ ದೇಶದ ಆಡಳಿತ ಸೂತ್ರಗಳನ್ನು ಜಪಾನ್ ಅಧಿಕಾರಿಗಳಿಗೆ ಜ॥ ಮೌಕ್ ಆರ್ಥರ್‌ರವರು ಒಪ್ಪಿಸಿರುವುದಾಗಿ ಹೇಳಲಾಗಿದೆ. ಇದು ಒಂದು ಭಾರಿ ತಪ್ಪೆಂದು ಅಮೆರಿಕ ಸರಕಾರ ಭಾವಿಸಿದೆ. ಜಪಾನಿನ ಆಕ್ರಮಣ ವಿಷಯವಾಗಿ ಮೌಕ್ ಆರ್ಥರ್‌ರವರನ್ನು ಉಗ್ರವಾಗಿ ಟೀಕಿಸಲಾಗುತ್ತಿದೆ. ಅಧ್ಯಕ್ಷ ಟ್ರೂಮನ್ ರವರು ತನ್ನ ನೀತಿಯನ್ನು ಸ್ಪಷ್ಟಪಡಿಸಿದರು. ಜನರಲ್ ಮೌಕ್ ಆರ್ಥರ್‌ರವರಿಗೆ ಹೊಸ ಸೂಚನೆಗಳನ್ನು ಕೊಟ್ಟು ಜಪಾನರನ್ನು ಹೊರಡಿಸಲಾಗುವುದು.

ಅಬಿಸೀನಿಯಾ ಮೇಲೆ ಬ್ರಿಟನ್ನಿನ ಕೋಪ

ಅಮೆರಿಕದ ಒಂದು ಕಂಪೆನಿಗೆ ಎಣ್ಣೆ ತೆಗೆಯುವ ಅಧಿಕಾರವನ್ನು ಅಬಿಸೀನಿಯಾ ಕೊಟ್ಟಿದ್ದರಿಂದ ಬ್ರಿಟನ್ನಿಗೆ ಕ್ರೋಧವುಂಟಾಯಿತು ... ವೆಂದು ಒಂದು ಪತ್ರಿಕಾ ಸಂಸ್ಥೆ ತಿಳಿಸಿದೆ. ಅಬಿಸೀನಿಯಾನ ವಿಮೋಚನೆಗೆ ಬ್ರಿಟಿಷ್ ಚಕ್ರಾಧಿಪತ್ಯವು ತನ್ನ ರಕ್ತ ಮತ್ತು ಹಣ ಚೆಲ್ಲಿತೆಂದೂ, ಆದರೂ ಅಮೆರಿಕಕ್ಕೆ ಅಬಿಸೀನಿಯಾವು ಸ್ನೇಹಫಲ ಕೊಟ್ಟಿತೆಂದೂ ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯು ದೂಷಿಸಿದೆ.

ಅಣು ಶಕ್ತಿಯ ಸಹಾಯ ಒಂದು ರೈಲ್ವೆ ಓಡಾಟ

ಸಂಯುಕ್ತ ಸಂಸ್ಥಾನಗಳಲ್ಲಿ ಒಂದು ಕಡೆ ಅಣು ಶಕ್ತಿಯಿಂದ ರೈಲ್ವೆ ಓಡಿಸುವ ಪ್ರಯತ್ನದಲ್ಲಿಯೇ ಏರ್ಪಾಡು ಪಡಿಸುವಲ್ಲಿ ... ನ ಸಂಶೋಧನಾ ಅಧಿಕಾರ್ಯವು ಬರುವ ... ಚೀಫ್ ಇಂಜನಿಯರ್ ಲಾರೆನ್ಸ್ ಎಂಬುವರು ತಿಳಿಸಿದ್ದಾರೆ. ಉಕ್ಕು ಮತ್ತು ಸಾಧನಗಳ ಆಗಾಗುಳ ಪೈಕಿಯ ... ಆಣ್ವಿಕ ಕಡಾಯಿಯಲ್ಲಿ ಕೂಡಿಸಿ ಅದರ ಉಪಯೋಗದಿಂದ ರೈಲ್ವೆ ನಡೆಸಲಾಗುವುದು.

—

ಬ್ರಿ॥ ಕೂಲಿಗಾರರ ಪಕ್ಷದ ಅಧ್ಯಕ್ಷರಾದ ಹೆರಾಲ್ಡ್ ಲ್ಯಾಸ್ಕಿ ಯವರು ಬ್ರಿ॥ ಟ್ರೇಡ್ ಯೂನಿಯನ್ ಕಾಂಗ್ರೆಸ್ ಪ್ರತಿನಿಧಿಗಳ ಸಭೆಯಲ್ಲಿ ಭಾಷಣ ಮಾಡುತ್ತಾ ಭಾರತದ ಸ್ವಾತಂತ್ರ್ಯದ ಕಡೆ ಬ್ರಿಟನ್ನರ ಗಮನವಿರಬೇಕೆಂದು ಒತ್ತಾಯಪಡಿಸಿದ್ದಾರೆ.

ಗ್ರೀಸಿನಲ್ಲಿ ಯಾದವೀ ಕಲಹ ಪುನಃ ಶುರುವಾಗುವ ... ಸನ್ನಿವೇಶವಿದೆಯೆಂದು, ಆ ದೇಶದ ಮಾಜಿ ಪ್ರಧಾನ ಮಂತ್ರಿಯೊಬ್ಬರು ತಿಳಿಸಿದ್ದಾರೆ.

ಜಪಾನಿನಲ್ಲಿ ಪುನಃ ಆತ್ಮಹತ್ಯಗಳಾಗುತ್ತಿವೆ

ಜಪಾನ್ ಯುದ್ಧ ಪ್ರಮುಖರ ದಸ್ತಗಿರಿಗೆ ಮೌಕ್ ಆರ್ಥರ್‌ರವರ ಆಜ್ಞೆಯಾದುದರಿಂದ ಜಪಾನಿನಲ್ಲಿ ಪುನಃ ಆತ್ಮಹತ್ಯಗಳು ಶರಣ ... ಗಳು ವರದಿಯಲ್ಲಿ ಆರಂಭವಾಗಿವೆ. ಫೀ॥ ಮಾ॥ ಸುಗಿಯಾಮಾರವರೂ ಜನರಲ್ ಟನಾಕಾರವರೂ ಗುಂಡು ಹೊಡೆದುಕೊಂಡು ಸತ್ತರು.

ಕತ್ತೆಗಳ ನೇತೃತ್ವದಲ್ಲಿ ಪೌರ ಸಭೆಯ ಖಂಡನೆ

ಕೊಲ್ಲಾಪುರ ಸಂಸ್ಥಾನದ ಇಚಲ ಕರಂಜಿಯ ಪೌರಸಭೆ ಮೇಲೆ ತನ್ನ ಪ್ರತಿಭಟನೆ ತೋರಿಸಲು ೫ ಸಾವಿರ ಜನ ನಾಗರೀಕರು ಎರಡು ಕತ್ತೆಗಳನ್ನು ಮುಂದಿಟ್ಟುಕೊಂಡು ಹೋಗಿ, ಸಭೆಯ ಆಡಳಿತದ ಮೇಲೆ ತಮ್ಮ ವಿರೋಧ ತೋರಿಸಿದರು. ಕತ್ತೆಗಳ ಮೇಲೆ "ಪೌರಸಭಾಧ್ಯಕ್ಷ" ಮತ್ತು "ಚೀಫ್ ಆಫೀಸರ್" ಎಂಬ ಬೋರ್ಡುಗಳನ್ನು ಹಾಕಲಾಗಿತ್ತು. ಕೊಲ್ಲಾಪುರದ ಮುಖ್ಯ ಮಂತ್ರಿಗೆ ತಮ್ಮ ಅಹವಾಲು ಹೇಳಿಕೊಳ್ಳಬೇಕೆಂದು ಆವರು ಬಂದಿದ್ದ ... ಆದರೆ ಮುಖ್ಯ ಮಂತ್ರಿಗಳು ಜನರ ಮನವಿ ಸ್ವೀಕರಿಸಲಿಲ್ಲ.

—

ಕಾಂಗ್ರೆಸ್ ಕೆಲಸಗಾರರ ಸಭೆ

ಗಾಂಧಿ ಜಯಂತಿ ಸಂಬಂಧವಾಗಿ ಮಾಡಬೇಕಾದ ಏರ್ಪಾಡುಗಳನ್ನು ಪರಿಶೀಲಿಸಲು ನಾಳೆ ರಾತ್ರಿ ೯ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಸಭೆ ನಡೆಯುವುದು. ಕಾಂಗ್ರೆಸ್ ಕೆಲಸಗಾರರೆಲ್ಲರೂ ಬರಬೇಕೆಂದು ಪ್ರಾರ್ಥಿಸಲಾಗಿದೆ.

ಮೇಲುಕೋಟೆ ಯಾತ್ರಾರ್ಥಿಗಳಿಗೆ ಸೌಕರ್ಯ

ದಕ್ಷಿಣ ಬದರಿಕಾಶ್ರಮವೆಂದು ಪ್ರಸಿದ್ಧವಾಗಿರುವ ಪುಣ್ಯಕ್ಷೇತ್ರವಾದ ಮೇಲುಕೋಟೆಯನ್ನು ಸಂದರ್ಶಿಸುವ ಭಕ್ತಾದಿಗಳಿಗೆ ಉಚಿತ ಊಟ, ವಸತಿ ದೇವತಾ ಸೇವೆ ಮೊದಲಾದ ಸೌಕರ್ಯಗಳನ್ನು ಜೀರ್ಣೋದ್ಧಾರಕ ಛತ್ರದವರು ಏರ್ಪಡಿಸಿದ್ದಾರೆ. ಸಂದರ್ಶನಾರ್ಥವಾಗಿ ಬರುವ ಭಕ್ತಾದಿಗಳು ತಮ್ಮ ಬರುವಿಕೆಯನ್ನು ಮುಂಚಿತವಾಗಿ ತಿಳಿಸಬೇಕೆಂದು, ಛತ್ರದ ಮಂಡಲಿಯ ಅಧ್ಯಕ್ಷರಾದ ಶ್ರೀ ಭಾ॥ ವೆಂ॥ ರಂಗನಾಥಯ್ಯರು ಪ್ರಾರ್ಥಿಸಿದ್ದಾರೆ.

ಪ್ರಭುಗಳು ಪೋಷಕರಾಗಲು ಒಪ್ಪಿಗೆ

ಸ್ವಂ. ವ. ಫೋ.] ಬೆಂಗಳೂರು ೧೪

ಬರುವ ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ಒಲಿಂಪಿಕ್ ಸ್ಪರ್ಧೆಗೆ ಶ್ರೀಮನ್ಮಹಾರಾಜರವರು ಪೋಷಕರಾಗಲು ಒಪ್ಪಿದ್ದಾರೆ.

ಜೋಗ್ ಯೋಜನೆ

ಜೋಗ್ ಜಲಪಾತದ ಶಕ್ತಿಯ ವಿದ್ಯುಚ್ಛಕ್ತಿ ಉತ್ಪತ್ತಿಯ ಯೋಜನೆಯ ಪ್ರಥಮ ಭಾಗವು ೧೯೪೮ ನೇ ಇಸವಿಯಲ್ಲಿ ಪೂರ್ಣಗೊಳ್ಳುವುದು. ೧೯೪೮ ರ ಅಂತ್ಯದಲ್ಲಿ ಮೊದಲನೇ ಘಟ್ಟವು ಮುಗಿದು, ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಆರಂಭವಾಗುವುದು. ಮೊದಲು ೪೮,೦೦೦ ಅಶ್ವಬಲವನ್ನು ಕೊಡುವ ಯೋಜನೆ ಮುಗಿದ ಮೇಲೆ ೧ ಲಕ್ಷದ ೬೦ ಸಾವಿರ ಅಶ್ವಬಲದಷ್ಟು ವಿದ್ಯುಚ್ಛಕ್ತಿ ಉತ್ಪನ್ನವಾಗುವುದು. ಈ ಯೋಜನೆ ಸಂಪೂರ್ಣವಾದರೆ ಜಾರಿಗೆ ಬರಲು ೫ ವರ್ಷ ಕಾಲ ಹಿಡಿಯುವುದು.

ಜೊಂಬಾಯಿಗೆ ನಿಯೋಗ

ಮೈಸೂರು ಕಾಂ॥ ಸರಕಾರ ಶ್ರೀಗಳಾದ ಎಸ್. ನಿಜಲಿಂಗಪ್ಪ, ಕೆ. ಟಿ. ಭಾಷ್ಯಂ, ಕೆ. ಚಂಗಲರಾಯರೆಡ್ಡಿ, ಮತ್ತು ತಿಮ್ಮೇಗೌಡರು ಅ. ಭಾ. ಕಾಂ. ಸಮಿತಿ ಅಧಿವೇಶನಕ್ಕೆ ತೆರಳುವರು.

ಪಾಟಿಯಾಲಾ ಮಹಾರಾಜರು ಬೆಂಗಳೂರಿಗೆ

೧೯೪೬ ರ ಫೆಬ್ರವರಿಯಲ್ಲಿ ಬೆಂಗಳೂರಿನಲ್ಲಿ ನಡೆಯುವ ಅಖಿಲ ಭಾರತ ಒಲಿಂಪಿಕ್ ಸ್ಪರ್ಧೆಗಳ ಸಂಬಂಧದಲ್ಲಿ ಪಾಟಿಯಾಲಾ ಮಹಾರಾಜರು ಬೆಂಗಳೂರಿಗೆ ಬರುವರೆಂದು ಗೊತ್ತಾಗಿದೆ.

ಸರ್ಕಾರೀ ಸುದ್ದಿ

ಸರಕಾರದವರ ವಶದಲ್ಲಿಟ್ಟುಕೊಂಡ ಟೌನುಗಳನ್ನು ಪ್ಲೇಗ್ ಪೀಡಿತ ಪ್ರದೇಶಗಳೆಂದು ಪ್ರಕಟಿಸಲಾಗಿದೆ. ... ಮದ್ದೂರು, ಕ್ರಿಷ್ಣರಾಜಪೇಟೆ, ಶ್ರೀರಂಗಪಟ್ಟಣ, ಟಿ. ನರಸೀಪುರ ಮೊದಲಾದ ತಾಲ್ಲೂಕುಗಳಿಗೆ ಆರೋಗ್ಯದ ಗಳಲ್ಲಿ ಕಛೇರಿಗಳನ್ನು, ಚಿಕಿತ್ಸಾ ... ಕೈಕೊಳ್ಳುವಂತೆ ಸೂಚಿಸಲಾಗಿದೆ ... ಸಿಕ್ಕಿದ ಆಸ್ತಿಯಲ್ಲಿ ಖಾಲಿ ಮನೆಗಳನ್ನು ಬಾಡಿಗೆಗೆ ಕೊಡಬೇಕಾದರೆ ಶಾಸನ ಜಿಲ್ಲಾಧಿಕಾರಿಗಳ ಅಪ್ಪಣೆ ಪಡೆದು ಕೊಡಬೇಕೆಂದು ಪ್ರಕಟಿಸಲಾಗಿದೆ.

೦ ೦ ೦ ೦

ನವೆಂಬರ್ ೪ ರಿಂದ ೧೨ ರವರೆಗೆ ... ಸ್ಥಳೀಯ ಆಳಿಕೆಯ ಮುಂದಿನ ಸಾರ್ವ... ೧೧ ರಿಂದ ೩೦ ರ ವರೆಗೆ ... ದ ಬಗ್ಗೆ ಸಂಸ್ಥಾನದಲ್ಲೆಲ್ಲಾ ... ಅಧಿಕಾರಿಗಳ ನೇತೃತ್ವದಲ್ಲಿ ಸಭೆ ... ರಚನೆಗನುಗುಣವಾಗಿ ನಡೆಯುವುವು.

ಮೈಸೂರು-ಬೆಂಗಳೂರಿಗೆ ವಿದ್ಯುಚ್ಛಕ್ತಿ ರೈಲು

ಮೈಸೂರು-ಬೆಂಗಳೂರುಗಳ ನಡುವೆ ವಿದ್ಯುಚ್ಛಕ್ತಿ ರೈಲನ್ನು ಓಡಿಸುವ ವಿಷಯ ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದು ... ಈ ಯೋಜನೆಗೆ ೩ ಕೋಟಿ ರೂ. ಖರ್ಚಾಗುವುದು.

ಟಿಪ್ಪು ಸುಲ್ತಾನರ ... ಉಡುಗೊರೆ

ಟಿಪ್ಪುಸುಲ್ತಾನರು ... ವಸ್ತ್ರ, ಖಡ್ಗ, ... ಮಾಡಿಸಿದ್ದ ... ಕೊಡಲಾಯಿತು ಎಂದು ತಿಳಿಸಿದ್ದಾರೆ.

ಸಾಧ್ವಿ

ತಾ|| ೧೯-೯-೪೫ ರ ಬುಧವಾರ

ಶರತ್ ಬೋಸರ ಬಿಡುಗಡೆ

ಯುದ್ಧಪ್ರಾರಂಭವಾದ ನಂತರ ಬಂಧಿಸಲ್ಪಟ್ಟಿದ್ದ ಭಾರತ ಕೇಂದ್ರ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶರತ್ ಚಂದ್ರ ಬೋಸರನ್ನು ಸುಮಾರು ನಾಲ್ಕು ವರ್ಷಗಳ ಕಾಲ ಬಂಧನದಲ್ಲಿಟ್ಟಿದ್ದು ಈಗ ಅವರನ್ನು ಬೇಷರತ್ತಾಗಿ ಬಿಡುಗಡೆ ಮಾಡಿರುವುದು ಸಂತೋಷದ ವಿಷಯ. ಬಂಗಾಳದ ಪ್ರಕರಣದಲ್ಲಿ ಇದು ಒಂದು ಮುಖ್ಯ ಘಟ್ಟ.

ಬಂಗಾಳದ ಸರ್ಕಾರ ಆಗ ಸಾಧಾರಣವಾಗಿ ಮುಂದುವರಿಯುತ್ತಿದ್ದುದರಿಂದ ಇವರುಗಳನ್ನು ಇನ್ನೂ ಮುಂದೆಯೂ ನಿರ್ಬಂಧದಲ್ಲಿಡುವ ಅಗತ್ಯವಿಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ.

ಮೂರು ವರ್ಷಗಳ ಹಿಂದೆ ದೇಶದಲ್ಲೆಲ್ಲಾ ಹಬ್ಬಿದ ಚಳುವಳಿಯು ಬ್ರಿಟಿಷ್ ವಿರೋಧಿ ಪ್ರತಿಭಟನೆಗಳನ್ನು, ಕಾಂಗ್ರೆಸ್ ಸಂಸ್ಥೆಯ ವಿವಿಧ ಅಂಗಗಳೆಲ್ಲವೂ ಅಪ್ಪಗಳಲ್ಲವೂ ರೂಪಗೊಂಡವು. ಒಂದೊಂದಕ್ಕೂ ಕಾರ್ಯನೀತಿಯಲ್ಲಿ ಸ್ವಲ್ಪಸ್ವಲ್ಪ ವ್ಯತ್ಯಾಸವಿದ್ದರೂ ಭಾರತದ ಸಂಪೂರ್ಣಸ್ವಾತಂತ್ರ್ಯ ಸಾಧನೆಯೊಂದೇ ಅವುಗಳೆಲ್ಲದರ ಗುರಿಯಾಗಿತ್ತು. ಕೆಲವರು ಉಗ್ರಪಂಥೀಯರಾಗಿದ್ದರು, ಕೆಲವರು ಸೌಮ್ಯ ಮಾರ್ಗಾನುವರ್ತಿಗಳಾಗಿದ್ದರು. [illegible] ಫಾರ್ವರ್ಡ್ ಬ್ಲಾಕ್, ಕಾಂಗ್ರೆಸ್ ಸೋಷಲಿಸ್ಟ್, ಹಿಂದೂ ಕಾಂಗ್ರೆಸ್ ಇವೇ ಮುಂತಾದ ಪಲವು ವಿಭಾಗಗಳಾಗಿ ಚಳುವಳಿ ನಡೆಯಿತು. ಇವುಗಳಲ್ಲಿ ಉಗ್ರಪಂಥಕ್ಕೆ ಸೇರಿದವರು ಶ್ರೀ ಶರತ್ ಚಂದ್ರಬೋಸ್ ಮುಂತಾದವರೆಂದು ಹೇಳಬಹುದು. ಇವರು ವೀರ ದೇಶಾಭಿಮಾನಿಗಳೂ, ನಿಸ್ಸೀಮ ಸ್ವಾರ್ಥತ್ಯಾಗಿಗಳೂ ಎಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ. ಬ್ರಿಟಿಷ್ ಅಮೆರಿಕಾಗಳಲ್ಲಿನ ರಾಷ್ಟ್ರನಾಯಕರು ಯಾವ ಉದಾತ್ತ ದೇಶಪ್ರೇಮದಿಂದ ಪ್ರೇರಿತರಾಗಿದ್ದರೋ ಅದೇ ಸ್ಫೂರ್ತಿಯು ಬಾಬು ಬೋಸ್ ಮತ್ತು ಅವರ ಸಹೋದ್ಯೋಗಿಗಳಲ್ಲಿಯೂ ಪ್ರಚೋದಿತವಾಗಿದ್ದಿತು. ಇಂತಹ ದೇಶಭಕ್ತರನ್ನು ಸರ್ಕಾರವು ನಾಲ್ಕು ವರ್ಷಕಾಲ ನಿರ್ಬಂಧದಲ್ಲಿಟ್ಟಿದ್ದಿತು. ಈಗ ಠರಾವೇನೆಯ ಉಪಸ್ಥಾಪನೆಯೊಡನೆ ಅವರುಗಳನ್ನು ಬಂಧವಿಮುಕ್ತರನ್ನಾಗಿ ಮಾಡುತ್ತಿರುವುದು ಉಚಿತವಾಗಿಯೇ ಇದೆ.

ವಿವಿಧ ಸ್ಥಳಗಳಲ್ಲಿ ಇನ್ನೂ ನೂರಾರು ಜನ ರಾಜಬಂದಿಗಳಿದ್ದಾರೆ. ಸಾವಿರಾರು ಜನ ಶಿಕ್ಷೆಗೆ ಗುರಿಯಾದ ರಾಜಕೀಯ ಖೈದಿಗಳಿದ್ದಾರೆ. ಇವರುಗಳನ್ನು ಬಂಧಿಸಿದ ಕಾರಣವಾದ ಸಮರ ಸನ್ನಿವೇಶವೇ [illegible] ಇವರುಗಳನ್ನು [illegible] ಬಾಬು ಬೋಸರಂತೆ ಶೀಘ್ರವಾಗಿ ಇವರುಗಳನ್ನು ಬಿಡುಗಡೆ ಮಾಡಿದ ಹೊರತು [illegible] ಕಾಂಗ್ರೆಸ್ [illegible]

ಬ್ರಿಟಿಷ್-ಫ್ರೆಂಚರ ಸ್ಪರ್ಧೆ

ಪಶ್ಚಿಮ ಮತ್ತು ಮಧ್ಯ ಪೂರ್ವ ನಾಡುಗಳ ಬಗ್ಗೆ ಅನುಸರಿಸಲಾಗುತ್ತಿರುವ ನೀತಿಯು ವಿಶಯವಾಗಿ ಪ್ರಪಂಚದ ಸರಕಾರಗಳಾದ ಬ್ರಿಟನ್ ಮತ್ತು ಫ್ರಾನ್ಸ್‌ಗಳಿಗೆ ಭಿನ್ನತೆ ಉಂಟಾಗಿದೆಯೆಂದು ಜನರಲ್ ಡಿಗಾಲ್‌ರವರು ತಿಳಿಸಿದ್ದಾರೆ. ಸಿರಿಯಾದಲ್ಲಿ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ಹೊರಡಿಸುವುದು ಉಚಿತವಲ್ಲವೆಂಬುದು ಡಿಗಾಲ್‌ರ ಅಭಿಪ್ರಾಯ. ಈ ದೇಶಕ್ಕಿಂತಲೂ ಹೆಚ್ಚಿನ ಪ್ರಾಮುಖ್ಯತೆ ಉಳ್ಳ ಜರ್ಮನಿಯ ವಿಷಯವಾಗಿ ಫ್ರಾನ್ಸನ್ನು ಕೇಳದೇ ಬ್ರಿಟನ್ನು ಅನುಸರಿಸಿದ ನೀತಿಯು ಫ್ರಾನ್ಸಿಗೆ ಬಹು ನೋವನ್ನುಂಟು ಮಾಡಿದುದಲ್ಲದೆ ಇದೇ ಯುರೋಪಿಗೆ ಅದೊಂದು ಅಪಾಯಕಾರಿ ಪ್ರಮೇಯವಾದಂತಾಗಿದೆಯೆಂದು ಡಿಗಾಲ್‌ರವರು ಹೇಳಿದರು.

ಫಾರ್ವರ್ಡ್ ಬ್ಲಾಕಿನ ಸದಸ್ಯರೆಂದು ಸಂಬಂಧವಿದ್ದ ನೂರಾರು ಬಂದಿಗಳನ್ನು ಒರಿಸ್ಸಾ ಸರಕಾರವು ಬಿಡುಗಡೆ ಮಾಡಿದೆ. ಈ ಪ್ರಾಂತದಲ್ಲಿ ಇನ್ನು ಯಾವ ರಾಜಬಂದಿಯೂ ಇಲ್ಲ.

ರಷ್ಯಕ್ಕೂ ಪಶ್ಚಿಮ ಯೂರೋಪಿಗೂ ಸೌಹಾರ್ದವು ಏರ್ಪಡಬೇಕಾದರೆ, ಪಶ್ಚಿಮ ಯೂರೋಪಿನಲ್ಲಿರುವ ಕಮ್ಯೂನಿಸ್ಟ್ ಸಂಘಗಳ ರಷ್ಯವನ್ನು ಸ್ವಾಲಿನರು ಒಪ್ಪಿಕೊಳ್ಳಬೇಕೆಂದು ಹೆರಾಲ್ಡ್ ಲ್ಯಾಸ್ಕಿಯವರು ಕೇಳುವರೆಂದು ಹೇಳಲಾಗಿದೆ.

ಹೊಗಿ ಪಾಂತವಾದವರಣವು ತಲೆದೋರಿರುವ ಈ ಕಾಲದಲ್ಲಿ ಭಾರತ ಸರ್ಕಾರದವರು ಕೂಡಲೇ ಸಕಲ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಿ ಎಲ್ಲಾ ನಿರ್ಬಂಧಗಳನ್ನೂ ರದ್ದುಗೊಳಿಸಲೆಂದು ನಾವು ಹಾರೈಸುತ್ತೇವೆ.

ಬೊಂಬಾಯಿಗೆಲ್ಲಿ ಬೋಸರು!

ಬೊಂಬಾಯಿ ನಗರಕ್ಕೆ ಸುಭಾಸ್ ಬೋಸರು ಬಂದಿರುವ ಸುದ್ದಿ ಬೊಂಬಾಯಿಯಲ್ಲಿ ಹರಡಿದೆ. ಸ್ಯಾಂಡ್‌ಹರ್ಸ್ಟ್ ನಲ್ಲಿ ಬಾರಿನ ಹೊರಗೆ ಜನರ ಬಂಗಲೆಗೆ ಯಾರೋ ದೀರ್ಘಕಾಯರೊಬ್ಬರು ಹೋದುದು ಪೋಲೀಸರಿಗೆ ತಿಳಿದು ಬಂದು ಅವರು ಮನೆಯ ಮಾಲೀಕರನ್ನು ಪ್ರಶ್ನಿಸಿದಾಗ, ಅವರಿಗೆ ದಿಗ್ಭ್ರಾಂತಿಯಾಯಿತು. ಆದರೆ ಅವರು ಪೋಲೀಸರ ಕುತೂಹಲವನ್ನು ಉಪಶಮನ ಮಾಡಿದರು. ಪೂನಾದಲ್ಲಿ ಬೋಸರ ಸೋದರರೊಬ್ಬರು ಮಹಾತ್ಮರನ್ನು ಸಂದರ್ಶಿಸಿದಾಗಿನಿಂದ ಈ ವಿಚಿತ್ರ ಸುದ್ದಿ ಹಬ್ಬಿದೆ.

ಟೋಕಿಯೋವಿನ ಅರಮನೆ, ಜಪಾನಿಯರ ಶಕ್ತಿ, ನೋಗಿಟೋ ಮುಂತಾದ ಜಪಾನರ ಪವಿತ್ರ ಸ್ಥಳಗಳಿಗೆ ಅಮೆರಿಕ ಬಲಗಳು ಹೋಗುವುದನ್ನು ಪ್ರತಿಬಂಧಿಸಲಾಗಿದೆ. ಅಲ್ಲಿ ಯಾರೂ ಅಕ್ರಮ ನಡವಳಿಕೆಯನ್ನು ಮಾಡಕೂಡದೆಂದು ಅಮೆರಿಕ ಅಧಿಕಾರಿಯು ತನ್ನ ಕೆಳಗಿನ ಸೇನೆಗಳಿಗೆ ಆಜ್ಞೆ ಮಾಡಿದ್ದಾನೆ.

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು

ಮೇಲ್ಕಂಡ ಬ್ಯಾಂಕಿನ ೩೪ನೇ ವಾರ್ಷಿಕ ಸಭೆಯು 16-9-45ನೇ ಭಾನುವಾರ ಮಧ್ಯಾಹ್ನ ೩-೩೦ ಗಂಟೆಗೆ ಗಾರ್ನ್ಮೆಂಟ್ ಮಹಮ್ಮದನ್ನನವರ ಹೈಸ್ಕೂಲಿನಲ್ಲಿ ಸೇರುವುದು. ಸದಸ್ಯರೆಲ್ಲರೂ ದಯಮಾಡಿಸಬೇಕಾಗಿ ವಿನಂತಿ

ಬಿ. ಸಿ. ನಂಜುಂಡಯ್ಯ,
ಗೌ|| ಕಾರ್ಯದರ್ಶಿ

ವಾರ್ತಾ ವಾಹಿ

ಅಣುಬಾಂಬಿನ ರಹಸ್ಯವನ್ನು ಇತರರಿಗೆ ಬಿಟ್ಟುಕೊಡಲಾಗುವುದಿಲ್ಲ ಎಂದು ಅಮೆರಿಕಾದ ವಿದೇಶ ವ್ಯವಹಾರದ ಬೈರನ್ಸ್‌ರವರು ಹೇಳಿದ್ದಾರೆ.

ಅಣುಬಾಂಬಿನ ರಹಸ್ಯವನ್ನು ತಿಳಿಸಬೇಕೆಂದು ರಷ್ಯ, ಚೀನಾ, ಫ್ರಾನ್ಸ್‌ಗಳು ಬ್ರಿಟಿಷ್, ಅಮೆರಿಕಾದವರನ್ನು ಕೇಳಿಲ್ಲವು.

ಪ್ರಪಂಚದ ಅತ್ಯಂತ ಶ್ರೇಷ್ಠ ಸ್ಪರ್ಧಕ ಯಂತ್ರವನ್ನು ವಿಯನ್ನಾದಲ್ಲಿ ಜರ್ಮನ್ ಶಿಲ್ಪಿಗಳು ನಾಶಪಡಿಸಿದ್ದು, ಹೊಂದಲಾಗಿದ್ದ ನೋಕಷ್ಟವೇಯಲ್ಲ, ಜರ್ಮನ್ ಪ್ರಜೆಯಾಗಿ ತನ್ನ ಜನರನ್ನು ತಾವು ನಾಶಮಾಡುವುದಾಗಿ ತಿಳಿಸಿದ.

ಅಸ್ತ್ರಶಸ್ತ್ರ ವಿಮಾನಗಳಿಂದ ಅರ್ಪಿತವಾದ ೩೦ ಯುದ್ಧ ಹಡಗುಗಳು ಮುಳುಗಿವೆ. ೨೦೦ ಹಡಗುಗಳಿಗೆ ಪೆಟ್ಟು ಬಿದ್ದಿದೆ.

ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಭಾರತ ತನ್ನ ಸ್ಥಾನ ಹೊಂದಲು ಸಹಕಾರ ಮಾಡಿಕೊಡಬೇಕೆಂದು ಜನ ಪ್ರಮುಖ ಕೈಗಾರಿಕೆ ಮುಖಂಡರು ಘೋಷಿಸಿದ್ದಾರೆ.

ಪೆಸಿಫಿಕ್ಕಿನ ವ್ಯಾಪಾರಕ್ಕಾಗಿ ಅಮೆರಿಕನ್ನರು ಜಪಾನರ ಹಡಗುಗಳನ್ನೆಲ್ಲಾ ವಶಕ್ಕೆ ತೆಗೆದುಕೊಳ್ಳುವರು.

ಜಪಾನರ ನೋಟಿನ ಬದಲು ೩೦ ದಲ್ಲಿ ಮಿತ್ರರ ನೋಟುಗಳು ಬಳಕೆಗೆ ಬಂದಿವೆ.

ಕಾಂಗ್ರೆಸ್ಸು ಮುಸ್ಲಿಮರ ಕ್ಷೇತ್ರ ಚುನಾವಣೆಗೆ ಸ್ಪರ್ಧಿಸುವವರನ್ನು ನಿಲ್ಲಿಸುವುದೆಂದು ಪಂಡಿತರು ತಿಳಿಸಿದ್ದಾರೆ.

ಟೋಕಿಯೋದಲ್ಲಿ ಮಂತ್ರಿಮಂಡಲದ ಜಪಾನ್ ಮಂತ್ರಿಗಳೆಲ್ಲರಿಗೆ ಆಜ್ಞೆಯಾಗಿದೆ.

ಮೈಸೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟ್‌ರವರ ಆಫೀಸು
ತಾ|| ೧೮-೯-೧೯೪೫

—: ಹರಾಜು ಇಸ್ತಿಹಾರ್ :—

ಇದರಿಂದ ಸಮಸ್ತ ಜನಗಳಿಗೂ ಯಾಕಡಿಸುವುದೇನೆಂದರೆ ಮೈಸೂರು ಮುನಿಸಿಪಲ್ ಸೂಯೇಜ್ ಫಾರಂನ ಮೂರು ಇಲಾಯಿತಿ ಬೀಜದ ರಿಗಳನ್ನೂ ಮತ್ತು ಒಂದು ಅನ್ನ ಕಸ ಬೀಜದ ಹೋರಿಯನ್ನೂ ಹರಾಜು ಷರತುಗಳನ್ನು ಅನುಸರಿಸಿ ಸೆಪ್ಟೆಂಬರ್ ತಾರೀಖು ೧೨ ನೇ (೧೨-೯-೪೫) ವಾರ ಮಧ್ಯಾಹ್ನ ೪ ಗಂಟೆಗೆ ಮುನಿಸಿಪಲ್ ಆಫೀಸ್ ಬಳಿ ಮುನಿಸಿಪಲ್ ಪ್ರೆಸಿಡೆಂಟ್‌ರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಪಡೆಯಬಹುದು.

K. ರಾಮಚಂದ್ರರಾವ್ ಬಾಂಧೆ
ಪ್ರೆಸಿಡೆಂಟ್
ಸಿಟಿ ಮ್ಯುನಿಸಿಪಲ್ ಕೌನ್ಸಿಲ್
ಮೈಸೂರು.

ರಾಜಧಾನಿಯ ಮಹಾಜನರು ಭಂಗಾರದ ಪದಕಗಳನ್ನೂ ಅಭಿನಂದನಾ ಪತ್ರಿಕೆಯನ್ನೂ ಕೊಡುತ್ತಾರೆ
ಶ್ರೀ ಕುಲಕರ್ಣಿ ಮತ್ತು ಪಾರ್ಟಿಯವರ

★ ನೃತ್ಯ-ನಾಟ್ಯ ★

(ಸ್ಪೆಷಲ್ ಪ್ರೋಗ್ರಾಂ)
15 9-45 ನೇ ಶನಿವಾರ 6-30 ಗಂಟೆಗೆ
ರಂಗಾಚಾರ್ಲು ಸ್ಮಾರಕ ಭವನದಲ್ಲಿ
ಮಹಾ ಜನರ ಆಶೀರ್ವಾದ ಪಡೆದು ಈ ಸಾರಿಗೆ ಮುಂದೆ ಪ್ರಯಾಣ ಮಾಡುವವರಾಗಿದ್ದಾರೆ

ಲಿಲ್ಲಿ ಬ್ರಾಂಡ್ ಕಾಫಿ
ಪುಡಿಯನ್ನೇ ಉಪಯೋಗಿಸಿ
V. O. P.
ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ (ವನಸ್ಪತಿ)
ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು
ಮತ್ತು ಪುಷ್ಟಿಕರವಾದದ್ದು
ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ಕ್ಕೆ ರೂ. 0-10-6
ಡಿ. ಸ್ವಾಮಿ ಶೆಟ್ಟಿ ಯ್ಯ,
ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.
ಬ್ರಾಂಚ್ :— ದೇವರಾಜ ಮಾರ್ಕೆಟ್ : : ಪಕ್ಕದ ಅಂಗಡಿ, ಸಂತೇಪೇಟೆ.

Edited printed and published by A. R. Nagaraian at the Sadhvi ... D. Subbiah Road ...

ಫೋನ್ ನಂ ೨೮೨೩ ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶನಿವಾರ ೧೫—೮—೪೫ [ಸಂಚಿಕೆ ೪೨

— ಜಪಾನರ ಬಂಧನಕ್ಕೆ — ಅಮೆರಿಕನ್ ಬೆಂಬಲ

ಒಂದೂವರೆ ಲಕ್ಷ ರೂ. ದಾನ

ಮೈಸೂರು ೧೫

ರಾಜಧಾನಿಯ ಪ್ರಸಿದ್ಧ ಎಕ್ಸೈಜು ಕಂಟ್ರಾಕ್ಟರ್ ಶ್ರೀ ಪೊಂಬಾಳಿ ರಂಗಯ್ಯನವರು ಕುಂಚಿಟಿಗರ ಬಡ ವಿದ್ಯಾರ್ಥಿಗಳಿಗೆ ಉಚಿತ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಗೋಸ್ಕರ ಮತ್ತು ಕುಂಚಿಟಿಗರ ಬಡ ಸಂಸಾರಿಗಳಿಗೆ ವಾಸಕ್ಕೋಸ್ಕರ ಬಾಡಿಗೆ ಇಲ್ಲದೆ ಕೊಡುವುದಕ್ಕೆ ಒಂದು ಅಗ್ರಹಾರವನ್ನು ಮತ್ತು ಮೇಲ್ಕಂಡ ಹಾಸ್ಟೆಲ್ಲಿಗೆ ಒಂದು ಕಟ್ಟಡವನ್ನೂ ತಮ್ಮ ಹೆಸರಿನಲ್ಲಿ ಕಟ್ಟಿಸಿಕೊಡುವುದಾಗಿ ಒಪ್ಪಿರುತ್ತಾರೆ. ಅಲ್ಲದೆ ಸುಮಾರು ೫ ವರಹ ಲಕ್ಷ ರೂ. ಬೆಲೆ ಬಾಳುವ ಆಸ್ತಿಗಳನ್ನು [illegible] ಕಾರ್ಯಭಾಗಗಳನ್ನು ಟ್ರಸ್ಟಿಗಳ ಮೂಲಕ ನಡೆಯಿಸುವಂತೆ ಏರ್ಪಡಿಸಿರುತ್ತಾರೆ. ಈ ಮಹನೀಯರು ಕುಂಚಿಟಿಗರ ಬಡ ಜನಾಂಗಕ್ಕೆ ಮಾಡಿರುವ ಉದಾರ ದಾನವು ಚಿರಸ್ಮರಣೀಯವಾಗಿರುತ್ತೆ.

ದ್ರಾವಕದಿಂದ ಮರಣ

ಕೃಷ್ಣರಾಜಪೊಲ್ಲಿಯ ಚನ್ನದ ಕೆಲಸದ ಬಾಲದಾಸಪ್ಪನವರ ಮೂರು ವರುಷ ವಯಸ್ಸಿನ [illegible] ಎಂಬ ಮಗುವು ನಾಲ್ಕು ದಿನಗಳ ಹಿಂದೆ ಗಂಧಕದ ದ್ರಾವಕವನ್ನು ಕುಡಿದು ಆಸ್ಪತ್ರೆಗೆ ದಾಖಲಾಗಿ ಅಲ್ಲಿ ನಿನ್ನೆ ಮೃತಪಟ್ಟಿತೆಂದು ಗೊತ್ತಾಗಿದೆ.

ಭಕ್ತಿವಿಜಯ

ರಾಜಧಾನಿಯ ಶ್ರೀ ರಾಮಕೃಷ್ಣಾಶ್ರಮದಲ್ಲಿ [illegible] ಸಂಧ್ಯಾಕಾಲ ೭ ಗಂಟೆಯವರೆಗೆ ಶ್ರೀ ಸ್ವಾಮಿ [illegible] ಅವರು 'ಭಕ್ತಿವಿಜಯ' [illegible] ಯವನ್ನು ಕುರಿತು ಭಾಷಣ ಮಾಡುವರು.

ತಂಬೂಚೆಟ್ಟಿಗೆ ಜೀವದಾನ

ಶ್ರೀಮನ್ಮಹಾರಾಜರವರ [illegible] ದರ್ಬಾರಿನಲ್ಲಿ [illegible] ಚೆಟ್ಟಿಗೆ [illegible] ಜೀವದಾನ ಕೊಟ್ಟಿರುವರೆಂದು ಹೇಳಲಾಗಿದೆ.

ಶ್ರೀರಂಗಪಟ್ಟಣದ ಜಂಟಿಯರು

ಶ್ರೀರಂಗಪಟ್ಟಣದ [illegible] ಶ್ರೀ ಎಸ್. [illegible] ಅವರನ್ನು [illegible] ಅಮಲ್ದಾರರನ್ನಾಗಿ ನೇಮಿಸಿದೆ. [illegible] ಮೈಸೂರಿನಲ್ಲಿ.

ನೀರಿನ ಬಗ್ಗೆ ವಿಶೇಷ ಸಭೆ

ಮೈಸೂರು ೧೫

ಮೈಸೂರು ಪೌರಸಭೆಯವರು ಸರ್ವ ಪ್ರಯತ್ನಗಳನ್ನು ಮಾಡಿದಾಗ್ಯೂ ನಗರದ ನೀರು ಸರಬರಾಜಿನ ಸ್ಥಿತಿಯು ಕೇವಲ [illegible] ವಾಗಿರುವುದರಿಂದ ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಸರ್ಕಾರದವರು [illegible] ಪೌರಸಭೆಯ ವಿಶೇಷ ಅಧಿವೇಶನವನ್ನು ಸೇರಿಸಬೇಕೆಂದು [illegible] ಸದಸ್ಯರು [illegible].

ಕಾಂಗ್ರೆಸ್ ಪ್ರತಿಬಂಧಕ ತಪ್ಪುವುದೇ?

ಮೈಸೂರು ಕಾಂಗ್ರೆಸ್ಸಿನ ನಾನಾ ಸಮಿತಿಗಳ ಮೇಲೆ [illegible] ಬಂದ ಹಾಕಲಾಗಿದ್ದ ಪ್ರತಿಬಂಧಕವನ್ನು ತೆಗೆಯಲಾಗುವುದೆಂದೂ, ಈ ಬಗ್ಗೆ ಸರ್ಕಾರದ ಪ್ರಕಟಣೆ ಶೀಘ್ರದಲ್ಲಿಯೇ ಹೊರಡ ಬಹುದೆಂದೂ ಹೇಳಲಾಗಿದೆ.

ಉತ್ಸವ

[illegible]

ಕಾಂಗ್ರೆಸ್ ಕಾರ್ಯಕಾರಿ ಸಭೆ

[illegible]

ಜಪಾನರ ಬಂಧನಕ್ಕೆ ಅಮೆರಿಕನ್ ಬೆಂಬಲ

[illegible]

೫ ವರ್ಷಗಳಲ್ಲಿ ಭಾರತ ಸ್ವತಂತ್ರ

ಬ್ರಿಟಿಷ್ ಸರ್ಕಾರದ ಭಾರತಕ್ಕೆ [illegible]

ವಿದ್ಯಾರ್ಥಿಗಳು [illegible] ಕಟ್ಟಿದರು

ಚಿತ್ರದುರ್ಗ ೧೫

[illegible]

LATEST NEWS

[illegible]

[illegible]

ಪುಸ್ತಕ ವಿನಿಯೋಗ

ಮೈಸೂರು ೧೫

[illegible]

[illegible] ಪಂದ್ಯ

[illegible]

ದೇವೀ ಉತ್ಸವ

[illegible]

ಮೈಸೂರಿನಲ್ಲಿ ರುದ್ರಯಾಗ

[illegible]

[illegible] ಯವರ ಗಾಯನ

[illegible]

ಸಾಧ್ವಿ

ತಾ॥ ೧೫-೯-೪೫ ಶನಿವಾರ

ಪಂದ್ಯದಲ್ಲಿ ಪಾಲು

ಜೂಜಾಟವೇ ?

ರಾಜಧಾನಿಯ ದೊಡ್ಡಕೆರೆ ಮೈದಾನದಲ್ಲಿ ಈಗ ಹಲವು ದಿನಗಳಿಂದ ಅಖಿಲ ಭಾರತ, ಚೆಂಡಾಟದ ಪಂದ್ಯಗಳು ಬಹಳ ಸ್ವಾರಸ್ಯ ಹಾಗೂ ಉತ್ಸಾಹದಿಂದ ಸಾಗುತ್ತಿವೆ. ಸ್ಥಳ, ಪರಸ್ಥಳಗಳಿಂದ ಬಂದಿರುವ ಕ್ರೀಡಾಭಿಮಾನಿಗಳಿಗೆ ಇದು ಒಳ್ಳೆಯ ಸುಗ್ಗಿ ಸಮಯ ಆನುದಿನವೂ, ವಿಶಾಲವಾತಾವರಣದಿಂದ ಕೂಡಿರುವ ದೊಡ್ಡಕೆರೆ ಮೈದಾನವು ಬಹುಸಂಖ್ಯಾತ ಕ್ರೀಡಾಭಿಮಾನಿಗಳಿಂದ ತುಂಬಿ ನೋಡಲು, ಒಂದು ಸಣ್ಣ ಜಾತ್ರೆಯಂತೆ ಕಂಡು ಬರುವುದು

ಇಂತಹ ಸನ್ನಿವೇಶದಲ್ಲಿ, ಪಂದ್ಯಗಳು ಬಿರುಸಾಗಿ ಸಾಗುತ್ತಿರುವಾಗ, ಅಕ್ಕಗೆ ಬಂದಿರುವ ಪ್ರೇಕ್ಷಕ ವರ್ಗದಲ್ಲಿ ಜೂಜಿನ ಪ್ರಸಂಗವು ತಲೆದೋರಿ ಅನ್ಯಾಯವಾಗಿ ಹಣವು ದುರುಪಯೋಗವಾಗುತ್ತಿದೆಯೆಂದು ತಿಳಿದು ನಾವು ಅತ್ಯಂತ ವಿಷಾದಿಸುತ್ತೇವೆ. ಕುದುರೆ ಪಂದ್ಯಗಳಲ್ಲಿ ಕಾಣಬರುವ ಜೂಜಾಟಗಳು ಫುಟ್‌ಬಾಲ್ ಪಂದ್ಯಗಳಲ್ಲಿಯೂ ಕಾಣಬರಬೇಕೆ ?

ಜನತೆಯ ಕಣ್ಣಿಗೆ ಕಾಣಿಸದೆ ಬೀದಿಯ ಎಲ್ಲಿಯೋ ಮೂಲೆಗಳಲ್ಲಿ ಕೇವಲ ಒಂದೆರಡು ಪ್ರತಿಕಾಸುಗಳಿಂದ ನಡೆಯುವ ಜೂಜಾಟವನ್ನು ಪತ್ತೆಹಚ್ಚಲು ಹೆಣಗುವ ಪೋಲೀಸ್ ಅಧಿಕಾರಿಗಳು, ತಮ್ಮ ಕಣ್ಣು ಮುಂದೆ, ಲೆಕ್ಕವಿಲ್ಲದಷ್ಟು ರೂಪಾಯಿಗಳು ಅನ್ಯಾಯವಾಗಿ ಹಾಳಾಗುತ್ತಿರುವುದನ್ನು ಕಂಡರೂ ಕಾಣದವರಂತೆ ಕಣ್ಣು ಮುಚ್ಚಿಕೊಂಡಿರುವರೆ? ಇದು ನಿಜವಾಗಿಯೂ ಸೋಜಿಗದ ವಿಷಯವೇ ಸರಿ ! ಕೇವಲ ಮಾನಸಿಕ ಹಾಗೂ ದೈಹಿಕ ಆನಂದದ ಸಲುವಾಗಿ ನಡೆಯುವ ಇಂತಹ ಪಂದ್ಯಗಳ ನಡುವೆ ಈ ವಿಷಾದ ವಾತಾವರಣವು ತಲೆದೋರಲು ಅವಕಾಶ ಕೊಡುವುದು ತುಂಬಾ ಅನ್ಯಾಯ.

ಮಾನವ ಪ್ರಾಪಂಚಿಕ ವಿವಿಧ ವಿನೋದಗಳಲ್ಲಿ ಕ್ರೀಡೆಯೂ ಒಂದು ಮಾನವ ದೈಹಿಕ ಬೆಳವಣಿಗೆಗೆ ಕ್ರೀಡೆಯು ಅಗತ್ಯ. ಅದರೆ ಕ್ರೀಡೆಗು ದುರ್ನೀತಿಯ ನೀಡಿಗಳ ಸಂಪರ್ಕವನ್ನು ಹೊಂದಬಾರದು. ಇನ್ನು ಮೇಲಾದರೂ ಅಧಿಕಾರಿಗಳು ಈ ವಿಷಯಕ್ಕೆ ಗಮನಕೊಟ್ಟು ಮುಂದೆ ಇಂತಹ ಅನೀತಿಯ ಪ್ರಸಂಗಗಳಿಗೆ ಎಡೆಗೊಡಬಾರದೆಂದು ಕೋರುತ್ತೇವೆ.

ಚುನಾವಣೆಗಳಲ್ಲಿ ಕಾಂಗ್ರೆಸ್ಸು ಭಾಗವಹಿಸಬಹುದು

ನೆನ್ನೆ ಬೆಳಗ್ಗೆ ಪೂನಾದಲ್ಲಿ ಎರಡು ಘಂಟೆ ಕಾಲ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ಸಭೆ ... ಸಮಿತಿಯ ಪ್ರಾಮುಖ್ಯ ಸದಸ್ಯರೊಬ್ಬರು ಸರಕಾರದ ಪ್ರಜಾ ಸಭೆಗಳ ಗಳನ್ನು ಕುರಿತು ಕಾಂಗ್ರೆಸ್ಸು ಪ್ರತಿಭಟಿಸಲು ಚುನಾವಣೆಯಲ್ಲಿ ಭಾಗವಹಿಸಬಹುದೆಂದು ಹೇಳಿದರೆಂದು ಗೊತ್ತಾಗಿದೆ. ಆದರೆ ಮಹಾತ್ಮ ಗಾಂಧಿ ... ಚುನಾವಣೆಯಲ್ಲಿ ಭಾಗವಹಿಸಬೇಕೆಂದು ತಿಳಿಸಿದರೆಂದು ಹೇಳಲಾಗಿದೆ.

ವಾರ್ತಾ ವಾಹಿನಿ

ಜಪಾನಿನ ಸಮಾಜ ಸುಧಾರಕ ಸಂಘಗಳ ಮುಖಂಡರು ಜಪಾನು ಮುಂದೆ ಸಂತಾನ ನಿರೋಧವನ್ನು ಮಾಡಬೇಕೆಂದು ಪ್ರಾರ್ಥಿಸಿದ್ದಾರೆ. ಜಪಾನಿನ ಜನ ಸಂಖ್ಯೆ ಈಗ ೭ ಕೋಟಿ ಇದೆ.

ವೈಸರಾಯರು ಈ ದಿನ ದೆಹಲಿಗೆ ಬರುವರಾಗಿದ್ದಾರೆ. ಭಾರತೀಯ ಸಂಗಡಿಗಳು ತಮ್ಮಲ್ಲಿ ಒಪ್ಪಂದಕ್ಕೆ ಬಂದರೆ ಕ್ರಿಪ್ಸ್ ಸುಧಾರಣೆಗಳನ್ನು ಜಾರಿಗೆ ಕೊಡುವುದಾಗಿ ಹೇಳಲಾಗಿದೆ

ಟೋಕಿಯೊ ನಗರದ ಆಕ್ರಮಣಕ್ಕೆ ಭಾರತೀಯ ಸೇನೆಗಳು ಹೋಗುವುವು

ಭಾರತ-ಬರ್ಮಾ ಪ್ರದೇಶದಲ್ಲಿದ್ದ ಅಮೆರಿಕ ಸೇನೆಗಳು ಸ್ವದೇಶಕ್ಕೆ ತೆರಳಲು ಉದ್ಯುಕ್ತವಾಗಿವೆ.

ನಾಜಿಗಳು ನಿಗದಿಮಾಡಿದ್ದ ಪಂಚನಾರೀತಿಯು ಸ್ಪೇನಿನಲ್ಲಿ ರದ್ದುಗೊಳಿಸಲ್ಪಟ್ಟಿದೆ.

ಜರ್ಮನರು ರಷ್ಯದಲ್ಲಿ ೭೦ ಸಾವಿರ ಹಳ್ಳಿಗಳನ್ನೂ, ೩ ಸಾವಿರ ಪಟ್ಟಣಗಳನ್ನೂ ನಾಶ ಮಾಡಿದ್ದಾರೆ. ೨೫೦ ಲಕ್ಷ ಜನರಿಗೆ ಮನೆಯಿಲ್ಲದಂತಾಗಿದೆ ಹತ್ತು ಲಕ್ಷ ಜನರನ್ನು ರಷ್ಯದಿಂದ ಸಾಗಿಸಿ ಇಲ್ಲವೇ, ಸಾಯಿಸಿದ್ದಾರೆಂದು ಹೇಳಲಾಗಿದೆ

ಮದರಾಸ್ ಸರಕಾರವು ೧,೭೦೦ ನೈಲಿಯ ಜಿಲ್ಲಾಬೋರ್ಡುಗಳ ರಸ್ತೆಗಳನ್ನು ತನ್ನ ಅಧಿಕಾರಕ್ಕೆ ಒಳಪಡಿಸಿಕೊಳ್ಳುವುದಾಗಿ ಹೇಳಲಾಗಿದೆ

ಲಂಡನ್ನಿನಲ್ಲಿರುವ ಮುಸ್ಲಿಂ ಮುಖಂಡ ಎ. ಐ. ಮೂರ್ಹನರವರು ಮಹಾತ್ಮ ಗಾಂಧಿಯವರ ೭೬ ನೇ ವರ್ಷ ವರ್ಧಂತಿಯ ಸಂಬಂಧವಾಗಿ ತಮ್ಮ ಅಭಿನಂದನೆ ಕಳುಹಿಸಿದ್ದಾರೆ.

ಭಾರತವು ಸ್ವತಂತ್ರವಾಗುವ ವರೆಗೂ ಬ್ರಿಟನ್ನಿನ ಕೂಲಿಗಾರರ ಪಕ್ಷವು ವಿಶ್ರಾಂತಿ ಪಡೆಯದೆಂದು ಚುನಾವಣೆಯಲ್ಲಿ ಆಮೆರಿಯವರನ್ನು ಸೋಲಿಸಿದ ಆಲ್ಬರ್ಟ್ ಮಾರ್ಸ‌ರ್ಡ್ರೆನರು ಹೇಳಿರುವರು.

ಮದ್ರಾಸ್ ಪೌರಸಭೆ ಮೇಯರು ನಾಲಿಯಾನ ೩ ಸಾವಿರ ರೂ. ಗಳನ್ನು ದೊಡ್ಡ ಮನುಷ್ಯರ ಸತ್ಕಾರದ ಖರ್ಚು ಮಾಡಬಹುದೆಂದು ಸರಕಾರವು ಒಪ್ಪಿಗೆ ಕೊಟ್ಟಿದೆ ಡಿ॥ ಸತ್ಯಮೂರ್ತಿಯವರು ಈ ಸೂಚನೆಯನ್ನು ಮೊದಲು ಮಾಡಿದ್ದರು.

Edited printed and published by A. R. Nagarajan at the Sadhvi Press D. Subbiah Road, Mysore.

ಪಾಕಿಸ್ಥಾನಕ್ಕೆ ಅರಬ್ಬರ ಬೆಂಬಲವಿಲ್ಲ

ಹಿಂದುಗಳ ಮತ್ತು ಮುಸಲ್ಮಾನರನ್ನು ಪ್ರತಿನಿಧಿಸುವ ಕಾಂಗ್ರೆಸ್ಸನ್ನು ಅರಬ್ಬರು ಒಪ್ಪುವರು. ೧೯೪೩ ರಲ್ಲಿ ಆದ ಆಗಸ್ಟ್ ನಿರ್ಣಯದಲ್ಲಿ ಹತ್ತಿರ ಮತ್ತು ಮಧ್ಯ ಪೂರ್ವದ ನಾಡುಗಳ ಫೆಡರೇಷನ್ ಆಗಬೇಕೆಂಬ ವಿಷಯ ಅಡಕವಾಗಿದ್ದುದನ್ನು ಕಂಡು, ಅರಬ್ ಲೀಗ್ ಸಮಾಧಾನ ಹೊಂದಿದೆ ಗಾಂಧಿ, ನೆಹರೂ, ಅಜಾದರ ಮುಖಂಡತ್ವವು ಅರಬ್ಬರಿಗೆ ಸ್ಫೂರ್ತಿಕೊಟ್ಟಿದೆ ಹೀಗೆಂದು ಬ್ರಿಟನ್ನಿನಲ್ಲಿರುವ ಅರಬ್ ಕಛೇರಿಯ ಮುಖಂಡರು ತಿಳಿಸಿದ್ದಾರೆ. ಪಾಕಿಸ್ತಾನಕ್ಕಾಗಲಿ, ಇಸ್ಲಾಂ ಮತ ರಾಜ್ಯಗಳ ಏಕ್ಯತೆಗಾಗಿಯಾಗಲಿ ಅರಬ್ಬರು ಬೆಂಬಲ ಕೊಡುವುದಿಲ್ಲವೆಂದೂ, ಯಾರೋ ಒಬ್ಬರು ಖಾಸಗಿಯಾಗಿ ಬರೆದ ಪತ್ರವನ್ನು ಮುಸ್ಲಿಂ ಲೀಗು ಪಾಕಿಸ್ತಾನಕ್ಕೆ ಅರಬ್ಬರಿಂದ ಬೆಂಬಲ ದೊರೆಯುತ್ತದೆ ಎಂದು ತಿಳಿಸಿಕೊಂಡಿರುವುದು ಅತ್ಯಂತ ವಿಷಾದಕರವೆಂದೂ ಅವರು ತಿಳಿಸಿದ್ದಾರೆ

ಚೋರರ ಮರಣದಲ್ಲಿ ನೆಹರುರವರಿಗೆ ನಂಬಿಕೆಯಿಲ್ಲ

ಇತರ ಅನೇಕರಿಗಿರುವಂತೆ ಚೋಸರು ಸತ್ತರೆಂಬ ವಿಷಯವಾಗಿ ತಮಗೂ ನಂಬಿಕೆಯಿಲ್ಲವೆಂದು ಪಂಡಿತ ನೆಹರೂರವರು ತಿಳಿಸಿದ್ದಾರೆ ಅವರು ಸತ್ತ ಸುದ್ದಿಯ ವಿಷಯವಾಗಿ ತುಂಬಾ ಸಂಕೆ ಬರುವ ವರದಿಗಳು ತನಗೆ ಬಂದಿರುವುದಾಗಿ ಅವರು ತಿಳಿಸಿದ್ದಾರೆ

ಚುನಾವಣೆಯಲ್ಲಿ ಉಪಾಧ್ಯಾಯರಿಗೆ ಭಾಗ ಬೇಕು

ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಇನ್ನಾವ ವಿಧದಲ್ಲಾದರೂ ಭಾಗವಹಿಸಲು ಉಪಾಧ್ಯಾಯರುಗಳಿಗೆ ಅವಕಾಶಬೇಕೆಂದು ಕೋರುವ ನಿರ್ಣಯವು ತಿರುಚನಾಪಳ್ಳಿಯ ಜಿಲ್ಲಾ ಗಿಲ್ಡ್‌ನಲ್ಲಿ ಆಯಿತು.

ಪೋರ್ಚುಗೀಸಿನ ಪೆಸಿಫಿಕ್ ದ್ವೀಪವಾದ ಮಕಾವೊ ಮಾತ್ರ ಪೆಸಿಫಿಕ್ ಯುದ್ಧದಲ್ಲಿ ಸೇರಿರಲಿಲ್ಲವೆಂದು ತಿಳಿಸಲಾಗಿದೆ.

ಆಸ್ಟ್ರೇಲಿಯಾಕ್ಕೆ ಮತ್ತ ಹತ್ತೋಟಿ ಸಮಿತಿ ಏರ್ಪಾಡಾಗಿದೆ.

ಸಿಂಗಪೂರದಲ್ಲಿ ಸತ್ತಕ್ಕೆ ದುಃಖಪಿಲ್ಲವೆ, ಜಪಾನರ ಶರಣಾಗತಿಯಾಗುವುದು.

ಬ್ರಿಟನ್ನಿನಲ್ಲಿ ಸೇರಿರುವ ವಿದೇಶಾಂಗ ಮಂತ್ರಿಗಳ ಸಭೆಯು ೧೧ ದಿನ ನಡೆಯುವುದು.

ವಿರೋಧಿಗೆ ಓಟು ಕೊ... ದಕ್ಕೆ ವಿವಾಹ ವಿಚ್ಛೇ...

ಸಂಜಾಬಿನ ಪ್ರಮುಖ ವ್ಯಕ್ತಿ... ದಕ್ಕೆ ಅಲ್ಲಿನ ಇಬ್ಬರು ಪ್ರಮುಖ... ಭಿಪ್ರಾಯದಿಂದ ತಿಕ್ಕಾಟ ಪಕ್ಷಿ... ಳ ಏರ್ಪಾಡುಗಳು ರದ್ದಾಗುವ ಸಂ... ದಗಿದೆ. ಕೇಂದ್ರ ಸರಕಾರದ ಮ... ಸ್ತ ಸರ್ ಫಿರೋಜ್ ಖಾನ್ ನೂ... ಪಂಜಾಬಿನ ಮುಖ್ಯ ಮಂತ್ರಿ ಬಿ... ಯಾತ್‌ರವರಿಗೂ ರಾಜಕೀಯ... ಪ್ರಾಯ ಬಂದು ಆ ಉಭಯ... ಳಲ್ಲಿನ ಶಾಂತಿಗೆ ಕಲ್ಲು ಬಿದ್ದಿದೆ. ... ಧವಾಗಿ ಒಬ್ಬರು ದೆಹಲಿಗೆ ಹೋ... ಚುನಾವಣೆಯಲ್ಲಿ ತಮ್ಮ ಪಕ್ಷಿ... ಯಬ್ಬರಿಗೆ ಓಟು ಕೊಟ್ಟಿದಕ್ಕಾಗಿ... ವಿಚ್ಛೇದನ ಮಾಡಿದ್ದಾರೆ.

ಅಣು ಬಾಂಬಿನಿಂದ ಪ... ಗಾಜಾಯಿತು

ಅಮೆರಿಕಾದ ನ್ಯೂ ಮೆಕ್ಸಿಕೊ... ದ ಅಣುಬಾಂಬಿನ ಪರೀಕ್ಷೆಯಿಂದ... ದ ಫಲಿತಾಂಶವೆಂದರೆ ಅಲ್ಲಿದ್ದ ಮ... ದಿದ್ದು, ಅದು ಈಗ ಗಾಜಾಗಿ ಪರ... ಯಾಗಿದೆಯೆಂದು ಹೇಳಲಾಗಿದೆ.

ಜಾರ್ಜ ಅಮೆರಿಯು ಬ್ರಿ... ಪ್ರಜೆಯಲ್ಲವೇ?

ಜಾನ್ ಅಮೆರಿ (ಅಮೆರಿ ಮಗ) ಬ್ರಿಟಿಷ್ ಪ್ರಜೆಯಲ್ಲವೆಂದೂ ಸ್ಪೇ... ಡ್ ಪ್ರಜೆಯಾದುದರಿಂದ ಬ್ರಿಟಿಷ್... ರ್ಟುಗಳಲ್ಲಿ ಅವರ ವಿಚಾರಣೆಗೆ ಅವ... ಲ್ಲವೆಂದು ಲಂಡನ್ನಿನ ಕೋರ್ಟಿಗೆ... ವಾದಿಸಲಾಗಿದೆ.

ಆಂಗ್ಲೇಯ ಡಾಕ್ಟರುಗಳು, ವೈದ್ಯ... ತ್ತು ದಕ್ಷಿಣ ಮಹಾರಾಯರುಗಳಿಂದ... ಸ್ತಿ ಪತ್ರಿಕೆಗಳನ್ನು ಮತ್ತು ಮೈಸೂ... ಸರಾ ಮೊದಲಾದ ವಸ್ತು ಪ್ರದರ್ಶ... ಬಿರುದು ಬಿಲ್ಲೆಗಳನ್ನು ಪಡೆದಿರುವ ಡಾ॥ ರೈರವರ

ಗೋನೋಸಿಪ್

ನಂ. ೧ ಮತ್ತು ೨

ಸ್ತ್ರೀ ಮತ್ತು ಪುರುಷರ ಎಲ್ಲಾ... ಧವಾದ ಪ್ರಮೇಹ, ಆರ್ತವ ದೋಷ... ವಣಾತರೋಗಗಳಿಗೂ ಸಿದ್ಧೌಷಧ... ಎಲ್ಲಾ ವಿಧವಾದ ಸಿಫಿಲ್ಸ್, (ಪರಂಗಿ)... ದೇಹಾತಿ, ಶುಕ್ಲ, ರಕ್ತ ಪುಷ್ಟಿಗಳಿಗೆ ಶ್ರೇ... ಷಧಿ (ಎಲ್ಲಾ ಔಷಧ ಷಾಪುಗಳಲ್ಲಿ... ದೊರೆಯುತ್ತದೆ.)

ಸ್ಟಾಕಿಸ್ಟರು, ರಘುಲಾಲ್ ಅಂಡ್... ಮೈಸೂರು

ಸಿಟಿ ಕೋ ಆಪರೇಟಿವ್ ಬ್ಯಾಂಕ್

ಲಿಮಿಟೆಡ್, ಮೈಸೂರು

16-9-45 ರಲ್ಲಿ ನಡೆಯುವ ಡೈರೆ... ಸ್ಥಾನಕ್ಕೆ

ನಂ 31

ಜಿ. ಆರ್. ಶಾಮರಾವ್

ಇವರಿಗೆ ದಯವಿಟ್ಟು ನಿಮ್ಮ ಷೇರ್... ಒಂದು ಓಟನ್ನು ಕೊಡಬೇಕಾಗಿ ಕೋ...

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V O P.

ಚಾಮುಂಡಿ ಬ್ರಾಂಡ್ ವೆಜಿಟೆಬಲ್ ಪ್ರಾಡಕ್ಟ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-6

ಡಿ. ಕೃಷ್ಣಯ್ಯ,

ಲಿಲ್ಲಿ ಇಂಜನಿಯರಿಂಗ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್ — ದೇವರಾಜ ಮಾರ್ಕೆಟ್ : : ಸಕ್ಕರೆ ಮಂಡಿ, ಸಂತೇಪೇಟೆ.

ಫೋ॥ ನಂ 392 ವಂದೇಮಾತರಂ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಭಾನುವಾರ ೧೬—೯—೪೮ [ಸಂಚಿಕೆ ೪೭

ರಷ್ಯದ ಮೇಲೆ — — ಅಮೆರಿಕ ಅಪಾದನೆ

ಸಂಸ್ಕೃತ ಪ್ರೋತ್ಸಾಹಕ್ಕೆ ೧೫೦೦೦ ರೂ. ದಾನ

ಮೈಸೂರು ೧೬

ಕೆಳಗೆ ಕಂಡ ಮಹನೀಯರು ಸಂಸ್ಕೃತ ವಿದ್ಯಾಪ್ರಚಾರಕ್ಕೂ ಪಾರಿತೋಷಕಗಳನ್ನು ಕೊಡುವುದಕ್ಕೂ ಕೆಳಗೆ ಕಂಡಷ್ಟು ಹಣವನ್ನು ದಾನ ಮಾಡಿರುತ್ತಾರೆ- ಶ್ರೀ ಸೇಟ್ ಅಮೃತಲಾಲ್ ಓಝಾ ಸಾಮವೇದಕ್ಕೆ ೫೦೦೦ ರೂ; ರಾಮನ ಅಗ್ರಹಾರದಲ್ಲಿರುವ ರಿಟೈರ್ಡ್ ಪೋಸ್ಟ್ ಮಾಸ್ಟರ್ ಶ್ರೀ ವೆಂಕಟಪ್ಪನವರು ಮತ್ತು ಅವರ ಕುಟುಂಬ ಶ್ರೀಮತಿ ಲಕ್ಷ್ಮಮ್ಮನವರು ೩,೦೦೦ ರೂ- ಸಿಲ್ಕ್ ಫ್ಯಾಕ್ಟರಿಸ್ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಕೃಷ್ಣಸ್ವಾಮಿಯವರು ೨೦೦೦; ಶ್ರೀ ಭಾಗವತ ಸುಬ್ಬರಾಯರು ಶ್ರೀ ವೇದಾಂತ ವಿಚಾರಕ್ಕಾಗಿ ೧೦೦೦ ರೂ.

ಭಾಗವತ ಶ್ರವಣ

ಶ್ರೀರಾಮ ಮಂದಿರದ ಪೌರಾಣಿಕರಾದ ವೆಂಕೋಬಾಚಾರ್ ಕೌಜಗಿಯವರು [illegible] ದಿಂದ ಭಾಗವತ ಪಠನವನ್ನು ಸಪ್ತಾಹ ಕ್ರಮದಲ್ಲಿ ಮಾಡುತ್ತಿದ್ದಾರೆ.. ಇದೇ ಪೌರ್ಣಿಮಾ ರಾತ್ರೆ ನಡೆದ [illegible] ಆಸ್ತಿಕ ಶಿರೋಮಣಿಗಳ [illegible] ಭಗವದನುಗ್ರಹಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥಿಸಲಾಗಿದೆ.

ಗಣೇಶ ಮಂಗಳಾರತಿ

ಮೈಸೂರು ಬ್ಲ್ಯಾಕ್ ಫುಟ್‌ಬಾಲ್ ಕ್ಲಬ್ [illegible] ಬೃಂದಾವನ ಪಾರ್ಕಿನಲ್ಲಿ ಏರ್ಪಡಿಸಿದ್ದ ಗಣಪತಿ ಮಂಗಳಾರತಿ ಸಮಯದಲ್ಲಿ, ನೆನ್ನೆ ಶ್ರೀ॥ ವಲ್ಲಭಿಕೈನ [illegible] ಸಂಗೀತವಾದ ಸಂಗೀತ ನಡೆಯಿತು.

ಉಪಾಧ್ಯಾಯರ ಸಂಘ

ಮೈಸೂರು ನಗರದ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಕಾರ್ಯಕಾರಿ ಸಮಿತಿ ಸಭೆ ನೆನ್ನೆ ಸೇರಿ ಪ್ರಸಕ್ತ [illegible] ಶ್ರೀಗಳಾದ ಎಚ್. ಒಸವರಾಜ್ ಮತ್ತು ವಿದ್ಯಾ ವಿ. ರಾಮು [illegible] ಸಂಘದ ಗೌ॥ ಕಾರ್ಯದರ್ಶಿಗಳನ್ನಾಗಿ ಚುನಾಯಿಸಿತು.

ಕಾನ್‌ಸ್ಟಿಟ್ಯುಯಂಟ್ ಅಸೆಂಬ್ಲಿ

ಸಂಸ್ಥಾನಗಳ ಪ್ರಾತಿನಿಧ್ಯ

[illegible] ಸರಕಾರವು ಭಾರತದ ಬಿಕ್ಕಟ್ಟಿನ [illegible] ಸಂಬಂಧವಾಗಿ ಮೊರಡಿಸಿದ [illegible] ಭಾರತದ ರಾಜ್ಯಶಾಸನಾಂಗ ರಚನೆಯನ್ನು ಮಾಡಲು [illegible] ಸಂಸ್ಥಾನಗಳ ಪ್ರತಿನಿಧಿಗಳೊಂದಿಗೆ ಕಾನ್‌ಸ್ಟಿಟ್ಯುಯಂಟ್ ಅಸೆಂಬ್ಲಿ ವಿಷಯವನ್ನು ಸೇರಿಸಬೇಕೆಂದು [illegible] ಆಯಾ ಪ್ರಾಂತಗಳ ಶಾಸನ ಸಭೆಗಳಿಂದ ಪ್ರತಿ [illegible] ಕ್ಕೆ ಒಬ್ಬ ಮಂದಿ [illegible] ಚುನಾವಣೆ ಮಾಡಲಾಗುವುದು. ಸಂಸ್ಥಾನಗಳು ಜನಸಂಖ್ಯೆಗನುಗುಣವಾಗಿ [illegible] ನೇಮಿಸಬೇಕೆಂದು [illegible]

[illegible] ಬೇಕಾದ ನಾಮ [illegible] ಸರಕಾರ [illegible]

ಮಹೇಂದ್ರ ಪ್ರತಾಪರನ್ನು ಮಿತ್ರರಿಗೆ ಒಪ್ಪಿಸಲಾಗಿದೆ

ಜಪಾನ್ ಸರಕಾರವು ಭಾರತದ ಆಜಾದ್ ಸೇನೆಯ ಅಧ್ಯಕ್ಷರಾಗಿದ್ದ ಮಹೇಂದ್ರ ಪ್ರತಾಪರನ್ನು ಅಮೆರಿಕ ೮ ನೇ ಸೇನೆಗೆ ಒಪ್ಪಿಸಿತು. ಇದಲ್ಲದೆ ಇನ್ನೂ ಆರು ಜನ ಬರ್ಮೀಯರನ್ನೂ, ಜಪಾನರನ್ನೂ ಒಪ್ಪಿಸಿದೆ. ಜಪಾನಿನ ಕೈಗೊಂಬೆಯಾಗಿದ್ದ ಬರ್ಮಾ ಸರಕಾರದ ರಾಯಭಾರಿಯೂ ಈ ತಂಡದಲ್ಲಿ ಇರುವರು.

ಶರತ್ ಬಾಬುಗೆ ಎ.ಐ.ಸಿ.ಸಿ.ಗೆ ಬರಲು ಆಹ್ವಾನ

ಬೊಂಬಾಯಿಯಲ್ಲಿ ಸೇರಲಿರುವ ಎ.ಐ.ಸಿ.ಸಿ. ಸಭೆಗೆ ಶರತ್ ಚಂದ್ರ ಬೋಸರನ್ನು ಆಹ್ವಾನಿಸಲಾಗಿದೆ. ಕಲ್ಕತ್ತಾ ಪೌರಸಭೆಯ ಅವರ, ಕಲ್ಕತ್ತಾಕ್ಕೆ ಹಿಂತಿರುಗಿ ಬಂದಾಗ ಸನ್ಮಾನ ಪತ್ರವನ್ನು ಅರ್ಪಿಸುವುದು.

ಡಾರ್ಡನಲ್ಸ್‌ನಲ್ಲಿ ತುರ್ಕಿ-ರಷ್ಯ ಆಡಳಿತ ಕೂಡದು

ಡಾರ್ಡನಲ್ಸ್ ಜಲಸಂಧಿಯ ಆಡಳಿತದ ಬಗ್ಗೆ ರಷ್ಯಾ ಮತ್ತು ತುರ್ಕಿಗಳು ಜಂಟಿಯಾಗಿ ಆಡಳಿತ ನಡೆಸುವ ವಿಷಯವನ್ನು ತುರ್ಕಿ ಒಪ್ಪದೆಂದು ತಿಳಿಸಿದೆ. ಅವರ ಮಿತ್ರಪಕ್ಷಕ್ಕೆ ಸೇರದವರೆಲ್ಲರ ಸಂಯುಕ್ತ ಆಡಳಿತಕ್ಕೆ ಅದು ಒಪ್ಪುವುದಾಗಿ ಹೇಳಲಾಗಿದೆ.

ಧ್ವಜವನ್ನು ಹಾರಿಸಬಹುದು

ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸದಂತೆ ಮದ್ರಾಸ್ ಸರ್ಕಾರದವರು ಹಾಕಿದ್ದ ಪ್ರತಿಬಂಧಕವನ್ನು ತೆಗೆದುಹಾಕಿದ್ದಾರೆ. ಸ್ಥಳೀಯ ಸಂಸ್ಥೆಗಳ ಕಟ್ಟಡಗಳ ಮೇಲೆ ಧ್ವಜವನ್ನು ಹಾರಿಸುವ [illegible] ನಿಷೇಧಿಸುವ ನಿರ್ಬಂಧವನ್ನು ತೆಗೆದುಹಾಕುವ ವಿಚಾರವು ಸಹ ಪರ್ಯಾಲೋಚನೆಯಾಗುತ್ತಿದೆ.

ಜನರಲ್ ಸುಗಿಯಾಮ ಆತ್ಮಹತ್ಯೆ

ಜನರಲ್ ಟೋಜೋರವರ ಮಂತ್ರಿಮಂಡಲದಲ್ಲಿದ್ದ ಯುದ್ಧಮಂತ್ರಿಯಾಗಿದ್ದ ಜನರಲ್ ಸುಗಿಯಾಮ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೆಹರೂರವರು ಹಿಂತಿರುಗಿಬರುವರು

ಇಂಗ್ಲೆಂಡಿಗೆ ಪ್ರಯಾಣ [illegible] ಸಂಯುಕ್ತ ಸಂಸ್ಥಾನದ [illegible] ನೆಹರೂರವರು [illegible] ವಿಮಾನದಲ್ಲಿ ಹಿಂತಿರುಗಿ ಬರುವರು.

ಚುನಾವಣೆ ಪ್ರಚಾರಕ್ಕೆ ನೆಹರೂರಿಗೆ ವಿಮಾನ

ಕಾಂಗ್ರೆಸ್ಸು ಚುನಾವಣೆಗಳಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಪಂಡಿತ ನೆಹರೂರವರು ಚುನಾವಣೆಯ ಪ್ರಚಾರ ಮಾಡಲು ಬೇರೆ ಕಡೆಗಳಲ್ಲೂ ಸಂಚರಿಸುವರು. ಈ ಸಂಬಂಧವಾಗಿ ಟಾಟಾ ವಿಮಾನ ಕಂಪೆನಿಯು ಅವರ ಉಪಯೋಗಕ್ಕಾಗಿ ವಿಮಾನವೊಂದನ್ನು ಕೊಡಲಿದೆ ಎಂದು ತಿಳಿದು ಬಂದಿದೆ.

ಚಲಂಬಾಳಾರ ಹಾಕಿದವರನ್ನು ಗಲ್ಲಿಗೆ ಏರಿಸಿ

ಪ್ರೇಸಿಡೆಂಟ್ ಆದಂತಹ ಶ್ರೀ ಶರತ್ ಚಂದ್ರಬೋಸರು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಹೇಳಿಕೆಯಲ್ಲಿ ಅಣುಬಾಂಬನ್ನು ಕಂಡುಹಿಡಿದು, ಅದನ್ನು ಮೊದಲು ಉಪಯೋಗಿಸಿದವರನ್ನು ಯುದ್ಧಪಾತಕರೆಂದು ಭಾವಿಸಿ ಅವರನ್ನು ಗಲ್ಲಿಗೆ ಹಾಕಬೇಕೆಂದು ಹೇಳಿದ್ದಾರೆ.

ಸ್ತ್ರೀ ರಾಣಿ ಧರೆಗಿಳಿಯಲು ಸಿದ್ಧಳು

[illegible] ಬ್ಯಾಂಕಿನಿಂದ [illegible] ತೆಗೆದುಕೊಂಡು [illegible] ಸ್ತ್ರೀ ಹಾಗೂ [illegible] ಯುವಕರು, ಒಬ್ಬ ಸ್ತ್ರೀ [illegible] ಇವರುಗಳು [illegible] ಹಣವನ್ನು ದೋಚಿಕೊಂಡು ಹೋದರೆಂದು ವರದಿಯಾಗಿದೆ.

ಸಿಂಗಪುರದಲ್ಲಿ ಜಪಾನ್ ಅಧಿಕಾರಿಯ ಶರಣಾಗತಿ

ಆಸ್ಟ್ರೇಲಿಯಾದ [illegible] ಸಿಂಗಪುರದಲ್ಲಿ ಜಪಾನ್ ಸೇನಾಪತಿ [illegible] ತಮ್ಮ ಖಡ್ಗವನ್ನು ಒಪ್ಪಿಸಿ ಶರಣಾಗಿದರು. [illegible] ಆಸ್ಟ್ರೇಲಿಯಾದ [illegible] ತಮ್ಮ ಖಡ್ಗವನ್ನು ಆಸ್ಟ್ರೇಲಿಯಾ ಪಡೆಗೆ ಒಪ್ಪಿಸಿದರೆಂದು ಹೇಳಲಾಗಿದೆ.

ಮಂಚೂರಿಯಾದಲ್ಲಿ

ಜಪಾನ್-ರಷ್ಯನ್ ಹಸ್ತಾಂತರ

ಮಂಚೂರಿಯಾದಲ್ಲಿರುವ ಜಪಾನರು ರಷ್ಯನ್ನರಿಗೆ [illegible] ರಷ್ಯನ್ ಸೈನ್ಯಕ್ಕೆ ಜಪಾನರ [illegible] ಹಸ್ತಾಂತರ ಮಾಡಲಾಯಿತು.

ರಷ್ಯದ ಮೇಲೆ ಅಮೆರಿಕನ್ನರ ಆರೋಪ

ಅಮೆರಿಕಾದ ಇಬ್ಬರು [illegible] ನಿಧಿಗಳು ರಷ್ಯದ ಮೇಲೆ ತೀವ್ರವಾದ ಆರೋಪವನ್ನು ಮಾಡಿದ್ದಾರೆ. [illegible] ರಾಷ್ಟ್ರಗಳು ರಾಜ್ಯಗಳ [illegible] ನಿಧಿಯನ್ನು ರಷ್ಯವು [illegible] ಸ್ವತನ್ನಾಗಿ ಬಳಸಿಕೊಂಡಿದೆ [illegible] ಯೂರೋಪ್ ರಾಷ್ಟ್ರಗಳಲ್ಲಿ ರಷ್ಯದ ರಾಜ್ಯಪದ್ಧತಿ [illegible] ಪ್ರಯೋಗ [illegible] ಆರೋಪಗಳು ತಿಳಿಸಿದ್ದಾರೆ.

ಆಸ್ಟ್ರಿಯಾ ಎಕ್ಕೆಗ ರಷ್ಯದ ಓಡಾಟ

ಮಹಾಯುದ್ಧ [illegible] ಗ್ಯಾಲರಿಗಳ [illegible] ತೆಗೆದು [illegible] ಸರಕಾರದ ಒಪ್ಪಿಗೆ [illegible] ರಷ್ಯವು ಓಡಾಡುತ್ತಿದೆ. ಈ ವಿಷಯವನ್ನು ಬ್ರಿಟಿಷ್, ಫ್ರೆಂಚ್ ಮತ್ತು ಅಮೆರಿಕಾಗಳ ಮುಂದೆ [illegible] ರಷ್ಯವು ತರಬೇಕೆಂದು ಬ್ರಿಟನ್ನು [illegible] ತಿಳಿಸಿದ ರಷ್ಯವು ಬ್ರಿಟನ್ನಿಗೆ [illegible] ಉತ್ತರವನ್ನು ಕೊಟ್ಟಿಲ್ಲ.

ಪ್ರೊ॥ ಹರೋಲ್ಡ್ ಲಾಸ್ಕಿ-ಡಾ॥ ಒಪ್ಪಂದವಿಲ್ಲ

ಕ್ರಿಪ್ಸ್ [illegible] ಫೋಲೆಂಡಿನ [illegible] ಮಾಡಿಕೊಂಡಿದ್ದ ಒಪ್ಪಂದವನ್ನು [illegible] ಸರಕಾರವು [illegible] ರಿಂದ ಈ ರೀತಿ [illegible] ವಾಗಿದೆ.

ಕೊರಿಯಾ ಗೌ॥ ಜನರಲ್ ಉಚ್ಛಾಟನೆ

ಕೊರಿಯಾ [illegible] ಗವರ್ನರ್ ಜನರಲ್ಲಾಗಿದ್ದ [illegible] ಅವರ ಸ್ಥಾನದಿಂದ ಅಮೆರಿಕನ್ನರು ತೆಗೆದು ಹಾಕಿದ್ದಾರೆ.

ದಕ್ಷಿಣ ಆಫ್ರಿಕಾ ಕಾಂಗ್ರೆಸ್ ಪ್ರತಿಬಂಧಕ ಹೋರಾಟ

[illegible] ದಕ್ಷಿಣ ಆಫ್ರಿಕಾ [illegible] ಪ್ರತಿಬಂಧಕವನ್ನು [illegible] ಪ್ರತಿಬಂಧಕವನ್ನು [illegible]

ಜೇಡಿ ಕೆಲಸಗಾರರ ಮುಷ್ಕರ

[illegible]

[illegible]

[illegible]

ಸಾಧ್ವಿ

ತಾ|| ೧೬-೯-೪೫ ಭಾನುವಾರ

ಸಭೆ ಮೆರವಣಿಗೆಗಳ ಪ್ರತಿಬಂಧಕ ನೀಗಬೇಕು

ಸಂಸ್ಥಾನದಲ್ಲಿ ಸಭೆಗಳನ್ನು ಮೆರವಣಿಗೆಗಳನ್ನು ನಡೆಸಲು ಇರುವ ಅಡ್ಡಿಗಳನ್ನು ತೆಗೆದು ಹಾಕಬೇಕೆಂದು ಸರ್ಕಾರದವರನ್ನು ಕೋರುವ ನಿರ್ಣಯವು ನಿನ್ನೆ ರಾಜಧಾನಿಯಲ್ಲಿ ನಡೆದ ಕಾಂಗ್ರೆಸ್ ಬೆಂಬಲಿಗರ ಸಭೆಯಲ್ಲಿ ಮಾಡಲ್ಪಟ್ಟಿತು. ಇದನ್ನು ನಾವು ಸಂತೋಷವಾಗಿ ಅನುಮೋದಿಸುತ್ತೇವೆ.

ಈ ಅಡ್ಡಿಗಳನ್ನು ಹಾಕಲು ಹಿಂದೆ ಯಾವುದೇ ಕಾರಣಗಳಿದ್ದರೂ, ಅವುಗಳನ್ನು ಇನ್ನು ಮುಂದೆ ಇರಿಸಲು ಯಾವ ಅಗತ್ಯವೂ ಇಲ್ಲ. ಯುದ್ಧ ಸಮಾಪ್ತಿಯಿಂದ ಈಗ ಪ್ರಪಂಚದಲ್ಲಿ ಶಾಂತ ವಾತಾವರಣವುಂಟಾಗುತ್ತಿದೆ. ಜನಾಭಿಪ್ರಾಯವನ್ನು ಶಾಂತವಾಗಿ ಮುಕ್ತವಾಗಿ ಪ್ರಕಟಿಸುವುದರಿಂದ ಯಾವ ವಿಧವಾದ ಶಾಂತಿ ಭಂಗದ ಅವಕಾಶವೂ ಇರುವುದಿಲ್ಲ. ಇದನ್ನರಿತೇ ಭಾರತ ಸರ್ಕಾರದವರು ಬ್ರಿಟಿಷ್ ಇಂಡಿಯಾದಲ್ಲಿ ಎಲ್ಲ ವಿಧವಾದ ಅಡ್ಡಿ ಆತಂಕಗಳನ್ನು ರದ್ದು ಮಾಡಿದ್ದಾರೆ.

ನಮ್ಮ ಸಂಸ್ಥಾನದಲ್ಲಿ ಪ್ರಧಾನ ನಗರಗಳಾದ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಸಭೆಗಳಿಗೂ ಮೆರವಣಿಗೆಗಳಿಗೂ ಪ್ರತಿಬಂಧಕವಿದೆ. ಗ್ರಾಮಕೋಲಿನಲ್ಲಿ ಮೆರವಣಿಗೆ ನಡೆಯುವುದಕ್ಕೆ ನಿರೋಧವಿದೆ. ಈ ಅಡ್ಡಿಗಳನ್ನು ಸರ್ಕಾರದವರು ಕೂಡಲೇ ತೆಗೆದು ಹಾಕಬೇಕೆಂದು ನಾವು ಕೋರುತ್ತೇವೆ.

ಪ್ರತಿಬಂಧಕಗಳನ್ನು ತೆಗೆಯಲು ಪ್ರಕೃತದಲ್ಲಿ ನಡೆಯ ಬೇಕಾಗಿರುವ ಮಹಾತ್ಮರ ಜಯಂತಿ ಸಂದರ್ಭವು ಸೂಕ್ತವಾದ ಕಾರಣವಾಗಿದೆ. ಮಹಾತ್ಮರು ಅಂದರೆ ರಾಷ್ಟ್ರೀಯ ಪ್ರಜ್ಞತೆಗೆ ಪಾತ್ರರಾದ ಮಹಾಪುರುಷರು; ರಾಜಾಧಿರಾಜರುಗಳ ಮತ್ತು ಪ್ರಪಂಚದ ನಾಯಕರುಗಳ ಗೌರವಕ್ಕೆ ಪಾತ್ರರಾದ ರಾಷ್ಟ್ರಪುರುಷರ, ಅವರ ಜಯಂತಿ ಉತ್ಸವವನ್ನು ವೈಭವದಿಂದ ನಡೆಸುವುದು ಪ್ರತಿಯೊಬ್ಬರ ಹಕ್ಕು, ಕರ್ತವ್ಯ. ಅಧಿಕಾರಿಗಳು, ಪಾರ್ಟಿಯವರು ಮತ್ತು ಕೋಮು ಮುಂತಾದ ಭೇದಗಳಿಗೆ ಇದರಲ್ಲಿ ಅವಕಾಶವೇ ಇಲ್ಲ. ಮಹಾತ್ಮರು ಎಲ್ಲ ಭೇದಗಳಿಂದಲೂ ಅತೀತರಾದವರು.

ಮುಂದಿನ ತಿಂಗಳಲ್ಲಿ ನಡೆಯಬೇಕಾದ ಗಾಂಧಿ ಜಯಂತಿ ಉತ್ಸವದ ಅಂಗವಾಗಿ ಮೊದಲನೆಯದಾಗಿ ಸರ್ಕಾರದವರು ಎಲ್ಲಾ ವಿಧವಾದ ಪ್ರತಿಬಂಧಕಗಳನ್ನೂ ರದ್ದುಗೊಳಿಸಿ ಸದರಿ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಲು ಅನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ನಾವು ಮತ್ತೊಮ್ಮೆ ಕೋರುತ್ತೇವೆ.

[illegible]

[illegible]

ಗಾಂಧಿ ಜಯಂತಿ ಏರ್ಪಾಡು

ಮೈಸೂರು ೧೬

ರಾಜಧಾನಿಯಲ್ಲಿ ಬರುವ ೨ ನೇ ತಾರೀ ಖಿನಿಂದ ೮ ನೇ ತಾರೀಖಿನವರೆಗೆ ಗಾಂಧೀ ಜಯಂತಿಯನ್ನು ವಿಜೃಂಭಣೆಯಿಂದ ನಡೆಸುವ ಬಗ್ಗೆ ಏರ್ಪಾಡುಗಳನ್ನು ಮಾಡಲು ನಿನ್ನೆ ರಾತ್ರಿ ಕಾಂಗ್ರೆಸ್ ಕಛೇರಿಯಲ್ಲಿ ಕೆಲ ನಗರದ ಸಭೆ ಸೇರಿತ್ತು. ನಗರದ ನಾನಾ ಭಾಗಗಳಲ್ಲಿ ವಿವಿಧ ಕಾರ್ಯಾಚರಣೆಗಳನ್ನು ನಡೆಸಲು ಏರ್ಪಾಡನ್ನು ಮಾಡಲಾಯಿತು. ಕೈರಾಟೆಯಿಂದ ನೂಲು ತೆಗೆದು ಅದನ್ನು ಮಹಾತ್ಮರಿಗೆ ಅರ್ಪಿಸಬೇಕೆಂದು ಗೊತ್ತಾಯಿತು. ಹರಿಜನ ಕೇರಿಗಳಿಗೆ ಭೇಟಿ, ಒಂದ ಪ್ರಚಾರ, ಹರಿಜನ ದೇವಾಲಯ ಪ್ರವೇಶದ ಬಗ್ಗೆ ತಿಳುವಳಿಕೆ ಮತ್ತು ರಚನಾತ್ಮಕ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಏರ್ಪಾಡುಗಳನ್ನು ಕೈಗೊಳ್ಳಬೇಕೆಂದು ತೀರ್ಮಾನವಾಯಿತು. ಈ ಕಾರ್ಯಕ್ರಮಗಳಿಗಾಗಿ ಉಪಸಮಿತಿಗಳನ್ನು ನೇಮಿಸಲಾಯಿತು.

ಯುದ್ಧವು ಮುಗಿದು ಜಪಾನ್ ಸಂಪೂರ್ಣವಾಗಿ ಶರಣಾಗತವಾಗಿರುವುದಲ್ಲದೆ ನೆರೆಹೊರೆಯ ಪ್ರಾಂತಗಳಲ್ಲಿ ವ್ಯಕ್ತಿಗಳ ಮೇಲೂ ಸಂಸ್ಥೆಗಳ ಮೇಲೂ ಇದ್ದ ಪ್ರತಿಬಂಧಕಗಳೆಲ್ಲವೂ ನಿವಾರಣೆಯಾಗಿರುವುದರಿಂದಲೂ ಸದ್ಯದಲ್ಲಿಯೇ ಜಗದ್ವಂದ್ಯರಾದ ಮಹಾತ್ಮ ಗಾಂಧಿಯವರ ಜಯಂತ್ಯುತ್ಸವವನ್ನು ಸಂಸ್ಥಾನದಲ್ಲೆಲ್ಲಾ ವೈಭವದಿಂದ ಆಚರಿಸಬೇಕಾಗಿರುವುದರಿಂದಲೂ ನಮ್ಮ ಸಂಸ್ಥಾನದಲ್ಲಿ ಸಭೆ, ಮೆರವಣಿಗೆ ಮುಂತಾದುವುಗಳಿಗೆ ಇರತಕ್ಕ ಎಲ್ಲಾ ಅಡ್ಡಿಗಳನ್ನೂ ಕೂಡಲೇ ಸರ್ಕಾರದವರು ರದ್ದು ಪಡಿಸಬೇಕೆಂಬ ನಿರ್ಣಯವನ್ನು ಮಾಡಲಾಯಿತು.

ಕೃಷ್ಣರಾಜೇಂದ್ರ ಸೊಸೈಟಿ

ಈ ತಿಂಗಳು ೨೩ ನೇ ತಾ|| ಸಂಜೆ ೪ ಗಂಟೆಗೆ ಶ್ರೀ ಕೃಷ್ಣರಾಜೇಂದ್ರ ಪರಸ್ಪರ ಸಹಾಯ ಸಂಘದ ವಾರ್ಷಿಕ ಸಭೆಯು ೨ ಧರ್ಮಪ್ರಕಾಶ ಡಿ ಬನುಮಯ್ಯನವರ ಹೈಸ್ಕೂಲಿನಲ್ಲಿ ಸೇರುವುದು

ಜರ್ಮನರೇ ನಷ್ಟ ಕಟ್ಟಿಕೊಡಲಿ

ರಷ್ಯಾದಲ್ಲಿ ಜರ್ಮನ್ ನಾಜಿಗಳು ನಡೆಸಿದ ಅನರ್ಥಕಾರ್ಯಗಳಿಂದ ಉಂಟಾದ ನಷ್ಟವೆಲ್ಲವನ್ನೂ ಜರ್ಮನರೇ ಪುನಃ ಕಟ್ಟಿಕೊಡಬೇಕೆಂದು ಮಾಸ್ಕೋ ರೇಡಿಯೋ ವು ಸೂಚನೆ ಕೊಟ್ಟಿದೆ.

Edited, printed and published by A. R. Nagaraja at the Sadhvi Press D Subbaiah Road, Mysore.

ಕುಲಕರ್ಣಿಯವರಿಗೆ ನಿಧಿ ಸಮರ್ಪಣೆ

ಮೈಸೂರು ೧೬

ಕೆಲವು ದಿನಗಳಿಂದ ರಾಜಧಾನಿಯಲ್ಲಿ ಭರತನಾಟ್ಯಗಳನ್ನು ಪ್ರದರ್ಶಿಸಿ, ಪ್ರಜೆಗಳಿಗೂ, ಕಲಾಪ್ರೇಮಿಗಳಿಗೂ ಆನಂದವನ್ನುಂಟುಮಾಡುವ ಶ್ರೀ ಕುಲಕರ್ಣಿ ಮತ್ತು ಅವರ ಪಾರ್ಟಿಯವರನ್ನು ಗೌರವಿಸುವಸಲುವಾಗಿ ಮೈಸೂರು ಪುರಜನರು ನಿನ್ನೆ ಸಾಯಂಕಾಲ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಸಭೆ ಕೂಡಿಸಿ ಶ್ರೀ ಕುಲಕರ್ಣಿಯವರಿಗೆ ೧೦೦೧ ರೂ. ಗಳ ನಿಧಿಯನ್ನೂ ಭಂಗಾರದ ಹಾರವನ್ನೂ ಅರ್ಪಿಸಿದರು. ಅವರ ಅನುಯಾಯಿಗಳಿಗೆ ಬೆಳ್ಳಿ ಬಟ್ಟಲುಗಳನ್ನು ಕೊಡಲಾಯಿತು. ಈ ಸಂಬಂಧದಲ್ಲಿ ಭರತನಾಟ್ಯ ಪ್ರದರ್ಶನವು ಏರ್ಪಟ್ಟಿತ್ತು, ಪೌರಸಭಾಧ್ಯಕ್ಷ ಶ್ರೀ|| ರಾಮಚಂದ್ರರಾವ್ ಮೊಂಭೋರೆಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಯುತ ಪಿರವನಾಗ ಚೆಟ್ಟಿಯವರು ಶ್ರೀ ಕುಲಕರ್ಣಿಯವರಿಗೆ ಮಾನಪತ್ರವನ್ನು ಒಪ್ಪಿಸಿದರು. ಅಧ್ಯಕ್ಷರು ಮಾತನಾಡುತ್ತಾ, ಶ್ರೀ|| ಕುಲಕರ್ಣಿಯವರು ಅವರ ಬುದ್ಧಿಮದಲ್ಲಿ ಅತಿಶ್ರಯವಾಗಿ ಹಬ್ಬಿನ ಕೀರ್ತಿಗಳಿಸಲೆಂದು ಹಾರೈಸಿದರು. ಪುರಜನರಿಗೆ ಇಂತಹ ಕಲಾಕೋವಿದರನ್ನು ಗೌರವಿಸುವುದಕ್ಕೆ ಅವಕಾಶ ಒದಗಿದುದು ಅವರ ಸುಯೋಗವೆಂದೂ, ಮೈಸೂರು ಜನರೂ ಸಹ ರಸಿಕರಾಗಿರುವ ಕಾರಣ ಹೊರಗಿನಿಂದ ಬಂದವರಲ್ಲಿ ಕಲಾಪ್ರೌಢಿಮೆ ಮಹತ್ತರವಾಗಿ ಕಂಡಲ್ಲಿ, ಅವರನ್ನು ಗೌರವಿಸದೆ ಬಿಡರು ಎಂಬ ಅಂಶವು ನಿರ್ವಿವಾದವಾಗಿದೆ ಎಂದೂ ತಿಳಿಸಿದರು

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲಾ ಇವರಲ್ಲಿ ಕೊಂಡುಕೊಳ್ಳಿ

ರಘುಲಾಲ್ ಅಂಡ್ ಕೊ.,

1748, ಸಯ್ಯಾಜಿರಾವ್ ರೋಡ್, ಮೈಸೂರು ಹಾಲ್ ಮಹಡಿ, ಮೈಸೂರು

ಸ್ಟಾಂಡರ್ಡ್ ಮತ್ತು ಕಾಲರ್ ನೆಟ್ ಬನೀನುಗಳು ಸೇಪರ್ ಬ್ಲೇಡುಗಳು ಬೇಕಾದರೆ

ಕೆ. ಎಂ. ಉತ್ತರ್‌ಕರ್

ಶ್ರೀ ರಾಜಲಕ್ಷ್ಮೀ ಹಾಲ್ ಅಂಡ್ ಟೇಲರಿಂಗ್ ಇನ್ಸ್ಟಿಟ್ಯೂಟ್, ಶ್ರೀರಾಮಪೇಟೆ : : ಮೈಸೂರು

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V O P.

ಚಾಮುಂಡಿ ಬ್ರಾಂಡ್ ವೆಜಿಟಬಲ್ ಪ್ರಾಡಕ್ಟ್ (ವನಸ್ಪತಿ)

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-6

ಬಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್ .—ದೇವರಾಜ ಮಾರ್ಕೆಟ್ : : ಸಕ್ಕರೆ ಮಂಡಿ, ಸಂತೇಪೇಟೆ.

ಅಣುಬಾಂಬು ಹಾ... ಪರಿತಾಪ

ನಾಗಸಾಕಿ ಮೇಲಿನ ಮೇಲೆ ಬಾಂಬನ್ನು ಹಾಕಿದ ಲೆ|| ಚಾರ್ಲ್ಸ ... ತನು ಇನ್ನು ಮುಂದೆ ತಾನು ವಿಮಾನದಲ್ಲಿ ಹಾರುವುದಿಲ್ಲವೆಂದಿದ್ದಾನೆ. ಅಣು ಬಾಂಬಿನ ಸ್ಪರ್ಶ ಆತನು ಎತ್ತನು; ... ಬಾಟ್ಲುಗಳ ಅಥವಾ ಇನ್ನಾ... ಮಾರಾಟಗಾರನಾಗಿ ಜೀವನ ... ನಾಗಿ ನಿರ್ಧರಿಸಿದ್ದಾನೆ ... ನಾಶವನ್ನು ಕುರಿತು ಆತನು ತಾನು ಚಿರಕಾಲ ಜ್ಞಾಪಕದ ... ದುವುದಾಗಿ ತಿಳಿಸಿದ್ದಾನೆ.

ಪ್ರಕಟಣೆ

ರಾಜಧಾನಿಯ ಪ್ರಜೆಗಳಿ... ತಿಳಿಯಪಡಿಸುವುದೇನೆಂದರೆ:

ಈಚೆಗೆ ನಗರದಲ್ಲಿ ಬೀ... ಹಾವಳಿಯು ಜಾಸ್ತಿಯಾಗಿ... ದನ್ನು ತಪ್ಪಿಸಲು ಆರೋಗ್ಯ... ತಕ್ಕ ಕಾರ್ಯಕ್ರಮವನ್ನು ... ತ್ತಾರೆ. ರಾಜಧಾನಿಯ ಬೀದಿ... ದುತ್ತಿರುವ ನಾಯಿಗಳನ್ನು ... ದಿನವೂ ನಾಶಪಡಿಸುತ್ತಿರುವು... ಜನಗಳು ತಮ್ಮ ಸಾಕುವ ... ಬೀದಿಗೆ ಬಿಡದೆ ಮನೆಯಲ್ಲೇ ... ಟಿಕೆಟು ಹಲ್ಲು ಇಲಾಖೆಯ... ವ ಲೈಸೆನ್ಸ್ ಪಡೆದು ನಾಯಿ... ಕಾಲರ್ ಪಟ್ಟಿಯು ಜೊತೆಗೆ ಲೈಸೆನ್ಸ್ ಮತ್ತು ಕಾಲರೂ... ಯಲ್ಲಿ ಅಲೆದಾಡುತ್ತಿರುವ ಎ... ಕನ್ನೂ ನಾಶಮಾಡುವುದು... ನದರಿ ಕೆಲಸಕ್ಕೆ ಉತ್ತೇಜನ ಕ... ದೆ ತಮ್ಮ ಸಾಕು ನಾಯಿಗಳಿಗೆ ... ನನ್ನ ಪಡೆಯಬೇಕಾಗಿ ಕೋ...

(ಸಹಿ)

R. ರಾಮಚಂದ್ರರಾವ್ ...

ಪ್ರೆಸಿಡೆಂಟ್,

ಸಿಟಿ ಮ್ಯುನಿಸಿಪಲ್ ...

ಮೈಸೂ...

ಕಾಫಿಗೆ ತಕ್ಕ ಕಜ...

ನೀವು ಮುದ್ದು ಕೊಟ್ಟೀ ಕ... ದಿನಗಳಲ್ಲಿ ಫಲಾಹಾರಗಳನ್ನು ... ನೀವು ಕೇಕ್ಸ್ ಕೊಟ್ಟ ಮೇಲೆ ... ಸಿಗೆ ತಕ್ಕ ಕಜ್ಜಾಯ ಸಿಕ್ಕಲೆ ... ಮಗೆ ಕೊಡುವ ಫಲಾಹಾರ ... ಕುಚಿಯಾಗಿ ತಯಾರು ... ಕು, ಮಾವೆಬಾಯಿಲೆಯ ... ನಿಮಗೆ ಅವನ್ನು ಪಂಚಭಕ್ಷ್ಯ ... ಮಾಡುವ ಮತ್ತು ನಿಮಗೆ ... ಶ್ರೆಗಳು ರುಚಿಯಾಗಿರಬೇ... ರೇನೇ ನಿಮ್ಮ ಕಾಫಿಗೆ ತಕ್ಕ ... ಕ್ಕವುದೂ ಸಿಕ್ಕದೆ ಹೋದರೆ ... ಯಿಸಾಗುವುದು ಪಟ್ಟಣದ ... ಧಿಯ ಅಧಿಕಾರಿಗಳಿಗೆ ತಿಳಿ... ಹರನಿಸಿ ನಿಮ್ಮ ಕಾಫಿಗೆ ತಕ್ಕ ... ವನ್ನು ಕೊಡಿಸುವರು.

ಪೋ॥ ನಂ ೨೨೨ WEEKLY EDITION ಇಂದಿನ ಪತ್ರಿಕೆ ೮ ಕಾಸು

ಸಂಪುಟ ೧೦] ಸೋಮವಾರ ೧೭—೯—೪೫ [ಸಂಚಿಕೆ ೫

ಇಟಲಿ ಕಾಲೊನಿಗಳು ಅದರ ಕೈ ತಪ್ಪುವುವು

ರಷ್ಯಕ್ಕೆ ಕೆಂಪು ಸಮುದ್ರದ ಮೇಲೆ ಕಣ್ಣು

ಬೃಹದ್ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ರಷ್ಯವು ಕೆಂಪು ಸಮುದ್ರದಲ್ಲಿ ತನಗೆ ಒಂದು ಠಾಣ್ಯ ಬೇಕೆಂದು ಕೇಳುವ ನಾಗಿಯೂ, ಟ್ರಿಪೊಲಿ ನಗರವನ್ನು ಯುಗೊಸ್ಲೇವಿಯಾಕ್ಕೂ ಮತ್ತು ದಕ್ಷಿಣ ಟೈರೊಲನ್ನು ಆಸ್ಟ್ರಿಯಾಕ್ಕೂ ಕೊಡಬೇಕೆಂದು ಕೇಳಿ, ಅದು ಉಳಿದ ವಿದೇಶಾಂಗ ಮಂತ್ರಿಗಳನ್ನು ಕೇಳುವುದಾಗಿ ಹೇಳಲಾಗಿದೆ.

ಆದರೆ ಬ್ರಿಟಿಷ್ ಅಮೇರಿಕಾಗಳು ಈ ಎರಡು ಸೂಚನೆಗಳನ್ನೂ ವಿರೋಧಿಸುವರೆಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ತಿಳಿಸಿದೆ.

ಸರಕಾರದ ಒಪ್ಪಂದಕ್ಕೆ ಭಾರತವು ಬೆಲೆ ಕೊಡದು

ಸಂಯುಕ್ತ ರಾಷ್ಟ್ರಗಳಿಗೆ ಈಗಿನ ಭಾರತ ಸರಕಾರವು ಕೊಟ್ಟಿರುವ ಮಾತನ್ನು ಮತ್ತು ಆ ರಾಷ್ಟ್ರಗಳೊಡನೆ ಮಾಡಿಕೊಂಡಿರುವ ಒಪ್ಪಂದಗಳನ್ನು ಭಾರತವು ತನ್ನ ಹಿತಕ್ಕೆ ವಿರುದ್ಧವಾಗಿದ್ದರೆ ಒಪ್ಪುವುದಿಲ್ಲವೆಂದೂ ಈ ಒಪ್ಪಂದಗಳು ಭಾರತ ಪ್ರಜೆಗಳನ್ನು ಬಂಧಿಸುವುದಿಲ್ಲವೆಂದೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತಿಳಿಸಿದೆ.

ಲಂಚ ವಿರುದ್ಧ ಇಲಾಖೆ ಸ್ಥಾಪನೆಯೇ?

ಫೋನ್ ನಂ 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಬುಧವಾರ ೨೪—೧೦—೪೫ [ಸಂಚಿಕೆ ೭೩

ಡಚ್ಚರ ಸಹಾಯಕ್ಕೆ ಭಾರತ ಸೈನ್ಯವಿಲ್ಲ

ಪ್ರದರ್ಶನದ ಮುಕ್ತಾಯ

ಮೈಸೂರು ೨೩

ಕಳೆದೈದು ದಿನಗಳಿಂದ ಅತಿ ವೈಭವದಿಂದ ನಡೆದ ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭವು ನಿನ್ನೆ ನಡೆದು ಪ್ರದರ್ಶನದಲ್ಲಿ ಉತ್ತಮ ದರ್ಜೆ ವಸ್ತುಗಳಿಗೆ ಬಹುಮಾನಗಳನ್ನು ಸರೀ ಹಂಚಲಾಯಿತು ... ಹಂಚಿದವರು ಅನುಭವದಲ್ಲಿ ಕೈಗಾರಿಕಾ ... ಸ್ತಾರಿಗಳಾದ ಶ್ರೀ ಅಪ್ಪಾದೊರೆ ... ರವರು ವಸ್ತು ಪ್ರದರ್ಶನ ವರದಿಯನ್ನು ಒಪ್ಪಿಸಿದರು. ಶ್ರೀ ಶ್ರೀನಿವಾಸರವರು ಪ್ರದರ್ಶನ ಪ್ರಯೋಗವನ್ನು ಕುರಿತು ಸಣ್ಣ ... ಮಾಡಿ ಸರೀ ಹಂಚುಕೊಟ್ಟೆಯುವ ಬಹುಮಾನ ವಿನಿಯೋಗ ಮಾಡು ... ರಿಸಿ ಕೊಂಡರು. ಸರೀ ಹಂಚು ... ವರು ಬಹುಮಾನಗಳನ್ನು ಹಂಚಿ ... ಈ ಬಾರಿ ದಸರಾ ವಸ್ತು ಪ್ರದರ್ಶನವು ಹಿಂದಿನ ವರುಷದ ರಿಕಾರ್ಡು ... ಭಾಗಗಳಲ್ಲಿಯೂ ಮೀರಿಸಿದೆ ... ತ್ತಾಗಿದೆ. ಮಿ॥ ರಿ. ಲಕ್ಷ್ಮೀಕಾಂತ ... ರವರು ಪ್ರದರ್ಶನ ಬಾಬಿಗೆ ಹೋ ... ೩ ಸಾವಿರ ರೂ.ಗಳಿಗಿಂತ ಹೆ ... ದಾಯಕವಾಗಿ ಬಂದಿದೆ ಎಂದೂ ಗೊ ...

ಸಹಾಯಾರ್ಥ ನಾಟಕ

... ನಾಟಕ ಸಂಘದವರು ಮೈಸೂ ... ಮಲ್ಲಿರುವ ಅರಾಧ್ಯ ವಿದ್ಯಾರ್ಥಿ ... ಕಷ್ಟದ ಸಹಾಯಾರ್ಥವಾಗಿ ... ಪುತ್ರಿಗಳಾದ ಡಾ॥ ರಾಯೋರವ ... ಯಲ್ಲಿ ನಿನ್ನೆ ಸಾಯಂಕಾಲ ಕು ... ಎಂಬ ನಾಟಕವನ್ನು ಪ್ರದರ್ಶಿಸಿ ... ಇದ ಬಂದ ೧೭೦೦ ರೂ. ಗಳ ... ದ್ದಾರೆ.

... ಸಚಿವರ ಪ್ರವಾಸ

... ಸಚಿವರಾದ ಡಾ॥ ರಾಯೋರವ ... ಬರುವ ೨೮ ನೇ ತಾ॥ ನ ವರೆಗೆ ... ಮತ್ತು ಮಂಡ್ಯ ಜಿಲ್ಲೆಗಳಲ್ಲಿ ... ಮಾಡುವರು. ಈ ಪ್ರವಾಸದಲ್ಲಿ ... ಪೈನ, ಸಂಜನಗೂಡು, ಕೃಷ್ಣರಾ ... ಈ ಸ್ಥಳಗಳಿಗೆ ಭೇಟಿ ಕೊಡುವ ... ನೇ ತಾ॥ ಬೆಂಗಳೂರಿಗೆ ಪ್ರ ... ಮಾಡುವರು

... ಸಚಿವರು ದೆಹಲಿಗೆ

... ತಿಂಗಳು ೨೯ ಮತ್ತು ೩೦ ... ದೆಹಲಿಯಲ್ಲಿ ನಡೆಯುವ ಲೇಬ ... ರೆನ್ಸಿನಲ್ಲಿ ಮೈಸೂರು ಸರ್ಕಾರದ ... ಭಾಗ ವಹಿಸಲು, ನ್ಯಾಯಾಂಗ ... ಮಿ॥ ಒ. ಎಸ್. ಎ. ಸರೀ ... ಗುವರೆಂದು ಗೊತ್ತಾಗಿದೆ.

... ರಲ್ಲಿ ಸ್ವಾತಂತ್ರ್ಯ

... ತಿಂಗಳು ಕೊಳಗೆ ಸ್ವತಂತ್ರವಾ ... ಸೇಮರು ನಿಶ್ಚಯ ಮಾಡಿಕೊಂ ... ಕಾಂಗ್ರೆಸ್ ಮುಖಂಡರಾದ ... ಖೇರ್ ರವರು ಕೊಲ್ಲಾಪುರ ... ಮಾಡುತ್ತಾ ತಿಳಿಸಿದರು.

... ದ ನಂತರದ ಕಾರ್ಮಿಕ ತಿಳುವಳಿಕೆ

... ನರದ ಭಗತಲಾಲ್ ಎಂಬವ ... ವರ್ಗಗಳ ಹಿಂದೆ ಅಂಗ ಪೆಟ್ಟಿ ... ವೈ ಕಾರ್ಖಾನೆಯಿಂದು ಬಳ್ಳೇ ... ಅದೇ ಸ್ಥಳದ ಇಳಿಸಿದವರ ... ಕೋಲ್ ನಿಂದ ಅಲ್ಲಿಗೆ ... ವೈಲಿ ದೂರ ಮಾತ್ರ ಇದೆ.

ಪ್ರಜಾ ಸಂಜುಂಡರಾಯರ ಸಭಾತ್ಯಾಗ

ಮೈಸೂರು ೨೩

ಪ್ರಜಾಪಕ್ಷದ ಸಮ್ಮೇಳನದ ಭಾಷಣಗಳ ಮೇಲೆ ಚರ್ಚೆಮಾಡಲು ಅವಕಾಶಕೊಡ ಬೇಕೆಂದು ಕೇಳಿ ಶ್ರೀ ಸಾವುಗದ ನಂಜುಂಡ ರಾಯರು ಒಂದು ವಿಶೇಷ ಅಂಕೆಯನ್ನು ದಿವಾನರಿಗೆ ಕಳುಹಿಸಿದ್ದರು. ಬೇರೆ ವಿಷಯ ವು ಸಭೆ ಮುಂದೆ ಇದ್ದುದರಿಂದ ಅದಕ್ಕೆ ಅವಕಾಶಕೊಡಲಾಗುವುದಿಲ್ಲವೆಂದು ದಿವಾ ನರು ತಿಳಿಸಿದರು. ತಮ್ಮ ಪಕ್ಷ ಬಾಧ್ಯತೆಗೆ ರಕ್ಷಣೆ ದೊರೆಯದಿದ್ದರೆ ತಾವು ಬ್ರಿಟಿಷ್ ಸರ್ಕಾರದಲ್ಲಿ ದೂರು ಇಡಬೇಕಾಗುವುದೆಂ ದು ಶ್ರೀ ನಂಜುಂಡರಾಯರು ಹೇಳಿದರು. ಸಭೆಯಲ್ಲಿ ಸ್ವಲ್ಪ ಗಲಭೆಯಾಯಿತು. ಶ್ರೀ ನಂಜುಂಡರಾಯರು ಕುಳಿತುಕೊಳ್ಳಬೇಕೆಂ ದು ದಿವಾನರು ಎಷ್ಟು ಹೇಳಿದರೂ ರಾಯ ರು ಕೇಳಲಿಲ್ಲ. ಇದರ ಮೇಲೆ ಅವರು ತಮ್ಮ ಮಾತುಗಳನ್ನು ವಾಪಸ್ ತೆಗೆದುಕೊಂಡು ಕ್ಷಮಾಪಣೆ ಕೇಳಬೇಕೆಂದು ಸದಸ್ಯರು ಒತ್ತಾಯ ಮಾಡಿದರು. ಆದರೆ ರಾಯರು ಹಾಗೆ ಮಾಡದೆ ಸಭೆಯನ್ನೇ ಬಿಟ್ಟುಹೋ ದರು. ಸದಸ್ಯರ ಅಭಿಪ್ರಾಯದಂತೆ ಈ ವಿಷ ಯವನ್ನು ಹಕ್ಕುಬಾಧ್ಯತೆ ಸಮಿತಿಯ ವಿಮ ರ್ಶೆಗೆ ಹಾಕಲಾಗುವುದೆಂದು ದಿವಾನರು ತಿಳಿಸಿದರು

ಆಗ್ನೇಯ ವಿಶ್ವಾ ದಿನಾಚರಣೆ

ಈ ತಿಂಗಳು ೨೭ ನೇ ತಾ॥ ಹಿಂದೂ ಸ್ಥಾನದಲ್ಲೆಲ್ಲಾ ಆಗ್ನೇಯ ಏಷ್ಯಾ ದಿನಾಚ ರಣೆಯನ್ನು ನಡೆಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರಿಂದ ಮೌಲಾನಾ ಆಜಾದರು ತಿಳಿಸಿ ದ್ದಾರೆ. ಜಾವಾ ಮತ್ತು ಇಂಡೋಚೇನಾ ಗಳ ಸ್ವಾತಂತ್ರ್ಯ ಹೋರಾಟಗಳಿಗೆ ಸಹಾ ನುಭೂತಿ ತೋರಿಸಬೇಕೆಂದು, ಕೋರ್ಟ್ ... ರಿ ಅಲ್ಲಿನ ರಾಷ್ಟ್ರೀಯ ಚಳುವಳಿಯನ್ನು ತುಳಿಯಲು ಭಾರತೀಯ ಸೈನ್ಯವನ್ನು ಕ ಳುಹಿಸಕೂಡದೆಂದೂ ಭಾರತೀಯ ಸೈನಿಕ ರು ಹಾಗೆ ಯುದ್ಧ ಮಾಡಕೂಡದೆಂದೂ ನಿರ್ಣಯ ಮಾಡಬೇಕೆಂದು ತಿಳಿಸಿದ್ದಾರೆ.

ಸ್ಟಾಲಿನ್ ವಿಷಯವಾಗಿ ವದಂತಿ

ಮಾರ್ಷಲ್ ಸ್ಟಾಲಿನರವರು ಸತ್ತರೆಂ ದೂ, ಸಾಯುವ ಸ್ಥಿತಿಯಲ್ಲಿರುವರೆಂದೂ, ತುಂಬಾ ಖಾಯಿಲೆಯಾಗಿರುವರೆಂದೂ ನಾನಾ ವದಂತಿಗಳು ಹರಡಿವೆ. ಆದರೆ ಸಾ ರ್ವಜನಿಕ ಅಧಿಕಾರಿಗಳಿಗಾಗಲಿ, ಸೋವಿ ಯಟ್ ರಾಯಭಾರಿಗಳಿಗಾಗಲಿ ಈ ವಿಚಾ ರ ತಿಳಿಯದು.

ಚಿನ್ನದ ಗಣಿಯಲ್ಲಿ ಅನಾಹುತ

ಸ್ವಂ.ಸು.ಪ್ರೇ] ಬೆಂಗಳೂರು ೨೪

ಕೋಲಾರದ ಚಿನ್ನದ ಗಣಿಗಳಲ್ಲಿ ಒಂ ದಾದ ಉರಿಗಾಂ ಗಣಿಯಲ್ಲಿ ಕಳೆದ ರವಿವಾ ರ ಗಣಿಯೊಳಗಿನ ಬಂಡೆಯು ಸಿಡಿದು ಎಂ ಟು ಜನರು ಬಿದ್ದ ಬಂಡೆಗಳ ಮಧ್ಯೆ ಸಿಕ್ಕಿ ಕೊಂಡರು. ಈ ಪೈಕಿ ೭ ಜನರು ಸತ್ತರು ಒಬ್ಬನನ್ನು ಮಾತ್ರ ರಕ್ಷಿಸಲಾಯಿತು. ಗ ಣಿಗಳ ಚೀಫ್ ಇನ್ಸ್ಪೆಕ್ಟರಾದ ಶ್ರೀ ಕೆ ದೊರಸ್ವಾಮಿ ಅಯ್ಯರ್ ರವರು ಸ್ಥಳಕ್ಕೆ ಹೋಗಿ ಪರಿಶೀಲಿಸಿದರು

ಪತಿಲತಾ

ಶ್ರೀಮಾನ್ ವೀರಕೇಸರಿ ಸೀತಾರಾಮ ಶಾಸ್ತ್ರಿಗಳವರಿಂದ ರಚಿತವಾಗಿರುವ "ಪತಿಲತಾ" ಎಂಬ ಗ್ರಂಥದ ೪ ನೇ ಭಾಗ ವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿ ದ್ದೇವೆ. ಹಿಪ್ಪುಸುಲ್ತಾನರ ಚರಿತ್ರೆಯ ... ಸ್ಥಿತಿ ಗತಿಗಳನ್ನು ಚಿತ್ರಿಸುವುದೇ ಈ ಗ್ರಂಥದ ಉದ್ದೇಶ. ಮೊದಲನೆಯ ಭಾಗವು ಬಹ ಳ ಹಿಂದೆಯೇ ಪ್ರಕಟವಾಗಿತ್ತು. ಧನಾ ಭಾವದಿಂದ ಎರಡನೇ ಭಾಗವು ಪ್ರಕಟವಾ ಗಲು ಇಷ್ಟು ತಡವಾಯಿತು. ರಂಗಭೂ ಮಿಗೂ ಗಜೆತವಾದವರೂ ಅನುರೂಪವಾದ ಇಂತಹ ಅಮೂಲ್ಯ ಗ್ರಂಥಗಳಿಗೆ ಈ ಕಾಲ ದಲ್ಲಿಯೂ ಸಾಕಷ್ಟು ಪ್ರೋತ್ಸಾಹ ದೊರೆ ಯದಿರುವುದು ಕನ್ನಡನಾಡಿನ ದೌರ್ಭಾಗ್ಯ. ಈ ಗ್ರಂಥವು ಕನ್ನಡ ಚಿತ್ರ ತಯಾರಿಕೆಗಾ ರರ ಗಮನಕ್ಕೆ ಸಂಪೂರ್ಣ ಅರ್ಹವಾಗಿದೆ. ಈ ಎರಡನೆಯ ಭಾಗದಲ್ಲಿ ಮಂಗಳೂರಿನ ವಿಪ್ಲವದ ವಿಷಯವು ಕೊಡಲ್ಪಟ್ಟಿದೆ. ಮುಂದಿನ ಪ್ರಸ್ತುತದಲ್ಲಿ ಟಿಪ್ಪುವಿನ ಕೊನೆ ಯ ದಿನಗಳು ಬಣ್ಣಿಸಲ್ಪಡುವುವು. ಇದರ ಬೆಲೆ ೨-೮-೦ ರೂ. ಬೆಂಗಳೂರಿನ ವೀರ ಕೇಸರಿ ಪ್ರಕಟನಾಲಯದಲ್ಲಿ ದೊರೆಯು ವುದು. ಕನ್ನಡಿಗರೆಲ್ಲರೂ ಈ ಸ್ಫೂರ್ತಿದಾ ಯಕ ಪುಸ್ತಕವನ್ನು ಓದಿ ಪ್ರಯೋಜನ ಹೊಂದಬೇಕೆಂದು ನಾವು ಆಶಿಸುತ್ತೇವೆ

ನಾಯಿಗಳ ಹಾವಳಿ

ನಂಜನಗೂಡಿನಲ್ಲಿ ನಾಯಿಗಳ ಹಾವಳಿ ಅತಿಶಯವಾಗಿದೆ. ರಾತ್ರಿಯ ವೇಳೆ ಹೊತ್ತಿಗೆ ಹೊಂದರೆ ಹುಚ್ಚುನಾಯಿಗಳು, ಕಜ್ಜಿನಾಯಿಗಳು, ಮತ್ತು ... ಬೀದಿ ನಾಯಿಗಳು ... ವಾಗಿ ... ಹಿಂಬಾಲಿಸಿ ಕಚ್ಚುತ್ತವೆ ... ಹೊರಡಲು ಕೂಡ ... ಸ್ಥಿತಿ ಎದುರಾಗಿದೆ. ... ಜನರು ... ಮುನಿಸಿಪಾಲಿಟಿ ... ದರು ಬಯಸಿದ್ದಾರೆ

ಬೈತ್ರ್ಯೆ ದರ ಕಡಿಮೆ ಯಾಗುವುದೇ ?

ಭಾರತ ಸರಕಾರವು ಕೈಗಾರಿಕೆಗಳಲ್ಲಿ ಪ್ರ ಯೋಗ ಮಾಡಲು ಕೊಡಬೇಕಾಗಿರುವ ಹೆಚ್ಚಿನ ದರವನ್ನು ಕಡಿಮೆ ಮಾಡುವ ವಿಷಯವನ್ನು ಶೀಘ್ರದಲ್ಲಿಯೇ ಪರಿಶೀಲಿ ಸುವುದಾಗಿ ಹೇಳಲಾಗಿದೆ.

ಡಚ್ಚರ ಸಹಾಯಕ್ಕೆ ಭಾರತ ಸೈನ್ಯ ಕಳುಹಿಸುವುದಿಲ್ಲ

ಇಂಡೋನೇಷಿಯಾದಲ್ಲಿ ಡಚ್ಚರು ತಮ್ಮ ಆಧಿಪತ್ಯವನ್ನು ಪುನಃ ಸ್ಥಾಪಿಸಿಕೊಳ್ಳಲು ಸಹಾಯವಾಗುವಂತೆ ಭಾರತ ಸೈನ್ಯಗಳ ನ್ನು ಕಳುಹಿಸಲು ಭಾರತ ಸರ್ಕಾರವು ನಿ ರಾಕರಿಸುವುದಾಗಿ ತಿಳಿದುಬಂದಿದೆ. ಬ್ರಿಟಿ ಷ್ ಸರಕಾರವು ಈ ಸಹಾಯವನ್ನು ಬೇ ಡಿತ್ತು. ಇನ್ನು ಮುಂದೆ ಬ್ರಿಟಿಷ್ ಸೈನ್ಯ ಗಳು ಮಾತ್ರ ಇಂಡೋನೇಷಿಯಾಕ್ಕೆ ಕಳು ಹಿಸಲ್ಪಡುವುವು.

ಪರ್ಷಿಯಾ ಪ್ರಧಾನಿ ರಾಜೀನಾಮೆ

ಪರ್ಷಿಯಾ ಸರಕಾರದ ಮುಖ್ಯ ಮಂತ್ರಿ ಮುಸೀ ಸಾದರ್ ರವರು ರಾಜೀನಾಮೆಯ ತ್ತಿರುವರು. ಹೊಸ ಸರಕಾರ ಬರುವವರೆಗೆ ಅವರೇ ಅಧಿಕಾರದಲ್ಲಿರುವರು. ಇರಾಣಿನಿಂದ ರಷ್ಯಾ ಮತ್ತು ಬ್ರಿಟಿಷ್ ಸೇನೆಗಳು ಮುಂ ದಿನ ಮಾರ್ಚಿ ೨ ನೇ ತಾರೀಖಿನೊಳಗೆ ಹೊರಡುವುವು.

ಜಪಾನ್ ಸರಕಾರದ ಮೇಲೆ ಸಾಕ್ಷ್ಯ ಹೇಳಲು ಜಪಾನರಿಗೆ ಆಹ್ವಾನ

ಭಾರತದ "ಸ್ಟೇಟ್ಸ್‌ಮನ್" ಪತ್ರಿಕೆಯ ಮುಖಂಡರ ವಿಚಾರಣೆಯು ದೆಹಲಿಯಲ್ಲಿ ನ ಡೆಯುವ ಸಂದರ್ಭದಲ್ಲಿ ಸಾಕ್ಷ್ಯ ಹೇಳಲು ಜಪಾನಿನ ಮಾಜಿ ವಿದೇಶಾಂಗ ಮಂತ್ರಿ ಶಿಗೆಮಿಟ್ಸುರವರಿಗೆ ಭಾರತದಲ್ಲಿರುವ ಅಧಿ ಕಾರಿಗಳು ಆಹ್ವಾನವಿತ್ತಿದ್ದಾರೆ. ಅವರು ಅನಾರೋಗ್ಯ ನಿಮಿತ್ತ ಹಾಜರಾಗಲು ಸಾ ಧ್ಯವಿಲ್ಲದಿದ್ದುದರಿಂದ, ಆ ಸರಕಾರಕ್ಕೆ ಜಪಾ ನರ ಪರ ರಾಯಭಾರಿಯಾಗಿದ್ದ ಟೋಜೋ ಜನರಲ್‌ರವರೂ ಇಷ್ಟಪಟ್ಟರೂ ಹಾಜರಾಗುವ ರೆಂದು ಹೇಳಲಾಗಿದೆ.

ಬ್ರಿಟಿಷರಿಗೆ ಸೋಕರ್ನೋರ ಎಚ್ಚರಿಕೆ

ಡಾ॥ ಸೋಕರ್ನೋರವರು ಬ್ರಿಟಿಷ್ ಸ್ವ ನ್ಯಾಧಿಕಾರಿ ಜ॥ ಕ್ರಿಸ್ಟಿಸನ್‌ರಿಗೆ ಪತ್ರವೊಂ ದನ್ನು ಬರೆದು ಬ್ರಿಟಿಷರು ಡಚ್ಚರಿಗೆ ಸಹಾ ಯ ಮಾಡುತ್ತಿರುವುದನ್ನು ಪ್ರತಿಭಟಿಸಿದ್ದಾ ರೆ. ಇಂಡೋನೇಷಿಯಾದ ರಾಜ್ಯದ ಸ್ವವಶವಾಗಿರುವ ಭಾಗಗಳಲ್ಲಿ ಬ್ರಿಟಿಷರು ಪ್ರವೇಶಿಸದಂ ತೆ ಅವರ ಎಚ್ಚರಿಸಿದ್ದಾರೆ.

ಸೋಕರ್ನೋರ ಬಿಡುಗಡೆಯಾಗುವರೇ ?

ಇಂಡೋನೇಷಿಯಾ ರಿಪಬ್ಲಿಕ್ ಸರ್ಕಾ ರದ ಮುಖ್ಯಸ್ಥರಾದ ಡಾ॥ ಸೋಕರ್ನೋ ರವರನ್ನು ಬಂಧಿಸಬೇಕೆಂದು ... ಡಚ್ ... ಇದೆ ... ಇನ್ನೊಂ ದರಲ್ಲಿ ... ದೇಶಗಳ ... ಗೊತ್ತಾಗಿದೆ.

... ಸರ್ಕಾರದ ... ಇಲ್ಲ

ಸಾಧ್ವಿ
ತಾ|| ೨೪-೧೦-೪೫ ಬುಧವಾರ

ಕನ್ನಡದ ದುರ್ದೈವ

ಪ್ರೈಸ್ಕೂಲುಗಳಲ್ಲಿ ಇಂಗ್ಲಿಷ್ ಭಾಷೆಯ ಮೂಲಕ ಪಾಠಗಳನ್ನು ಹೇಳುವ ಪದ್ಧತಿಗಳನ್ನು [illegible] ಸರ್ಕಾರದವರು ಈಚೆಗೆ [illegible] ಪ್ರಜಾಪ್ರತಿನಿಧಿ ಸಭೆಯಲ್ಲಿ ತೀವ್ರವಾದ ಟೀಕೆಗೆ ಗುರಿಯಾಯಿತು. ಕನ್ನಡ ಭಾಷೆಯಲ್ಲಿಯೇ ವಿಶ್ವವಿದ್ಯಾಲಯದ ತರಗತಿಗಳಲ್ಲಿಯೂ ಪಾಠಗಳನ್ನು ನಡೆಸಬೇಕೆಂದು [illegible] ಇದಕ್ಕೆ ವಿರೋಧವಾದ [illegible] ಹೈಸ್ಕೂಲುಗಳಲ್ಲಿ ಕನ್ನಡ ಭಾಷೆಯ ಮೂಲಕ ಪಾಠಗಳನ್ನು ಹೇಳುವ ತರಗತಿಗಳನ್ನು ತೆರೆದರೆ [illegible] ಇಂಗ್ಲಿಷ್ ಭಾಷೆಯ [illegible] ವಾದ [illegible].

[illegible] ಈ ವಿಷಯದಲ್ಲಿ [illegible] ಸರ್ಕಾರದವರು ಕನ್ನಡ [illegible] ತರಗತಿಗಳನ್ನು [illegible] ಅಂಗೀಕರಿಸಿದ್ದಾರೆ. [illegible] ಈ ಬಗ್ಗೆ ಸರ್ಕಾರದವರು [illegible] ಇಂಗ್ಲಿಷ್ [illegible] ಸಂಸ್ಕೃತಿ [illegible] ಇದಕ್ಕೆ [illegible] ವಾದ ಮಾರ್ಗ.

ಕೆಲವು ಮಹನೀಯರು ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಕೇಳಿದರೆಂದರೆ ಕನ್ನಡ ಮಾಧ್ಯಮದ ತರಗತಿಗಳನ್ನು ಕೇಳುತ್ತಿರುವ [illegible] ಪುಸ್ತಕಗಳು [illegible] ಗುಜರಾಥಿ ಭಾಷೆಗಳಲ್ಲಿ ಆದ ಪುಸ್ತಕಗಳು ಕನ್ನಡದಲ್ಲಿ ಆಗಲಾರವೇ?

ಜನಾಭಿಪ್ರಾಯದ [illegible] ಸರ್ಕಾರದವರು [illegible] ಉಚಿತವಲ್ಲ. ಜನಾಭಿಪ್ರಾಯಕ್ಕೆ [illegible] ಈ ವಿಷಯದಲ್ಲಿಯೂ [illegible] ಅಭಿಪ್ರಾಯ [illegible] ಇದರ [illegible]

ಕೇವಲ ನೋಟೀಸು ಬಂದನ

ಸ್ವಂ.ವ.] ಚಿಕ್ಕಮಗಳೂರು ೨೨

ಭಾನುವಾರ ಸಂಜೆಗೆ ಇಲ್ಲಿಯ ಪತ್ರಿಕೋದ್ಯೋಗಿಗಳ ಸಭೆಯು ಶ್ರೀ ಯಾಜಿಗಳವರ ಅಧ್ಯಕ್ಷತೆಯಲ್ಲಿ ನಡೆದು ಮೈಸೂರು ಸರ್ಕಾರವು 'ವಿಶ್ವಕರ್ನಾಟಕ' ಮತ್ತು 'ಜನವಾಣಿ' ಪತ್ರಿಕೆಗಳ ಮೇಲೆ ಕೈಕೊಂಡ ಕಾರ್ಯಕ್ರಮವನ್ನು ಖಂಡಿಸಲಾಯಿತು. ಮತ್ತು ಪತ್ರಿಕೋದ್ಯೋಗದ ಶಿಕ್ಷಣ ತರಗತಿಯನ್ನು ಬರುವ ತಾ|| ೧೪ ರಿಂದ ಈ ಊರಿನಲ್ಲಿ ನಡೆಸಬೇಕೆಂದೂ, ಬರುವ ತಾ|| ೧೮ ಕ್ಕೆ ಸ್ಥಾಯಿ ಸಮಿತಿ ಸಭೆಯನ್ನು ಈ ಊರಿನಲ್ಲೇ ನೆರವೇರಿಸಬೇಕೆಂದೂ ಆಹ್ವಾನಿಸಲಾಯಿತು.

ಈ ಊರಿನಲ್ಲಿ ಹುಚ್ಚು ನಾಯಿಗಳ ಹಾವಳಿ ಹೆಚ್ಚಾದಂತೆ ತೋರುತ್ತದೆ. ನಿನ್ನೆ ದಿನ ಬೀದಿಯಲ್ಲಿ ಆಡ್ಡಾಡುವ ಜನರಿಗೆ ಕಚ್ಚಲು ಪ್ರಯತ್ನಿಸಿದ ಒಂದು ಹುಚ್ಚುನಾಯನ್ನು ಒಬ್ಬ ಪೋಲೀಸಿನವನು ನೋಡಿದಾಗ ಅವನನ್ನು ಕಚ್ಚಲು ನಡೆಯಿತು. ನಿರಾಯುಧನಾದ ಪೋಲೀಸಿನವನು ನಾಯಿಯ ಕತ್ತನ್ನೇ ಹಿಚುಕಿ ಅದನ್ನು ಕೊಂದು ಬಿಟ್ಟಂತೆ ತಿಳಿಯುತ್ತದೆ. ಈ ವಿಚಾರದಲ್ಲಿ ಪುರ ಪ್ರಮುಖರು ಮುಂದಾಲೋಚನೆ ಮಾಡುವುದು ಉತ್ತಮ.

ನಮ್ಮ ಸರ್ಕಾರದವರು ಹೊರಡಿಸಿರುವ ಆಜ್ಞೆಯನ್ನು ರದ್ದುಮಾಡಿ ಪ್ರತಿನಿಧಿ ಸಭೆಯಲ್ಲಿ ವ್ಯಕ್ತವಾಗಿರುವ ಜನಾಭಿಪ್ರಾಯಕ್ಕೆ ಮನ್ನಣೆಯಿತ್ತು ಕನ್ನಡದ ಏಳಿಗೆಯನ್ನು ಬಯಸಲೆಂದು ನಾವು ಹಾರೈಸುತ್ತೇವೆ.

ಆಂಗ್ಲೇಯ ಡಾಕ್ಟರುಗಳು, ವೈದ್ಯ ಮತ್ತು ಹಕೀಂ ಮಹಾಶಯರುಗಳಿಂದ ಪ್ರಶಸ್ತಿ ಪತ್ರಿಕೆಗಳನ್ನೂ ಮತ್ತು ಮೈಸೂರು ದಸರಾ ವಗೈರೆ ವಸ್ತು ಪ್ರದರ್ಶನಗಳಲ್ಲಿ ಬಹುಮಾನಗಳನ್ನೂ ಪಡೆದಿರುವ

ಗೋನೋಸಿನ್

ನಂ. ೧ ಮತ್ತು ೨

ಸ್ತ್ರೀ ಮತ್ತು ಪುರುಷರ ಎಲ್ಲಾ ವಿಧವಾದ ಪ್ರಮೇಹ, ಆರ್ತವ ದೋಷ, ಸರ್ವವಾತರೋಗಗಳಿಗೂ ಸಿದ್ಧೌಷಧ ನಂ ೩ ಎಲ್ಲಾ ವಿಧವಾದ ಸಿಫಿಲಿಸ್ (ಪರಂಗಿ) ಕೊರೆ ಬಾಳೆ, ಕುಷ್ಠ, ರಕ್ತ ಪಿತ್ತಗಳಿಗೆ ಶ್ರೇಷ್ಠೌಷಧಿ. (ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ದೊರೆಯುತ್ತದೆ.)

ಸ್ಟಾಕಿಸ್ಟರು: ರಘುಲಾಲ್ ಅಂಡ್ ಕೋ, ಮೈಸೂರು.

ವಿದ್ಯಾರ್ಥಿಗಳಿಗೆ ರೈಲ್ವೆ ಸೌಕರ್ಯ

ಸ್ವಂ.ವ.] ಶ್ರೀರಂಗಪಟ್ಟಣ ೨೨

ಮಂಡ್ಯ, ಫ್ರೆಂಚ್‌ರಾಕ್ಸ್, ಶ್ರೀರಂಗಪಟ್ಟಣ ಮುಂತಾದ ಕಡೆಗಳಿಂದ ಮೈಸೂರಿಗೆ ಕಾಲೇಜ್, ಹೈಸ್ಕೂಲುಗಳಿಗೆ ವ್ಯಾಸಂಗಕ್ಕೆ ಬರುವ ಸುಮಾರು ೧೫೦ ವಿದ್ಯಾರ್ಥಿಗಳಿಗೆ ಈಗ ಬರುತ್ತಿರುವ ಪಟೆಲ್ ಗಾಡಿಯು ೧೧-೩೦ ಕ್ಕೆ ಬರುವ ಪ್ರಯುಕ್ತ ಸಕಾಲಕ್ಕೆ ಕಾಲೇಜಿಗೆ ಹೋಗಲು ತುಂಬಾ ಅನಾನುಕೂಲವಾಗಿರುತ್ತಿಂದೂ, ಈ ಪಟೆಲ್ ಗಾಡಿಯು ೧೦-೩೦ ಕ್ಕೆ ಬದಲಾಗಿ ೯-೩೦ ಕ್ಕೆ ತಲುಪುವಂತೆ ಮಾಡುವುದು ಸೂಕ್ತವೆಂದೂ ಸೂಚಿಸಿ, ಇಲ್ಲಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಜಯರಾಯರು ರೈಲ್ವೆ ಅಧಿಕಾರಿಗಳಿಗೆ ಒಂದು ಪತ್ರ ಬರೆದಿರುವರು.

ವೆನಿಜ್ಯುಯಲಾದಲ್ಲಿ ದಂಗೆ

ದ. ಅಮೆರಿಕಾದ ರಾಜ್ಯಗಳ ಪೈಕಿ ಒಂದಾದ ವೆನಿಜ್ಯುಯಲಾದ ಯುವಕ ಸೈನಾಧಿಕಾರಿಗಳು ಒಟ್ಟಾಗಿ ದಂಗೆಯೆದ್ದು ಅಲ್ಲಿನ ರಾಷ್ಟ್ರಾಧ್ಯಕ್ಷರನ್ನು ಸೆರೆ ಹಿಡಿದಿರುವುದಾಗಿ ಹೇಳಲಾಗಿದೆ. ಅಧ್ಯಕ್ಷಸ್ಥಾನಕ್ಕೆ ಚುನಾವಣೆಗೆ ನಿಲ್ಲುವ ಇನ್ನೊಬ್ಬರನ್ನು ಹಿಡಿಯಲಾಗಿದೆ. ಈ ಮಧ್ಯೆ ಆ ದೇಶದ ಎರಡು ಪ್ರಾಂತ್ಯಗಳು ಸೇರಿ ಪ್ರತ್ಯೇಕ ರಾಜ್ಯವನ್ನು ಸ್ಥಾಪಿಸಲು ಹೊರಟಿವೆ.

ವರ್ಷಾಂತ್ಯದಲ್ಲಿ ಬರ್ಮಾ ಅಕ್ಕಿ ಭಾರತಕ್ಕೆ

ಈ ವರ್ಷಾಂತ್ಯದೊಳಗೇ ಬರ್ಮಾದಿಂದ ಭಾರತಕ್ಕೆ ಸ್ವಲ್ಪ ಅಕ್ಕಿ ಸರಬರಾಯಿ ಮಾಡಬಹುದೆಂದು ಭಾರತ ಸರಕಾರದ ಆಹಾರ ಖಾತೆ ಸೆಕ್ರೆಟರಿಯವರು ತಿಳಿಸಿದ್ದಾರೆ. ಮೊರಗಡೆಯಿಂದ ೨೫ ಸಾವಿರ ಟನ್ನಿನಷ್ಟು ಗೋಧಿಯು ಈ ವಾರದಲ್ಲಿ ಬಂದಿರುವುದಾಗಿ ಹೇಳಲಾಗಿದೆ.

ಕ್ರಯ 0-2-0 ಕ್ರಯ 0 2-0

ಸ್ಪಿನಾಲ್ ನಂ. 1

ಕಜ್ಜಿ, ತುರಿಗಜ್ಜಿಗಳನ್ನು ಮೂರೇ ದಿನದಲ್ಲಿ ಗುಣಪಡಿಸುತ್ತದೆ.

ನಂ. 2 ವಿಸಲು ಮತ್ತು ವ್ರಣಗಳನ್ನು ಶೀಘ್ರವಾಗಿ ಗುಣಪಡಿಸುವುದು

S.V.R. ಬ್ರದರ್ ಅಂಡ್ ಸ್ಪೆಷ್ಟ್ ಔಷಧಾಲಯ ಚಾಮುಂಡಿಪುರಂ, ಮೈಸೂರು

ಏಜೆಂಟರು:—ಪ|| ರಾಘವೇಂದ್ರಾಚಾರ್ಯ, ಜನರಲ್ ಮರ್ಚೆಂಟ್, ಹಳೇ ಅಗ್ರಹಾರ, ಮೈಸೂರು

ಅರಬ್ ರಾಜ್ಯಗಳ ಮ[illegible]

ಪ್ಯಾಲಸ್ಟೈನಿನಲ್ಲಿ ಬ್ರಿಟನ್ನು ಅ[illegible] ತ್ತಿರುವ ನೀತಿಯನ್ನು ಪ್ರತಿಭಟಿ[illegible] ವೆಂಬರ್ ೨ ರಲ್ಲಿ ಅರಬ್ ರಾಷ್ಟ್ರ[illegible] ಮುಷ್ಕರ ಹೂಡುವುದಾಗಿ ಹೇಳ[illegible] ಪ್ಯಾಲಸ್ಟೈನಿಗೆ ಕಳ್ಳತನದಿಂದ ಬ[illegible] ರು ಬಂದಂತೆಯೇ ಈಗ ಅರಬ್ಬರೂ [illegible] ತ್ತಿರುವುದಾಗಿ ತಿಳಿದುಬಂದಿದೆ.

ಜಾವಾದ ಪರಿಸ್ಥಿತಿ

ಜಾವಾದ ಪರಿಸ್ಥಿತಿ ಉತ್ತಮ[illegible] ತ್ತಿದೆಯೆಂದು ಲಂಡರ್ ಸುದ್ದಿ ತಿ[illegible] ಆ ದ್ವೀಪದ ಶೈತ್ಯೆಯ ನಗರವಾದ [illegible] ರಾಂಗ್‌ನಲ್ಲಿರುವ ರಾಷ್ಟ್ರೀಯ [illegible] ಳನ್ನು ಕೆಳಗಿಳಿಸುವುದಾಗಿಯೂ, [illegible] ಸ್ಟನ್ನರಿಗೆ ಸಹಾಯ ಒದಗ[illegible] ಗಿಯೂ ಒಪ್ಪಿರುವರೆಂದು ಹೇಳ[illegible] ಬ್ಯಾಂಡಿಯಾಂಗ್‌ನಲ್ಲಿದ್ದ ಸ್ಥಳೀಯ [illegible] ರೇಡಿಯೋವು ಕೆಲಸಮಾಡುತ್ತಿಲ್ಲ.

ಸತ್ಯವತಿ ದೇವಿಯವರ [illegible]

ಸ್ವಾಮಿ ಶ್ರದ್ಧಾನಂದರ ಪುತ್ರಿ [illegible] ಸತ್ಯವತಿ ದೇವಿಯವರು ತಮ್ಮ [illegible] ಯಸ್ಸಿನಲ್ಲಿ ಕ್ಷಯರೋಗದಿಂದ ನಿ[illegible] ಹಲಿಯಲ್ಲಿ ನಿಧನರಾದರು. ಇವ[illegible] ಗ್ರೆಸ್ಸಿನ ಚಳುವಳಿ ಸಂಬಂಧವಾಗಿ [illegible] ಲ ಜೈಲುವಾಸ ಅನುಭವಿಸಿದ್ದರು.

ಬೋಸರ ಸೈನ್ಯಕ್ಕೆ ಕೋ[illegible] ತರ ರೂ. ಸಹಾಯ

ಸುಭಾಷ್ ಬೋಸರು ಸ್ಥಾಪಿಸಿ[illegible] ದ್ ಹಿಂದ್ ಸಂಸ್ಥೆ ಮತ್ತು ಭಾರತ[illegible] ಯ ಸೇನೆಗಳಿಗೆ ಮಲಯಾ ಮು[illegible] ದೇಶಗಳಲ್ಲಿ ೮ ಕೋಟಿ ರೂ ಸಹಾ[illegible] ಗಿತ್ತೆಂದು ತಿಳಿದು ಬಂದಿದೆ. ಹಣ [illegible] ವ ಸಂಬಂಧದಲ್ಲಿ ಬೋಸರಿಗೆ [illegible] ದೂಮಾಲೆಯನ್ನು ಹರಾಜು [illegible] ೧ ಲಕ್ಷಕ್ಕೆ ಕೊಳ್ಳಲಾಯಿತು. ಎ[illegible] ೩ ಲಕ್ಷ, ಮೂರನೇ ಸಲ ೩ ಲಕ್ಷ[illegible] ಲ್ಕನೇ ಸಲ ೧೨ ಲಕ್ಷ. ಒಬ್ಬ [illegible] ಮಹನೀಯರು ತಮ್ಮ ಐಶ್ವರ್ಯ [illegible] ಲ್ಲಾ ಕೊಟ್ಟು ಹೂಮಾಲೆಗಳನ್ನು [illegible] ಕೊಂಡರೆಂದು ತಿಳಿದು ಬಂದಿದೆ.

ಲಿಲ್ಲೀ ಬ್ರ್ಯಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. C. P.

ಚಾಮುಂಡಿ ಬ್ರ್ಯಾಂಡ್ ಪನಸ್ಪತಿ

ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ಒಕ್ಕೆ ರೂ. 0-10-0

ಡಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರಾಂಚ್:—ದೇವರಾಜ ಮಾರ್ಕೆಟ್ — ನಜರ್ ಬಾದ್ ಮೊಹಲ್ಲಾ, ಸಂತೆಪೇಟೆ

ಒಪೇರಾ ಟಾಕೀ[illegible]

24—10—45 ರಿ[illegible]

೬ ನೇ ವಾರ

ಶಾಲಿವಾಹ[illegible]

(ತಮಿಳು)

- ರಂಜನ್
- ಟಿ. ಆರ್. ರಾಜಕು[illegible]
- ಕೆ. ಎಲ್. ವಿ. ವಸ[illegible]
- ಕೃಷ್ಣನ್
- ಟಿ. ಎ. [illegible]ಧರಂ

ಪತ್ರ

Morning Shows 10-30 A
from 26-10-45
In Old Californ[illegible]
with
JOHN WYNE

Ed[illegible] printed and publishe[illegible] A. N. [illegible] at the Sadhvi P[illegible]

ಫೋನ್ ನಂ 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು



ಸಂಪುಟ ೪] ಗುರುವಾರ ೨೫—೧೦—೪೫ [ಸಂಚಿಕೆ ೭೪

ಬ್ರಿ॥ ಪ್ರತಿನಿಧಿಯೊಡನೆ ಡಾ॥ ಸೂಕರ್ಣೋ ಭೇಟಿ

...ಮುದವೀಡು ಕೃಷ್ಣರಾಯರ ಆಗಮನ

ಮೈಸೂರು ೨೫

...ನಾಡದ ಸುಪ್ರಸಿದ್ಧ ದೇಶಭಕ್ತರೂ ...ರಾದ ಶ್ರೀ ಮಾನ್ ಮುದವೀಡು ...ರವರು ನೆನ್ನೆ ರಾಜಧಾನಿಗೆ ಆಗಮಿ...ಲ್ಲಿ ಇನ್ನೊ ಒಂದೆರಡು ದಿನ ಇರು...ಮೈಸೂರಿಯ ಕರ್ನಾಟಕ ಸಂಘದ ...ತ್ಸವಕ್ಕೆ ದಯಮಾಡಿದ್ದರು. ...೧೦ ಘಂಟೆಗೆ ರಾಜಧಾನಿಯ ...ಮುಖಂಡರು ಸಂಘಕ್ಕೆ ಭೇಟಿ ...ರು.

ನರ್ಸರಿ ಶಾಲೆ

...ರು ಸರ್ಕಾರದ ವಿದ್ಯಾಭ್ಯಾಸ ...ನಾರೋಗ್ಯ ರಕ್ಷಣೆ ಸಚಿವರಾದ ...ನ ಯಂ. ಡ್ಯಾರ್ಯರವರು, ನೆನ್ನೆ ...ನಗರದ ಆದಿಕರ್ನಾಟಕ ಪುರ...ಕ್ಕ ವರಗತಿಗಳ ಸನ್ಮೋಹನವನ್ನು ...ದ ಸಂದರ್ಭದಲ್ಲಿ, ಶ್ರೀ॥ ಲಿಂಗ...ರು ಧನಸಹಾಯದಿಂದ ಕಟ್ಟಿಸುವ ...ಲೆಯ ಶಿಲಾಸ್ಥಾಪನೆಯನ್ನು ನೆರ...ರು

ಜಗದಂಬಾ ಶಿಶುವಿಹಾರ

...ರು ದಿವಾನ್ಸ್ ರೋಡಿನಲ್ಲಿರುವ ...ದ ಶಿಶುವಿಹಾರದ ವ್ಯವಸ್ಥಾಪಕ ...ಡಿ ಕೃಷ್ಣಮೂರ್ತಿಯವರು ಈ ...ದಸರಾ ವಸ್ತು ಪ್ರದರ್ಶನಾಲಯ ...ವು ಸ್ವತಃ ತಯಾರಿಸಿರುವ ಮಕ್ಕ...ಭ್ಯಾಸದ ಸಲಕರಣೆಗಳನ್ನು ಪ್ರದ...ನಿ ವಸ್ತು ಪ್ರದರ್ಶನಾಲಯದ ...ಮನವರು ಇವೆಲ್ಲದರ ಬಗ್ಗೆ ಮೆಚ್ಚು...ವನ್ನು ಸೂಚಿಸಿ ಒಂದು ಬೆಳ್ಳಿ ಪ...ಕ ಮತ್ತು ಪ್ರಶಸ್ತಿ ಪತ್ರಿಕೆಯ ...ದಯಪಾಲಿಸಿರುತ್ತಾರೆ.

ಸತ್ಕಾರ ಕೂಟ

...ವಸ್ತು ಪ್ರದರ್ಶನ ಸ್ಥಾಲಿನಲ್ಲಿ ...ಸರ್ಕಾರದ ಜೀವವಿಮಾ ಇಲಾ...ಷ್ಯೂರೆನ್ಸ್‌ಗಳು ಪ್ರಚಾರ ಮಾಡಿ ...ಬಿಸಿನೆಸ್ ಮಾಡಲು ಸಹಕರಿಸಿದ್ದ ...ಮೈಸೂರು ಸರ್ಕಲ್ ಅಸಿಸ್ಟೆಂಟ್ ...ರವರು ಇಲಾಖೆಯ ಪರವಾಗಿ, ...ವರ್ ಹೋಟೇಲಿನಲ್ಲಿ ಒಂದು ಸ...ಕೂಟವನ್ನೇರ್ಪಡಿಸಿದ್ದರು ಅ॥ ಸಿ...ನವರು ಸೂಕ್ತ ಭಾಷಣ ಮಾಡಿ ...ರನ್ನು ಅಭಿನಂದಿಸಿದರು.

ಪ್ಲೇಗು ಗಲಾಟೆ

...ರದ ನೊಪಲ್ಲ ಶಾಕರ ಕೇರಿಯ ...ಪ್ಲೇಗ್ ಕೇಸುಗಳೂ, ಮರಣಗ...ರುವುದರಿಂದಲೂ ಜನಗಳೂ ವ್ಯಾಧಿ ...ಚುಚ್ಚುಮದ್ದು ಹಾಕಿಸಲು ಮರೆ ಮಾ...ಹರಿಂದಲೂ ಹೀಗಾಗುವುದರಿಂದ ...ದವರು ಹೆಚ್ಚು ಆವಶ್ಯಕವಾಗು...ದ ವಲ್ಪ ಇಲಾಖೆಯವರು ಈ ವಿ...ಕ್ಷ ತಕ್ಕ ನಿಗಾ ಕೊಟ್ಟು ರೋಗವು ...ದೆ ಮಾಡುವುದು ಸೂಕ್ತವೆಂದು ...ನಿವಾಸಿಗಳೊಬ್ಬರು ಸೂಚಿಸಿರು...

...ನಿವರಿಗೆ ಕಪ್ಪುಬಟ್ಟೆ

...ಭಾರತದ ಬ್ರಾಹ್ಮಣೇತರರು ಸ...ವಲ್ಲಿ ಅಧಃಪತನವಾಗಿರುವುದನ್ನು ...ದ್ರ ಪ್ರದರ್ಶಿಸಲು ಕಪ್ಪುಬಟ್ಟೆ ...ದ್ದನ್ನು ಧರಿಸಬೇಕೆಂದು ಹೊಸ ಚ...ಮಾಡುವುದಾಗಿ ಮದ್ರಾಸಿನ ರಾಮ...ನಾಯಕರ್ ರವರು ತಿಳಿಸಿದ್ದಾರೆ. ...ಸೇವಿನಲ್ಲಿ ವಿವಿಧ ಧ್ಯೇಯಗಳ ವಿ...ಗಳು ಹೊಡೆದಾಡಿದರು. ರಾಜಿಯ್ದ್ರು ...ಸಿಸ್ತು ಕಾಪಾಡಲು ಕರೆಸಬೇ...

ಮೈಸೂರಿನ ಮುನ್ನಡೆ

ಮೈಸೂರಿನ ಮುನ್ನಡೆಯ ಕುರುಹಾಗಿ, ರಾಜಧಾನಿಯ ಮೈಸೂರು ಮುನಿಸಿಪಾಲಿಟಿಯಲ್ಲಿ ಪ್ರಧಾನಾಧಿಕಾರಿಯಾದ ಎಸ್. ನಾಥವರಾಯರು ಮೊನ್ನೆ ಸಂಧ್ಯಾಕಾಲ, ಪ್ರಥಮ ಹಿಂದಿ 'ಜಯಮಾಲ' ಚಿತ್ರ ತಯಾರಿಕೆಯ ಆರಂಭೋತ್ಸವವನ್ನು ನೆರವೇರಿಸಿದರು ಅಂದಿನ ಸಮಾರಂಭಕ್ಕೆ ಅನೇಕ ಮಾನ್ಯ ಮಹನೀಯರು ಆಗಮಿಸಿ. ಮೇಲ್ಕಂಡ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ ಸಿ. ನಾರಾಯಣ ಮತ್ತು ಎಸ್ ವೈ. ರಾಮಶೆಟ್ಟಿಯವರ ಸಾಹಸ ಕಾರ್ಯವನ್ನು ಮೆಚ್ಚಿದರು ಚಲನಚಿತ್ರ ರಂಗದಲ್ಲಿ ಮೈಸೂರು ಮುನ್ನಡೆಯಿಂದು ಸೂಚಿಸಲು, ಮೇಲೆ ತಿಳಿಸಿದ ಸಂಸ್ಥೆಯು ತನ್ನ ಚಟುವಟಿಕೆಯನ್ನು ಆರಂಭಿಸಿದೆ ಇಷ್ಟರಲ್ಲಿ ಅಲ್ಲಿ ಕನ್ನಡ ಚಲನಚಿತ್ರ ತಯಾರಿಕೆಯೂ ಆರಂಭವಾಗುವದೆಂದು ತಿಳಿದುಬಂದಿದೆ

ವಿದ್ಯಾರ್ಥಿಗಳಿಗೆ ತೊಂದರೆ

ಮೈಸೂರಿಗೆ, ಕಾಲೇಜು ಮತ್ತು ಹೈಸ್ಕೂಲುಗಳಿಗೆ ನಂಜನಗೂಡು, ಶ್ರೀರಂಗಪಟ್ಟಣ, ಕಡಕೊಳ ಬದನವಾಳ್, ಕೃಷ್ಣರಾಜನಗರ ಮುಂತಾದ ಕಡೆಗಳಿಂದ ೧೦೦-೧೫೦ ವಿದ್ಯಾರ್ಥಿಗಳು ಪ್ರತಿನಿತ್ಯವೂ ರೈಲಿನಲ್ಲಿ ಬಂದು ಹೋಗುತ್ತಾರೆ ಅಲ್ಲದೆ ಕೋರ್ಟು ಕಚೇರಿಗಳಿಗೆ ಹೋಗುವ ಬಹಳ ಜನರೂ ನಿತ್ಯವೂ ಬಂದು ಹೋಗುತ್ತಾ ಇದ್ದಾರೆ ಈ ಎಲ್ಲಾ ಶಾಲಾ ಕಾಲೇಜುಗಳೂ ಕೋರ್ಟು ಕಚೇರಿಗಳೂ ಮೊದಲಿಗಿಂತ ಒಂದು ಘಂಟೆ ಮುಂಚಿತವಾಗಿ ಆರಂಭವಾಗುತ್ತವೆ. ಆದರೆ ರೈಲು ಮಾತ್ರ ಹಿಂದಿನಂತೆಯೇ ಇರುವುದರಿಂದ ಅನೇಕ ಜನ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ ಎಲ್ಲರೂ ಅರ್ಧ ಮುಕ್ಕಾಲು ಘಂಟೆ ಕಾಲ ಹೊತ್ತಾಗಿ ಶಾಲಾ ಕಾಲೇಜುಗಳಿಗೆ ಹೋಗಬೇಕಾಗಿದೆ. ಎಲ್ಲರಿಗೂ ಗೈರ್ಹಾಜರಿ ಬೀಳುತ್ತದೆ. ಈ ತರದ ತೊಂದರೆಯನ್ನು ರೈಲ್ವೆ ಅಧಿಕಾರಿಗಳು, ಜಾಗ್ರತೆ ಗಮನಕ್ಕೆ ತೆಗೆದುಕೊಂಡು, ರೈಲುಗಳು ಮುಂಚಿತವಾಗಿ ಬರುವಂತೆ ಮಾಡಿ, ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳಿಗೂ ಇನ್ನಿತರರಿಗೂ ಅನುಕೂಲವಾಗುವಂತೆ ಅದನ್ನು ಜಾಗ್ರತೆ ಮಾಡುವರೆಂದು ಕೋರಲಾಗಿದೆ

ಶಿಬಿರಕ್ಕೆ ಧನ ಸಹಾಯ

ಧರ್ಮಪ್ರಕಾಶ ಕೃಷ್ಣಸ್ವಾಮಿ ನಾಯ್ಡುರವರು ಕಸ್ತೂರಿ ಬಾ ಶಿಬಿರಕ್ಕೆ ೫೦೦ ರೂಗಳನ್ನು ಉದಾರವಾಗಿ ದಾನಮಾಡಿದ್ದಾರೆ.

ಬ್ರಿಟಿಷ್ ಪ್ರತಿನಿಧಿಯೊಡನೆ ಸೂಕರ್ಣೋ ಭೇಟಿ

ಜಾವಾದಲ್ಲಿರುವ ಬ್ರಿಟಿಷ್ ಪ್ರತಿನಿಧಿಯೊಡನೆ ಇಂಡೋನೇಷಿಯಾ ರಿಪಬ್ಲಿಕ್ಕಿನ ಅಧ್ಯಕ್ಷರಾದ ಡಾ॥ ಸೂಕರ್ಣೋರವರು ಖಾಸಗೀ ರೀತಿಯಲ್ಲಿ, ಭೇಟಿಮಾಡಿದರು. ಭೇಟಿಯ ಕಾಲದಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಗಳೂ ಮತ್ತು ಡಾ॥ ಸೂಕರ್ಣೋರ ಮಂತ್ರಿ ಮಂಡಲದ ೧೬ ಮಂದಿ ಸದಸ್ಯರೂ ಹಾಜರಿದ್ದರು. ಇದಕ್ಕೆ ಹಿಂದೆ ಬ್ರಿಟಿಷ್ ಸೇನಾನಿ ಜ॥ ಕ್ರಿಸ್ಟಿಸನ್‌ರವರು ಸೂಕರ್ಣೋ ಸರಕಾರದ ವಿದೇಶಾಂಗ ಮಂತ್ರಿಗಳಿಗೆ ಔತಣವೇರ್ಪಡಿಸಿದ್ದರು.

ಅಮೇರಿಕಾದಲ್ಲಿ ಬಲಾತ್ಕಾರದ ಸೈನಿಕ ಶಿಕ್ಷಣ

ಅಧ್ಯಕ್ಷ ಟ್ರೂಮನ್‌ರವರು ಅಮೇರಿಕಾ ಕಾಂಗ್ರೆಸ್ಸಿಗೆ ಸಂದೇಶವನ್ನು ಕಳುಹಿಸಿ, ಆ ದೇಶದಲ್ಲಿ ೨೦ ವರ್ಷ ವಯಸ್ಸಿನೊಳಗಿನ ಎಲ್ಲಾ ಪ್ರತಿಯೊಬ್ಬ ಗಂಡಸೂ ಒಂದು ವರ್ಷ ಕಾಲದ ಬಲಾತ್ಕಾರದ ಸೈನಿಕ ಶಿಕ್ಷಣಕ್ಕೆ ಒಳಪಡುವಂತೆ ಮಾಡಬೇಕೆಂದು ಸೂಚಿಸಿದ್ದಾರೆ.

ಲಕ್ಷ್ಮೀಕಾಂತಂ ಮೊಕದ್ದಮೆ

ಲಕ್ಷ್ಮೀಕಾಂತಂ ಕೊಲೆ ಸಂಬಂಧವಾಗಿ ಶಿಕ್ಷೆಗೆ ಗುರಿಯಾಗಿದ್ದ ಕೃಷ್ಣನ್ ಮತ್ತು ತ್ಯಾಗರಾಜ ಭಾಗವತರ್ ಇವರುಗಳ ಪರವಾಗಿ ಮದ್ರಾಸು ಹೈಕೋರ್ಟಿನಲ್ಲಿ ವಾದ ಪ್ರಾರಂಭವಾಯಿತು. ಮದ್ರಾಸಿನ ಅ॥ ಜನರಲ್‌ರವರು ಪ್ರತಿಯಾಗಿ ವಾದಿಸಿದರು ತೀರ್ಪಿಗೆ ಕಾದಿರಲಾಗಿದೆ ಪಡಿವೇಲು ಪರವಾಗಿ ಅಪೀಲು ವಾದವನ್ನು ಶ್ರೀ ಪಿ ವಿ ಶ್ರೀನಿವಾಸಯ್ಯಂಗಾರ್ಯರು ಪ್ರಾರಂಭಿಸಿದರು

ಮುಸ್ಲಿಂ ಗುಂಪಿನ ಮೇಲೆ ಪೋಲೀಸರ ಗುಂಡು

ಢಾಕ್ಕಾ ನಗರದ ಸುಧರ್ ಘಾಟ್ ಎಂಬ ಭವನದ ಸ್ವಾಧೀನಕ್ಕಾಗಿ ಎರಡು ಮುಸ್ಲಿಂ ಪಂಗಡಗಳಿಗೆ ಹೊಡೆದಾಟವಾದ ಸಂದರ್ಭದಲ್ಲಿ ಪೋಲೀಸರು ಗುಂಡು ಹಾರಿಸಿದರು. ತತ್ಫಲವಾಗಿ ಒಬ್ಬನು ಪೆಟ್ಟುತಿಂದು ಸತ್ತನು ಗಲಭೆಯಲ್ಲಿ ಅನೇಕರಿಗೆ ಗಾಯವಾಗಿದೆ ೫೦ ಜನರ ದಸ್ತಗಿರಿಯಾಗಿದೆ

ಉತ್ತರ ಭಾರತದ ಅಖಿಲ ಕಾಂಗ್ರೆಸ್ ಕಾರ್ಯಕರ್ತರು, ಅಧ್ಯಕ್ಷರಾದ ಜವಹರ್ ಲಾಲ್ ... ... ಎಂಬುವರನ್ನು ಯಾರೋ ಗುಂಡಿನಿಂದ ಹೊಡೆದು ಕೊಂದಿದ್ದಾರೆ.

ಕ್ವಿಸ್ಲಿಂಗರಿಗೆ ಗಲ್ಲು

ನಾರ್ವೆಯ ಜರ್ಮನ್ ಪರ ಇದ್ದ ನಾಜಿ ಪ್ರಧಾನಿ ಮೇಜರ್ ವಿಡ್ಕನ್ ಕ್ವಿಸ್ಲಿಂಗರನ್ನು ಗುಂಡಿನಿಂದ ಹೊಡೆದು ಕೊಲ್ಲಲಾಯಿತು. ಇವರ ಶಿಕ್ಷೆ ನಡೆದ ಕೂಡಲೆ ಹಾಕಿಕೊಂಡಿದ್ದ ಮರಣಾಭಿಕ್ಷೆ ಅರ್ಜಿಯನ್ನು ನಿರಾಕರಿಸಲಾಗಿತ್ತು

ಓಟರ್ ಪಟ್ಟಿ ಸುಧ್ದಿ ...

ಕಣ್ಣಾನೂರಿನ ಪಶ್ಚಿಮ ಇರುವ ... ಎಂಬಲ್ಲಿ ತಾಲ್ಲೂಕು ಕಚೇರಿಯ ಗುಮಾಸ್ತೆಯೊಬ್ಬರು ಶಾಸನ ಸಭೆಯ ಓಟರು ಪಟ್ಟಿಗೆ ಸೇರಿಸಬೇಕೆಂಬ ಪ್ರಾರ್ಥನಾ ಪತ್ರಿಗಳನ್ನೆಲ್ಲವನ್ನು ಸುಟ್ಟರೆಂಬ ಆಪಾದನೆ ಬಂದಾಗ, ತಾಲ್ಲೂಕಿನ ತಹಸೀಲುದಾರರು ಆಕೆಯು ಇರುವ ಸ್ಥಳಕ್ಕೆ ತ್ವರೆಯಾಗಿ ಹೋಗಿ ಸುಟ್ಟ ಪ್ರತಿಗಳನ್ನು ವಶಪಡಿಸಿಕೊಂಡರು. ಅಲ್ಲದೆ ಆಕೆಯ ನೌಕರಿಯನ್ನು ತೆಗೆದುಹಾಕಲಾಯಿತು.

ಲೀಗಿಗೆ ಮುಸ್ಲಿಂ ಕರಿಗಳ ರಾಜೀನಾಮೆ

ಹಿಂದೆ ಕೇಂದ್ರ ಶಾಸನ ಸಭೆ ಸದಸ್ಯರಾಗಿದ್ದ ಸುಪ್ರಸಿದ್ಧ ಮುಸ್ಲಿಂ ಮುಖಂಡರಾದ ಮೌಲಾನಾ ಅಬ್ದುಲ್ ... ಎಂಬುವರು ಮುಸ್ಲಿಂ ಲೀಗಿಗೆ ರಾಜೀನಾಮೆ ಕೊಟ್ಟಿದ್ದಾರೆ. ಮುಸ್ಲಿಂ ಲೀಗು ಅಯೋಗ್ಯ ನಾಯಕರ ಮತ ಸ್ವಾರ್ಥ ಅಧಿಕಾರ ಮತ್ತು ಪ್ರತಿಷ್ಠೆಗೆ ಸಾಧನವಾಗಿ ಪರಿಣಮಿಸಿದೆ ಎಂದು ತಿಳಿಸಿದ್ದಾರೆ

ಮಾನನಷ್ಟಕ್ಕೆ ರುಜುವಾತಿಲ್ಲ

ರಾಜಧಾನಿಯ ನ್ಯಾಯಸ್ಥಾನದ ಸಂಘದ ಸಾರ್ವಜನಿಕ ಸಭೆಯಲ್ಲಿ ಶ್ರೀ ಎ.. ಎಸ್. ನಾರಾಯಣರಾವ್ ಎಂಬ ಸದಸ್ಯರು ಡಾ॥ ಎ. ಸಿ. ರಂಗರಾವ್ ಮತ್ತು ಎಂ. ಎನ್ ನಾಗಪ್ಪನವರುಗಳ ಮೇಲೆ ಹಿಂದೆ ... ಮಾನನಷ್ಟ ... ಕೆಡಿಸುವ ... ತಮಗೆ ಮಾನನಷ್ಟವುಂಟುಮಾಡಿದೆ. ಎಂದ ಡಾ॥ ರಂಗರಾಯರ ಮೇಲೆ ಲಸ್ಸೀ ಮ್ಯಾಜಿಸ್ಟ್ರೇಟರ ಮುಂದೆ ಹೂಡಿದ್ದ ಮೊಕದ್ದಮೆಯಲ್ಲಿ ಮಾನನಷ್ಟಕ್ಕೆ ಸಾಕ್ಷಿವನ್ನು ರುಜುವಾತಿಲ್ಲವೆಂದು ಮೇಲ್ಕಂಡ ನ್ಯಾಯಾಧೀಶರು ಆಪಾದಿತರನ್ನು ಬಿಡುಗಡೆ ಮಾಡಿದ್ದಾರೆ.

ನಸ್ತು ಮಾಡಿದ್ದಕ್ಕೆ ಶಿಕ್ಷೆ

... ನಿವಾಸಿಸ್ವರ ... ಆಗಿದ್ದ ಶ್ರೀ ಎಂ. ಸಿ. ... ಸ್ವಾಮಿಯವರು ... ಕುಟುಂಬ ... ... ದಂಡ ... ... ಲ್ಲಿ ... ... ಆರೋಪಿಸಿ ... ... ಕಡುಬಡತನದಿಂದ ... ... ಮಾಡಿದ್ದಾರೆ

ಸಾಧ್ವಿ

ತಾ|| ೨೫-೧೦-೧೯೪೫ ಗುರುವಾರ

ಕ್ರಿಪ್ಸ್ ನಿಯೋಗದ ಸೂತ್ರ ಒಪ್ಪಬೇಕು

ನವೆಂಬರ್ ೧ನೇ ತಾರೀಖಿನಿಂದ ಎಂ. ಎಸ್. ಎಂ. ರೈಲ್ವೆ ಕಂಪೆನಿಯವರು ಹಿಂದಿನಂತೆ ಪ್ರಯಾಣಿಕರ ಗಾಡಿಗಳನ್ನು ಬಿಡುವುದಾಗಿ ಪ್ರಕಟಿಸಿದ್ದಾರೆ. ಇತರ ಕಂಪೆನಿಗಳವರೂ ಹೀಗೆಯೇ ಏರ್ಪಡಿಸುವ ಸೂಚನೆಯುಂಟು.

ನಮ್ಮ ಸರ್ಕಾರಿ ರೈಲ್ವೆಯವರು ಇನ್ನೂ ಯಾವ ಕಾರ್ಯಕ್ರಮವನ್ನೂ ಕೈಗೊಂಡಂತೆ ಕಾಣುವುದಿಲ್ಲ. ಕಲ್ಲಿದ್ದಲಿನ ಅಭಾವದಿಂದ ಹಿಂದೆ ನಿಲ್ಲಿಸಿದ ಅನೇಕ ಟ್ರೈನುಗಳ ಸಂಚಾರವನ್ನು ಪುನಃ ನಡೆಸಲಾಗಿಲ್ಲ. ಈಗ ಯುದ್ಧ ಮುಗಿದುದರಿಂದ ಕಲ್ಲಿದ್ದಲಿನ ಪರಿಸ್ಥಿತಿ ಉತ್ತಮವಾಗಿ ರೈಲ್ವೆ ಮತ್ತು ಇತರ ಗಿರಣಿ ಕೆಲಸಗಳಿಗೆ ಅದು ಧಾರಾಳವಾಗಿ ಒದಗುತ್ತಿದೆ. ಇತರ ರೈಲುಗಳಿಗೆ ದೊರೆತ ಈ ಸೌಲಭ್ಯವು ನಮ್ಮ ರೈಲ್ವೆಗೂ ದೊರೆಯುವುದರಲ್ಲಿ ಅಭ್ಯಂತರವಿರಲಾರದು.

ಯುದ್ಧ ಕಾಲದಿಂದ ರೈಲ್ವೆ ಪ್ರಯಾಣವು ಅತ್ಯಂತ ಕಷ್ಟತರವಾಗಿತ್ತು. ಈಗ ಅದು ಉತ್ತಮಗೊಳ್ಳುವ ಸ್ಥಿತಿ ಬಂದಿದೆ. ನಮ್ಮ ರೈಲ್ವೆಯವರು ಈ ಬಗ್ಗೆ ಕೂಡಲೇ ಗಮನಕೊಟ್ಟು ಹಿಂದಿನಂತೆ ಪ್ರಯಾಣಿಗರನ್ನು ಏರ್ಪಡಿಸುವುದರಲ್ಲಿ ಸಾಮಾನ್ಯರಿಗೂ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ನಾವು ಕೋರುತ್ತೇವೆ.

ಮುನಿಸಿಪಲ್ ಮುಷ್ಕರ ತಾತ್ಕಾಲಿಕ

ಸ್ವಂ ಸು.] ಚಾಮರಾಜನಗರ ೨೩

ಚಾಗಿ ಕೆಲಸಗಾರರೂ ಮಾಲೀಕರೂ ಕೇಂದ್ರ ನಿಯೋಗದ ಸಲಹೆ ಕೂಲಿ ಹೆಚ್ಚಿಸಲು ಒಪ್ಪಲಾಗಿ ಕೆಲಸಗಾರರು ಕೆಲಸಕ್ಕೆ ಹಿಂದಿರುಗಿದ್ದಾರೆ.

ಉಪಹಾರ

ಹೈಸ್ಕೂಲು ಮ್ಯಾಂಟೀನಿನ ಉಪಯೋಗ ಪಡೆಯಲು ತವಕಪಡುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಕೇಳಲಾಗಿ ಮುನ್ನೂರು ಜನಕ್ಕೆ ಮೀರಿದ ವಿದ್ಯಾರ್ಥಿಗಳ ಪೈಕಿ ಕೇವಲ ಹದಿನಾಲ್ಕು ಅರ್ಜಿಗಳು ಬಂದಿರುವುದಾಗಿ ತಿಳಿಯಬಂದಿದೆ.

ಶಂಕುಸ್ಥಾಪನೆ

ಇಲ್ಲಿನ ಮುನಿಸಿಪಲ್ ಹೈಸ್ಕೂಲ್ ಕಟ್ಟಡದ ಶಂಕುಸ್ಥಾಪನೆಯನ್ನು ಕಟ್ಟಡದ ರೆವೆನ್ಯೂ ಕಮಿಷನರಾದ ಶ್ರೀ ಬಿ. ಪುಟ್ಟರಂಗಯ್ಯನವರು ಇದೇ ೨೭ನೇ ಶನಿವಾರ ಸಂಜೆ ೫ ಗಂಟೆಗೆ ನೆರವೇರಿಸುವರು.

೧೬೦೦ ರೂ. ಗೆ ಮೋಟಾರು

ಇಂಗ್ಲೆಂಡಿನ ಸ್ಟ್ಯಾಂಡರ್ಡ್ ಮೋಟಾರು ಇಂಜಿನಿಯರಿಂಗ್ ಕಂಪೆನಿಯವರು ಭಾರತದಲ್ಲಿ ಮೋಟಾರು ಕಾರ್ಖಾನೆಯೊಂದನ್ನು ಸ್ಥಾಪಿಸುವರು. ಒಂದು ಮೋಟಾರಿನ ೧೬೦೦ ರೂ. ಬೆಲೆಯಾಗುವುದು. ಇದು ಗಂಟೆಗೆ ೬೦ ಮೈಲಿ ವೇಗವುಳ್ಳದ್ದಾಗಿರುವುದು. ಒಂದು ಗ್ಯಾಲನ್ ಪೆಟ್ರೋಲಿಗೆ ೪೦ ಮೈಲಿ ದೂರ ಹೋಗಬಲ್ಲದು.

Printed and Published by ... at the Sadhvi Press, D. Subbaiah Road, Mysore.

ವಾರ್ತಾ ಸಾರಾಂಶ

* ಸರದಾರ್ ಪಟೇಲರ ೭೦ನೇ ವರ್ಷದ ವರ್ಧಂತಿಯು ಈ ತಿಂಗಳು ೩೧ರಲ್ಲಿ ನಡೆಯುವುದು.

* ಕಾನ್ಪುರದ ಯಾತ್ರಿಕರ ಸಭೆಯಲ್ಲಿ ಮುಸ್ಲಿಂ ಲೀಗಿನವರು ಗಲಾಟೆಮಾಡಿದ ಸಂಬಂಧವಾಗಿ ೧೦೬ ಜನ ಯಾತ್ರಿಕರನ್ನು ದಸ್ತಗಿರಿ ಮಾಡಲಾಗಿದೆ.

* ಜಾವಾದಲ್ಲಿ ಯೂರೋಪಿಯನ್ನರನ್ನೂ ಯೂರೇಷ್ಯನರನ್ನೂ, ಅಲ್ಲಿನ ಜನರು ಹಿಡಿಯುತ್ತಿದ್ದಾರೆಂದು ತಿಳಿದುಬಂದಿದೆ.

* ಕಲ್ಕತ್ತಾ ನಗರದಲ್ಲಿಯೆ ಇನ್ನೂ ಹೆಚ್ಚಿನ ಭಾಗದ ಆಹಾರ ರೇಷನಿಂಗ್ ಅನ್ನು ಜಾರಿಗೆ ತರುವ ಯೋಚನೆಯಿದೆ.

* ಚೀನಾದ ಯಾಂಗ್ಟ್ಸಿ ನದಿಯಲ್ಲಿದ್ದ ಅಮೆರಿಕ ಯುದ್ಧನೌಕೆ ಮೇಲೆ ಗುಂಡು ಹಾರಿಸಲಾಯಿತು.

* ಯುದ್ಧ ಪ್ರಾರಂಭವಾದಾಗ ಬರ್ಮಾ ಮುಖ್ಯಮಂತ್ರಿಯಾಗಿದ್ದ ಯು. ಸಾರವರನ್ನು ಶೀಘ್ರದಲ್ಲಿಯೇ ಬಿಡುಗಡೆಮಾಡಲಾಗುವುದೆಂದು ಹೇಳಲಾಗಿದೆ.

* ಚೀನಾದ ಸರಕಾರೀ ಸೈನ್ಯಗಳಿಗೂ ಕಮ್ಯೂನಿಸ್ಟ್ ಸೈನ್ಯಗಳಿಗೂ ಹೋರಾಟವಾಗುತ್ತಿದೆ. ಕಮ್ಯೂನಿಸ್ಟರು ಧಾಳಿಗಾರರೆಂದು ಹೇಳಲಾಗಿದೆ. ಸರಕಾರದ ಕಡೆ ೧ ಲಕ್ಷದ ೪೦ ಸಾವಿರ ಸೈನ್ಯಗಳೂ, ಕಮ್ಯೂನಿಸ್ಟರ ಕಡೆ ೧ ಲಕ್ಷ ಸೈನ್ಯಗಳೂ ಯುದ್ಧಕ್ಕೆ ನಿಂತಿವೆ.

* ಭಾರತ ಸೈನ್ಯಕ್ಕೆ ಇಂಡೋಚೀನಾದ ರಾಷ್ಟ್ರೀಯರು ನೇರವಾದ ಮನವಿಮಾಡಿಕೊಂಡು, ಭಾರತದ ಮತ್ತು ಇಂಡೋಚೀನಾಗಳ ಧ್ಯೇಯವು ಒಂದೇ ಆಗಿ, ಎರಡು ರಾಜ್ಯಗಳೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವುದರಿಂದ ತಮ್ಮ ಮೇಲೆ ಕಾದಾಡಕೂಡದೆಂದು ತಿಳಿಸಿದ್ದಾರೆ.

ಕ್ರಯ 0-2-0 ಕ್ರಯ 0-2-0

ಸ್ಕಿನಾಲ್ ನಂ. 1

ಕಜ್ಜಿ, ತುರಿಗಜ್ಜಿಗಳನ್ನು ಮೂರೇ ದಿನದಲ್ಲಿ ಗುಣಪಡಿಸುತ್ತದೆ.

ನಂ. 2 ವಿಸಲು ಮತ್ತು ವ್ರಣಗಳನ್ನು ಶೀಘ್ರವಾಗಿ ಗುಣಪಡಿಸುವುದು

S.V.R. ಲಿವರ್ ಅಂಡ್ ಸ್ಪ್ಲೀನ್ ಔಷಧಾಲಯ ಚಾಮುಂಡಿಪುರಂ, ಮೈಸೂರು

ಏಜೆಂಟರು:—ಸು|| ರಾಘವೇಂದ್ರಾಚಾರ್ಯ, ಜನರಲ್ ಮರ್ಚೆಂಟ್, ಹಳೇ ಅಗ್ರಹಾರ, ಮೈಸೂರು.

ಆಹಾರ ಸಮಸ್ಯೆ ಮೇಲೆ ವಿಪುಲ ಚರ್ಚೆ

ಮೈಸೂರು ೨೩

ಪ್ರತಿನಿಧಿ ಸಭೆಯು ವಿವಿಧ ಪಕ್ಷದ ನಾಯಕರು ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡಂತೆ, ಆಹಾರ ಸಮಸ್ಯೆ ವಿಚಾರವನ್ನು ಚರ್ಚಿಸಲು ವಿಶೇಷ ಅವಕಾಶ ಒದಗಿತು. ಶ್ರೀ ಭೂಪಾಳಂರವರು ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದರು. ಆಹಾರ ಸಮಸ್ಯೆಯನ್ನು ಶೇಖರಣೆ, ಬೆಲೆ ನಿಗದಿ, ಮತ್ತು ಸರಬರಾಜು, ಎಂದು ಮೂರು ಭಾಗವಾಗಿ ಮಾಡಬಹುದು. ಸರಬರಾಜು ಮಾಡುವುದು ವರ್ತಕರ ಮತ್ತು ಸಹಕಾರ ಸಂಘಗಳ ಕರ್ತವ್ಯ. ಸಕಾಲದಲ್ಲಿ ಮಳೆ ಬೀಳದೆ ಬೆಳೆ ನಷ್ಟವಾಗಿ, ರೈತರಿಗೆ ತೊಂದರೆಯಾಗಿದೆ. ಅಧಿಕಾರ ವೃತ್ತದಲ್ಲಿ ಲಂಚ ರುಷುವತ್ತುಗಳಿಗೆ ಇದು ಅವಕಾಶ ಕೊಟ್ಟಿದೆ. ಕೊಂಡುಕೊಳ್ಳುವ ಬೆಲೆಗೂ ಮಾರುವ ಬೆಲೆಗೂ ಸರ್ಕಾರದವರು ಹೆಚ್ಚು ಅಂತರವನ್ನು ಇಟ್ಟಿದ್ದಾರೆ ಅದನ್ನು ತಗ್ಗಿಸುವುದು ಸಾಧು. ನಮ್ಮ ದೇಶದಲ್ಲಿ ರಾಗಿಯನ್ನು ಬೆಳೆಯಲು ಸಾಕಷ್ಟು ಅವಕಾಶ ಕಲ್ಪಿಸಿಕೊಡಬೇಕು.

ವರ್ತಕರು ಮತ್ತು ಸಹಕಾರ ಸಂಘದವರ ಸಹಾಯ ಪಡೆದು ಸರಬರಾಜು ಉತ್ತಮ ಪಡಿಸುವುದು ಸರ್ಕಾರದ ಕರ್ತವ್ಯ ಎಂದು ಶ್ರೀ ಸಿ. ಸೀತಾರಾಮಯ್ಯನವರು ಹೇಳಿದರು.

ಸಕಾಲದಲ್ಲಿ ಸರ್ಕಾರದವರು ಆಹಾರ ಹತೋಟಿಗೆ ಕೈ ಹಾಕದಿದ್ದಲ್ಲಿ, ಬಂಗಾಳಾ ಪರಿಸ್ಥಿತಿ ಬರುತ್ತಿತ್ತು. ವರ್ತಕರು ದಯಾಸ್ವಭಾವ ಉಳ್ಳವರೆಂದು ಹೇಳಲು ಸಾಧ್ಯವಿಲ್ಲ. ಅಭಾವ ಸೃಷ್ಟಿಯೇ ಅವರಿಗೆ ಮುಖ್ಯ. ಪ್ರಾಣಿಗಳಿಗೆ ಕಿನ್ನ ಆಹಾರದಂತಹ ಆಹಾರ ಸಾಮಗ್ರಿಗಳನ್ನು ಜನರಿಗೆ ಒದಗಿಸಿದ್ದಾರೆ. ಜನರು ತಾಳ್ಮೆಯಿಂದ ಇದನ್ನು ಸಹಿಸಿದ್ದಾರೆ. ನಮ್ಮ ದೇಶವು ವ್ಯವಸಾಯಗಾರರ ಭೂಮಿ. ಹಾಗಿದ್ದರೂ ಸಹ ನಾವು ಇತರ ದೇಶಗಳ ಮೇಲೆ ಆಹಾರ ಸಾಮಗ್ರಿಗಳಿಗಾಗಿ ಅವಲಂಬಿಸಿ ನಿಲ್ಲುವುದು ಶೋಚನೀಯವಾದ ಅಂಶ. ವ್ಯವಸಾಯ ಇಲಾಖೆಯವರು ಕೃಷಿಕರಿಗೆ ಶಕ್ತಿಗಳಿಂದ ಉತ್ತೇಜನ ಕೊಟ್ಟು ಹೆಚ್ಚು ದವಸ ಧಾನ್ಯಗಳನ್ನು ಬೆಳೆಸಲು ಏರ್ಪಾಡು ಮಾಡುವುದು ಅವರ ಕರ್ತವ್ಯವಾಗಿದೆ ಎಂದು ಹೆಚ್. ಸಿದ್ದಯ್ಯನವರು ಹೇಳಿದರು.

ಆಹಾರ ಸಮಸ್ಯೆ ಬಹು ಕಟುತರವಾದ ಸಮಸ್ಯೆ ಆಹಾರ ಅಭಾವ ಎಲ್ಲೆಲ್ಲಿಯೂ ಇದೆ. ಈ ಸ್ಥಿತಿ ೮-೫ ವರ್ಷಗಳ ವರೆಗೂ ಇರುವುದೆಂದು ನನ್ನ ಅಭಿಪ್ರಾಯ. ಪಾಶ್ಚಾತ್ಯ ದೇಶಗಳ ಪದ್ಧತಿಯನ್ನನುಸರಿಸಿ ಆಹಾರ ಸರಬರಾಜನ್ನು ಏಜೆನ್ಸಿಯಿಂದ ಹಂಚುವ ಯತ್ನವನ್ನು ಮಾಡಬೇಕು. ಮಳೆ ಬಾರದೆ ಇರುವುದಕ್ಕೆ ಕಾರಣವೇ ಕಾರಣವೆಂದು ಹೇಳಬೇಕು. ಹೇಗೆಂದರೆ ಕಾಡುಗಳನ್ನೆಲ್ಲಾ ನಾಶ ಮಾಡಿತ್ತು ಹೋದರೆ ಮಳೆ ಬಾರದೇ ಹೋಯಿತು. ಆಹಾರ ಹಂಚಿಕೆ ವಿಚಾರ ಕರವಾಗಿಲ್ಲ. ಅತಿವೃಷ್ಟಿ ಅನಾವೃಷ್ಟಿ ದ ಹಾಗೆ ಇದೇ ಎಂದೂ ಶ್ರೀ ಟಿ. ವಿ. ಸ್ವಾಮಿರವರು ಹೇಳಿದರು.

ಧಾರವಾಡಿಗಳನ್ನು ಭಾರತ ಸರ್ಕಾರದವರು ನಿಗದಿಮಾಡಬಹುದಾದ ಬೆಲೆ ಅನುಸರಿಸಿ ನಿಗದಿ ಮಾಡಬೇಕಾಗಿದೆ. ದೇವಾಸಿಗಳು ಈಗ್ಗಿಂತ ಕಷ್ಟ ಯಾಗ ಭವವೂ ಬರಬಹುದು.

ಆಹಾರ ಸರಬರಾಜು ಯಂತ್ರದಲ್ಲಿ ಕೆಲ ನ್ಯೂನತೆಗಳಿವೆ. ಸರ್ಕಾರದವರು ಹಿಡಿದ "ಹೆಚ್ಚು ಬೆಳೆ ಬೆಳೆಯಿರಿ" ಕಾರ್ಯವು ನಿರೀಕ್ಷಿಸಿದಷ್ಟು ಫಲಕಾರಿಯಾಗಿಲ್ಲ. ಹಂಚಿಕೆ ವಿಧಾನವೂ ಸಹ ಸರಿಯಾಗಿಲ್ಲ. ಸರ್ಕಾರದವರು ಒದಗಿಸಿದ ಆಹಾರ ಸಾಮಾನುಗಳಿಂದ ಕಜ್ಜಿ, ವಿ... ದ ರೋಗಗಳು, ಹುರಡಿ, ಪ್ರಜೆಗಳು ... ತೆ ಪಡುತ್ತಿದ್ದಾರೆ ಎಂದು ಹೆಚ್. ಶ್ರೀ ... ಸ್ವಾಮಿರವರು ಹೇಳಿದರು.

ಸರ್ಕಾರದ ಪರವಾಗಿ ಶ್ರೀ|| ... ವಾಸರವರು ಉತ್ತರಕೊಡುತ್ತಾ ... ಕೊಟ್ಟ ಸಲಹೆಗಳನ್ನು ಸರ್ಕಾರದವರು ... ನದಲ್ಲಿಡುವರೆಂದು ಹೇಳಿದರು. ... ಸದಸ್ಯರು ಸಂಸ್ಥಾನದ್ಯಂತ ಪ್ರವಾಸ... ಆಹಾರ ಸ್ಥಿತಿಗತಿಗಳನ್ನು ತಿಳಿಯಬೇ... ಡಾಗಿದೆ ಎಂದರು. ವರ್ತಕರೂ, ಸ... ಸಂಘದವರೂ ಸಹ ಈ ಆಹಾರ ... ಜು ವ್ಯವಸ್ಥೆಗೆ ಅನುಕೂಲವಾಗುವ... ದ್ದಾರೆ ಮಾಡಲಾಗಿದೆ. ೩೦೮ ... ಡಿಪೋಗಳು, ೩೭ ಪುರಸಭೆ ಡಿಪೋ... ೬೩೬ ಪಂಚಾಯಿತಿ ಡಿಪೋಗಳು, ಸಹಕಾರ ಡಿಪೋಗಳೂ ಇವೆಯೆಂದು ... ದರು. ಹಂಚಿಕೆ ವಿಚಾರದಲ್ಲಿ ಇನ್ನೂ ... ಮ ವ್ಯವಸ್ಥೆ ಏರ್ಪಾಡು ಮಾಡಿ, ಜನ... ಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಡ... ವುದು ಎಂದು ತಿಳಿಸಿದರು.

ಲಿಲ್ಲೀ ಬ್ರ್ಯಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ

V. C. P.

ಚಾಮುಂಡಿ ಬ್ರ್ಯಾಂಡ್ ವನಸ್ಪತಿ

ಅಡಿಗೆಗೂ ತಿಂಡಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು ಮತ್ತು ಪುಷ್ಟಿಕರವಾದದ್ದು

ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-0

ಡಿ. ಪುಟ್ಟಯ್ಯ,

ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.

ಬ್ರ್ಯಾಂಚ್:—ದೇವರಾಜ ಮಾರ್ಕೆಟ್ : : ಪಕ್ಕದ ರಸ್ತೆ, ಸಂತೇಪೇಟೆ

ಅಪೇರಾ ಟಾಕೀಸ್

24—10—45 ರಿಂ

೩ ನೇ ವಾರ

ಶಾಲಿವಾಹನ

(ತಮಿಳು)

* ರಂಜನ್
* ಟಿ. ಆರ್. ರಾಜಕುಮಾರಿ
* ಕೆ. ಎಲ್. ವಿ. ವಸಂತ
* ಕೃಷ್ಣನ್
* ಟಿ. ಎ. ಮಧುರಂ

ಪಾತ್ರ

Morning Shows 10-30 A. M. from 26-10-45

In Old California

with JOHN WYNE

ಪೋ॥ ಫಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೮] ಶುಕ್ರವಾರ ೨೬—೧೦—೪೫ [ಸಂಚಿಕೆ ೭೫

ಅಕ್ಬರ್ ಹೈದರಿಯವರು ಮಧ್ಯಪ್ರಾಂತದ ಗೌರ್ನರ್

ಮೈಸೂರು ಅಕ್ಕನ ಬಳಗ

ಸ್ವಂ.ಸು] ಮೈಸೂರು ೨೬

ಮೈಸೂರು ನಗರದ ಅಕ್ಕನ ಬಳಗದ ಪ್ರಥಮ ವಾರ್ಷಿಕ ಸಮಾರಂಭವು ನೆನ್ನೆ ಸಾಯಂಕಾಲ ಸಹಕಾರ ಭವನದಲ್ಲಿ, ಶ್ರೀ॥ ಸೌ॥ ರಾಜಕುಮಾರಿ ಲೀಲಾವತೀದೇವಿಯವರ ಅಧ್ಯಕ್ಷತೆಯಲ್ಲಿ ವೈಭವದಿಂದ ನಡೆಯಿತು. ಉತ್ಸವವು ದೇವತಾ ಪ್ರಾರ್ಥನೆಯಿಂದ ಆರಂಭವಾಯಿತು. ಅಭಿನಂದನಾ ಪದ್ಯ ಪಠಣವಾದ ನಂತರ ಬಳಗದ ಅಧ್ಯಕ್ಷರಾದ ಶ್ರೀಮತಿ ಪುಟ್ಟತಾಯಮ್ಮನವರು ಅಧ್ಯಕ್ಷರನ್ನು ಸ್ವಾಗತಿಸಿ, ಅವರ ಸಮಾಜ ಸೇವೆಯನ್ನು ಪ್ರಶಂಸಿಸಿದರು. ಬಳಗದ ಬಾಲಕಿಯರಿಂದ ಹಿಂದೀ ಸಂಭಾಷಣಾ ಕಾರ್ಯಕ್ರಮವು ನಡೆಯಿತು. ಬಳಗದವರ ಪರವಾಗಿ ಅಧ್ಯಕ್ಷರಿಗೆ ಬಿನ್ನವತ್ತಳೆಯನ್ನು ಶ್ರೀಮತಿ ಪುಟ್ಟತಾಯಮ್ಮನವರು ಅರ್ಪಿಸಿದರು. ಕಾರ್ಯದರ್ಶಿಯವರಾದ ಶ್ರೀಮತಿ ರಾಜಮ್ಮ ವರತೊಟ್ಟಿಯವರು ವಾರ್ಷಿಕ ವರದಿಯನ್ನು ಒಪ್ಪಿಸಿದರು. ಶ್ರೀಮತಿ ತಾಯಮ್ಮನವರ ಅಪೇಕ್ಷೆ ಸಂಗೀತವಾಯಿತು. ಹಿಂದೀ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಬಾಲಕಿಯರಿಗೆ ಬಹುಮಾನಗಳನ್ನು ಪುಸ್ತಕ ರೂಪದಲ್ಲಿ ಅಧ್ಯಕ್ಷರು ಹಂಚಿದರು.

ಶ್ರೀಮತಿ ಸೌ॥ ರಾಜಕುಮಾರಿ ಲೀಲಾವತೀದೇವಿಯವರು ಮಾತನಾಡುತ್ತ, ಅಕ್ಕನ ಬಳಗದ ಧ್ಯೇಯಗಳು ಬಹು ಉದಾತ್ತವಾದವೆಂದೂ, ಅವರ ಹಿರಿಯ ಆಸೆ ವೀರಶೈವ ಸಮಾಜದಲ್ಲಿ ಸ್ತ್ರೀಯರಿಗೆ ಯುಕ್ತ ಅಂತಸ್ತು ಮತ್ತು ಸ್ಥಾನಮಾನಗಳನ್ನು ಗಳಿಸಿಕೊಡುವುದೇ ಆಗಿದೆ ಎಂಬುದು ಸಂತೋಷವನ್ನುಂಟು ಮಾಡುವುದೆಂದೂ, ಹೇಳಿದರು. ವೀರಶೈವ ಮಹಿಳೆಯರಲ್ಲಿ ಜ್ಞಾನಪ್ರಸಾರವಾಗಿ ಒಕ್ಕಟ್ಟು ಸಂಸ್ಕೃತಿ ಮತ್ತು ಶಿಕ್ಷಣವಂತರಾಗಿ ಬಾಳುವಂತಾಗಲೆಂದು ಹಾರೈಸಿದರು. ವಂದನಾರ್ಪಣೆಯೊಡನೆ ಉತ್ಸವವು ಮುಕ್ತಾಯವಾಯಿತು.

ಜಾವಾದಲ್ಲಿ ಉಗ್ರ ಪರಿಸ್ಥಿತಿ

ಬ್ರಿಟನ್ನಿನ ವಿದೇಶಾಂಗ ಸಚಿವರು ಕಾಮನ್ಸ್ ಸಭೆಯಲ್ಲಿ ಜಾವಾ ಪರಿಸ್ಥಿತಿ ಬಗ್ಗೆ ಹೇಳಿಕೆಯನ್ನು ಕೊಡುತ್ತಾ, ಅಲ್ಲಿ ವಿಷಮ ಪರಿಸ್ಥಿತಿಯುಂಟಾಗಿದೆಯೆಂದೂ ಶಾಂತಿ ನೆಲಸಿ ಸಂಗ್ರಾಮ ಬಂದಿಗಳನ್ನು ವಶಪಡಿಸಿಕೊಳ್ಳಲು ದಂಡನಾಯಕ ಸರ್ ಫಿಲಿಪ್ ಕ್ರಿಸ್ಟಿಯನ್ನರಿಗೆ ಹೆಚ್ಚಿನ ಅಧಿಕಾರ ಕೊಟ್ಟಿದೆಯೆಂದೂ ಮತ್ತಷ್ಟು ಬ್ರಿಟಿಷ್ ಸೈನ್ಯಗಳನ್ನು ಅಲ್ಲಿಗೆ ಕಳುಹಿಸಲಾಗುವುದೆಂದೂ ತಿಳಿಸಿರುವರು.

ವೀರಶೈವ ಸಂಘ

ಅಖಿಲ ಮೈಸೂರು ವೀರಶೈವ ಸಂಘದ ಕಾರ್ಯ ನಿರ್ವಾಹಕ ಸಮಿತಿ ಸಭೆಯು ಕಳೆದ ಭಾನುವಾರ ಕ್ಯಾತನಹಳ್ಳಿ, ಸಾಹುಕಾರ್ ಸಿದ್ದಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯಿತು. ಮೈಸೂರು ನಗರ ಮತ್ತು ಜಿಲ್ಲಾ ಸಮಿತಿಯನ್ನು ರಚಿಸಿ ಶ್ರೀ ಟಿ. ಎಸ್. ಸಿದ್ದಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೆ. ಸಿ. ಸುಬ್ಬಣ್ಣ ಮತ್ತು ಕೆ. ನಂದೀಬಸಪ್ಪನವರುಗಳನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಎಂ. ಸಿ. ಮಲ್ಲಪ್ಪ ಮತ್ತು ಎಂ ಎಸ್. ಮಂಟಪ ದೇವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ಎಂ ಎಸ್. ಚಿನ್ನಬಸಪ್ಪನವರನ್ನು ಖಜಾಂಚಿಗಳನ್ನಾಗಿಯೂ ಚುನಾಯಿಸಲಾಯಿತು.

ಕನ್ನಡ ಕಲಾವಿದರಲ್ಲಿ ಮನವಿ

ರಾಜಧಾನಿಯ ಮೈಸೂರು ಮೂವಿಟೋನಿನ ವ್ಯವಸ್ಥಾಪಕರು ನೂತನ ಚಲನ ಚಿತ್ರ ತಯಾರಿಕೆಯನ್ನು ಈಗಾಗಲೇ ಆರಂಭಿಸಿದ್ದಾರೆ. ಇನ್ನು ಅಲ್ಪ ಕಾಲದಲ್ಲಿಯೇ ಅವರ ಕನ್ನಡ ಚಲನ ಚಿತ್ರ ತಯಾರಿಕೆಯು ಆರಂಭವಾಗುವದೆಂಬಿದೆ. ಕರ್ನಾಟಕದ ಪ್ರತಿಭಾಶಾಲಿ ಕಲಾವಿದರ ನೆರವನ್ನು ಕೋರಲಾಗಿದೆ. ಕನ್ನಡ ಚಲನ ಚಿತ್ರದಲ್ಲಿ ಭಾಗ ವಹಿಸುವ ಕಲಾವಿದರೆಲ್ಲರೂ, ಸಮಕ್ಷಮ ಭೇಟಿ ಮಾಡಿಯಾಗಲೀ ಅಥವಾ ಪತ್ರ ಮೂಲಕವಾಗಿಯಾಗಲೀ, ಭಾವ ಚಿತ್ರಗಳೊಡನೆ ತಮ್ಮ ಅಭಿಮತವನ್ನು ತಿಳಿಸಬೇಕೆಂದು ಸದರೀ ಚಲನ ಚಿತ್ರ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಎಸ್. ವೈ. ರಾಮರೆಡ್ಡಿಯವರು ಮನವಿ ಮಾಡಿರುವರು.

ವಿಶ್ವಶಾಂತಿ ಸಂಸ್ಥೆ

ಪ್ರಪಂಚದ ಶಾಂತಿ ಪಾಲನೆಗಾಗಿ ಏರ್ಪಡಲಿರುವ ಸಂಸ್ಥೆಯು ಪ್ರಚಾರವಾಗಿ ಹೊರಬೀಳುವ ಪತ್ರಕ್ಕೆ ಅಮೇರಿಕದ ಪರವಾಗಿ ಅಲ್ಲಿನ ಕಾರ್ಯದರ್ಶಿ ಮಿ॥ ಬೈರನ್ಸ್‌ರವರು ರುಜು ಹಾಕಿದ್ದಾರೆ. ರಷ್ಯದ ಒಪ್ಪಿಗೆ ಕೂಡ ದೊರೆತಿರುವುದರಿಂದ ಒಟ್ಟು ೨೯ ರಾಷ್ಟ್ರಗಳಿಂದ ಈ ಪತ್ರಕ್ಕೆ ರುಜುವಾಗಿದೆ. ಶಾಂತಿ ಸ್ಥಾಪನೆಯ ದೃಢ ಸಂಕಲ್ಪವನ್ನು ಜನರು ಮಾಡಬೇಕೆಂದೂ ಕೇವಲ ಪತ್ರಕ್ಕೆ ರುಜು ಹಾಕುವುದರಿಂದ ಶಾಂತಿ ಸ್ಥಾಪನೆಯಾಗಲಾರದೆಂದೂ ಮಿ॥ ಬೈರನ್ಸ್‌ರವರು ತಿಳಿಸಿರುವರು.

ಬ್ರಿಟಿಷರು ಭಾರತ ಬಿಟ್ಟ ದಿನ ನನಗೆ ಪ್ರಾಪ್ತ

ಬ್ರಿಟಿಷರು ಭಾರತವನ್ನು ಬಿಟ್ಟು ಗಂಟು ಮೂಟೆ ಕಟ್ಟಿದ ದಿನ ತನಗೆ ಸ್ವಾಗತವನ್ನು ಮಾಡಬೇಕೆಂದೂ ಆಗ ತನ್ನ ಆತ್ಮಕ್ಕೆ ಶಾಂತಿ ದೊರೆಯುವುದೆಂದೂ ಪಂಡಿತ ಶ್ರೀಮತಿ ಸತ್ಯವತೀ ದೇವಿಯವರು ಸಾಯುವ ಮುನ್ನ ಕೊನೆಯ ಮಾತಾಗಿ ತಿಳಿಸಿದರು.

ಸರ್ ಸಿ. ವಿ. ರಾಮನ್ನರಿಗೆ ಲಂಡನ್ನಿನಿಂದ ಆಹ್ವಾನ

ವಿಜ್ಞಾನ ಸಂಶೋಧನೆಯ ... ಮಹೋತ್ಸವವನ್ನು ಲಂಡನ್ನಿನಲ್ಲಿ ... ಸೊಸೈಟಿಯು ನಡೆಸಲು ... ಈ ಮಹೋತ್ಸವಕ್ಕೆ ಸರ್ ಸಿ. ವಿ. ರಾಮನ್‌ರವರನ್ನು ಆಹ್ವಾನಿಸಲಾಗಿದೆ. ಈ ಸಮಾರಂಭವು ... ನಡೆಯುವುದು.

ಕಸ್ತೂರಿ ಬಾ ಶಿಬಿರಕ್ಕೆ ಭೇಟಿ

ಧಾರವಾಡದ ಶ್ರೀ ಮುದವೀಡಕರ್ ಕೃಷ್ಣರಾಯರು ನೆನ್ನೆ ಬೆಳಿಗ್ಗೆ ಸವಣೂರಿನಲ್ಲಿರುವ ಕಸ್ತೂರ ಬಾ ಶಿಬಿರಕ್ಕೆ ಭೇಟಿ ಇತ್ತರು. ಶ್ರೀ ... ಸಿ. ದಾಸಪ್ಪ, ಕೆ. ಎಸ್. ಕೃಷ್ಣಯ್ಯಂಗಾರ್ ಮತ್ತು ಶ್ರೀನಿವಾಸರಾಯರು ಅವರನ್ನು ಸ್ವಾಗತಿಸಿ ಶಿಬಿರದ ಕಾರ್ಯಕಲಾಪಗಳನ್ನು ವಿವರಿಸಿದರು. ಶಿಬಿರದಲ್ಲಿ ಮಹಿಳೆಯರಿಗೆ ಕೊಡುತ್ತಿರುವ ಶಿಕ್ಷಣ ವಿಧಾನವನ್ನು ರಾಯರು ಬಹಳವಾಗಿ ಪ್ರಶಂಸಿಸಿದರು, ಮತ್ತು ಇಲ್ಲಿ ಶಿಕ್ಷಣ ಪಡೆದ ನಂತರ ಮಹಿಳೆಯರು ಗ್ರಾಮ ಪ್ರದೇಶಗಳಲ್ಲಿ ನೆಲಸಿ ಹಳ್ಳಿಯವರ ಏಳಿಗೆಗಾಗಿ ದುಡಿದು ದೇಶ ಸೇವೆಯನ್ನು ಮಾಡಬೇಕೆಂದು ಸೂಚಿಸಿ ಸಣ್ಣ ಭಾಷಣವನ್ನು ಮಾಡಿದರು.

ನೆಹರೂರವರಿಗೆ ಜೋಧಾಪುರದ ರಾಜರ ಕಾಣಿಕೆ

ಪಂಡಿತ ಜವಾಹಿರ್‌ಲಾಲ್ ನೆಹರೂರವರು ಮೊನ್ನೆ ಜೋಧಪುರಕ್ಕೆ ಭೇಟಿ ಇತ್ತಾಗ ಅಲ್ಲಿನ ರಾಜರು ಅಲಹಾಬಾದಿನ ಕಮಲಾ ನೆಹರೂ ಆಸ್ಪತ್ರೆಯ ನಿಧಿಗಾಗಿ ... ರೂ. ಗಳನ್ನು ಪಂಡಿತ ಜವಾಹಿರ್‌ಲಾಲ ನೆಹರೂರವರಿಗೆ ಅರ್ಪಿಸಿರುವರೆಂದು ತಿಳಿದುಬಂದಿದೆ.

ಕಾಲಿಗಾಯದ ವಿಷಯ ಗೊಂದಲ

ಮದರಾಸ್ ಬಳಿ ಆವಡಿ ಕ್ಯಾಂಪಿನಲ್ಲಿ ... ಪೊಲೀಸರು ... ಗುಂಡು ಹಾರಿಸಿದರು. ಇದರಿಂದ ಕೆಲವರಿಗೆ ಗಾಯಗಳಾದವು. ... ತನಿಖೆಯ ಫಲಿತಾಂಶ ... ಎಂದು ಹೇಳಲಾಗಿದೆ.

ರೈಲು ಬಹಳವಾಗಿ ಬಂದಿತು

ನಾಗಪುರಕ್ಕೆ ಬಳಿ ... ರೈಲು ... ಅಪಘಾತಕ್ಕೆ ಒಳಗಾಯಿತು ... ಘಂಟೆಗೆ ಬಂದಿತು.

...ತ್ರಿಕೋದ್ಯೋಗಿಗಳೂ ...ಭಾಷಾ ಸೇವೆಯೂ

ಮೈಸೂರು ೨೬

... ಪತ್ರಿಕೋದ್ಯೋಗಿಗಳೆಲ್ಲರೂ ...ಭಾಷೆಯನ್ನೇ ಉಪಯೋಗಿಸಬೇಕು ...ನಾಡಿನ ಐಕ್ಯತೆಯನ್ನು ಸಾ... ಕನ್ನಡ ನುಡಿಗೆ ಬಂದಿರುವ ...ಹಂಸಲು ಕನ್ನಡ ಪತ್ರಿಕೋದ್ಯೋಗಿ...ಲ್ಲರೂ ಟೊಂಕಕಟ್ಟಿ ನಿಲ್ಲಬೇಕು... ...ದೇಶವನ್ನು ಧಾರವಾಡದ ಸುಪ್ರಸಿದ್ಧ... ...ಭಕ್ತರಾದ ಶ್ರೀ ಮುದವೀಡು ...ಯರು ಈ ದಿನ ಬೆಳಿಗ್ಗೆ ರಾಜ... ಪತ್ರಿಕೋದ್ಯೋಗಿಗಳಿಗೆ ನಾರಿ... ...ಅವರನ್ನು ಸತ್ಕರಿಸಲು ಸಂಘದಲ್ಲಿ ...ಸಮಾರಂಭವು ಏರ್ಪಾಡಾಗಿದ್ದಿತು ...ದ ಶ್ರೀ ಆಗರಂ ರಂಗಯ್ಯನವರು ...ಗನ್ನು ಸ್ವಾಗತಿಸಿ ಅವರ ಪರಿ...ಮಾಡಿಕೊಟ್ಟರು. ಲೋಕಮಾನ್ಯ ...ಲಾಲಾ ಲಜಪತರಾಯ್ ಮತ್ತು ...ಲ್ ಫಿರೋಜ್ ಮುಂತಾದ ಮ... ...ರು, ಹಾಕಿಕೊಟ್ಟ ಉನ್ನತವಾದ ...ನ್ನು ಅನುಸರಿಸಿ ತಾವು ಪತ್ರಿಕಾ... ...ನ್ನು ಅವಲಂಬಿಸಿದ ಅಂಶವನ್ನು ...ರು. ಮೈಸೂರಿನಲ್ಲಿ ವೃದ್ಧ ಪಿ... ...ದ ಶ್ರೀ ವೆಂಕಟಕೃಷ್ಣಯ್ಯನವರು ...ವಿ. ಸುಂದರಪ್ಪನವರೂ ಪತ್ರಿಕೋದ್ಯಮದಲ್ಲಿ ಮಾಡಿದ ಸೇವೆಯನ್ನು ಕೊಂ... ...ಜೀರ್ಣೋದ್ಧಾರ ಕಾರ್ಯದಲ್ಲಿ ...ದ್ಯೋಗಿಗಳು ನಿರ್ದಾಕ್ಷಿಣ್ಯದಿಂದ ...ವಂಚನೆಯಿಂದಲೂ ಕೆಲಸ ...ಮಾಡಬೇಕೆಂದು ಆಶಿಸಿ... ...ಜ್. ಕೆ. ಕುಮಾರಸ್ವಾಮಿ ...ವಂದನಾರ್ಪಣೆಯೊಡನೆ ಸಮಾ...ಮುಕ್ತಾಯವಾಯಿತು.

ಉಪನಯನ

...ಪತ್ರಿಕೆಯ ಸಂಪಾದಕರಾದ ...ಗೋಪಾಲ ಕೃಷ್ಣಶೆಟ್ಟರು ತಮ್ಮ ...ಲಕ್ಷ್ಮೀನಾರಾಯಣ ಶೆಟ್ಟಿಗೆ ನೆ... ...ಉಪನಯನವನ್ನು ನೆರವೇರಿಸಿದ ...ಕ ಅತಿಥಿಗಳನ್ನು ಫಲ ತಾಂಬೂಲದ ಸತ್ಕರಿಸಿದರು.

...ತ್ತು ಭಾರತೀಯರಿಗೆ ಗೌರ್ನರ್ ಹುದ್ದೆ

...ರ್ ಮಂತ್ರಿ ಮಂಡಲಕ್ಕೆ ...ಸದಸ್ಯರಾಗಿರುವ ಮಿ॥ ಅಕ್ಬರ್ ...ಯವರು ಮಧ್ಯಪ್ರಾಂತದ ಗೌರ್ನರ್ ...ನೇಮಕ...ಪಡುವರೆಂದು ಹೇಳ... ...ಬೇಸಿಗೆಯ ಹೊತ್ತಿಗೆ ಚುನಾ... ...ಗಿದು ಮುಖಂಡರುಗಳಲ್ಲಿ ...ಪ್ಪಂದವಾಗುವ ಸೂಚನೆಗಳೂ ...ಕಾಣಬರುವುದಾಗಿ ವರದಿಯಾ...

...ಕರಿಗೆ ಬಹಿರಂಗ ಮಾನಹಾನಿ

...ರ್ ಅಧಿಕಾರಿಗಳು ಅತಿ ಲಾ... ...ವಾದಿ ಶಿಕ್ಷೆಗೆ ಗುರಿಯಾದ ...ರ ಹೆಸರನ್ನು ಬಹಿರಂಗ ಪ್ರದೇ...ಶದ ಫಲಗಗಳ ಮೇಲೆ ಪ್ರಕಟಿಸಿ ...ಇನ ಜಾಲ್ನೈಸೆ ಕೊಟ್ಟಿರುವ ...ರನ್ನು ... ಹಲ ...ಪ್ರಕಟವಾಗಿದೆ.

ಸಾಧ್ವಿ

[illegible] ಪತ್ರಿಕೆ

ಪಕ್ಷಪಾತದ [illegible]

[illegible] ಯಾಗಿ ಕೆಲಸ [illegible] ಪ್ರತಿ [illegible] ನಿರ್ಣಯಿಸುತ್ತದೆ. [illegible] ಬ್ಯಾಂಕುಗಳಲ್ಲಿಯೂ ಸ [illegible] ಸಾರ್ವಜನಿಕ [illegible] [illegible] ಪತ್ರಿಕೆ [illegible]

[illegible] ಸಹಕಾರ [illegible] ಸ್ವತಂತ್ರವಾಗಿ [illegible]

[illegible] ಮಾಡಬಹುದು [illegible] ಇದು [illegible]

ನಮ್ಮ ಸರ್ಕಾರದ ಇಲಾಖೆಗಳಲ್ಲಿ ದಕ್ಷತೆ, [illegible] ಮತ್ತು [illegible] ಎಂದು [illegible] ಉತ್ತರವೇ [illegible]

ಯೋಗ್ಯತೆಗೆ [illegible] ಪುರಸ್ಕಾರವನ್ನು [illegible]

[illegible]

ವಾರ್ತಾ ವಾಹಿನಿ

"ಭಾರತವನ್ನು ಬಿಟ್ಟು ಹೊರಡಿ" ಎಂಬ ನಿರ್ಣಯವು ಫ್ರಾಂಕ್ ಮತ್ತು [illegible] ಜರ್ಗೀಸರಿಗೂ, ಬ್ರಿಟಿಷರಂತೆ ಅನ್ವಯಿಸುವುದಾಗಿ ಸರದಾರ್ ಪಟೇಲರು ವಿವರಣೆ ಕೊಟ್ಟಿದ್ದಾರೆ.

ರಷ್ಯದವರು ಸೇರಿಸಿದ್ದ ಬರ್ಲಿನ್ ನಗರಾಧ್ಯಕ್ಷರ ಮೇಲೆ ಲಂಚದ ಮತ್ತು ಅವಿಧೇಯತೆಯ ಮೊಕದ್ದಮೆ ಹೂಡಲಾಗುತ್ತು ಲಂಚದ ಆಪಾದನೆಯಿಂದ ಅವರು ಖುಲಾಸೆಯಾಗಿದ್ದಾರೆ

ಜಪಾನಿನ ಕೈಗಾರಿಕೆಗಳಿಗೆ ಉಗಮಸ್ಥಾನವೆಂದು ಭಾವಿಸಲ್ಪಟ್ಟಿದ್ದ ಜಿಯುಟ್ಸು ಸಂಸ್ಥೆಯನ್ನು ರದ್ದುಗೊಳಿಸಲಾಗಿದೆ. ಕಟಕ್ ಜಿಲ್ಲಾಬೋರ್ಡಿನ ಚುನಾವಣೆಗೆ ಹೆಸರು ಕೊಟ್ಟ ೩೭ ಜನ ಕಾಂಗ್ರೆಸ್ ಉಮೇದುವಾರರ ಪೈಕಿ ೩೩ ಜನರಿಗೆ ಪ್ರತಿಸ್ಪರ್ಧಿಯೇ ಇಲ್ಲ.

ಫ್ರೆಂಚ್ ವಿದೇಶಾಂಗ ಮಂತ್ರಿಗಳು ಸ್ಪೇನಿನಲ್ಲಿ ರಾಜಕೀಯ ಕಾರಣಕ್ಕಾಗಿ ಘಾಸಿಗೆ ಪಾತ್ರವಾದವನ್ನು ತಪ್ಪಿಸಲಾಗಿದೆಯೆಂದು ತಿಳಿದ್ದಾರೆ

ಕಾಶ್ಮೀರದ ಮುಖ್ಯ ಮಂತ್ರಿಯಾಗಿ ಸಂಯುಕ್ತ ಪ್ರಾಂತದ ಸಿವಿಲ್ ಸರ್ವಿಸ್ ಅಧಿಕಾರಿ ನೆವರ್‌ಸೋಲ್‌ರವರನ್ನು ನೇಮಿಸಲಾಗುವುದೆಂದು ಹೇಳಲಾಗಿದೆ. ೧೯೪೩ ರಲ್ಲಿ ಬಳವಳಿಯನ್ನು ತುಳಿಯುವ ಇವರು ಹೆಸರು ಹೊಂದಿದ್ದರು.

ಗೊಂದಿ, ಅಡಿಕೆ ಯಂತ್ರದಲ್ಲಿರುವ ನ್ಯೂನಾತಿರೇಕಗಳನ್ನು [illegible] ಸಿನಿಮಾಲ ಮಾಡಲು ಸಹಾಯವಾಗುವಂತೆ ಸರ್ಕಾರದವರು ಬೇಗನೆ ವಿಚಾರಣೆ ಮಾಡಬೇಕೆಂದು ಸಾಥ ಕೋರುತ್ತೇವೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಗುಬ್ಬಿ ಥಿಯೇಟ್ರಿಕಲ್ ಕಂಪನಿ
(ರಿಜಿಸ್ಟರ್ಡ್) ಮೈಸೂರು
ಮೈಸೂರು ಟವರ್ ಹಾಲ್ ಮೈದಾನದ
ಸ್ವಂತ ಧನಲಕ್ಷ್ಮಿ ಥಿಯೇಟರಿನಲ್ಲಿ
ಪ್ರತಿ ದಿನ ರಾತ್ರಿ ೧೦ ಘಂಟೆಗೆ
ಕುರುಕ್ಷೇತ್ರ
ಎಂಬ ನಾಟಕವನ್ನು ಅಭಿನಯಿಸುವರು

Edited, printed and published by A. K. Nagarajan at the Sadhvi Press D. Subbiah Road Mysore.

ಮಾನನಷ್ಟ ಮೊಕದ್ದಮೆ

ಮೈಸೂರು ೨೬

ಸಹಕಾರ ಸಂಘದ ಸದಸ್ಯರುಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದು ಮತ್ತು ಪರಸ್ಪರ ಪ್ರೇಮ ಚಿಂತನೆ ಬಯಸುವುದು ಸಹಕಾರ ತತ್ತ್ವಗಳ ಧ್ಯೇಯವಾಗಿದೆ. ಸಹಕಾರ ಸಂಘದ ವಿಚಾರದಲ್ಲಿ ಈಗಾಗಲೇ ಅಯುಕ್ತ ಮನೋಭಾವನೆ ಇರುವ ಕಾರಣ ಇನ್ನೇನೂ ಹೇಳಬಯಸುವುದಿಲ್ಲ. ಸೆ ೫೦೦ (೧) ಆರ್. ಪಿ. ಸಿ. ಪ್ರಕಾರ ಆಪಾದಿತನನ್ನು ಖುಲಾಸೆ ಮಾಡಿದ್ದೇನೆ ಎಂಬ ಟೀಕೆ ಅಧ್ಯಕ್ಷರದನೆ, ತಮ್ಮ ಮುಂದೆ ವಿಚಾರಣೆಗೆ ಇದ್ದ ಮಾನನಷ್ಟ ಮೊಕದ್ದಮೆಯಲ್ಲಿ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಬಿ. ಟಿ. ಕೆಂಪಣ್ಣನವರು ತೀರ್ಪು ಕೊಟ್ಟಿರುತ್ತಾರೆ. ಈ ಮೊಕದ್ದಮೆಯಲ್ಲಿ ಫಿರ್ಯಾದಿಗಳು ಡಾ॥ ಎ. ವಿ. ರಂಗರಾಯರು, ಆಪಾದಿತರು ಶ್ರೀ ಎಂ. ಎಸ್. ನಾರಾಯಣರಾಯರು

೨೦-೧-೪೮ ರಲ್ಲಿ ನಡೆದ ನ್ಯೂ ಸಹಕಾರ ಸಂಘದ ವಾರ್ಷಿಕ ಅಧಿವೇಶನದಲ್ಲಿ ಶ್ರೀ ನಾರಾಯಣರಾಯರು ಡಾ॥ ಎ. ವಿ. ರಂಗರಾಯರಿಗೆ ಸಂಬಂಧಪಟ್ಟ ನಿರ್ಣಯವನ್ನು ಮಂಡಿಸಿದರು. ಶ್ರೀಯುತ ವೆಂಕಣ್ಣನವರ ಹೆಸರಿನಲ್ಲಿದ್ದ ಮನೆಯನ್ನು ಶ್ರೀ ರಂಗರಾಯರು ಮೋಸದಿಂದ ತಮಗೆ ಬರೆಸಿಕೊಂಡು ಯುಕ್ತಿಸಿ ಕಾರ್ಯಕ್ರಮ ನಡೆಸಿದರೆಂದು ಅವರ ಕಾರ್ಯವು ಸಂಘದ ಘನತೆ, ಗೌರವ ಮತ್ತು ಹಿತಕ್ಕೆ ಅಗೌರವತರುವಂತಾಗಿರುವುದರಿಂದ ಅವರನ್ನು ಸಂಘದ ಸದಸ್ಯತ್ವದಿಂದ ವಜಾಮಾಡಿ, ಸಹಕಾರ ಸಂಘಗಳಲ್ಲಿರಲು ಅನರ್ಹರೆಂದು ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರಿಗೆ ಶಿಫಾರಸು ಮಾಡಬೇಕೆಂದೂ ಕೂಡಿರುವ ಅಂಶಗಳು ಆ ನಿರ್ಣಯದಲ್ಲಿ ಅಡಕವಾಗಿದ್ದವು.

೬-೩-೪೮ ರಲ್ಲಿ ಡಾ॥ ರಂಗರಾಯರು ಸಿಟಿ ಮ್ಯಾಜಿಸ್ಟ್ರೇಟರಲ್ಲಿ ಮಾನನಷ್ಟ ಆಪಾದನೆ ಸಲ್ಲಿಸಿ, ತಾವು ವೈದ್ಯ ವೃತ್ತಿಯಲ್ಲಿರುವುದೂ ಅನೇಕ ಸಹಕಾರ ಸಂಘಗಳ ಸದಸ್ಯರೆಂದೂ ಯಾವುದೋ ಕ್ಷುದ್ರ ಭಾವನೆಯನ್ನಿಟ್ಟು ಶ್ರೀ ಎಂ. ಎಸ್. ನಾರಾಯಣರಾಯರು ನಿರ್ಣಯ ರೂಪದಲ್ಲಿ ತಮಗೆ ಅವಮಾನ ಮಾಡಿರುವ ಕಾರಣ ಐ. ಪಿ. ಸಿ. ೫೦೦ ರ ಪ್ರಕಾರ ಶಿಕ್ಷಾರ್ಹರು ಎಂದೂ ತಿಳಿಸಿದ್ದರು.

ನ್ಯಾಯಾಧೀಶರು ತೀರ್ಪು ಕೊಡುತ್ತಾ ಈ ಅಭಿಪ್ರಾಯಗಳನ್ನು ಹೊರಗೆಡವಿದ್ದಾರೆ. ಫಿರ್ಯಾದಿ ಮತ್ತು ಆಪಾದಿತರು ಇಬ್ಬರೂ ಒಂದೇ ಸಂಘದ ಸದಸ್ಯರು. ಸಹಕಾರ ತತ್ತ್ವದ ಅನುಸಾರವಾಗಿ ಸದಸ್ಯರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದು ಮತ್ತು ಪರಸ್ಪರ ಹಿತಪಾಲಿಸಿಕೊಳ್ಳುವುದು. ಮುಖ್ಯವಾದ ಅಂಶಗಳು ಸದಸ್ಯರಲ್ಲಿ ಒಬ್ಬರು ತನ್ನ ಗಂಡನನ್ನು ಕಳೆದುಕೊಂಡು ಅಸ್ವಸ್ಥತೆಯಲ್ಲಿರುವ ಭಾಗದಲ್ಲಿ ಅವರಿಗಿಂತಲೂ ಉತ್ತಮ ಮತ್ತು ಹೆಚ್ಚು ಪ್ರಭಾವವುಳ್ಳ ಸದಸ್ಯರು ಮೊದಲಿನವರಿಗೂ [illegible] ನನ್ನು ಮಾಡುವ ಸಂದರ್ಭದಲ್ಲಿ ಹಿತ ಸಾಧನೆಗಾಗಿ ಪೂರ್ಣ ಅಧಿಕಾರದಲ್ಲ್ ಬಾಡಿ ಮುಂದೆ ನಿರ್ಣಯ ತಂದಿದ್ದಾರೆ. ನಿರ್ಣಯವು ಹೆಚ್ಚು ಬಾರವಾಗಿಲ್ಲ ಫಿರ್ಯಾದಿಗೆ ಅ[illegible] ಮಾಡಬೇಕೆಂಬ ಉದ್ದೇಶ ಆಪಾದಿತರೆಂದು ಹೇಳಲಾಗುವುದಿಲ್ಲ. ನಿರ್ಣಯವು ಹೆಚ್ಚು ಜನರಲ್ಲಿ ಪ್ರಚಾರ [illegible] ಆಪಾದಿತರ ಸೂಚನೆಯನ್ನು [illegible] ಫಿರ್ಯಾದಿಯು ಕಟುತರ ಸನ್ನಿವೇಶದಿಂದ ಪಾರಾಗುತ್ತಿದ್ದಾರೆ. ಆಪಾದಿತರು ಮಾಡಿರುವುದಕ್ಕಾಗಿ ಫಿರ್ಯಾದಿಯು ಕೃತಜ್ಞರಾಗಿರಬೇಕಾಗಿದೆಯೇ ವಿನಹ ಕ[illegible] ಸಹಕಾರ ಸಂಘಗಳ ಸದಸ್ಯರು ಆಗುಬಾಗ್ಗೆ ಅವರ ನಡತೆ [illegible] ಮಾಡಬಲ್ಲರು [illegible] ತಮ್ಮ ಸೇಲಕೆಯಲ್ಲಿ [illegible] ಸಹಕಾರ ಸಂಘಗಳ ವಿಚಾರವಾಗಿ [illegible] ಆಯುಕ್ತ ಮನೋಭಾವನೆ ಪ್ರಯುಕ್ತ ನಾನು ಹೆಚ್ಚು ವಿಶದ ಬಯಸುವುದಿಲ್ಲ ಎಂದು ಹೇಳಿ ತನ್ನ ಆರ್ಜಿಯನ್ನು ವಜಾ ಮಾಡಿದ್ದಾರೆ ಶ್ರೀ ಮುದುವೇಡು ಕೇಶವರು

ಡಾ॥ ೨೬-೧೦-೪೮ ರ [illegible] ಬೆಳಿಗ್ಗೆ [illegible] ಶ್ರೀ ಶಿವಾತ್ರೀಸ್ವರ ವಿದ್ಯಾರ್ಥಿ [illegible] ಧಾರವಾಡದ ಸುಪ್ರಸಿದ್ಧ ಸಾಹಿತಿ ಭಕ್ತರಾ [illegible] ವ್ [illegible] ಮಾಡುವರು. ಸರ್ವರಿಗೂ ಆ[illegible]

[illegible] ಕೊಳ ೧ ಕ್ಕೆ
ಸ್ನಾನಾಲ್
ಒಂದೇ ದಿನ ಉಪಯೋಗಿಸಿದ ಹಿತವನ್ನು ಸಿನಿಮಾಲ ಮಾಡುವುದರಲ್ಲಿ ಅತಿಶಯೋಕ್ತಿಯಿಲ್ಲ
ಕಜ್ಜಿಗೆ ಸಂಜೀವನ
ಎಸ್. ಎಸ್. ವೈದ್ಯ
ಎಸ್.ಸಿ ಆಲ್.ಲಿವರ್ ಅಂಡ್
ಔಷಧಾಲಯ,
೨೦೬೦, ಚಾಮುಂಡಿಪುರಂ, ಮೈ[illegible]

ಟಿ. ಬಿ. ನಟರಾಜ್
ಔ ಷ ಧಾ ಲ ಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ನಮ್ಮಲ್ಲಿ ಚಿಕಿತ್ಸೆಯು ಬಹು ಸುಲಭ ಧಾರಣೆಯಲ್ಲಿ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದ ಔಷಧಿಗಳೆಲ್ಲವೂ ದೊರೆಯುತ್ತವೆ.

ಲಿಲ್ಲೀ ಬ್ರ್ಯಾಂಡ್ ಕಾಫಿ
ಪುಡಿಯನ್ನೇ ಉಪಯೋಗಿಸಿ
V C P.
ಚಾಮುಂಡಿ ಬ್ರ್ಯಾಂಡ್ ವನಸ್ಪತಿ
ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು
ಮತ್ತು ಪುಷ್ಟಿಕರವಾದದ್ದು
ನಮ್ಮಲ್ಲಿ ದೊರೆಯುತ್ತೆ ಪೌಂಡು ೧ ಕ್ಕೆ ರೂ 0-10-0
ಡಿ. ಪುಟ್ಟಯ್ಯ,
ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.
ಬ್ರಾಂಚ್ :— ದೇವರಾಜ ಮಾರ್ಕೆಟ್ : : ಸಕ್ಕರೆ ಮಂಡಿ, ಸಾತೇಗಲ್ಲಿ

ರೋ॥ ನಂ 393 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶನಿವಾರ ೨೭—೧೦—೪೫ [ಸಂಚಿಕೆ ೭೭

-ಮಲಯ ಪ್ರಜೆಗಳಲ್ಲಿ-
-ಅಶಾಂತಿ ಹರಡಿತು-

ಮಲಯಾದಲ್ಲಿ ಅಶಾಂತಿ ಹರಡಿದೆ

ಮಲಯಾದ ಪೆರಾಕ್ ಪ್ರಾಂತದ ಹಳ್ಳಿ ಮತ್ತು ನಗರಗಳಲ್ಲೆಲ್ಲಾ ಎಲ್ಲಾ ವರ್ಗದ ಪ್ರಜೆಗಳೂ ಒಟ್ಟಾಗಿ ಸೇರಿ ಪ್ರದರ್ಶನ ಮಾಡುತ್ತಿರುವುದನ್ನು ಚದುರಿಸಲು ಬ್ರಿಟಿಷ್ ಮತ್ತು ಭಾರತೀಯ ಸೈನ್ಯಗಳನ್ನು ಕಳಿಸಲಾಯಿತೆಂದು ಹೇಳಲಾಗಿದೆ. ಪ್ರದರ್ಶಕರು ಮೆರವಣಿಗೆ ತೆಗೆದುಕೊಂಡು ಹೋಗುತ್ತಾ, "ನಮಗೆ ಕೆಲಸಬೇಕು" "ನಮಗೆ ಅನ್ನ ಬೇಕು" ಎಂದು ಕೂಗಿಕೊಂಡರು. ಒಂದು ಕಡೆ ಮೆರವಣಿಗೆಕಾರರ ಮೇಲೆ ಗುಂಡು ಹೊಡೆದಾಗ ಒಬ್ಬನು ಸತ್ತು ಅನೇಕರಿಗೆ ಗಾಯವಾಗಿದೆ. ಇನ್ನೊಂದು ಕಡೆ ಸ್ಥಳೀಯ ಸಿವಿಲ್ ಅಧಿಕಾರಿಗಳನ್ನು ಜನರ ಗುಂಪು ಹಿಡಿದು ತನ್ನ ವಶದಲ್ಲಿಟ್ಟುಕೊಂಡಿತ್ತು.

ಅಂಚೆ ಇಲಾಖೆಯ ೧೫ ವರ್ಷದ ಅಭಿವೃದ್ಧಿ ಯೋಜನೆ

ಭಾರತ ಸರಕಾರದ ಅಂಚೆ ಇಲಾಖೆಯು ೧೫ ವರ್ಷದ ಅಭಿವೃದ್ಧಿ ಯೋಜನೆಯನ್ನು ತಯಾರಿಸಿದೆ. ಬರುವ ೧೫ ವರ್ಷಗಳಲ್ಲಿ ಮೂರು ಭಾಗಗಳ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ. ಹೊಸದಾಗಿ ಭಾರತದಲ್ಲಿ ೧೯ ಸಾವಿರ ಹೊಸ ಅಂಚೆ ಕಛೇರಿಗಳನ್ನು ತೆರೆಯಲಾಗುವುದು. ಪ್ರತಿ ಮತ್ತು ಸಾವಿರ ಪ್ರಜಾ ಸಂಖ್ಯೆ ಇರುವ ಹಳ್ಳಿಗೂ ಒಂದೊಂದು ಕಛೇರಿ ಏರ್ಪಾಡಾಗುವುದು. ೨೦ ಸಾವಿರ ಪ್ರಜೆಗಳಿರುವ ಊರುಗಳಲ್ಲಿ ತಂತಿ ಕಛೇರಿ ಇಡಲಾಗುವುದು.

ಭಾರತದಲ್ಲಿ ಅಮೇರಿಕನ್ನ ರಾಜ್ಯ

ಭಾರತದಲ್ಲಿ ಯುದ್ಧ ಪ್ರಾರಂಭವಾದ ದಿನದಿಂದ ಇದುವರೆಗೆ ಭಾರತ ರಕ್ಷಣಾ ನಿಬಂಧನೆ ಪ್ರಕಾರ ಎಷ್ಟು ಆರ್ಡಿನೆನ್ಸುಗಳನ್ನು ಹೊರಡಿಸಲಾಯಿತೆಂಬ ಬಗ್ಗೆ ಕೇಂದ್ರ ಸಭೆಯಲ್ಲಿ ಪ್ರಶ್ನೆ ಹಾಕಲಾಗುವುದು. ಯುದ್ಧ ನಿಂತ ಮೇಲೆ ಈ ಸ್ಥಿತಿ ಮುಂದುವರಿದರೂ ಆರ್ಡಿನೆನ್ಸು ವಾಪಸು ತೆಗೆದುಕೊಳ್ಳಲಿಲ್ಲವೆಯೆ ಎಂಬುದಾಗಿ ಪ್ರಶ್ನೆ ಬರುವುದು.

ಭಾರತ ಸರಕಾರದವರು ರಾಷ್ಟ್ರೀಯ ಸೈನ್ಯದವರ ಮೇಲೆ ನಡೆಸುತ್ತಿರುವ ಕೋರ್ಟ್ ಮಾರ್ಷಲ್ ವಿಚಾರಣೆಯನ್ನು ನಿಲ್ಲಿಸುವುದಿಲ್ಲವೆಂದೂ, ಅದನ್ನು ಮುಂದೆಯೇ ಹಾಕುವುದಿಲ್ಲವೆಂದೂ ಶ್ರೀ ಬಾಬು [illegible] ಅವರ್ [illegible]

ಫ್ರಾನ್ಸಿಗೆ ಜರ್ಮನ್ ಹಡಗುಗಳು ನಿಷಿದ್ಧವು

ಮಿತ್ರರ ಜೊತೆಯಲ್ಲಿ ಕಾಳಗ ಮಾಡಿ ಮುಳುಗಿಹೋದ ಫ್ರೆಂಚ್ ಯುದ್ಧ ಹಡಗುಗಳ ಬದಲು, ಮಿತ್ರರ ಹತ್ತಿರ ಇರುವ ಜರ್ಮನ್ ಯುದ್ಧ ಹಡಗುಗಳನ್ನು ತನಗೆ ಕೊಡಬೇಕೆಂದು ಫ್ರಾನ್ಸು ಪದೇ ಪದೇ ಕೇಳಿದರೂ ಮಿತ್ರರು ಉತ್ತರವೇ ಕೊಟ್ಟಿಲ್ಲವೆಂದು ಹೇಳಲಾಗಿದೆ.

ಲೀಗಿನಲ್ಲಿ ಭಾರಿ ಒಡಕು

ಸಿಂಧ್ ಪ್ರಾಂತದ ಶಾಸನ ಸಭೆಗೆ ಮುಸ್ಲಿಂ ಲೀಗಿನ ಪ್ರತಿನಿಧಿಗಳನ್ನು ಗೊತ್ತುಪಡಿಸಿದ ಉಮೇದುವಾರರ ವಿಷಯವಾಗಿ ಸಿಂಧ್ ಪ್ರಾಂತದ ಮುಸ್ಲಿಂ ಲೀಗಿನ ಅಧ್ಯಕ್ಷರಿಗೂ ಅವರ ಅನುಯಾಯಿಗಳಿಗೂ ಅತೃಪ್ತಿಯುಂಟಾಗಿದೆ. ಇದರಿಂದ ಸಿಂಧ್ ಲೀಗ್ ಸಂಸ್ಥೆಯು ಅಖಿಲ ಭಾರತ ಸಂಸ್ಥೆಯಿಂದ ಬಿಡಿಸಿಕೊಂಡು ಬೇರೆಯ ಸಂಸ್ಥೆಯಾಗುವ ಹಾಗಾಗುತ್ತದೆ. ಸಿಂಧ್ ಸಲಹಾ ಸಮಿತಿಯು ಇತ್ತ ಸೂಚನೆಗಳನ್ನು ಅಖಿಲ ಭಾರತ ಸಂಸ್ಥೆಯು ಗಣನೆಗೆ ತರಲಿಲ್ಲವೆಂದು ಕಾರಣ ಹೇಳಲಾಗಿದೆ. ಸಿಂಧ್ ಅಧ್ಯಕ್ಷರಾದ ಜಿ. ಎಂ. ಸೈಯದ್‌ರವರ ದಂಗೆಯ [illegible] ಜಿನ್ನಾರವರಿಗೆ ಸಾಧ್ಯವಾಗಲಿಲ್ಲವೆಂದು ಹೇಳಲಾಗುತ್ತದೆ.

೧೨ ಕೋಟಿ ಗಜ ನೂಲಿನ ಗಾಂಧೀಜಿಗೆ ಅರ್ಪಣೆ

ಗಾಂಧೀಜಿಯವರ ೭೭ ನೇ ಜಯಂತಿಗಾಗಿ ೧೨ ಕೋಟಿ ಗಜ ಉದ್ದದ ೧ ಲಕ್ಷ ೪೦ ಸಾವಿರ ಹ್ಯಾಂಕುಗಳಷ್ಟು ಕೈನೂಲಿನ ದಾರವನ್ನು ಸಮಗ್ರ ನಾಡಿನ ಎ. ಐ. ಎಸ್. ಎ. ರವರು ನೂಲಿಸಿದರು. ಇದರ ಬೆಲೆ [illegible] ಸಾವಿರವಾಗುವುದು. ಒಂದು ತಿಂಗಳಲ್ಲಿ ಇಷ್ಟು ನೂಲು ನೂತದ್ದಾಯಿತು.

ರಷ್ಯ-ಅಮೇರಿಕಾ ಸಂಧಾನ

"ದೂರ ಪ್ರಾಚ್ಯ ದೇಶಗಳ ಸಮಸ್ಯೆ ಸಂಬಂಧವಾಗಿ ರಷ್ಯವೂ ಅಮೇರಿಕವೂ ಸಂಧಾನವಾಗುತ್ತಿದೆ. ರಷ್ಯವು ಜಪಾನಿನಲ್ಲಿ [illegible] ಸಂಸ್ಥೆ ಏರ್ಪಡಿಸಬೇಕೆಂದು, ಒಂದು [illegible] ಕೇಳುತ್ತಿದ್ದುದನ್ನು ಈಗ ಒಪ್ಪಿದೆಯೆ ಎಂದು [illegible] ಹೇಳಲಾಗಿದೆ.

ಜರ್ಮನ್ ಮಂತ್ರಿಮಂಡಲವನ್ನು [illegible]

ಜರ್ಮನಿಯ ಎಲ್ಲಾ [illegible] ಸಂಸ್ಥೆಗಳನ್ನು [illegible] ಕೇಂದ್ರ [illegible] ಉಪನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದೆ [illegible]

ಕ ಸಾಹಿತ್ಯ ಸಂಘ

ಮೈಸೂರು ೨೭

[illegible] ಕೃಷ್ಣರಾಯರು ನಿ ಮಹಾರಾಜ ಕಾಲೇಜಿನಲ್ಲಿ ಮೇ [illegible] ಸಂಘದ ಆರಂಭ ಭಾಷಣವನ್ನು [illegible] ಸಂಘದ ಅಧ್ಯಕ್ಷರಾದ ಶ್ರೀ [illegible]ಚಂದ್ರಶೇಖರ್‌ರವರು ಅಗ್ರಾಸನದ [illegible] ಸ್ವಾಗತ ಗೀತೆಯಾದ [illegible] ಸಭೆಗೆ ಶ್ರೀ ಕೃಷ್ಣರಾಯ[illegible] ಮಾಡಿಕೊಟ್ಟರು. ಶ್ರೀ [illegible]ರವರು ಒಂದು ಘಂಟೆ ಕಾಲ [illegible] ಭಾಷಣವನ್ನು ಮಾಡಿ [illegible] ಸೊಗಸನ್ನು ಬಣ್ಣಿಸಿದರು [illegible] ಸಾಹಿತ್ಯದ ಅಸ್ತಿಭಾರದ ಮೇ[illegible] ಹೊಸ ಹೊಸ ಸಾಹಿ[illegible]ಬೇಕೆಂದು ಹೇಳಿದರು. [illegible] ಮತ್ತು ನುಡಿಯ ಸೇವೆಯ [illegible] ಜಗತ್ತಿನ ಕಲ್ಯಾಣವನ್ನು [illegible] ಸೂಚಿಸಿದರು. ವಂದನಾ[illegible] ನಂತರ ಸಭೆ ಮುಗಿಯಿತು.

[illegible] ಸಿ. ಸಿ. ಗೆ ನಿರ್ಣಯಗಳು

[illegible] ಕಾರ್ಯನಿರ್ವಾಹಕ ಸ್ಥಾನ [illegible] ಮತ್ತು ಶಾಸನ [illegible] ಮೂರು ವರುಷ ಕಾಲದಿಂದ [illegible] ಸದಸ್ಯರಾಗಿದ್ದವರಾಗಬೇಕು, [illegible] ಹತ್ತು ಲಡಿ ನೂಲು [illegible] ಕೊಡಬೇಕು; ಕ್ವಿಟ್ ಇಂಡಿಯಾ [illegible] ಬೆಂಬಲ ಮತ್ತು [illegible] ಸಭೆಗಳಿಂದ [illegible] — ಈ ಮೂರು ನಿರ್ಣ[illegible] ಶ್ರೀ ಟಿ. ಎಸ್. ಸುಬ್ಬಣ್ಣನವ[illegible]ಯಲ್ಲಿ ನಡೆಯುವ ಎ.ಐ.[illegible] ಕಳುಹಿಸಿರುವರು.

ವಿದ್ಯಾರ್ಥಿ ಕಾಂಗ್ರೆಸ್

[illegible] ಕಾರ್ಯದರ್ಶಿಗಳ [illegible] ತಾ॥ ೧-೧೧- [illegible] ಸಾಯಂಕಾಲ ೫ ಗಂ[illegible] ಕಛೇರಿಯಲ್ಲಿ ನಡೆಯಲಿರು[illegible] ಉಮೇದುವಾರರಾಗಲಿಚ್ಛಿಸುವ [illegible] ೩೧-೧೦-೪೫ ನೇ ಸಾಯಂಕಾ[illegible]ಯೊಳಗೆ ತಮ್ಮ ಅರ್ಜಿಯನ್ನು [illegible] ಕಳುಹಿಸಬೇಕಾಗಿ ಸಂಘದ ಅಧ್ಯಕ್ಷ[illegible]ರು.

ಪತ್ರಿಕೋದ್ಯೋಗಿಗಳ ಸಂಘ

[illegible] ಪತ್ರಿಕೋದ್ಯೋಗಿಗಳ [illegible] ಸಭೆಯು ನಾಳೆ ಬೆಳಗ್ಗೆ [illegible] ಸಂಘದ ಕಟ್ಟಡದಲ್ಲಿ ನಡೆಯು[illegible] ಸದಸ್ಯರೆಲ್ಲರೂ ಸಕಾಲಕ್ಕೆ ಬರ[illegible] ಕಾರ್ಯದರ್ಶಿಗಳು ಕೋರುತ್ತಾರೆ. [illegible] ಕೋಟೆಯ ತೀರದಲ್ಲಿ ಹಿಡಿಯ[illegible] ಸಮುದ್ರದ ಹುಲಿ, (ಹುಲಿ ಮೀನು) [illegible]ಯಲ್ಲಿ ಎರಡು ತಲೆಯ ಮರಿ [illegible] ಕಾಣಿಸಿದೆ. ಮಂಗಿ[illegible], ಎರಡು ಉದರ ಕೋ[illegible] ಇದನ್ನು ವಿಜ್ಞಾನಿಗಳ ಲ್ಯಾಬ[illegible]ಯಲ್ಲಿ ಇಡಲಾಗಿದೆ.

[illegible]ಯುಕ್ತ ರಾಷ್ಟ್ರ ಸಭಾ [illegible] ಸ್ಥಾಪನೆಯಾಯಿತು

[illegible] ರಾಷ್ಟ್ರಗಳ ಸಭೆಯು ಸಾಧ[illegible] ನಿರ್ಮಾಣವಾಯಿತು ರಷ್ಯ [illegible] ಸಮಿತಿಯ ಸ್ಥಾಪನೆಗೆ [illegible] ಗಣನೆಗೆ ತಾರದೆ, ಉಳಿ[illegible] ರಾಷ್ಟ್ರಗಳಿಂದಲೇ ಸಮಿತಿ [illegible]

ಗೊಂಡ್ ಸ್ತ್ರೀ ಮೇಲೆ ಸೈನಿಕರ ಅತ್ಯಾಚಾರ

ಮಧ್ಯ ಪ್ರಾಂತದ ಬೆಟೂಲ್ ಎಂಬಲ್ಲಿ ಗೊಂಡ್ ಯುವತಿಯೊಬ್ಬಳ ಮೇಲೆ ಐದು ಜನ ಬ್ರಿಟಿಷ್ ಸಿಪಾಯಿಗಳು ಅತ್ಯಾಚಾರ ಮಾಡಿದುದು ನಿಜವಲ್ಲವೆಂದು ಅಲ್ಲಿನ ಸರಕಾರದ ಪ್ರಕಟಣೆ ತಿಳಿಸಿದೆ. ಅದು [illegible] ಭಾರತೀಯ ಸೈನಿಕನು [illegible] ಎಂಬಲ್ಲಿ ಈ ಅತ್ಯಾಚಾರ ಮಾಡಿದ ವಿಚಾರವಾಗಿ ವಿಚಾರಣೆಯಾಗುತ್ತಿದೆಯೆಂದು ತಿಳಿಸಲಾಗಿದೆ

ಭಾರತದ ಮೇಲೆ ಬ್ರಿಟನಿನ ಹಕ್ಕು ತೆಗೆದುಹಾಕಬೇಕೆಂದು [illegible]

ಅಮೇರಿಕದ [illegible] ಪತ್ರಿಕೆಯು [illegible] ಲೇಖನ ಬರೆಯುತ್ತಾ ಸೈನ್ಯದ ಸಂಸ್ಥಾನದ [illegible] ಸರ್ ಮಿರ್ಜಾರವರು ದೇಶದ ಪ್ರತಿನಿಧಿ [illegible] ಭಾರತವು [illegible] ವಸ್ತುಗಳಿಗಾಗಿ ಪ್ರಯತ್ನ ಬೇಕೆಂದು ಕೋರಿದ್ದಾರೆ. ನಮ್ಮ ರಾಷ್ಟ್ರೀಯ [illegible] ಅಭಿಪ್ರಾಯವನ್ನೇ [illegible] ಒಳಗಾಗುವುದೆಂದೂ, [illegible] ದ್ವೇಷವು ಹರಡಿ, [illegible] ಭಾವನೆ [illegible] ತ್ತಿದೆಯೆಂದೂ [illegible] ಸಮಸ್ಯೆ [illegible] ವಸ್ತುವಾಗಿ [illegible] ಬರೆದಿದ್ದಾರೆ

ಶ್ರೀ ಎಂ. ವಿ. ಶ್ರೀನಿವಾಸನ್ [illegible]

[illegible] ಬೆಂಗಳೂರು ೨೭

ಸಚಿವರಾದ ಶ್ರೀ ಎಂ. ವಿ. ಶ್ರೀನಿವಾಸ[illegible]ರವರು ೩೦ ನೇ ತಾ॥ ಶ್ರೀರಂಗಪಟ್ಟಣದಲ್ಲಿ, [illegible] ಮುಂತಾದ [illegible] ಮತ್ತು ಹೊಸ ಅಭಿವೃದ್ಧಿ [illegible] ಪ್ರಾಂತ್ಯಗಳನ್ನು [illegible] ರು.

[illegible] ಕಾರ್ಯದರ್ಶಿಗಳು

[illegible] ಕಾರ್ಯದರ್ಶಿಗಳಾದ ಶ್ರೀ [illegible] ಅವರಿಗೆ [illegible] ತಿಂಗಳು [illegible] ಅವರೇ [illegible] ಬಂದು [illegible]

[illegible]

[illegible]

[illegible]

[illegible]

LATEST NEWS

[illegible]

ಸಾಧ್ವಿ

ತಾ|| ೭೭-೧೦-೪೫ ಶನಿವಾರ

ಜನಾಧರರ ಸಿಂಹನಾದ

ದೇಶೀಯ ಸಂಸ್ಥಾನಗಳ ಪ್ರಜಾ ಪರಿಷ್ಕ್ರಿ ಳನದ ಅಧ್ಯಕ್ಷರಾದ ಪಂಡಿತ ಜವಾಹರ ಲಾಲ್ ನೆಹರೂರವರು ಸಂಸ್ಥಾನಗಳ ಭವಿಷ್ಯದ ಬಗ್ಗೆ ವೀರ ಘೋಷಣೆಯೊಂದನ್ನು ಮಾಡಿದ್ದಾರೆ. ಹಿಂದೂಸ್ಥಾನದ ಸಧ್ಯದಲ್ಲಿಯೇ ಸಂಪೂರ್ಣ ಸ್ವಾತಂತ್ರ್ಯವನ್ನು ಸ್ಥಾಪಿಸುವುದು; ಪರದಾಸ್ಯ ಶೃಂಖಲೆಯನ್ನು ಕಡಿದು ಹಾಕುವುದು; ಪ್ರಜೆಗಳ ಪ್ರತಿನಿಧಿಗಳ ಅಧಿಕಾರವನ್ನು ಸ್ಥಾಪಿಸುವುದು ಎಂದು ನುಡಿದಿದ್ದಾರೆ. ... ಕೆಂಪು ಕೋಟೆಯ ಮೇಲೆ ರಾಷ್ಟ್ರ ಧ್ವಜವು ಹಾರಿಸಲ್ಪಡುವುದೆಂದೂ ಸಾರಿದ್ದಾರೆ. ಗುಲಾಮಗಿರಿಯನ್ನು ತೊಡೆದು ಸ್ವತಂತ್ರ ಜೀವನವನ್ನು ಗಳಿಸಿ ... ಜನಾಂಗಗಳೊಡನೆ ಸಮಾನತ್ವ ... ಪಡೆಯುವುದು ... ಜವಾಹರರ ... ಪ್ರತಿಧ್ವನಿತವಾಗಿರುತ್ತದೆ.

ಪ್ರಸಂಚದ ಜನಾಂಗಗಳೆಲ್ಲವೂ ಸ್ವಾತಂತ್ರ್ಯ ಸಾಧನೆಗಾಗಿ ಹಾತೊರೆಯುತ್ತಿರುವ ಈ ಕಾಲದಲ್ಲಿ ಭಾರತೀಯರೂ ಪಾರತಂತ್ರ್ಯದಿಂದ ವಿಮೋಚನೆ ಹೊಂದಿ ತಮ್ಮ ಸ್ವಾತಂತ್ರ್ಯವನ್ನು ಸಾಧಿಸುವುದರಲ್ಲಿ ಬದ್ಧಕಂಕಣರಾಗಿರುವರು. ಸಮೀಪ ಭವಿಷ್ಯದಲ್ಲಿ ಹಿಂದೂಸ್ಥಾನವು ಸ್ವಾತಂತ್ರ್ಯವನ್ನು ಪಡೆದ ಮೇಲೆ ದೇಶೀಯ ಸಂಸ್ಥಾನಗಳಲ್ಲಿಯೂ ಪ್ರಜಾ ಪ್ರಭುತ್ವ ... ಇದಕ್ಕಾಗಿ ... ರಾಜರುಗಳು ತಮ್ಮ ಅಧಿಕಾರ ಸೂತ್ರಗಳನ್ನು ಪ್ರಜಾಪ್ರಭುತ್ವ ತತ್ವಗಳಿಗೆ ಹೊಂದಿಸಿಕೊಳ್ಳಬೇಕೆಂದು ನೆಹರೂರವರು ರಾಜರುಗಳಿಗೆ ಸೂಚಿಸಿದ್ದಾರೆ.

ಜವಾಹರರ ಈ ಮಾತಿನಲ್ಲಿ ಹೊಸ ಅಂಶವೇನೂ ಇಲ್ಲ. ಯಾವ ಉದಾತ್ತ ಧ್ಯೇಯಗಳಿಗಾಗಿ ಮಿತ್ರರಾಷ್ಟ್ರಗಳು ಆರು ವರುಷಕಾಲ ಘೋರ ಸಂಗ್ರಾಮದಲ್ಲಿ ಅನುಭವಿಸಿದ ಕಷ್ಟ ನಷ್ಟಗಳನ್ನು ಅನುಭವಿಸಿದರೋ ಅಂತಹ ಸ್ವಾತಂತ್ರ್ಯ, ಸಮಾನತೆ, ಪ್ರಜಾಪ್ರಭುತ್ವ ಮುಂತಾದ ಗುರಿಗಳನ್ನೇ ನೆಹರೂರವರೂ ಪ್ರತಿಪಾದಿಸುತ್ತಿರುವರು.

ನಮ್ಮ ಶ್ರೀಮನ್ಮಹಾರಾಜರವರು ... ಶಾಸನಸಭೆಗೆ ಬಂದಾಗ ಆಶ್ವಾಸನೆ ಕೊಡುತ್ತಿರುವುದೂ ಇದೇ. ಪ್ರಜಾಪ್ರಭುತ್ವದಲ್ಲಿ ತಮಗೆ ಸಂಪೂರ್ಣವಾದ ವಿಶ್ವಾಸವಿದೆ ಎಂದೂ, ತಮ್ಮ ಪ್ರಜೆಗಳೆಲ್ಲ ಅದಕ್ಕಾಗಿ ... ರಾಗುವರೆಂದೂ ಸಾರಿದ್ದಾರೆ. ಇದೇ ತತ್ವವನ್ನು ಮುಂದುವರಿದ ಸಕಲ ರಾಜರುಗಳೂ ... ನಾಯಕರುಗಳೂ ಅಂಗೀಕರಿಸಿದ್ದಾರೆ. ಅದಕ್ಕನುಗುಣವಾಗಿ ಇಂದು ... ಸಂಸ್ಥಾನಗಳಲ್ಲಿ ಹಾಗಾಗಲೇ ಜವಾಬ್ದಾರಿ ಸರಕಾರದ ಸ್ಥಾಪನೆಯು ಬಾಕಿ ಉಳಿದಿರುತ್ತದೆ.

ಬ್ರಿಟಿಷ್ ಹಿಂದೂಸ್ಥಾನದ ಸ್ವಾತಂತ್ರ್ಯದ ಜೊತೆಗೆ ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರವು ... ಸ್ಥಾಪಿತವಾಗಬೇಕಾದುದು ... ಸಂಸ್ಥಾನಗಳ ... ಸಾರ್ವಭೌಮ ... ಸಹಕಾರ ... ಗೊಂದು ...

ವಾರ್ತಾ ವಾಹಿನಿ

* ಕೇಂದ್ರ ಶಾಸನ ಸಭೆಗೆ ಜಿನ್ನಾರವರು ಬೊಂಬಾಯಿ ನಗರದ ಮುಸ್ಲಿಂ ಕ್ಷೇತ್ರದಿಂದ ಉಮೇದುವಾರಿಕೆ ಅರ್ಜಿ ಸಲ್ಲಿಸಿರುವರು. ಅವರಿಗೆ ಪ್ರತಿಸ್ಪರ್ಧಿಯಾಗಿ ಮಿಯಾ ಸಂಘದ ಮುಖಂಡರಾದ ಮುರ್ಶೀಫಾಯಿ ಲಾಲ್‌ಜಿಯವರು ನಿಲ್ಲುವರು.

* ಆಹಾರದ ರೇಷನಿಂಗ್ ಇನ್ನೂ ಇರುವುದೆಂದು ಭಾರತ ಸರ್ಕಾರದ ಆಹಾರ ಸದಸ್ಯರಾದ ಸರ್ ಜೆ. ಪಿ. ಶ್ರೀವಾಸ್ತವರವರು ತಿಳಿಸಿದ್ದಾರೆ.

* ಮಿಲ್ಲು ಬಟ್ಟೆಗಳ ಬೆಲೆಯನ್ನು ರೂಪಾಯಿಯಲ್ಲಿ ಆರು ಕಾಸಿನಿಂದ ೧|| ಆಣೆ ವರೆಗೆ ಕಡಿಮೆ ಮಾಡಬಹುದೆಂದು ಹೇಳಲಾಗಿದೆ. ಮಿಲ್ಲುಗಳಿಗೆ ಹೆಚ್ಚು ಕಲ್ಲಿದ್ದಲು ದೊರಕುತ್ತಿರುವುದೂ, ಹತ್ತಿ ಬೆಲೆ ಇಳಿಯುತ್ತಿರುವುದೂ ಇದಕ್ಕೆ ಕಾರಣ.

* ಅಮೆರಿಕಾದ ಸೆರು ಸಂಸ್ಥಾನದ ಸೈನ್ಯಗಳ ಮೇಲೆ ಆರೋಪಣೆ ಮಾಡಿದ ಸಂಬಂಧವಾಗಿ ಶಾಸನ ಸಭೆ ಸದಸ್ಯರೊಬ್ಬರಿಗೂ, ಆ ಸೈನ್ಯಗಳ ಸೇನಾನಿಯೊಬ್ಬರಿಗೂ ದ್ವಂದ್ವ ಕಾಳಗ ನಡೆಯಿತು. ಇಬ್ಬರೂ ಮೂರು ಬಾರಿ ಗುಂಡು ಹಾರಿಸಿದರು. ಯಾರಿಗೂ ಗಾಯವಾಗಲಿಲ್ಲ. ಎದರಿನಲ್ಲಿ "ಅಂಪೈರ್" ಮಾತ್ರ ಇದ್ದರು.

* ಜಪಾನಿನ ಮಾಜಿ ಮುಖ್ಯ ಮಂತ್ರಿ ಮತ್ತು ಈಗಿನ ಮಂತ್ರಿ ಮಂಡಲದ ಮಂತ್ರಿಯೂ ಆಗಿರುವ ರಾಜಕುಮಾರ ಕೋನೋಯಿಯವರು ತಮ್ಮ ಎಲ್ಲಾ ಬಿರುದು ಪ್ರಶಸ್ತಿಗಳನ್ನೂ ಬಿಟ್ಟುಕೊಟ್ಟು, ಸಾಮಾನ್ಯ ಪ್ರಜೆಯಾಗಿದ್ದಾರೆ. ಇವರು ಜಪಾನಿನ ಹೊಸ ರಾಜ್ಯಾಂಗವನ್ನು ತಯಾರಿಸುವುದರಲ್ಲಿ ನಿರತರಾಗಿದ್ದಾರೆ.

* ಕರ್ನಾಟಕ ರಾಷ್ಟ್ರ ಸೇವಾದಳ

ನೆನ್ನೆ ದಿನ ನಡೆದ ಸ್ವಯಂ ಸೇವಕರುಗಳ ಸಭೆಯಲ್ಲಿ ಈ ರೀತಿ ನಿರ್ಣಯಗಳಾದವು:— ಮುಂದಿನ ತಿಂಗಳು ಶಿವಾಜಿನಗರದಲ್ಲಿ ನಡೆಯುವ ಎ. ಐ. ಸಿ. ಸಿ. ಅಧಿವೇಶನಕ್ಕೆ ಸೇಯ ಶಾಂತಿ ... ದ ಮೇಲ್ ಟ್ರೈನಿನಲ್ಲಿ ಸ್ವಯಂಸೇವಕರುಗಳು ಹೊರಡುವುದು; ಮತ್ತು ೧೨ ನೆಯ ತಾ|| ಬೆಳಗ್ಗೆ ವಾಪಸ್ಸು ಬರುವುದು. ಪ್ರತಿಯೊಬ್ಬ ಸ್ವಯಂಸೇವಕನೂ ಖಾಕಿ ನಿಕ್ಕರ್, ಬಿಳಿ ಅಂಗಿ ಮತ್ತು ಬಿಳೀ ಟೋಪಿಯನ್ನು ಹಾಕಿಕೊಂಡು ಬರಬೇಕು; ಮತ್ತು ಸ್ತ್ರೀಯರು ಬಿಳಿ ಸೀರೆ ಮತ್ತು ಹಸುರು ರವಿಕೆಯನ್ನು ತೊಟ್ಟುಕೊಳ್ಳಬೇಕು. ಸ್ವಯಂಸೇವಕರೆಲ್ಲರೂ ತಮ್ಮ ಹೆಸರನ್ನು ದೇಶೀಯ ವಿದ್ಯಾಶಾಲೆಯಲ್ಲಿ ಕೊಡಬೇಕು.

ಉಪನ್ಯಾಸ

ವಾಣೀವಿಲಾಸಪುರಂ ರಾಮ ಕೃಷ್ಣಾಶ್ರಮದಲ್ಲಿ ನಾಳೆ ಸಾಯಂಕಾಲ ೬ ರಿಂದ ೭ ಗಂಟೆಯವರೆಗೆ ಶ್ರೀ ಸ್ವಾಮಿ ಸೋಮನಾಥಾನಂದಜಿಯವರು 'ನಾರದ ಭಕ್ತಿ ಸೂತ್ರ' ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನವಿದೆ.

* ಬರುವ ಡಿಸಂಬರ್ ೧೫ ರಲ್ಲಿ ಭಾರತ ಸರಕಾರದವರು ಬೆಂಗಳೂರಿನ ವಿಮಾನ ಕಾರ್ಖಾನೆಯನ್ನು ತಮ್ಮ ಅಧೀನಕ್ಕೆ ತೆಗೆದು ಕೊಳ್ಳುವುದು ಸಂಗಾಯಿಯಾಗಿ ಮಾತ್ರವೆಂದು ತಿಳಿದು ಬಂದಿದೆ. ಕಂಪೆನಿಯ ಷೇರುಗಳಲ್ಲಿ ಮೂರನೇ ಒಂದು ಭಾಗ ಹೊಂದಿರುವ ಮೈಸೂರು ಸರಕಾರದವರು ಕಾರ್ಖಾನೆಯನ್ನು ಉಳಿಸಿಕೊಂಡು ಇಡೀ ಪೂರ್ವ ದೇಶಗಳಿಗೆ ಅವಶ್ಯಕವಾದ ವಿಮಾನಗಳನ್ನು ತಯಾರು ಮಾಡಿಸಲು ಏರ್ಪಾಡು ಮಾಡುವ ಯೋಚನೆಯಲ್ಲಿದ್ದಾರೆ.

No. R1. —61/45-46

ಮೈಸೂರು ಸಿಟಿ ರೇಷನಿಂಗ್

೧೯೪೫ ನೇ ಅಕ್ಟೋಬರ್ ಮಾಹೆ ೩೧ ನೇ ತಾ|| ನ ದಿವಸ, ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗಾರ್ಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಸದರಿ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಟಿ. ಪಿ. ರೆಡ್ಡಿ,
ರೇಷನಿಂಗ್ ಆಫೀಸರ್.
ತಾ|| ೧೯-೧೦-೪೫.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಗುಬ್ಬಿ ಥಿಯೇಟ್ರಿಕಲ್ ಕಂಪೆನಿ
(ರಿಜಿಸ್ಟರ್ಡ್) ಮೈಸೂರು
ಮೈಸೂರು ಟೌನ್‌ಹಾಲ್ ಮೈದಾನದ
ಸ್ವಂತ ಧನಲಕ್ಷ್ಮಿ ಥಿಯೇಟರಿನಲ್ಲಿ
ತಾ|| ೨೮-೧೦-೪೫ ನೇ ಭಾನುವಾರ ಸಂಜೆ
೩-೩೦ ಕ್ಕೆ ಮ್ಯಾಟನಿ

ಕುರುಕ್ಷೇತ್ರ

ಎಂಬ ನಾಟಕವನ್ನು ಅಭಿನಯಿಸುವರು

Edited, printed and published by A. S. Nagarajan at the Sadhvi Press D. Subbiah Road, Mysore.

ಲಿಲ್ಲೀ ಬ್ರಾಂಡ್ ಕಾಫಿ

ಪುಡಿಯನ್ನೇ ಉಪಯೋಗಿಸಿ
V. O. P.
ಚಾಮುಂಡಿ ಬ್ರಾಂಡ್ ನಶ್ಯಪುಡಿ
ಅಡಿಗೆಗೂ ಸಿಹಿ ಮತ್ತು ಖಾರದ ತಿಂಡಿ ಪದಾರ್ಥಗಳಿಗೂ ಅತ್ಯಂತ ಶ್ರೇಷ್ಠವಾದದ್ದು
ಮ ತ್ತು ಪು ಷ್ಟಿ ಕ ರ ವಾ ದ ದ್ದು
ನಮ್ಮಲ್ಲಿ ದೊರೆಯುತ್ತೆ. ಪೌಂಡು ೧ ಕ್ಕೆ ರೂ. 0-10-6
ಡಿ. ಪು ಟ್ಟ ಯ್ಯ,
ಲಿಲ್ಲಿ ಇಂಡಸ್ಟ್ರಿಯಲ್ ವರ್ಕ್ಸ್ (ರಿಜಿಸ್ಟರ್ಡ್), ಮೈಸೂರು.
ಬ್ರಾಂಚ್:—ದೇವರಾಜ ಮಾರ್ಕೆಟ್ : ಸಕ್ಕರೆ ಮಂಡಿ, ಸಂತೇಪೇಟೆ

ಅಮೃತ

ನಿತ್ಯದ ಜ್ವರ, ಮಲೇರಿಯ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚನ್ನಾಗಿ ಕೆಲಸ ಮಾಡುತ್ತದೆ.
ಕೆ. ವಿ. ವೆಂಕಟರಾಮು
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲೆ, ಅರಕಲವಾಡಿ.
ಏಜೆಂಟರು: ನರಸಿಂಹಾ ಸ್ಟೋರ್ಸ್
ಚಾಮರಾಜನಗರ

ಸೀಸೆ ೧ ಕ್ಕೆ ...

ಸ್ಕಿನಾಲ್

ಒಂದೇ ದಿವಸ ಉಪಯೋಗಿಸಿದರೆ ... ಡಿತವನ್ನು ನಿರ್ಮೂಲ ಮಾಡುತ್ತದೆ. ... ನ್ನು ಪುದರಲ್ಲಿ ಅತಿಶಯೋಕ್ತಿಯಿಲ್ಲ.
ಕಜ್ಜಿಗೆ ಸಂಜೀವನ
ಎಸ್. ಎಸ್. ವೈದ್ಯ
ಎಸ್. ವಿ ಆರ್. ಲಿವರ್ ಅಂಡ್ ಸ್ಪ್ಲೀನ್
ಔಷಧಾಲಯ,
ಲಷ್ಕರ್, ಚಾಮುಂಡಿಪುರಂ, ಮೈಸೂರು

ಟಿ. ಸಿ. ನಟರಾಜ್

ಔ ಷ ಧಾ ಲ ಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ತಗನ್ಯವಾಗಿ ಬೇಕಾದ ಎಲ್ಲಾ ... ಕನ್ನಡಕಗಳೂ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜಿನಲ್ಲಿ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ದೊರೆಯುತ್ತವೆ.

ಅಂಗ್ಲೇಯ ಡಾಕ್ಟರುಗಳು, ವೈದ್ಯರು ಮತ್ತು ಪಟೇಲ್ ಮಹಾರಾಯರುಗಳಿಂದ ಕೃತಿ ಪತ್ರಿಕೆಗಳನ್ನೂ ಮತ್ತು ಮೈಸೂರು ದಸರಾ ಮೊದಲಾದ ವಸ್ತು ಪ್ರದರ್ಶನಗಳಲ್ಲಿ ಬಿರುದು ಬಿಲ್ಲೆಗಳನ್ನೂ ಪಡೆದಿರುವ

ಗೋನೋಸ್ಪೆಸಿಫಿಕ್

ನಂ. ೧ ಮತ್ತು ೨
ಸ್ತ್ರೀ ಮತ್ತು ಪುರುಷರ ಎಲ್ಲಾ ವಿಧವಾದ ಪ್ರಮೇಹ, ಆರ್ತವ ದೋಷ, ಪರಂಗಿ ರೋಗಗಳಿಗೂ ಸಿದ್ಧೌಷಧ. ನಂ. ೩ ಎಲ್ಲಾ ವಿಧವಾದ ಸಿಫಿಲ್ಲಿಸ್ (ಪರಂಗಿ) ಕೆರೆ ಬಾಲಿ, ಕುಷ್ಟ, ರಕ್ತ ದುಷ್ಟಿಗಳಿಗೆ ಶ್ರೇಷ್ಠ ಔಷಧಿ. (ಎಲ್ಲಾ ಔಷಧಿ ಷಾಪುಗಳಲ್ಲಿಯೂ ದೊರೆಯುತ್ತದೆ.)
ಪ್ರಾಪ್ರೈಟರು: ರಘುಲಾಲ್ ಅಂಡ್ ಕೋ., ಮೈಸೂರು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ

ಪೋ॥ ನಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಆಣೆ

ಸಂಪುಟ ೪] ಭಾನುವಾರ [illegible] [ಸಂಚಿಕೆ ೭೭

ಅಮೆರಿಕಾ ಅಧ್ಯಕ್ಷರ ವಿದೇಶಾಂಗ ಪ್ರಣಾಳಿಕೆ

ಅಮೆರಿಕಾದ ವಿದೇಶಾಂಗ ನೀತಿಯೇನು?

ಅಮೆರಿಕಾದ ಅಧ್ಯಕ್ಷ ಟ್ರೂಮನ್‌ರವರು ಬಹು ಪ್ರಾಮುಖ್ಯವಾದ ಘೋಷಣೆಯನ್ನು ಹೊರಡಿಸಿ, ಅಮೆರಿಕಾದ ವಿದೇಶಾಂಗ ನೀತಿಯನ್ನು ವಿವರಿಸಿದ್ದಾರೆ. ಅಮೆರಿಕಾಕ್ಕೆ ಯಾವ ರಾಜ್ಯದ ಆಲಸೆಯೂ ಇಲ್ಲವೆಂದೂ, ಬಲ ಪ್ರಯೋಗದಿಂದ ದಾಸವಾದ ರಾಜ್ಯಗಳು ಪುನಃ ಸ್ವಪ್ರಭುತ್ವವನ್ನು ಪಡೆಯುವುದರಲ್ಲಿ ಅಮೆರಿಕಾದ ಅಭಿಲಾಷೆಯಿರುವುದೆಂದೂ ಅವರು ತಿಳಿಸಿದ್ದಾರೆ. ಆಯಾ ರಾಜ್ಯಗಳ ಪ್ರಜಾ ವರ್ಗದ ಅಭಿಪ್ರಾಯವಿಲ್ಲದೆ, ಪ್ರಪಂಚದ ಮಿತ್ರ ರಾಜ್ಯಗಳಿರುವ ಕಡೆ ಎಲ್ಲೂ ಪ್ರಾದೇಶಿಕ ಬದಲಾವಣೆಯಾವದಕ್ಕೆ ಅಮೆರಿಕಾ ಒಪ್ಪದೆಂದು ತಿಳಿಸಲಾಗಿದೆ. ಯೂರೋಪ, ಆಫ್ರಿಕಾ ಮತ್ತು ಏಷ್ಯಾ ಖಂಡಗಳ ಮಾರ್ಗಗಳಲ್ಲಿ ಜನತಾ ವಿಶ್ವಾಸದ ಆಡಳಿತಗಳೇ ಇರಬೇಕು. ಯುದ್ಧದಲ್ಲಿ ಸೋಲನ್ನು ಹೊಂದಿದ ಶತ್ರು ರಾಷ್ಟ್ರಗಳು ಶಾಂತಿಯುತವಾದ ಪ್ರಜಾ ಸತ್ತಾತ್ಮಕ ರಾಜ್ಯಗಳಾಗಿ ಪರಿವರ್ತನೆ ಹೊಂದಲು ಅಮೆರಿಕಾವು ಸಹಾಯ ಮಾಡುವುದು. ಮತ್ತು ಯಾವುದೇ ರಾಜ್ಯದಲ್ಲಿ ಅನ್ಯರಾಜ್ಯವೊಂದು ಒಳನುಗ್ಗಿ ಅಲ್ಲಿನ ಸರ್ಕಾರವನ್ನು ಬಲಾತ್ಕಾರವಾಗಿ ಹೇರಿದರೆ ಅಮೆರಿಕಾ ಒಪ್ಪದೆಂದು ಅಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ.

ಅಣುಬಾಂಬಿಗೆ ತುತ್ತಾದವರ ಸ್ಮಾರಕ

